ಶನಿವಾರ, ನವೆಂಬರ್ 13, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 314 | ಪುಟ 26
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಸಂತಾನಹೀನತೆ ಇರುವ ದಂಪತಿಗೆ ಕೋವಿಡ್ ಸಾಕಷ್ಟು ಸಮಸ್ಯೆ ಸೃಷ್ಟಿಸಿದೆ. ಫಲವಂತಿಕೆ ಚಿಕಿತ್ಸೆಯಲ್ಲಾದ ವಿಳಂಬವು ಅವರಿಗೆ ಮಕ್ಕಳಾಗುವ ಸಾಧ್ಯತೆಯನ್ನು ಕಡಿಮೆ ಮಾಡಿದೆ. ಪರಿಹಾರಗಳೇನು?



ಚರ್ಚೆ
ರಾಜ್ಯಗಳಲ್ಲಿ ತನಿಖೆ ನಡೆಸಲು ಸಿಬಿಐಗೆ ಮುಕ್ತ ಅವಕಾಶ ಇರಬೇಕೇ? 9

ಮಹಿಳಾ ಅಧಿಕಾರಿಗಳಿಗೆ ಕಾಯಂ ನೇಮಕಾತಿ 11

ತಮ್ಮನ ಟಿಕೆಟ್‌ಗಾಗಿ ಶೆಟ್ಟರ್ ದೆಹಲಿಗೆ? 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,686 ▲	18,102 ▲	₹50,600 (ಬೆಂಗಳೂರು)	₹68,300 (ಬೆಂಗಳೂರು)	74.45 ▲

₹56 ಸಾವಿರ ಕೋಟಿ ದೋಚಿದ ಪ್ರಕರಣ • ತನಿಖೆ ವಿಸ್ತರಿಸದ ಪೊಲೀಸರು

ಬಿಟ್‌ಫಿನೆಕ್ಸ್ ಹ್ಯಾಕ್: ಶ್ರೀಕಿ ನಂಟು?

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 2016ರ ಆಗಸ್ಟ್ 2ರಂದು ಹಾಂಕಾಂಗ್ ಮೂಲದ ಬಿಟ್‌ಫಿನೆಕ್ಸ್ ಬಿಟ್‌ಕಾಯಿನ್ ಎಕ್ಸ್‌ಚೇಂಜ್ ಹ್ಯಾಕ್ ಮಾಡಿ 1,19,755 ಬಿಟ್ ಕಾಯಿನ್‌ಗಳನ್ನು ದೋಚಿದ್ದ ಪ್ರಕರಣದಲ್ಲಿ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ನಂಟಿದೆಯೇ ಎಂಬ ಸಂಶಯ ದಟ್ಟವಾಗುತ್ತಿದೆ.

ಶ್ರೀಕೃಷ್ಣನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ವೇಳೆ, ಬಿಟ್ ಫಿನೆಕ್ಸ್ ಹ್ಯಾಕಿಂಗ್‌ನಲ್ಲಿ ಈತ ಶಾಮೀಲಾಗಿರುವ ಖಚಿತ ಸುಳಿವು ರಾಜ್ಯದ ತನಿಖಾ ಸಂಸ್ಥೆಗಳಿಗೆ ಸಿಕ್ಕಿತ್ತು. ಹಾಗಿದ್ದರೂ ರಾಜ್ಯದ ಸಂಸ್ಥೆಗಳು ತನಿಖೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲು ವಿಳಂಬ ಮಾಡಿರುವುದು ಅನುಮಾನಗಳ ಹುತ್ತವನ್ನು ಬೆಳೆಸುತ್ತಿದೆ.

2016ರಲ್ಲಿ ಎರಡು ಬಾರಿ ತಾನು ಬಿಟ್‌ಫಿನೆಕ್ಸ್ ಎಕ್ಸ್‌ಚೇಂಜ್‌ನ ಸರ್ವರ್ ಅನ್ನೇ ಹಿಡಿತಕ್ಕೆ ತೆಗೆದುಕೊಂಡು 2,000 ಬಿಟ್‌ಕಾಯಿನ್‌ಗಳನ್ನು ದೋಚಿದ್ದಾಗಿ ಶ್ರೀಕೃಷ್ಣ ಸಿಸಿಬಿ ಪೊಲೀಸರ ಎದುರು ತಪ್ಪೊಪ್ಪಿಕೊಂಡಿದ್ದ. ಅದೇ ಅವಧಿಯಲ್ಲಿ ಬಿಟ್‌ಫಿನೆಕ್ಸ್ ಎಕ್ಸ್‌ಚೇಂಜ್‌ನಿಂದ ಸದ್ಯದ ಮಾರುಕಟ್ಟೆ ಮೌಲ್ಯದಲ್ಲಿ ₹ 56,000 ಕೋಟಿ ಮೊತ್ತದ ಬಿಟ್ ಕಾಯಿನ್‌ಗಳನ್ನು ಹ್ಯಾಕರ್‌ಗಳು ದೋಚಿದ್ದರು. ಈ ತಂಡದ ಭಾಗವಾಗಿದ್ದ ಶ್ರೀಕಿ, ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಬಿಟ್‌ಕಾಯಿನ್‌ಗಳನ್ನು 'ಕೋಲ್ಡ್ ವ್ಯಾಲೆಟ್'ಗಳಲ್ಲಿ (ರಹಸ್ಯ ಆನ್ಲೈನ್ ವ್ಯಾಲೆಟ್) ಅಡಗಿಸಿಟ್ಟುಕೊಂಡು, ಬಳಿಕ ವರ್ಗಾವಣೆ ಮಾಡಿರುವ ಅನುಮಾನ ದಟ್ಟವಾಗಿದೆ.

ಪೊಲೀಸರ ವಶದಲ್ಲಿದ್ದಾಗಲೇ ಅಕ್ರಮ?

2020ರ ನವೆಂಬರ್ 14ರಂದು ಪೊಲೀಸರಿಗೆ ಸೆರೆಸಿಕ್ಕಿದ್ದ ಶ್ರೀಕಿ, 2021ರ ಏಪ್ರಿಲ್ 17ರವರೆಗೂ ನ್ಯಾಯಾಂಗ ಬಂಧನ ಮತ್ತು ಪೊಲೀಸ್ ಕಸ್ಟಡಿಯಲ್ಲೇ ಇದ್ದ. ಈ ಅವಧಿಯಲ್ಲಿ ಬೃಹತ್ ಪ್ರಮಾಣದ ಬಿಟ್‌ಕಾಯಿನ್ ಮತ್ತು ಹಣಕಾಸು ಸಂಸ್ಥೆಗಳ ಸರ್ವರ್‌ಗಳನ್ನು ಹ್ಯಾಕ್ ಮಾಡಿ ಪೊಲೀಸ್ ಅಧಿಕಾರಿಗಳು, ಅಧಿಕಾರಸ್ಥ ರಾಜಕಾರಣಿಗಳಿಗೆ ಸಂಬಂಧಿಸಿದವರಿಗೆ ವರ್ಗಾಯಿಸಲಾಗಿದೆ ಎಂಬ ಆರೋಪ ಹಲವು ದಿನಗಳಿಂದ ಕೇಳಿಬರುತ್ತಿದೆ.

ಇದೇ ಅವಧಿಯಲ್ಲಿ 'ಕೋಲ್ಡ್ ವ್ಯಾಲೆಟ್'ನಲ್ಲಿದ್ದ ಬಿಟ್‌ಫಿನೆಕ್ಸ್ ಬಿಟ್ ಕಾಯಿನ್‌ಗಳ ವರ್ಗಾವಣೆಯೂ ನಡೆದಿದೆ. ಇದು ಕೂಡ ರಾಜ್ಯದ 'ಬಿಟ್‌ಕಾಯಿನ್ ಹಗರಣ'ದ ಜತೆ ನಂಟು ಹೊಂದಿರುವ ಸಾಧ್ಯತೆ ಇದೆ ಎಂಬ ಮಾತುಗಳು ಪೊಲೀಸರ ವಲಯದಲ್ಲಿ ಹರಿದಾಡುತ್ತಿವೆ.

> ನಮ್ಮವರು ಯಾರೂ ಈ ಪ್ರಕರಣದಲ್ಲಿಲ್ಲ. ಯಾರನ್ನೂ ರಕ್ಷಿಸುವುದಿಲ್ಲ. ಪ್ರಕರಣದ ತನಿಖೆಯನ್ನು ಜಾರಿ ನಿರ್ದೇಶನಾಲಯ ನಡೆಸುತ್ತಿದೆ. ಸಾವಿರಾರು ಕೋಟಿ ಅಕ್ರಮದ ಆರೋಪಕ್ಕೆ ಯಾವ ಸಾಕ್ಷ್ಯಗಳೂ ಇಲ್ಲ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ತನಿಖೆ ನಡೆಸಿ ಆರೋಪವನ್ನು ಸುಳ್ಳೆಂದು ಸಾಬೀತುಪಡಿಸಿ ಎಂದು ಪ್ರಧಾನಿ ಸೂಚಿಸಬೇಕಾಗಿತ್ತು. ಆರೋಪವನ್ನೇ ನಿರ್ಲಕ್ಷಿಸಿ ಎಂದು ಅವರೇ ಹೇಳಿದರೆ ಹೇಗೆ? ಪ್ರಧಾನಿಯವರ ಏಕಪಕ್ಷೀಯ ತೀರ್ಮಾನ ಅಂತಿಮವೇ?
>
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

'ಬಿಟ್ ಕಾಯಿನ್ ಯಾರಿಗೆಷ್ಟು ಪಾಲು'



2020ರ ನವೆಂಬರ್14ರಂದು ಶ್ರೀಕೃಷ್ಣನನ್ನು ಪೊಲೀಸರು ಬಂಧಿಸಿದ್ದರು. ಬಿಟ್‌ಫಿನೆಕ್ಸ್ ಸರ್ವರ್‌ನಿಂದ ಬಿಟ್‌ಕಾಯಿನ್‌ಗಳನ್ನು ದೋಚಿರುವುದಾಗಿ ಆರೋಪಿ ಆರಂಭದಲ್ಲೇ ತಪ್ಪೊಪ್ಪಿಕೊಂಡಿದ್ದ. ಆದರೆ, ಪ್ರಕರಣ ಅಂತರರಾಷ್ಟ್ರೀಯ ಮಟ್ಟಕ್ಕೆ ವ್ಯಾಪಿಸಿಕೊಂಡಿದೆ ಎಂಬುದನ್ನು 2021ರ ಏಪ್ರಿಲ್ 28ರಂದು ಸಿಐಡಿಯ ಇಂಟರ್‌ಪೋಲ್ ಸಮನ್ವಯ ಅಧಿಕಾರಿಯ ಗಮನಕ್ಕೆ ತರಲಾಗಿತ್ತು. ಆ ಬಳಿಕವೂ ಆರು ತಿಂಗಳು ಕಳೆದಿದ್ದು, ಇಂಟರ್‌ಪೋಲ್ ನೆರವಿನಲ್ಲಿ ತನಿಖೆಯನ್ನು ವಿಸ್ತರಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದು ನಿಗೂಢವಾಗಿಯೇ ಉಳಿದಿದೆ.

10ನೇ ಪುಟ ನೋಡಿ

ಸರ್ಕಾರಿ ಸಾಲಪತ್ರಗಳಲ್ಲಿ ನೇರ ಹೂಡಿಕೆಗೆ ಅವಕಾಶ

ಪ್ರಜಾವಾಣಿ ವಾರ್ತೆ



ನವದೆಹಲಿ: ಸಣ್ಣ ಹೂಡಿಕೆದಾರರಿಗೆ ಕೇಂದ್ರ ಸರ್ಕಾರದ ಸಾಲಪತ್ರಗಳಲ್ಲಿ ನೇರವಾಗಿ ಹಣ ಹೂಡಿಕೆ ಮಾಡುವ ಸೌಲಭ್ಯಕ್ಕೆ ಇದೇ ಮೊದಲ ಬಾರಿಗೆ ಅವಕಾಶ ಲಭ್ಯವಾಗಿದೆ. ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿ ದರ ಕಡಿಮೆ ಇರುವ ಈ ಸಂದರ್ಭದಲ್ಲಿ, ಸಾಲ ಪತ್ರಗಳಲ್ಲಿನ ಹೂಡಿಕೆಗಳು ಹೆಚ್ಚು ಪ್ರಯೋಜನಕಾರಿ ಎಂದು ಪರಿಗಣಿತವಾಗಿವೆ. ಅಲ್ಲದೆ, ಷೇರು ಮಾರುಕಟ್ಟೆಯಲ್ಲಿ ಇರುವಂತಹ ಏರಿಳಿತಗಳು ಸಾಲಪತ್ರಗಳಲ್ಲಿನ ಹೂಡಿಕೆಗಳಲ್ಲಿ ಇರುವುದಿಲ್ಲ.

ಈ ಸೌಲಭ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಚಾಲನೆ ನೀಡಿದ್ದಾರೆ. ಇಲ್ಲಿ ಸರ್ಕಾರಿ ಸಾಲಪತ್ರಗಳನ್ನು ಖರೀದಿಸುವುದು ಹಾಗೂ ಮಾರಾಟ ಮಾಡುವ ಪ್ರಕ್ರಿಯೆಯು ಷೇರುಗಳನ್ನು ಷೇರುಪೇಟೆಯಿಂದ ಖರೀದಿಸುವ, ಮಾರಾಟ ಮಾಡುವ ಪ್ರಕ್ರಿಯೆಯನ್ನು ಹೋಲುತ್ತದೆ. ಹೂಡಿಕೆಗಳಿಗೆ ಹೆಚ್ಚಿನ ಭದ್ರತೆಯನ್ನು ಬಯಸುವ ಹಾಗೂ ಬಹಳ ದೀರ್ಘ ಅವಧಿಗೆ ನಿಶ್ಚಿತ ಆದಾಯವನ್ನು ಬಯಸುವ ಪಿಂಚಣಿದಾರರು ಈ ಸೌಲಭ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಬಹುದು ಎಂಬ ನಿರೀಕ್ಷೆ ಇದೆ.

ಇದುವರೆಗೆ ಸರ್ಕಾರಿ ಸಾಲಪತ್ರಗಳಲ್ಲಿನ ಹೂಡಿಕೆಯಲ್ಲಿ ಮ್ಯೂಚುವಲ್ ಫಂಡ್ ಕಂಪನಿಗಳು, ಬ್ಯಾಂಕ್‌ಗಳು ಮತ್ತು ವಿಮಾ ಕಂಪನಿಗಳು ಹೆಚ್ಚಿನ ಪ್ರಾಬಲ್ಯ ಹೊಂದಿದ್ದವು. 'ಈ ಕ್ರಮವು ಹಣಕಾಸಿನ ಒಳಗೊಳ್ಳುವಿಕೆಯನ್ನು ಉತ್ತೇಜಿಸಬಹುದು. ಅಸಂಘಟಿತ ವಲಯದಿಂದಲೂ ಬಂಡವಾಳ ಮಾರುಕಟ್ಟೆಗೆ ಹೆಚ್ಚಿನ ಹಣ ಹರಿದುಬರುವಂತೆ ಮಾಡಬಹುದು' ಎಂದು ರೈಟ್ ರಿಸರ್ಚ್ ಸಂಸ್ಥೆಯ ಸಹ ಸಂಸ್ಥಾಪಕ ಸೋನಮ್ ಶ್ರೀವತ್ಸ ಹೇಳಿದ್ದಾರೆ. ಇಷ್ಟೇ ಅಲ್ಲದೆ, ಸಣ್ಣ ಹೂಡಿಕೆದಾರರ ಹಣವನ್ನು ಇದು ಬ್ಯಾಂಕ್‌ಗಳಿಂದ ನೇರವಾಗಿ ಆರ್‌ಬಿಐ ಕಡೆ ಒಯ್ಯುವ ಸಾಧ್ಯತೆಯೂ ಇದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪ್ರಧಾನಿಯವರು, ಏಕೀಕೃತ ಬ್ಯಾಂಕಿಂಗ್ ಒಂಬುಡ್ಸ್‌ಮನ್ ವ್ಯವಸ್ಥೆಗೆ ಕೂಡ ಚಾಲನೆ ನೀಡಿದ್ದಾರೆ.

ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ಉಪಟಳಕ್ಕೆ ತೆರೆ

ಕಾಮೆಡ್ -ಕೆ: ಆರಂಭದಲ್ಲೇ ಪೂರ್ಣ ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನರಹಿತ ಖಾಸಗಿ ಕಾಲೇಜುಗಳ ಎಂಜಿನಿಯರಿಂಗ್ ಸೀಟು ಹಂಚಿಕೆಯಲ್ಲಿ ನಡೆಯುತ್ತಿದ್ದ 'ಸೀಟ್ ಬ್ಲಾಕಿಂಗ್' ಉಪಟಳಕ್ಕೆ ತೆರೆ ಎಳೆಯಲು ಮುಂದಾಗಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ), ಪ್ರಸಕ್ತ ಶೈಕ್ಷಣಿಕ ಸಾಲಿನಿಂದ, ಕೌನ್ಸೆಲಿಂಗ್ ಸಮಯದಲ್ಲೇ ಸಂಪೂರ್ಣ ಶುಲ್ಕ ಭರ್ತಿ ಮಾಡಿಸಿಕೊಳ್ಳುವ ಪರಿಪಾಟಕ್ಕೆ ನಾಂದಿ ಹಾಡಲಿದೆ.

'ಪ್ರವೇಶ ಮೇಲ್ವಿಚಾರಣಾ ಸಮಿತಿ ಮುಖ್ಯಸ್ಥರಾಗಿದ್ದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಮನೋಹರ್ ಸಮಿತಿಯ ಸಲಹೆಯ ಮೇರೆಗೆ ಕೆಇಎ ಈ ಕ್ರಮಕ್ಕೆ ಮುಂದಾಗಿದೆ' ಎಂದು ಕಾಮೆಡ್-ಕೆ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

5A ಪುಟ ನೋಡಿ

ಕೇರಳದಲ್ಲಿ ನೋರೊವೈರಸ್ ಪ್ರಕರಣ ಪತ್ತೆ

ತಿರುವನಂತಪುರ (ಪಿಟಿಐ): ಕೇರಳದ ವಯನಾಡ್ ಜಿಲ್ಲೆಯಲ್ಲಿ ನೋರೊವೈರಸ್ ಪ್ರಕರಣಗಳು ದೃಢಪಟ್ಟಿದ್ದು, ಸಾರ್ವಜನಿಕರು ಜಾಗರೂಕತೆಯಿಂದ ಇರುವಂತೆ ಕೇರಳ ಸರ್ಕಾರ ಶುಕ್ರವಾರ ಸೂಚಿಸಿದೆ.

ವಾಂತಿ ಹಾಗೂ ಅತಿಸಾರಕ್ಕೆ ಕಾರಣವಾಗುವ ಈ ಅಪರೂಪದ ಸೋಂಕು, ವಯನಾಡ್ ಜಿಲ್ಲೆಯ ಪೂಕೊಡೆ ಪಶುವೈದ್ಯಕೀಯ ಕಾಲೇಜಿನ 13 ವಿದ್ಯಾರ್ಥಿಗಳಲ್ಲಿ ದೃಢಪಟ್ಟಿದೆ.

ಎರಡು ವಾರಗಳ ಹಿಂದೆಯೇ ಕಾಣಿಸಿಕೊಂಡ ಈ ಸೋಂಕು ಹರಡುವಿಕೆಯನ್ನು ಸದ್ಯಕ್ಕೆ ನಿಯಂತ್ರಿಸಲಾಗಿದೆ. ಈ ಅವಧಿಯಲ್ಲಿ ಬೇರೆ ಯಾರಿಗೂ ಸೋಂಕು ತಗುಲಿರುವ ಪ್ರಕರಣ ವರದಿಯಾಗಿಲ್ಲ. ಆದಾಗ್ಯೂ ಮುನ್ನೆಚ್ಚರಿಕೆ ಕ್ರಮವಾಗಿ ಕಾಲೇಜಿನ ಎಲ್ಲ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ ಹಾಗೂ ಈ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಪಶುವೈದ್ಯಕೀಯ ಕಾಲೇಜಿನ ಅಧಿಕಾರಿಗಳ ಪ್ರಕಾರ, ಕಾಲೇಜು ಕ್ಯಾಂಪಸ್ ಹೊರಗಿನ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಈ ಸೋಂಕು ಮೊದಲು ಕಾಣಿಸಿಕೊಂಡಿತ್ತು. ಆರೋಗ್ಯಾಧಿಕಾರಿಗಳು, ಕ್ಷಿಪ್ರಗತಿಯಲ್ಲಿ ಮಾದರಿಯನ್ನು ಸಂಗ್ರಹಿಸಿ ಆಲಪುಳದಲ್ಲಿರುವ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಕಳುಹಿಸಿಕೊಟ್ಟಿದ್ದರು.

5A ಪುಟ ನೋಡಿ

ಎಚ್–1ಬಿ ವೀಸಾ: ಸಂಗಾತಿಗೂ ಉದ್ಯೋಗ ಅವಕಾಶ

ವಾಷಿಂಗ್ಟನ್: ಎಚ್–1ಬಿ ವೀಸಾ ಹೊಂದಿರುವವರ ಸಂಗಾತಿಗೆ ಕೈಗೊಳ್ಳುವ ಉದ್ಯೋಗಕ್ಕೆ ಸ್ವಯಂಚಾಲಿತ ದೃಢೀಕರಣ ನೀಡಲು ಅಮೆರಿಕ ಸರ್ಕಾರ ಒಪ್ಪಿಗೆ ನೀಡಿದೆ. ಅಧ್ಯಕ್ಷ ಜೋ ಬೈಡನ್ ನೇತೃತ್ವದ ಸರ್ಕಾರ ಕೈಗೊಂಡಿರುವ ಈ ವಲಸೆಸ್ನೇಹಿ ಕ್ರಮ ಭಾರತೀಯ ಅಮೆರಿಕನ್ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಲಿದೆ. 11

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಐಪಿಎಸ್ ಅಧಿಕಾರಿ– ಕಾನ್‌ಸ್ಟೆಬಲ್ ಸಂಭಾಷಣೆ ಬಹಿರಂಗ

‘ಮಿನಿಸ್ಟರಿಗೆಲ್ಲಾ ಹಣ ಹೋಗಿದೆ...’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣ ಪೊಲೀಸರ ಸುಪರ್ದಿಯಲ್ಲಿದ್ದಾಗಲೇ ಆತನ ಮೂಲಕ ಬಿಟ್‌ಕಾಯಿನ್‌ಗಳನ್ನು ರಾಜ್ಯದ ಪ್ರಭಾವಿ ರಾಜಕಾರಣಿಗಳು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ವರ್ಗಾವಣೆ ಮಾಡಲಾಗಿತ್ತು ಎಂಬ ಸುಳಿವು ನೀಡುವ ದೂರವಾಣಿ ಸಂಭಾಷಣೆಯೊಂದರ ತುಣುಕು ಶುಕ್ರವಾರ ಬಹಿರಂಗಗೊಂಡಿದೆ.

ಐಪಿಎಸ್ ಅಧಿಕಾರಿಯೊಬ್ಬರು ಸಿಐಡಿಯ ಸೈಬರ್ ಅಪರಾಧ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರ ಜತೆ ನಡೆಸಿದ್ದಾರೆ ಎನ್ನಲಾದ ಸಂಭಾಷಣೆಯಲ್ಲಿ ಶ್ರೀಕೃಷ್ಣ ಪೊಲೀಸ್ ಕಸ್ಟಡಿಯಲ್ಲಿದ್ದಾಗ ನಡೆದಿರುವ ಘಟನಾವಳಿಗಳ ಮಾಹಿತಿ ಇದೆ.

ಪೊಲೀಸ್ ಅಧಿಕಾರಿಗಳ ಸಂಭಾಷಣೆಯ ಪೂರ್ಣಪಾಠ ಹೀಗಿದೆ...

ಸಿಐಡಿ ತನಿಖಾಧಿಕಾರಿ- ಅದು ಫ್ಲಕ್ಚುಯೇಷನ್ ಆಗ್ತಾ ಇರುತ್ತೆ. ಇವತ್ತು ಹೀಗೆ ಇರುತ್ತೆ, ನಾಳೆ ಹೇಳೋಕೆ ಆಗಲ್ಲ.

ಐಪಿಎಸ್ ಅಧಿಕಾರಿ- ಅಂದಾಜು, ಇವತ್ತು ಬಿಟ್‌ಕಾಯಿನ್ ಎಷ್ಟು?

ತನಿಖಾಧಿಕಾರಿ- ಈಗ ಒಂದು ಬಿಟ್‌ಕಾಯಿನ್ ₹ 56 ಲಕ್ಷ ಇದೆ. ಅದರಲ್ಲಿಯೂ ವೆರೈಟೀಸ್ ಇದೆ. ₹ 30 ಲಕ್ಷ ಇದೆ. ಡಿಪೆಂಡ್ಸ್.

ಐಪಿಎಸ್ ಅಧಿಕಾರಿ- ಅವನ ಅಕೌಂಟ್‌ನಿಂದ ಬೇರೆಯವರ ಅಕೌಂಟ್‌ಗೆ ಬಿಟ್‌ಕಾಯಿನ್ ಹೋಗಿದ್ಯಾ?

ತನಿಖಾಧಿಕಾರಿ- ಹಾ ಹೋಗಿದೆ ಸರ್. ದೊಡ್ಡವರು ಸುಮಾರು ಜನ ಟ್ರಾನ್ಸಾಕ್ಷನ್ ಅದ್ರಲ್ಲೇ ಮಾಡಿದ್ದಾರೆ.

ಐಪಿಎಸ್ ಅಧಿಕಾರಿ- ಯಾರು ಅಂತಾ ನಿಮಗೆ ಗೊತ್ತಾ?

ತನಿಖಾಧಿಕಾರಿ- ಅರ್ಧಂಬರ್ಧ ಗೊತ್ತಿದೆ ಸರ್. ಫುಲ್ ಕನ್ಫರ್ಮ್ ಇಲ್ಲ. ಎಲ್ಲ ದೊಡ್ಡವರೇ ಇದ್ದಾರೆ.

ಐಪಿಎಸ್ ಅಧಿಕಾರಿ- ಯಾರ‍್ಯಾರಿದ್ದಾರೆ ಅಂದಾಜು?

ತನಿಖಾಧಿಕಾರಿ- ಮಿನಿಸ್ಟರ್ ಲೆವೆಲ್‌ನಲ್ಲೇ ಇದ್ದಾರೆ.

ಐಪಿಎಸ್ ಅಧಿಕಾರಿ- ಹೋಮ್ ಮಿನಿಸ್ಟರ್...ಆ?

ತನಿಖಾಧಿಕಾರಿ- ಅಲ್ಲಲ್ಲ, ಬೇರೆ ಮಿನಿಸ್ಟರ್‌ಗಳಿದ್ದಾರೆ. ಐಪಿಎಸ್ ಅಧಿಕಾರಿಗಳಿದ್ದಾರೆ.

ಐಪಿಎಸ್ ಅಧಿಕಾರಿ- ಐಪಿಎಸ್ ಅಂದ್ರೆ ಯಾರ‍್ಯಾರು?

ತನಿಖಾಧಿಕಾರಿ- ಹೆಸರು ಗೊತ್ತಿಲ್ಲ ಸರ್.

ಐಪಿಎಸ್ ಅಧಿಕಾರಿ- ಆಯ್ತು ಬಿಡಪ್ಪ. ಒಟ್ನಲ್ಲಂತೂ ಆಗಿದೆ.

ತನಿಖಾಧಿಕಾರಿ- ಆಗಿದೆ ಸರ್.

ಐಪಿಎಸ್ ಅಧಿಕಾರಿ- ನಿನ್ನೆ ಮೊನ್ನೆ ಶರತ್ ಅವ್ರನ್ನ ಕರೆದಿದ್ರಾ?

ತನಿಖಾಧಿಕಾರಿ- ಇಲ್ಲ, ಇವ್ರು ಎರಡು, ಮೂರು ದಿನದ ಹಿಂದೆ ಹೋಗಿದ್ರು. ಇಂಟೆಲಿಜೆನ್ಸ್‌ನವರು ಕರೆದಿದ್ದರು. ಎರಡು ದಿನಗಳ ಹಿಂದೆ ದಯಾನಂದ್ ಸಾಹೇಬ್ರು ಫುಲ್ ಅವನ ಮಾಹಿತಿ ತಗೊಂಡ್ರು

ಐಪಿಎಸ್ ಅಧಿಕಾರಿ- ಅವನ ಬಗ್ಗೆ ಕೇಳುವುದಕ್ಕೆ ಅಷ್ಟೇನಾ

ತನಿಖಾಧಿಕಾರಿ- ಹೌದು ಅವನ ಬಗ್ಗೆ ಇನ್ಫರ್ಮೇಷನ್ ಕೇಳುವುದಕ್ಕೆ ಕರೆಸಿದ್ದರು.

ಐಪಿಎಸ್ ಅಧಿಕಾರಿ- ಏನ್ ಸೆಕ್ಷನ್ ಹಾಕಿದ್ರು?

ತನಿಖಾಧಿಕಾರಿ- 66–ಇ. ಮಾಮೂಲಿ ಸರ್ ಅದು. ಬೇರೇನೂ ಇಲ್ಲ.

ಐಪಿಎಸ್ ಅಧಿಕಾರಿ- ಹೌದಾ?

ತನಿಖಾಧಿಕಾರಿ- ಹೌದು ಸರ್ ಅವನು ಎರಡ್ಮೂರು ತಿಂಗಳು ಒಳಗಡೆ ಇದ್ದ. ಆಮೇಲೆ ಬೇಲ್ ಆಯ್ತು.

‘ಬದಲಾವಣೆ ಚರ್ಚೆ ಹಿಂದೆ ರಾಜಕೀಯ’

ಬೆಂಗಳೂರು: ಮುಖ್ಯಮಂತ್ರಿ ಬದಲಾವಣೆ ಕುರಿತು ನಡೆಯುತ್ತಿರುವ ಚರ್ಚೆಗಳ ಹಿಂದೆ ರಾಜಕೀಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬಿಟ್ ಕಾಯಿನ್ ಕುರಿತು ಆರೋಪ ಮಾಡುತ್ತಿರುವವರು ಏನು ಹಗರಣ ನಡೆದಿದೆ ಎಂಬುದನ್ನು ಹೇಳಲಿ. ಆರೋಪಗಳಿಗೆ ಪೂರಕವಾದ ಸಾಕ್ಷ್ಯಗಳನ್ನು ಒದಗಿಸಲಿ’ ಎಂದರು.

ಪ್ರತಿದಿನ ಇದೇ ವಿಷಯದ ಕುರಿತು ಪ್ರತಿಕ್ರಿಯೆ ನೀಡಲು ಬಯಸುವುದಿಲ್ಲ. ಪ್ರಕರಣದ ಬಗ್ಗೆ ದಿನಕ್ಕೊಂದು ಮೊತ್ತವನ್ನು ಹೇಳಲಾಗುತ್ತಿದೆ. ಇದಕ್ಕೆ ಯಾವ ದಾಖಲೆಗಳ ಆಧಾರವೂ ಇಲ್ಲ ಎಂದು ಹೇಳಿದರು.

‘ಬಿಟ್‌ಕಾಯಿನ್ ಪ್ರಕರಣ ಅಂತರರಾಷ್ಟ್ರೀಯ ಮಟ್ಟದಲ್ಲಿರುವುದರಿಂದ ಸಿಬಿಐನ ಇಂಟರ್‌ಪೋಲ್ ವಿಭಾಗಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ. ಜಾರಿ ನಿರ್ದೇಶನಾಲಯವೂ ತನಿಖೆ ನಡೆಸುತ್ತಿದೆ. ಸಾಕ್ಷ್ಯಗಳಿದ್ದರೆ ತನಿಖಾ ಸಂಸ್ಥೆಗೆ ನೀಡಲಿ’ ಎಂದರು.

ಎರಡು ಸಮಿತಿ ನೇಮಕ

ರಾಜ್ಯದ ಎಲ್ಲ ಸಾರಿಗೆ ನಿಗಮಗಳ ಪುನಶ್ಚೇತನಕ್ಕೆ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಆರ್. ಶ್ರೀನಿವಾಸಮೂರ್ತಿ ಅಧ್ಯಕ್ಷತೆಯಲ್ಲಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಪುನಶ್ಚೇತನಕ್ಕೆ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆ. ಜೈರಾಜ್ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಮಿತಿಗಳನ್ನು ನೇಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಕತ್ತಲಲ್ಲಿ ಕಪ್ಪು ಬೆಕ್ಕು ಹುಡುಕುವ ಯತ್ನ’

ಬೆಂಗಳೂರು: ಬಿಟ್‌ಕಾಯಿನ್ ಹಗರಣದಲ್ಲಿ ದಾಖಲೆಗಳನ್ನು ಮುಂದಿಡಲು ಭಯವೇಕೆ. ನಿಮ್ಮ ಪಕ್ಷದ ನಾಯಕರ ಬುಡ ಸುತ್ತಿಕೊಳ್ಳಬಹುದೇ ಎಂಬ ಭಯ ಕಾಡುತ್ತಿದೆಯೇ ಎಂದು ಸಿದ್ದರಾಮಯ್ಯ ಅವರನ್ನು ಬಿಜೆಪಿ ಪ್ರಶ್ನಿಸಿದೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಬಿಜೆಪಿ, ‘ಹ್ಯಾಕಿಂಗ್ ಆರೋಪಿ ಶ್ರೀಕಿ ಕಾಂಗ್ರೆಸ್ ನಾಯಕರ ಮಕ್ಕಳ ಜತೆ ಸಂಪರ್ಕ ಹೊಂದಿರುವುದು ಸುಳ್ಳೇ’ ಎಂದು ಪ್ರಶ್ನಿಸಿದೆ.

‘ನೀವು ಟಿಪ್ಪು ಕುರಿತಾದ ಸುಳ್ಳು ಇತಿಹಾಸ ಓದುವ ಬದಲು ಬಿಟ್‌ಕಾಯಿನ್ ಕುರಿತಾದ ದೋಷಾರೋಪ ಪಟ್ಟಿ ತರಿಸಿಕೊಂಡು ಮೊದಲು ಓದಿ. ಆಗ ನಿಮ್ಮ ಪಕ್ಷದ ನಾಯಕರು ಈ ಹಗರಣದಲ್ಲಿ ಹೇಗೆ ಭಾಗಿಯಾಗಿದ್ದಾರೆಂಬುದು ಅರ್ಥವಾಗುತ್ತದೆ’ ಎಂದು ಹೇಳಿದೆ.

‘ಬಿಟ್‌ಕಾಯಿನ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರು ಅಕ್ಷರಶಃ ಕತ್ತಲೆಯಲ್ಲಿ ಕಪ್ಪು ಬೆಕ್ಕು ಹುಡುಕುವ ಪ್ರಯತ್ನ ನಡೆಸುತ್ತಿದ್ದಾರೆ. ಇಲ್ಲದ ವಸ್ತುವನ್ನು ಇದೆ ಎಂದು ಸ್ಥಾಪಿಸುವ ಭ್ರಮಾತ್ಮಕ ಕಾಯಿಲೆ ಕಾಂಗ್ರೆಸ್ ನಾಯಕರನ್ನು ಕಾಡುತ್ತಿರುವಂತಿದೆ’ ಎಂದು ಬಿಜೆಪಿ ಹರಿಹಾಯ್ದಿದೆ.

‘ಡಾರ್ಕ್‌ನೆಟ್ ಮತ್ತು ಬಿಟ್‌ಕಾಯಿನ್ ಜತೆ ಡ್ರಗ್ಸ್ ಹಗರಣಕ್ಕೆ ನಂಟಿದೆ ಎಂದು ನಾವು ಮೊದಲೇ ಪ್ರತಿಪಾದಿಸಿದ್ದೆವು. ಡಿ.ಕೆ.ಶಿವಕುಮಾರ್ ಆಪ್ತ ಮೊಹಮ್ಮದ್ ನಲಪಾಡ್, ಉಮರ್ ನಲಪಾಡ್ ಅವರು ಬಿಟ್‌ಕಾಯಿನ್ ದಂಧೆಯ ಆರೋಪಿಯ ಜತೆ ಹೊಂದಿರುವ ನಂಟೇ ಇದಕ್ಕೆ ಸಾಕ್ಷಿ. ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲೇ ಶ್ರೀಕಿ ನಿರಾತಂಕವಾಗಿ ಓಡಾಡಿಕೊಂಡು ಇದ್ದರಲ್ಲವೇ’ ಎಂದೂ ಪ್ರಶ್ನಿಸಿದೆ.

‘ಮಾಜಿ ಸಚಿವ ರುದ್ರಪ್ಪ ಲಮಾಣಿ ಪುತ್ರ ದರ್ಶನ್ ಶ್ರೀಕಿ ಜತೆಗೆ ವ್ಯವಹಾರ ನಡೆಸಿರುವ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಸಲಾದ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖವಿದೆ’ ಎಂದೂ ಹೇಳಿದೆ.

‘ವಶಪಡಿಸಿಕೊಂಡ ಬಿಟ್‌ಕಾಯಿನ್ ಎಲ್ಲಿವೆ?’

ಬೆಂಗಳೂರು: ‘ಹ್ಯಾಕರ್ ಶ್ರೀಕೃಷ್ಣನಿಂದ ಪೊಲೀಸರು ವಶಪಡಿಸಿಕೊಂಡಿದ್ದ ಬಿಟ್‌ಕಾಯಿನ್‌ಗಳು ಎಲ್ಲಿವೆ ಎಂಬುದನ್ನು ರಾಜ್ಯ ಸರ್ಕಾರ ಬಹಿರಂಗಪಡಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ಬೆಂಕಿ ಇಲ್ಲದೇ ಹೊಗೆಯಾಡುವುದಿಲ್ಲ. ಯಾವ ಪೊಲೀಸರು ಬಿಟ್‌ಕಾಯಿನ್‌ಗಳನ್ನು ವಶಪಡಿಸಿಕೊಂಡಿದ್ದರು? ಮಹಜರು ಪ್ರಕ್ರಿಯೆ ನಡೆದಿತ್ತೇ? ಈಗ ಆ ಬಿಟ್ ಕಾಯಿನ್‌ಗಳು ಯಾರ ಬಳಿ ಇವೆ? ಎಂಬ ಪ್ರಶ್ನೆಗಳಿಗೆ ಸರ್ಕಾರ ಉತ್ತರ ನೀಡಬೇಕು’ ಎಂದರು.



ಸಾಂಸ್ಕೃತಿಕ ಜಾನಪದ ಹಬ್ಬ

ರೇವಾ ವಿಶ್ವವಿದ್ಯಾಲಯವು ಯಲಹಂಕದ ಕ್ಯಾಂಪಸ್‌ನಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ದಾಂಡಿಯ ಸಾಂಸ್ಕೃತಿಕ ಜಾನಪದ ಹಬ್ಬದಲ್ಲಿ ವಿಜೇತ ತಂಡಕ್ಕೆ ವಿಶ್ವವಿದ್ಯಾಲಯದ ಕುಲಾಧಿಪತಿ ಪಿ.ಶ್ಯಾಮರಾಜು ಹಾಗೂ ಕುಲಪತಿ ಎಂ.ಧನಂಜಯ ಪ್ರಶಸ್ತಿ ವಿತರಿಸಿದರು.

ಪ್ರಜಾವಾಣಿ ಚಿತ್ರ

ಕೋವಿಡ್: 29.91 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 227 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.91 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.03 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.22 ರಷ್ಟು ವರದಿಯಾಗಿದೆ. ಎರಡು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 16 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 147 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 206 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.45 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 8,036ಕ್ಕೆ ಏರಿಕೆ ಕಂಡಿದೆ. 16 ಜಿಲ್ಲೆಗಳಲ್ಲಿ 50 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ. ಬೀದರ್, ಗದಗ ಹಾಗೂ ಹಾವೇರಿಯಲ್ಲಿ ಕೋವಿಡ್ ಪ್ರಕರಣವಿಲ್ಲ. ಬೆಂಗಳೂರಿನಲ್ಲಿ ಗರಿಷ್ಠ (6,646) ಸಕ್ರಿಯ ಪ್ರಕರಣಗಳಿವೆ.

ಬೆಂಗಳೂರು ಹಾಗೂ ಮೈಸೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 0.88 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,140ಕ್ಕೆ ಏರಿಕೆಯಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,53,669 ಒಟ್ಟು ಪ್ರಕರಣಗಳು ▲ (12,53,522 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,646 ▲	12,30,715 ▲	16,307 ▲

ದಿನದ ಏರಿಕೆ

ಹೊಸ ಪ್ರಕರಣ	147 ▼
ಗುಣಮುಖ	62 ▼
ಸಾವು	01 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಲಸಿಕೆಗೆ ಸಿಂಗಪುರ ಮಾದರಿ–ಚಿಂತನೆಯ ಅಗತ್ಯ’

ಬೆಂಗಳೂರು: ‘ಸಿಂಗಪುರ ಮಾದರಿಯಲ್ಲಿ ಲಸಿಕೆ ಕಡ್ಡಾಯಗೊಳಿಸುವ ನಿರ್ಧಾರ ಸದ್ಯಕ್ಕಿಲ್ಲ, ಈ ಬಗ್ಗೆ ಚಿಂತನೆ ನಡೆಯಬೇಕಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

‘ಸಿಂಗಪುರ ಮಾದರಿಯಲ್ಲಿ ಹಲವು ದೇಶಗಳಲ್ಲಿ ಲಸಿಕೆ ಕಡ್ಡಾಯ ಇದೆ. ನಗರದ ಜನ ತಾವಾಗಿಯೇ ಲಸಿಕೆ ಪಡೆದುಕೊಳ್ಳಬೇಕು’ ಎಂದು ಹೇಳಿದರು.

‘ನಗರದಲ್ಲಿ ಕೋವಿಡ್ ಹತೋಟಿಯಲ್ಲಿದೆ. ಶೇ 87ರಷ್ಟು ಜನ ಮೊದಲ ಡೋಸ್ ಮತ್ತು ಶೇ 58ರಷ್ಟು ಜನ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. ಎಲ್ಲರೂ ಎರಡು ಡೋಸ್ ಲಸಿಕೆ ಪಡೆಯಬೇಕು’ ಎಂದು ಅವರು ಮಾನವಿ ಮಾಡಿದರು.

‘ನಗರದಲ್ಲಿನ ಅಕ್ರಮ ಕಟ್ಟಡಗಳ ಪಟ್ಟಿ ಸಿದ್ಧವಾಗಿದೆ. ನಕ್ಷೆ ಇಲ್ಲದ ಮತ್ತು ನಕ್ಷೆ ಉಲ್ಲಂಘನೆ ಮಾಡಿ ನಿರ್ಮಿಸಿರುವ ಕಟ್ಟಡಗಳನ್ನು ಗುರುತಿಸಿ ಪಟ್ಟಿ ಮಾಡಲಾಗಿದೆ. ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಲಾಗುವುದು. ನಿಯಮ ಉಲ್ಲಂಘನೆ ಮಾಡಿರುವ ಕಟ್ಟಡಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಜವಾಬ್ದಾರಿ ನಿಗದಿ ಮಾಡಲಾಗುವುದು’ ಎಂದು ಹೇಳಿದರು.

ಕೋವಿಡ್ ಅಂಕಿ–ಅಂಶ
ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.29 ಕೋಟಿ ▲	3.44 ಕೋಟಿ
ಸಕ್ರಿಯ ಪ್ರಕರಣ	1.90 ಕೋಟಿ ▲	1.38 ಲಕ್ಷ
ಗುಣಮುಖ	22.88 ಕೋಟಿ ▲	3.38 ಕೋಟಿ ▲
ಸಾವು	50.99 ಲಕ್ಷ ▲	4.62 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.09 ಲಕ್ಷ ▼	12,516 ▼
ಗುಣಮುಖ	3.43 ಲಕ್ಷ ▼	13,155 ▼
ಸಾವು	6,956 ▼	501 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 43,596 ▼ ಅಮೆರಿಕ; 42,408 ▲ ಬ್ರಿಟನ್; 50,377 ▲ ಜರ್ಮನಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 91.83 ▲ ಅಮೆರಿಕ; 15.76 ▲ ಬ್ರಿಟನ್; 10.13 ▲ ರಷ್ಯಾ

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,251 ▲ ತಮಿಳುನಾಡು; 35,040 ▲ ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.21 ಮಹಾರಾಷ್ಟ್ರ ▲; 50.42 ಕೇರಳ ▲; 27.12 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಪುನೀತ ನಮನ: ಸೀಮಿತ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ವತಿಯಿಂದ ನ. 16ರಂದು ನಗರದ ಅರಮನೆ ಮೈದಾನದಲ್ಲಿ ‘ಪುನೀತ ನಮನ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ಮಾಹಿತಿ ನೀಡಿದ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್ ಹಾಗೂ ನಿರ್ಮಾಪಕ ಸಾ.ರಾ ಗೋವಿಂದು, ‘ಪುನೀತ್ ನಿಧನರಾದ ಮರುದಿನವೇ ಸಿನಿಮಾ ಕ್ಷೇತ್ರದ ಎಲ್ಲರ ಒಕ್ಕೊರಲ ಅಭಿಪ್ರಾಯದಂತೆ ರೂಪಿಸಲಾದ ಕಾರ್ಯಕ್ರಮವಿದು. ಸ್ಥಳಾವಕಾಶದ ಇತಿಮಿತಿ ಹಾಗೂ ನಿಯಮಾವಳಿಗಳ ಕಾರಣದಿಂದ ಕಾರ್ಯಕ್ರಮದಲ್ಲಿ ಒಂದೂವರೆ ಸಾವಿರ ಮಂದಿಗಷ್ಟೇ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ’ ಎಂದರು.

‘ಕಾರ್ಯಕ್ರಮದಲ್ಲಿ ಡಾ.ರಾಜ್‌ಕುಮಾರ್ ಕುಟುಂಬದ ಸದಸ್ಯರು, ದಕ್ಷಿಣ ಭಾರತದ ಎಲ್ಲ ಸಿನಿ ಪ್ರಮುಖರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಎಲ್ಲ ಸಚಿವರು, ಗಣ್ಯರು ಭಾಗವಹಿಸಲಿದ್ದಾರೆ’ ಎಂದು ಅವರು ಮಾಹಿತಿ ನೀಡಿದರು.

ಪಾಸ್ ಇದ್ದರಷ್ಟೇ ಪ್ರವೇಶ: ‘ವಾಣಿಜ್ಯ ಮಂಡಳಿಯ ಎಲ್ಲ ಅಂಗ ಸಂಸ್ಥೆಗಳೂ ಸೇರಿ ಎಲ್ಲರಿಗೂ ಸೀಮಿತ ಸಂಖ್ಯೆಯ ಪಾಸ್‌ಗಳನ್ನು ನೀಡಲಾಗಿದೆ. ಕಾರ್ಯಕ್ರಮದ ಪಾಸ್ ಹಾಗೂ ಸಂಘಟಕರು ನೀಡಿದ ಗುರುತಿನ ಚೀಟಿ ಇದ್ದವರಿಗೆ ಮಾತ್ರ ಪ್ರವೇಶ. ಕಾರ್ಯಕ್ರಮ ಎಲ್ಲ ಮಾಧ್ಯಮಗಳಲ್ಲಿ ನೇರ ಪ್ರಸಾರವಾಗಲಿದೆ’ ಎಂದರು.

‘3.15ಕ್ಕೆ ಮುಖ್ಯ ಕಾರ್ಯಕ್ರಮ ಆರಂಭವಾಗಲಿದೆ. ಮೊದಲು ಸ್ಯಾಕ್ಸೋಫೋನ್ ವಾದನ ನಡೆಯಲಿದೆ. ನಂತರ ಪುನೀತ್ ಅವರ ಬದುಕಿನ ಕುರಿತು ವಿಡಿಯೋ ಪ್ರದರ್ಶನ ನಂತರ ಗೌರವ ಸಲ್ಲಿಸುವ ವಿಡಿಯೋ ಪ್ರದರ್ಶನ ನಡೆಯಲಿದೆ’ ಎಂದು ನಿರ್ಮಾಪಕ ನವರಸನ್ ಹೇಳಿದರು.

ಅನಂತಕುಮಾರ್ ಅನುಪಸ್ಥಿತಿ ಎದ್ದು ಕಾಣುತ್ತಿದೆ: ನಿತಿನ್ ಗಡ್ಕರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ರಾಜಕಾರಣದಲ್ಲಿ ಅನಂತಕುಮಾರ್ ಅವರ ಅನುಪಸ್ಥಿತಿ ಎದ್ದು ಕಾಣುತ್ತಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು.

ದಿವಂಗತ ಅನಂತಕುಮಾರ್ ಅವರ 3ನೇ ಪುಣ್ಯತಿಥಿ ಸ್ಮರಣಾರ್ಥ ಆಯೋಜಿಸಿದ್ದ ಅನಂತಕುಮಾರ್ ಸ್ಮಾರಕ ಉಪನ್ಯಾಸದಲ್ಲಿ ಆನ್‌ಲೈನ್ ಮೂಲಕ ಭಾಗವಹಿಸಿ ಅವರು ಮಾತನಾಡಿದರು. 'ದಕ್ಷಿಣ ಭಾರತದಲ್ಲಿ ಬಿಜೆಪಿ ಬೆಳವಣಿಗೆಯಲ್ಲಿ ಅನಂತಕುಮಾರ್ ಕೊಡುಗೆ ನೀಡಿದ್ದರು' ಎಂದು ನೆನಪಿಸಿಕೊಂಡರು.

'ಪತ್ನಿ ತೇಜಸ್ವಿನಿ ಅನಂತಕುಮಾರ್ ಅವರ ಜತೆ ಸೇರಿ ಪ್ರಾರಂಭಿಸಿದ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ ಲಕ್ಷಾಂತರ ಮಕ್ಕಳ ಹಸಿವು ನೀಗಿಸುತ್ತಿದೆ. ಅನಂತಕುಮಾರ್ ಅವರ ಬಹು ದಿನಗಳ ಕನಸಾಗಿದ್ದ ಬೆಂಗಳೂರು ರಿಂಗ್ ರಸ್ತೆ ನಿರ್ಮಾಣದ ಬಗ್ಗೆ ಚರ್ಚೆ ನಡೆಸಲಾಗಿದೆ. ಚುನಾವಣೆಯ ನೀತಿ ಸಂಹಿತೆ ಮುಗಿದ ಬಳಿಕ ಬೆಂಗಳೂರಿಗೆ ಬಂದು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪಿ.ವಿ. ಕೃಷ್ಣ ಭಟ್, ಅನಂತಕುಮಾರ್ ಪುತ್ರಿ ಐಶ್ವರ್ಯಾ ಮತ್ತು ವಿಜೇತಾ ಅನಂತಕುಮಾರ್, ಅದಮ್ಯ ಚೇತನ ಸಂಸ್ಥೆಯ ಟ್ರಸ್ಟಿಗಳಾದ ಎಚ್.ಎಸ್. ನಂದಕುಮಾರ್, ಪ್ರದೀಪ್ ಓಕ್ ಇದ್ದರು.



ಅನಂತಕುಮಾರ್ ಸ್ಮರಣೆ ಕಾರ್ಯಕ್ರಮದಲ್ಲಿ ನಿತಿನ್ ಗಡ್ಕರಿ ವರ್ಚುವಲ್ ಮೂಲಕ ಮಾತನಾಡಿದರು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್‌.ಕುಮಾರ್, ಮನೋವೈದ್ಯ ಡಾ. ಬಿ.ಎನ್. ಗಂಗಾಧರ್, ಶಿಕ್ಷಣ ತಜ್ಞ ಪ್ರೊ. ಎ.ವಿ. ಕೃಷ್ಣಭಟ್, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಸದಸ್ಯ ಎಚ್.ಎಸ್. ನಾಗರಾಜ್ ಇದ್ದರು –ಪ್ರಜಾವಾಣಿ ಚಿತ್ರ

ಎಲೆಕ್ಟ್ರಿಕ್ ವಾಹನ 5 ವರ್ಷದಲ್ಲಿ ಸಾಧನೆ

'ಎಲೆಕ್ಟ್ರಿಕ್ ವಾಹನಗಳ ಕ್ಷೇತ್ರದಲ್ಲಿ ಆಗುತ್ತಿರುವ ಸಂಶೋಧನೆ ಗಮನಿಸಿದರೆ ಮುಂದಿನ 5 ವರ್ಷಗಳಲ್ಲಿ ಭಾರತ ವಿಶ್ವದಲ್ಲೇ ಮೊದಲ ಸ್ಥಾನ ಪಡೆಯುವುದರಲ್ಲಿ ಸಂಶಯವಿಲ್ಲ' ಎಂದು ನಿತಿನ್ ಗಡ್ಕರಿ ಹೇಳಿದರು.

'ದೇಶದಲ್ಲಿ ಹಸಿರು ಆರ್ಥಿಕತೆಯನ್ನು ವೇಗವಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಬೆಂಗಳೂರಿನ ನವೋದ್ಯಮಗಳು ಈ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಂಡಿವೆ. 'ಇಥೆನಾಲ್ ಉತ್ಪಾದನೆ, ಫ್ಲೆಕ್ಸ್ ಎಂಜಿನ್, ಎಲೆಕ್ಟ್ರಿಕ್ ವಾಹನಗಳ ಅಭಿವೃದ್ಧಿಯಲ್ಲಿ ಸಂಶೋಧನೆ ನಡೆಯುತ್ತಿವೆ. ಈ ಸಂಶೋಧನೆಗಳಲ್ಲಿ ಬೆಂಗಳೂರು ನಗರದ ಕೊಡುಗೆ ಹೆಚ್ಚಿದೆ' ಎಂದು ತಿಳಿಸಿದರು.

ಕದ್ದ ವಾಹನ ಮಾರುತ್ತಿದ್ದವನ ಸೆರೆ

ಬೆಂಗಳೂರು: ಮನೆಗಳ ಎದುರು ನಿಲ್ಲಿಸಿರುತ್ತಿದ್ದ ವಾಹನಗಳನ್ನು ಕಳ್ಳತನ ಮಾಡಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಕಲಾಸಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಾಮರಾಜಪೇಟೆಯ ವಾಲ್ಮೀಕಿ ನಗರದ ಎರಡನೇ ಅಡ್ಡರಸ್ತೆಯ ನಿವಾಸಿ ರೋಷನ್ ಪರೀಕ್ಷ್ (27) ಬಂಧಿತ. ಆತನಿಂದ ₹4.50 ಲಕ್ಷ ಮೌಲ್ಯದ 5 ದ್ವಿಚಕ್ರ ವಾಹನ, ಒಂದು ಆಟೊ ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. 'ಗಸ್ತಿನಲ್ಲಿದ್ದ ಸಿಬ್ಬಂದಿ ಗುರುವಾರ ಸಂಜೆ ಕೆ.ಎಂ. ರಸ್ತೆಯಲ್ಲಿ ಹೋಗುತ್ತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬ ದ್ವಿಚಕ್ರ ವಾಹನ ನಿಲ್ಲಿಸಿಕೊಂಡು ಅದನ್ನು ಮಾರಲು ಮುಂದಾಗಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಸ್ಥಳಕ್ಕೆ ತೆರಳಿ ಆರೋಪಿಯನ್ನು ಬಂಧಿಸಲಾಗಿತ್ತು. ವಿಚಾರಣೆ ನಡೆಸಿದಾಗ ಬೈಕ್ ಕದ್ದು ತಂದಿರುವುದಾಗಿ ಆತ ಒಪ್ಪಿಕೊಂಡಿದ್ದ' ಎಂದು ಹೇಳಿದ್ದಾರೆ.

ಕೇರಳದಲ್ಲಿ ನೋರೊವೈರಸ್ ಪ್ರಕರಣ ಪತ್ತೆ

ಒಂದನೇ ಪುಟದಿಂದ

ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಈ ಬಗ್ಗೆ ಆರೋಗ್ಯ ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದ್ದು, ವಯನಾಡಿನ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದರು. ನೋರೊವೈರಸ್ ಹರಡುವುದನ್ನು ತಡೆಯುವ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಸಚಿವೆ ಸೂಚಿಸಿದ್ದಾರೆ. ಸದ್ಯಕ್ಕೆ ಯಾವುದೇ ಅಪಾಯ ಇಲ್ಲವಾದರೂ ಪ್ರತಿಯೊಬ್ಬರೂ ಕೂಡ ಜಾಗರೂಕತೆಯಿಂದ ಇರಬೇಕು ಎಂದು ಆರೋಗ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ಸೋಂಕು ಹಬ್ಬದಂತೆ ತಡೆಯುವ ದಿಸೆಯಲ್ಲಿ, ಕ್ಲೋರಿನೇಷನ್ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕುಡಿಯುವ ನೀರಿನ ಮೂಲಗಳ ಶುದ್ಧತೆ ಕಾಯ್ದುಕೊಳ್ಳಲು ಅನುಸರಿಸಬೇಕಾದ ಸುರಕ್ಷತಾ ಕ್ರಮಗಳನ್ನು ಅನುಸರಿಸಿದರೆ ಕಾಯಿಲೆಯು ಶೀಘ್ರವೇ ಗುಣವಾಗುತ್ತದೆ. ಹೀಗಾಗಿ, ಈ ರೋಗದ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು ಹಾಗೂ ಮುನ್ನೆಚ್ಚರಿಕೆ ವಹಿಸಬೇಕು ಎಂದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಆರೋಪಿಯಿಂದ ಜಪ್ತಿ ಮಾಡಿರುವ ಪ್ರಾಚೀನ ವಸ್ತುಗಳು

₹1 ಕೋಟಿ ಮೌಲ್ಯದ ಪ್ರಾಚೀನ ವಸ್ತುಗಳ ಜಪ್ತಿ: ಆರೋಪಿ ಸೆರೆ

ಬೆಂಗಳೂರು: ಆನೆ ದಂತದಿಂದ ತಯಾರಿಸಿರುವ 'ಶೂ ರಿಮೂವರ್' ಸೇರಿದಂತೆ ಅಂದಾಜು ₹1 ಕೋಟಿ ಮೌಲ್ಯದ ಪ್ರಾಚೀನ ಹಾಗೂ ಅಮೂಲ್ಯ ವಸ್ತುಗಳನ್ನು ಮಾರಲು ಮುಂದಾಗಿದ್ದ ಆರ್ಯನ್ ಖಾನ್ (32) ಎಂಬಾತನನ್ನು ಕಾಡುಗೊಂಡನಹಳ್ಳಿ (ಕೆ.ಜಿ ಹಳ್ಳಿ) ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿಯು ಯಲಹಂಕದ ಕಟ್ಟಿಗೇನಹಳ್ಳಿ ನಿವಾಸಿಯಾಗಿದ್ದು, ಹಣದ ಅವಶ್ಯಕತೆ ಇದ್ದಿದ್ದರಿಂದ ತನ್ನ ಬಳಿ ಇದ್ದ ವಸ್ತುಗಳನ್ನು ಮಾರಲು ಮುಂದಾಗಿದ್ದಾಗಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಆತನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ನಗರದಲ್ಲಿ ವಾಸವಿದ್ದ ಆಂಗ್ಲೊ-ಇಂಡಿಯನ್ ದಂಪತಿಯ ಮನೆಯಲ್ಲಿ ಆರೋಪಿಯ ಅಜ್ಜಿ ಕೆಲಸ ಮಾಡುತ್ತಿದ್ದರು. ದಂಪತಿ ನಿಧನರಾಗುವ ಮುನ್ನ ತಮ್ಮ ಬಳಿ ಇದ್ದ ಅಮೂಲ್ಯ ವಸ್ತುಗಳನ್ನು ಅಜ್ಜಿಗೆ ನೀಡಿದ್ದರು. ಅಜ್ಜಿ ಇತ್ತೀಚೆಗೆ ತೀರಿಕೊಂಡಿದ್ದರು. ಕೋವಿಡ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ಆತ ಹಣಕ್ಕಾಗಿ ಮನೆಯಲ್ಲಿದ್ದ ಪ್ರಾಚೀನ ವಸ್ತುಗಳನ್ನು ಮಾರಲು ತೀರ್ಮಾನಿಸಿದ್ದ. ಈ ವಿಷಯವನ್ನು ವಿಚಾರಣೆ ವೇಳೆ ಬಹಿರಂಗಪಡಿಸಿದ್ದಾನೆ. ಠಾಣೆ ವ್ಯಾಪ್ತಿಯ ಎಚ್‌ಬಿಆರ್ ಲೇಔಟ್ ಬಳಿ ವ್ಯಕ್ತಿಯೊಬ್ಬ ಪ್ರಾಚೀನ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ಸ್ಥಳಕ್ಕೆ ತೆರಳಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ವಿವರಿಸಿದರು.

ಕಾಮೆಡ್ -ಕೆ: ಆರಂಭದಲ್ಲೇ ಪೂರ್ಣ ಶುಲ್ಕ

ಒಂದನೇ ಪುಟದಿಂದ

'ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕೌನ್ಸೆಲಿಂಗ್ ಸಮಯದಲ್ಲಿ ಪ್ರವೇಶ ಪಡೆಯ ಬಯಸುವ ವಿದ್ಯಾರ್ಥಿಗಳು ಬೋಧನಾ ಶುಲ್ಕವೂ ಸೇರಿದಂತೆ ₹ 2.20 ಲಕ್ಷ ಮೊತ್ತದ ಸಂಪೂರ್ಣ ಶುಲ್ಕವನ್ನು ಆರಂಭದಲ್ಲೇ ಪಾವತಿಸಬೇಕಿದೆ. ಅಂತೆಯೇ, ವಿದ್ಯಾರ್ಥಿಗಳು ಪ್ರವೇಶ ಪಡೆದ ಬಗ್ಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಜೊತೆ ಕಾಮೆಡ್-ಕೆ ಅಧಿಕಾರಿಗಳು ಪರಿಶೀಲನೆ ನಡೆಸಿ ಮನದಟ್ಟು ಮಾಡಿಕೊಳ್ಳುತ್ತಾರೆ' ಎಂದು ಅಧಿಕಾರಿಗಳು ವಿವರಿಸಿದ್ದಾರೆ.

'ಈಗಿರುವ ಪದ್ಧತಿಯ ಅನುಸಾರ ವಿದ್ಯಾರ್ಥಿಗಳು ತಮಗೆ ಸೀಟು ದೊರೆತಾಗ ಬೋಧನಾ ಶುಲ್ಕದಲ್ಲಿ ಭಾಗಶಃ ಅಂದರೆ, ₹ 55 ಸಾವಿರವನ್ನು ಮಾತ್ರವೇ ಪಾವತಿಸುತ್ತಿದ್ದರು. ನಂತರ ಕೌನ್ಸೆಲಿಂಗ್‌ನ ಎಲ್ಲ ಸುತ್ತುಗಳು ಮುಗಿದ ಮೇಲೆ ಸೀಟುಗಳನ್ನು ಬಿಟ್ಟುಕೊಡುತ್ತಿದ್ದರು. ಇವು ಸ್ವಾಭಾವಿಕವಾಗಿಯೇ ಆಡಳಿತ ಮಂಡಳಿಯ ಪಾಲಾಗುತ್ತಿದ್ದವು. ಇಂತಹ ಸೀಟುಗಳನ್ನು ಆಡಳಿತ ಮಂಡಳಿ ಹೆಚ್ಚಿನ ಮೊತ್ತಕ್ಕೆ ನೀಡಿ ಹಣ ಗಳಿಸುತ್ತಿದ್ದವು. ಪ್ರತಿ ವರ್ಷ ಏನಿಲ್ಲವೆಂದರೂ ಶೇ 15 ರಿಂದ 25ರಷ್ಟು ಸೀಟುಗಳನ್ನು ಈ ರೀತಿ ಬ್ಲಾಕ್ ಮಾಡಲಾಗುತ್ತಿತ್ತು' ಎಂಬ ಆರೋಪ ಇದೆ.

'ನಾಡಗೀತೆ: ಸಿ.ಅಶ್ವತ್ಥ್ ಧಾಟಿ ಸರಳ'

ಬೆಂಗಳೂರು: 'ನಾಡಗೀತೆಯ ಧಾಟಿ ನಿಗದಿಗೆ ಸಂಬಂಧಿಸಿದಂತೆ ಸರ್ಕಾರವು ಆತುರದಲ್ಲಿ ನಿರ್ಧಾರ ಕೈಗೊಳ್ಳಬಾರದು. ಪೂರ್ಣ ನಾಡಗೀತೆ ಹಾಡುವುದಾದರೆ ಸಿ.ಅಶ್ವತ್ಥ್ ಅವರ ಸಂಯೋಜನೆಯನ್ನೇ ಅಂತಿಮಗೊಳಿಸಬೇಕು' ಎಂದು ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್‌ನ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ಆಗ್ರಹಿಸಿದರು.



ಕಿಕ್ಕೇರಿ ಕೃಷ್ಣಮೂರ್ತಿ

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಧಾಟಿಯ ವಿಚಾರವಾಗಿ ರಾಜ್ಯದ ಕವಿಗಳು, ಸಂಗೀತಗಾರರ ಸಲಹೆಗಳನ್ನು ಕ್ರೋಡೀಕರಿಸಿ ನಿರ್ಣಯ ಕೈಗೊಳ್ಳಬೇಕು. ಎಚ್‌.ಆರ್. ಲೀಲಾವತಿ ನೇತೃತ್ವದ ಸಮಿತಿಯು ತರಾತುರಿಯಲ್ಲಿ ಧಾಟಿಯನ್ನು ಶಿಫಾರಸು ಮಾಡಿದ್ದು, ಮೈಸೂರು ಅನಂತಸ್ವಾಮಿ ಸಂಯೋಜನೆಯ ನಾಡಗೀತೆ ಅಂತಿಮಗೊಳಿಸಲು ತಿಳಿಸಲಾಗಿದೆ. ಆದರೆ, ಮೈಸೂರು ಅನಂತಸ್ವಾಮಿ ಅವರು ಸಂಪೂರ್ಣ ನಾಡಗೀತೆಗೆ ಸ್ವರ ಸಂಯೋಜಿಸಿಲ್ಲ' ಎಂದು ತಿಳಿಸಿದರು.

'ಪೂರ್ಣ ನಾಡಗೀತೆ ಹಾಡಬೇಕೆಂದು ಸರ್ಕಾರವು ಆದೇಶ ಹೊರಡಿಸಿದಲ್ಲಿ ಅನಂತಸ್ವಾಮಿ ಅವರ ಧಾಟಿಯನ್ನು ಪರಿಗಣಿಸಲು ಬರುವುದಿಲ್ಲ. ಸಿ.ಅಶ್ವತ್ಥ್ ಅವರು ಸಂಪೂರ್ಣ ನಾಡಗೀತೆಗೆ ಸ್ವರ ಸಂಯೋಜನೆ ಮಾಡಿದ್ದು, ಸರಳವಾಗಿದೆ. ಆದ್ದರಿಂದ ಅಶ್ವತ್ಥ್ ಅವರ ಸಂಯೋಜನೆಯನ್ನೇ ಅಂತಿಮಗೊಳಿಸಬೇಕು. ಒಂದು ವೇಳೆ ಸಮಿತಿಯ ಶಿಫಾರಸಿನ ಅನುಗುಣವಾಗಿ ಸರ್ಕಾರ ಆದೇಶಿಸಿದರೆ, ರಾಜ್ಯದಾದ್ಯಂತ ಪ್ರತಿಭಟನೆ ಹಾಗೂ ಕಾನೂನಾತ್ಮಕ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದರು.

ಆಟೊ ಚಾಲಕನ ಮೇಲೆ ಹಲ್ಲೆ: ವೈದ್ಯನ ಬಂಧನ

ಬೆಂಗಳೂರು: ಆಟೊ ಚಾಲಕ ಮುರಳೀಧರ ಮೇಲೆ ಹಲ್ಲೆ ನಡೆಸಿದ್ದ ಖಾಸಗಿ ಆಸ್ಪತ್ರೆಯ ವೈದ್ಯ ರಾಕೇಶ್ ಶೆಟ್ಟಿ ಹಾಗೂ ಭರತ್ ಎಂಬುವರನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎಸ್.ಹೊಸಹಳ್ಳಿ ಗ್ರಾಮದ ಮುರಳಿ, ಆರೋಪಿ ರಾಕೇಶ್‌ಗೆ ಪರಿಚಯಸ್ಥರಾಗಿದ್ದರು. ದೀಪಾವಳಿ ಹಬ್ಬದ ದಿನದಂದು ಆರೋಪಿಯ ಆಹ್ವಾನದಂತೆ ಆತನೊಂದಿಗೆ ಊಟ ತೆಗೆದುಕೊಂಡು ಕಂಟ್ರಿ ಕ್ಲಬ್‌ಗೆ ಹೋಗಿದ್ದರು. ಅಲ್ಲಿ ಎಲ್ಲರೂ ಪಾರ್ಟಿ ಮಾಡಿದ್ದರು. ಅತಿಯಾಗಿ ಮದ್ಯ ಸೇವಿಸಿದ್ದ ಮುರಳಿ, ಆರೋಪಿ ಜೊತೆ ಜಗಳ ಮಾಡಿದ್ದರು. ಹೀಗಾಗಿ ಅವರನ್ನು ವಾಹನದಲ್ಲಿ ತಂದು ಆಸ್ಪತ್ರೆ ಬಳಿ ಬಿಡಲಾಗಿತ್ತು. ಆಸ್ಪತ್ರೆಯಲ್ಲಿದ್ದ ಶುಶ್ರೂಷಕಿಯರ ಜೊತೆ ಅಸಭ್ಯವಾಗಿ ವರ್ತಿಸಿದ ಬಗ್ಗೆ ದೂರು ಬಂದಿದ್ದರಿಂದ ಮುರಳಿಯನ್ನು ಕರೆದುಕೊಂಡು ಬರುವಂತೆ ಆರೋಪಿಯು ನಾಲ್ವರನ್ನು ಆಸ್ಪತ್ರೆಗೆ ಕಳುಹಿಸಿದ್ದ. ಈ ವೇಳೆ ಜಗಳ ನಡೆದಿತ್ತು. ಮುರಳಿ ಮೇಲೆ ನಾಲ್ವರು ಹಲ್ಲೆ ನಡೆಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಕಂಟ್ರಿ ಕ್ಲಬ್‌ಗೆ ಹೋದ ಬಳಿಕ ಮುರಳಿ, ಆರೋಪಿ ವೈದ್ಯನನ್ನು ನಿಂದಿಸಿದ್ದ. ಹೀಗಾಗಿ ಎಲ್ಲರೂ ಸೇರಿ ಮತ್ತೊಮ್ಮೆ ಹಲ್ಲೆ ನಡೆಸಿದ್ದರು. ಘಟನೆ ಸಂಬಂಧ ಮುರಳಿ ಠಾಣೆಗೆ ಬಂದು ದೂರು ನೀಡಿದ್ದರು. ಅದರ ಆಧಾರದಲ್ಲಿ ಇಬ್ಬರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಮತ್ತಿಬ್ಬರು ತಲೆ ಮರೆಸಿಕೊಂಡಿದ್ದಾರೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಭಾಸ್ಕರ್‌ರಾವ್ ಸ್ವಯಂ ನಿವೃತ್ತಿಗೆ ತಡೆ

ಬೆಂಗಳೂರು: ರೈಲ್ವೆ ಎಡಿಜಿಪಿಯಾಗಿರುವ ಭಾಸ್ಕರರಾವ್ ಅವರು ಸ್ವಯಂ ನಿವೃತ್ತಿಗಾಗಿ ಸಲ್ಲಿಸಿರುವ ಅರ್ಜಿಯನ್ನು ರಾಜ್ಯ ಸರ್ಕಾರ ತಡೆ ಹಿಡಿದಿದೆ ಎಂದು ಮೂಲಗಳು ತಿಳಿಸಿವೆ.

ಸೇವೆಯಿಂದ ನಿವೃತ್ತಿ ಪಡೆದು 2023 ರ ವಿಧಾನಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷವೊಂದರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವರು ಬಯಸಿದ್ದರು. ಆದರೆ, ಸರ್ಕಾರದ ನಿರ್ಧಾರದಿಂದ ಅವರಿಗೆ ಹಿನ್ನಡೆಯಾಗಿದೆ. ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಅದಕ್ಕೆ ಸಂಬಂಧಿಸಿದ ಕಡತ ಮುಖ್ಯಮಂತ್ರಿ ಅವರ ಬಳಿ ಇದ್ದು, ಅವರೇ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದರು.

15ರಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ನಗರದ ವಿವಿಧೆಡೆ ನ.15ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಉತ್ತರಹಳ್ಳಿ ರಸ್ತೆ, ದೊಡ್ಡಬಸ್ತಿ, ಭವಾನಿ ನಗರ, ದುಬಾಸಿಪಾಳ್ಯ, ವಿಜಯನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ವಿಜಯ ನಗರ, ಚಂದ್ರಾ ಬಡಾವಣೆ, ಕಾಮಾಕ್ಷಿ ಪಾಳ್ಯ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಮೂಡಲಪಾಳ್ಯ, ಅನ್ನಪೂರ್ಣೇಶ್ವರಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಎಎಪಿಗೆ ವಿ.ವೆಂಕಟೇಶ್ ಸೇರ್ಪಡೆ

ಬೆಂಗಳೂರು: ಕೋಲಾರ ಕ್ಷೇತ್ರದ ಮಾಜಿ ಸಂಸದ ವಿ.ವೆಂಕಟೇಶ್ ಅವರು ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಶುಕ್ರವಾರ ಸೇರ್ಪಡೆಯಾದರು.

ಪಕ್ಷ ಸೇರ್ಪಡೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿ.ವೆಂಕಟೇಶ್, 'ಈಗ ಬಹುತೇಕ ಪಕ್ಷಗಳು ಕುಟುಂಬಗಳ ಸ್ವತ್ತಾಗಿವೆ. ಸಂವಿಧಾನ, ಮನುಷ್ಯತ್ವದ ವಿರೋಧಿಯಾಗಿರುವ ರಾಜಕೀಯ ಪಕ್ಷಗಳನ್ನು ಗಮನಿಸಿ ರಾಜಕೀಯದಿಂದ ದೂರ ಉಳಿದಿದ್ದೆ. ಎಲ್ಲರನ್ನೂ ಒಗ್ಗೂಡಿಸುವ ನಾಯಕತ್ವ ಎಎಪಿಯಲ್ಲಿದೆ. ಬೇರೆ ಪಕ್ಷಗಳು ಘೋಷಣೆಗಳ ಮೂಲಕ ಜನರನ್ನು ವಂಚಿಸುತ್ತಿವೆ. ಎಎಪಿ ಘೋಷಣೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ' ಎಂದರು.

ನ.21ರಂದು ಮತದಾನ • ಕೇಂದ್ರ ಚುನಾವಣೆ ಕಚೇರಿಯಿಂದ ಜಿಲ್ಲೆಗಳಿಗೆ ಮತಪತ್ರ ರವಾನೆ • 420 ಮತಗಟ್ಟೆಗಳು

ಕಸಾಪ ಚುನಾವಣೆ: ಸಕಲ ಸಿದ್ಧತೆ ಪೂರ್ಣ

• ವರುಣ ಹೆಗಡೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಅಧಿಕಾರಾವಧಿ 5 ವರ್ಷಗಳಿಗೆ ವಿಸ್ತರಿಸಲ್ಪಟ್ಟ ಬಳಿಕ ನಡೆಯುತ್ತಿರುವ ಪ್ರಥಮ ಚುನಾವಣೆಗೆ ಈಗಾಗಲೇ ಸಕಲ ಸಿದ್ಧತೆಗಳೂ ನಡೆದಿದ್ದು, 420 ಮತಗಟ್ಟೆಗಳನ್ನು ಗುರುತಿಸಲಾಗಿದೆ.

ಹಿಂದಿನ ಕಾರ್ಯಕಾರಿ ಸಮಿತಿಯು ಬೈಲಾಕ್ಕೆ ತಿದ್ದುಪಡಿ ತರುವ ಮೂಲಕ 3 ವರ್ಷಗಳಿದ್ದ ಅಧಿಕಾರಾವಧಿಯನ್ನು 5 ವರ್ಷಗಳಿಗೆ ವಿಸ್ತರಿಸಿತ್ತು. ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ 21 ಅಭ್ಯರ್ಥಿಗಳು ಸ್ಪರ್ಧಿಸಿದ್ದು, 3,10,109 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಕಳೆದ ಬಾರಿ 1,89,355 ಮಂದಿ ಮತ ಚಲಾಯಿಸಿದ್ದರು.

ಈಗಾಗಲೇ ಗಡಿನಾಡು ಹೊರನಾಡ ಮತದಾರರಿಗೆ ಕೇಂದ್ರ ಚುನಾವಣೆ ಕಚೇರಿಯಿಂದ ಅಂಚೆಯ ಮೂಲಕ ಮತಪತ್ರಗಳನ್ನು ಕಳುಹಿಸಲಾಗಿದ್ದು, ಕೆಲ ಮತಗಳು ಕೇಂದ್ರ ಕಚೇರಿಗೆ ಬರಲಾರಂಭಿಸಿವೆ. ಅದೇ ರೀತಿ, ಎಲ್ಲ ಜಿಲ್ಲೆಗಳಿಗೆ ಮತಪತ್ರಗಳನ್ನು ಕಳುಹಿಸಲಾಗಿದೆ.

ನ.21ರಂದು ಬೆಳಿಗ್ಗೆ 8ರಿಂದ ಸಂಜೆ 4 ಗಂಟೆಯವರೆಗೆ ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳು ಹಾಗೂ ಬೆಂಗಳೂರು ನಗರ ಜಿಲ್ಲೆಯ 28 ವಿಧಾನಸಭೆ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ನ.24 ರಂದು ಪರಿಷತ್ತಿನ ಚುನಾವಣಾಧಿಕಾರಿಯ ಕೇಂದ್ರ ಕಚೇರಿಯಲ್ಲಿ ಗಡಿನಾಡ ಘಟಕಗಳ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಅಂಚೆ ಮತಪತ್ರಗಳನ್ನು ಎಣಿಕೆ ಮಾಡಿ, ಫಲಿತಾಂಶ ಘೋಷಿಸಲಾಗುತ್ತದೆ. ರಾಜ್ಯಾಧ್ಯಕ್ಷರ ಆಯ್ಕೆಗೆ ಎಲ್ಲ ಜಿಲ್ಲೆಗಳಿಂದ ಬಂದ ಮತಗಳು ಹಾಗೂ ಅಂಚೆ ಮತಗಳನ್ನು ಕ್ರೋಢೀಕರಿಸಿ, ಅದೇ ದಿನ ಫಲಿತಾಂಶವನ್ನು ಘೋಷಿಸಲಾಗುತ್ತದೆ.

ಈ ಬಾರಿ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 28 ವಿಧಾನಸಭೆ ಕ್ಷೇತ್ರಗಳಲ್ಲಿಯೂ ಪ್ರತ್ಯೇಕವಾಗಿ ಮತದಾನ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ಹೊಸದಾಗಿ ರಚನೆಯಾದ 52 ತಾಲ್ಲೂಕುಗಳಲ್ಲಿಯೂ ಚುನಾವಣೆ ಪ್ರಕ್ರಿಯೆ ನಡೆಸಲಾಗುತ್ತದೆ. ಮತದಾರರ ವಿಳಾಸ ಮತ್ತು ವಿವರಗಳನ್ನು ಸುಲಭವಾಗಿ ಪಡೆದುಕೊಳ್ಳಲು Election kasapa ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.

'ಚುನಾವಣೆಗೆ ಸಂಬಂಧಿಸಿದಂತೆ ಎಲ್ಲ ಸಿದ್ಧತೆಗಳೂ ನಡೆದಿವೆ. ಮತಗಟ್ಟೆಗಳ ನಿರ್ವಹಣೆ ಸೇರಿದಂತೆ ಚುನಾವಣೆಗೆ ಸಂಬಂಧಿಸಿದ ವಿವಿಧ ಕಾರ್ಯಗಳಿಗೆ ತರಬೇತಿ ನೀಡಲಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು, ವಿಳಾಸ ಪರಿಶೀಲನೆಗೆ ಸಂಬಂಧಿಸಿದಂತೆ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿರುವುದರಿಂದ ಈ ಬಾರಿ ಗೊಂದಲಕ್ಕೆ ಅವಕಾಶ ಇರಲಿಲ್ಲ' ಎಂದು ಕೇಂದ್ರ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.

ಚುನಾವಣೆ ಕಣದಲ್ಲಿ ಇರುವವರು

21 ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರು

223 ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರು

16 ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರು

'ಅನ್ನದ ಭಾಷೆಯಾಗಿ ಕನ್ನಡ'



ಕನ್ನಡ ಮತ್ತು ಕನ್ನಡಿಗರ ಎಲ್ಲ ಸಮಸ್ಯೆಗಳಿಗೆ ಆದ್ಯತೆ ನೀಡಲಾಗುವುದು. ಕನ್ನಡವನ್ನು ಅನ್ನದ ಭಾಷೆಯನ್ನಾಗಿ ರೂಪಿಸುವ ನಿಟ್ಟಿನಲ್ಲಿ ಶ್ರಮಿಸುತ್ತೇನೆ. ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳು ಕನ್ನಡವನ್ನು ಪ್ರಥಮ ಭಾಷೆಯಾಗಿ ಅಭ್ಯಸಿಸುವಂತಾಗಬೇಕು. ಆ ನಿಟ್ಟಿನಲ್ಲಿ ಕ್ರಮವಹಿಸುತ್ತೇನೆ. ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಗೌರವ ಕಾರ್ಯದರ್ಶಿ ಎರಡು ಹುದ್ದೆಯ ಎರಡು ಸ್ಥಾನದಲ್ಲಿ ಒಂದನ್ನು ಮಹಿಳೆಗೆ ಮೀಸಲಿಡಲು ಬೈ-ಲಾದಲ್ಲಿ ಬದಲಾವಣೆ ತರಲಾಗುವುದು. ಐದು ವರ್ಷದಲ್ಲಿ ಎರಡು ಸಾಮಾನ್ಯ, ಎರಡು ಮಹಿಳಾ ಸಮ್ಮೇಳನ ಹಾಗೂ ಒಂದು ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲಾಗುವುದು.

ಸರಸ್ವತಿ ಚಿಮ್ಮಲಗಿ, ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ

'ಪರಿಷತ್ತಿಗೆ ಕಾಯಕಲ್ಪ'



ಪರಿಷತ್ತಿಗೆ ಕಾಯಕಲ್ಪ ನೀಡುವ ಕನಸು ಹೊಂದಿರುವೆ. ನಾಡಿನ ಚಿಂತಕರು ಮತ್ತು ತಜ್ಞರೊಂದಿಗೆ ಸಮಾಲೋಚಿಸಿ, ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡಿದ್ದೇನೆ. ಸಮ್ಮೇಳನಗಳಿಗೆ ಹೆಚ್ಚಿನ ಅನುದಾನ ಒದಗಿಸಲಾಗುವುದು. ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಹೊಸ ಮುದ್ರಣಾಲಯ ಸ್ಥಾಪಿಸಲಾಗುವುದು. 'ಕನ್ನಡ ನುಡಿ' ಮಾಸ ಪತ್ರಿಕೆಯನ್ನು ಎಲ್ಲ ಸದಸ್ಯರಿಗೂ ರವಾನಿಸಲಾಗುವುದು. ರಾಜ್ಯದ ಎಲ್ಲೆಡೆ ಸುಸಜ್ಜಿತ ಪುಸ್ತಕ ಮಳಿಗೆಗಳನ್ನು ಸ್ಥಾಪಿಸಲಾಗುವುದು. 'ರಾಷ್ಟ್ರೀಯ ಕನ್ನಡ ಪೀಠ ಪ್ರಶಸ್ತಿ' ಸ್ಥಾಪಿಸಿ, ಐಟಿ ಕಂಪನಿಗಳಿಂದ ₹ 3 ಕೋಟಿ ದತ್ತಿ ಇರಿಸಲಾಗುವುದು. ಸ್ಮಾರ್ಟ್ ಕಾರ್ಡ್ ವಿತರಣೆ, ಸಾಹಿತ್ಯ ಭವನ ನಿರ್ಮಾಣ ಸೇರಿದಂತೆ ವಿವಿಧ ಯೋಜನೆ ಹಮ್ಮಿಕೊಳ್ಳಲಾಗಿದೆ.

ಮಾಯಣ್ಣ, ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ


'ಮೂಲಭೂತ ಸಮಸ್ಯೆಗೆ ಪರಿಹಾರ'



ರಾಜ್ಯಾಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಬದಲು ಕನ್ನಡಿಗರ ಸೇವಕನಾಗಿ ಕಾರ್ಯನಿರ್ವಹಿಸುತ್ತೇನೆ. ಎರಡು ಅವಧಿಗೆ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದೇನೆ. 18 ಪುಸ್ತಕಗಳನ್ನು ಬರೆದಿದ್ದೇನೆ. ಸಾಹಿತಿಗಳು, ಚಿಂತಕರು, ಹೋರಾಟಗಾರರ ಸಲಹೆಯಂತೆ ಕಾರ್ಯಕ್ರಮಗಳನ್ನು ರೂಪಿಸಿದ್ದೇನೆ. ಕನ್ನಡ ಭಾಷೆಗೆ ಪೂರಕವಾಗಿ ಹೊಸ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುವುದು. ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವೆ. ಚುನಾವಣೆ ವ್ಯವಸ್ಥೆಯಲ್ಲಿಯೂ ಬದಲಾವಣೆ ತರುತ್ತೇನೆ. ಜಿಲ್ಲೆ, ತಾಲ್ಲೂಕು ಕೇಂದ್ರಗಳಲ್ಲಿ ಕನ್ನಡ ಭವನ ನಿರ್ಮಾಣ ಮಾಡಲಾಗುವುದು. ಮಾದರಿ ಕನ್ನಡ ಶಾಲೆಗಳನ್ನು ಪ್ರಾರಂಭಿಸುತ್ತೇನೆ. ನಾಡು–ನುಡಿಗೆ ಸಂಬಂಧಿಸಿದ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಶ್ರಮಿಸುತ್ತೇನೆ.

ಸಂಗಮೇಶ ಬಾದವಾಡಗಿ, ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ

'ವೇತನ ಪಡೆಯಲ್ಲ, ವಾಹನ ಬಳಸಲ್ಲ'



ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಈವರೆಗೂ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕಕ್ಕೆ ಆದ್ಯತೆ ಸಿಕ್ಕಿಲ್ಲ. ಮಹಿಳಾ ಘಟಕವೂ ಇಲ್ಲ. ಹಾಗಾಗಿ, ಮಹಿಳಾ ಬರಹಗಾರರಿಗೆ ಹಾಗೂ ಯುವ ಬರಹಗಾರರಿಗೆ ಅವಕಾಶ ನೀಡಿ, ಪ್ರೋತ್ಸಾಹಿಸಲಾಗುವುದು. ಅಧ್ಯಕ್ಷನಾಗಿ ಆಯ್ಕೆಯಾದಲ್ಲಿ ಯಾವುದೇ ವೇತನವನ್ನು ಪಡೆಯುವುದಿಲ್ಲ. ಪರಿಷತ್ತಿನ ವಾಹನವನ್ನೂ ಬಳಸಲ್ಲ. ಸದಸ್ಯತ್ವಕ್ಕೆ ಮಿಸ್ಡ್ ಕಾಲ್ ನೀಡುವ ವ್ಯವಸ್ಥೆ ರೂಪಿಸಲಾಗುವುದು. ಪರಿಷತ್ತಿಗೆ ಡಿಜಿಟಲ್ ಸ್ಪರ್ಶ ನೀಡಿ, ಸರ್ವ ಸದಸ್ಯರಿಗೆ ಸ್ಮಾರ್ಟ್ ಕಾರ್ಡ್ ಗುರುತಿನ ಚೀಟಿಯನ್ನು ನೀಡಲಾಗುವುದು. ಭ್ರಷ್ಟಾಚಾರ ಮುಕ್ತ ಹಾಗೂ ಪಾರದರ್ಶಕ ಕನ್ನಡ ಸಾಹಿತ್ಯ ಪರಿಷತ್ತು ನಿರ್ಮಿಸುವ ಗುರಿಯನ್ನು ಹೊಂದಿದ್ದೇನೆ.

ರಾಜಶೇಖರ ಮುಲಾಲಿ, ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ

ಪಿತೂರಿಗಳನ್ನು ಹಿಮ್ಮೆಟ್ಟಿಸಿ: ಎಚ್‌.ಡಿ. ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ನಮ್ಮ ಪಕ್ಷದ ವಿರುದ್ಧ ನಡೆಯುತ್ತಿರುವ ಪಿತೂರಿಗಳನ್ನು ಸಮರ್ಥವಾಗಿ ಎದುರಿಸಿ ಹಿಮ್ಮೆಟ್ಟಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಜನತಾಪರ್ವ 1.0 ಎರಡನೇ ಹಂತದ ಜನತಾಸಂಗಮದ ಐದನೇ ದಿನವಾದ ಶುಕ್ರವಾರ ಈ ಜಿಲ್ಲೆಗಳ ಪದಾಧಿಕಾರಿಗಳು, ಜನಪ್ರತಿನಿಧಿಗಳು, ವಿಧಾನಸಭಾ ಚುನಾವಣೆಯ ಸಂಭಾವ್ಯ ಅಭ್ಯರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.



ಎಚ್‌.ಡಿ. ಕುಮಾರಸ್ವಾಮಿ

'ಮಂಡ್ಯ ಜಿಲ್ಲೆ ಜೆಡಿಎಸ್ ಭದ್ರಕೋಟೆ. ಯಾವುದೇ ಕಾರಣಕ್ಕೂ ನಮ್ಮ ನೆಲೆ ಕಳೆದುಕೊಳ್ಳಬಾರದು. ಅದಕ್ಕೆ ಅಗತ್ಯವಾದ ರೀತಿಯಲ್ಲಿ ಸಂಘಟನೆಯನ್ನು ಗಟ್ಟಿ ಮಾಡಬೇಕು. ನಾನು ನಿರಂತರವಾಗಿ ಪ್ರವಾಸ ಮಾಡಿ, ಹಳ್ಳಿಗಳಿಗೂ ಭೇಟಿ ನೀಡುತ್ತೇನೆ. ಜನರ ಸಮಸ್ಯೆಗಳಿಗೆ ಎಲ್ಲರೂ ಸ್ಪಂದಿಸಿ ಬಗೆಹರಿಸುವ ಯತ್ನ ಮಾಡಬೇಕು' ಎಂದು ಅವರು ಸಲಹೆ ನೀಡಿದರು.

'ಮುಂಬರುವ ಸ್ಥಳೀಯ ಸಂಸ್ಥೆ ಹಾಗೂ 2023ರ ವಿಧಾನಸಭೆ ಚುನಾವಣೆ ಗುರಿ ಇಟ್ಟುಕೊಂಡು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪಕ್ಷ ಸಂಘಟನೆ ಬಗ್ಗೆ ರಾಜಿ ಇಲ್ಲ. ಎಲ್ಲರೂ ಒಟ್ಟಾಗಿ ಪಕ್ಷ ಕಟ್ಟಲು ಶ್ರಮಿಸಬೇಕು. ಪಕ್ಷದ ಸಂಘಟನೆ ಬಗ್ಗೆ ಯಾರೂ ಮೈಮರೆಯಬಾರದು. ಉಪೇಕ್ಷೆ ಮಾಡಿದರೆ ಸಹಿಸುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

ಕಾರ್ಯಾಗಾರದಲ್ಲಿ ಶಾಸಕರಾದ ಸಿ.ಎಸ್. ಪುಟ್ಟರಾಜು, ಸುರೇಶ್ ಗೌಡ, ಕೆ. ಅನ್ನದಾನಿ, ಅಪ್ಪಾಜಿ ಗೌಡ, ಅಶ್ವಿನ್‌ಕುಮಾರ್, ಮಹಾದೇವ್, ತಿಪ್ಪೇಸ್ವಾಮಿ, ಮಂಜುನಾಥ್, ಪಕ್ಷದ ಮುಖಂಡ ಎಲ್‌.ಆರ್. ಶಿವರಾಮೇಗೌಡ, ಮಂಡ್ಯ ಜಿಲ್ಲಾಧ್ಯಕ್ಷ ರಮೇಶ್, ಮೈಸೂರು ಜಿಲ್ಲಾಧ್ಯಕ್ಷ ನರಸಿಂಹ ಸ್ವಾಮಿ, ಚಾಮರಾಜನಗರ ಜಿಲ್ಲಾಧ್ಯಕ್ಷ ಹಾಗೂ ಮೈಸೂರು ನಗರ ಅಧ್ಯಕ್ಷೆ ಪ್ರೇಮಾ ಭಾಗವಹಿಸಿದ್ದರು.

ನಗರದಲ್ಲಿ ಜಿಟಿ ಜಿಟಿ ಮಳೆ; ಮೈನಡುಗಿಸಿದ ಚಳಿ

ಬೆಂಗಳೂರು: ನಗರದಲ್ಲಿ ಶುಕ್ರವಾರವೂ ಜಿಟಿ ಜಿಟಿ ಮಳೆ ಸುರಿಯಿತು. ಹೀಗಾಗಿ ದಿನವಿಡೀ ಚಳಿಯ ವಾತಾವರಣ ನಿರ್ಮಾಣವಾಗಿತ್ತು.

ಮುಂಜಾವಿನಿಂದಲೇ ಮುಗಿಲಲ್ಲಿ ಕಾರ್ಮೋಡ ದಟ್ಟೈಸಿತ್ತು. ಆಗಾಗ ತುಂತುರು ಮಳೆಯ ಸಿಂಚನವಾಗುತ್ತಿತ್ತು. ಹೀಗಾಗಿ ಶಾಲಾ, ಕಾಲೇಜು ಹಾಗೂ ಕಚೇರಿಗೆ ತೆರಳುವವರು ಬೆಚ್ಚನೆಯ ಉಡುಪು ಧರಿಸಿ ರಸ್ತೆಗಿಳಿದಿದ್ದ ದೃಶ್ಯ ಕಂಡುಬಂತು. ಕೆಲವರು ಮಳೆಯಿಂದ ರಕ್ಷಣೆ ಪಡೆಯಲು ಕೊಡೆಗಳ ಮೊರೆ ಹೋಗಿದ್ದರು. ಮೈ ನಡುಗಿಸುತ್ತಿದ್ದ ಚಳಿಯಿಂದ ತಪ್ಪಿಸಿಕೊಳ್ಳಲು ಕಿವಿಗೆ ಹತ್ತಿ ಹಾಗೂ ಕಿವಿ ಮುಚ್ಚುವ ಟೋಪಿಗಳನ್ನು ಧರಿಸಿ ಓಡಾಡುತ್ತಿದ್ದರು.

ನಿರಂತರ ಮಳೆಯಿಂದಾಗಿ ಕೆಲವೆಡೆ ರಸ್ತೆಯಲ್ಲಿ ಮಳೆ ನೀರು ಹರಿಯಿತು.

ಶಿವಾನಂದ ವೃತ್ತ, ಗೂಡ್‌ಶೆಡ್ ರಸ್ತೆ ಸೇರಿದಂತೆ ನಗರದ ಹಲವು ಭಾಗಗಳಲ್ಲಿ ಭೂಗತ ಕೇಬಲ್ ಅಳವಡಿಕೆ ಕಾರ್ಯ ಹಾಗೂ ರಸ್ತೆ ಕಾಮಗಾರಿಗಳು ನಡೆಯುತ್ತಿದ್ದು ಅಲ್ಲಲ್ಲಿ ತೋಡಿದ್ದ ಗುಂಡಿಗಳಲ್ಲಿ ನೀರು ಸಂಗ್ರಹವಾಗಿತ್ತು. ರಸ್ತೆಗಳೂ ಕೆಸರುಮಯವಾಗಿದ್ದವು. ಹೀಗಾಗಿ ಪಾದಚಾರಿಗಳು ಪರದಾಡಬೇಕಾದ ಪರಿಸ್ಥಿತಿಯೂ ನಿರ್ಮಾಣವಾಗಿತ್ತು.

ಕಸಾಪ ನಗರ ಜಿಲ್ಲೆ: ಅಧ್ಯಕ್ಷಗಾದಿಗೆ ಬಿರುಸಿನ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲೆ ಘಟಕವು ರಾಜ್ಯದಲ್ಲಿಯೇ ಅತಿ ಹೆಚ್ಚು ಮತದಾರರನ್ನು ಹೊಂದಿರುವ ಜಿಲ್ಲೆ. ಅಧ್ಯಕ್ಷ ಸ್ಥಾನದ ಅಭ್ಯರ್ಥಿಗಳು ಬಿರುಸಿನಿಂದ ಪ್ರಚಾರ ಮಾಡುತ್ತಿದ್ದಾರೆ.

ಇಲ್ಲಿ 36,491 ಮಂದಿ ಮತದಾನಕ್ಕೆ ಅರ್ಹರಾಗಿದ್ದಾರೆ. ಹೀಗಾಗಿ, ನಗರ ಜಿಲ್ಲೆ ಘಟಕದ ಅಧ್ಯಕ್ಷ ಗಾದಿಗೆ ಏರಲು ಪ್ರಬಲ ಸ್ಪರ್ಧೆ ಏರ್ಪಟ್ಟಿದೆ. ಇದೇ 21ರಂದು ಚುನಾವಣೆ ನಡೆಯುವುದರಿಂದ ಮತದಾರರನ್ನು ಸೆಳೆಯಲು ಅಭ್ಯರ್ಥಿಗಳು ಅಂತಿಮ ಹಂತದ ಕಸರತ್ತನ್ನು ನಡೆಸಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಎಚ್‌.ಎ. ಆತ್ಮಾನಂದ, ಕಾಂತರಾಜಪುರ ಸುರೇಶ್, ಕುವೆಂಪು ಪ್ರಕಾಶ್, ಕೆ.ಎಸ್. ಕೃಷ್ಣೋಜಿರಾವ್, ಆರ್. ಜಯಕುಮಾರ ಗೌಡ, ಎಂ. ತಿಮ್ಮಯ್ಯ, ದಯಾನಂದ ತಿಪ್ಪೇರುದ್ರಪ್ಪ, ಎಂ. ಪ್ರಕಾಶಮೂರ್ತಿ, ಎಂ. ಪುಟ್ಟರಾಜು, ವೇದಮೂರ್ತಿ ಕೆ.ಸಿ. ಹಾಗೂ ಪಿ.ಸಿ. ಹೇಮಂತಕುಮಾರ್ ಸ್ಪರ್ಧಿಸಿದ್ದಾರೆ.

ಕಾಂತರಾಜಪುರ ಸುರೇಶ್, ಕುವೆಂಪು ಪ್ರಕಾಶ್, ವೇದಮೂರ್ತಿ ಅವರು ಎಂ. ತಿಮ್ಮಯ್ಯ ಅವರಿಗೆ ಬೆಂಬಲ ಘೋಷಿಸಿ, ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ.

ಇದರಿಂದಾಗಿ 9 ಅಭ್ಯರ್ಥಿಗಳ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಎಂ. ಪ್ರಕಾಶಮೂರ್ತಿ ಮತ್ತು ಎಂ. ತಿಮ್ಮಯ್ಯ ಅವರು ಈ ಹಿಂದೆ ನಗರ ಜಿಲ್ಲೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ, ಸೋತಿದ್ದರು.

ಸಾಹಿತ್ಯ ಭವನ, ಕನ್ನಡ ಕಲಿಕಾ ಕೇಂದ್ರ ನಿರ್ಮಾಣ, ಪುಸ್ತಕೋತ್ಸವ, ಸಾಂಸ್ಕೃತಿಕ ಉತ್ಸವ ಹಾಗೂ ಸಮ್ಮೇಳನಗಳ ಆಯೋಜನೆ ಅಭ್ಯರ್ಥಿಗಳ ಪ್ರಮುಖ ಭರವಸೆಗಳಾಗಿವೆ.

ಅಭ್ಯರ್ಥಿಗಳು ಮತದಾರರ ಮನೆ ಮನೆಗೆ ತೆರಳಿ, ಕರಪತ್ರ ವಿತರಣೆ ಮಾಡುತ್ತಿದ್ದು, ಸಾಮಾಜಿಕ ಜಾಲತಾಣಗಳನ್ನೂ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ. ವಾಟ್ಸ್‌ಆ್ಯಪ್‌ನ ವಿವಿಧ ಗುಂಪುಗಳಿಗೆ ಪ್ರಣಾಳಿಕೆಯ ಪ್ರತಿ ಕಳುಹಿಸಿ, ಮತ ಯಾಚಿಸುತ್ತಿದ್ದಾರೆ.

42 ಮತಗಟ್ಟೆಯಲ್ಲಿ ಮತದಾನ: ಈ ಬಾರಿ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 28 ವಿಧಾನಸಭೆ ಕ್ಷೇತ್ರಗಳಲ್ಲಿ 42 ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ.

ನ.21ರಂದು ಬೆಳಿಗ್ಗೆ 8ರಿಂದ ಸಂಜೆ 4 ಗಂಟೆಯವರೆಗೆ ಗುರುತಿಸಲಾದ ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ. ಅದೇ ದಿನ ಫಲಿತಾಂಶ ಘೋಷಣೆಯಾಗಲಿದೆ.

ಜಿಕೆವಿಕೆಯಲ್ಲಿ ಕೃಷಿ ಖುಷಿ



ಹೆಚ್ಚು ಸಕ್ಕರೆ ಅಂಶವುಳ್ಳ 'ಸಿಒವಿಸಿ 18061': ಕೃಷಿ ಸಂಶೋಧನಾ ಕೇಂದ್ರದಿಂದ ಅಭಿವೃದ್ಧಿ

ಬೆಲ್ಲ ತಯಾರಿಕೆಗೆ ಅತ್ಯುತ್ತಮ ಈ ತಳಿ

● ಸಚ್ಚಿದಾನಂದ ಕುರಗುಂದ

ಬೆಂಗಳೂರು: ಬೆಲ್ಲ ತಯಾರಿಕೆಗೆ ಅತ್ಯುತ್ತಮವಾಗಿರುವ ಹೊಸ ಕಬ್ಬು ತಳಿ ಕೃಷಿ ಮೇಳದಲ್ಲಿ ರೈತರ ಆಕರ್ಷಣೆಯ ಕೇಂದ್ರವಾಗಿದೆ.

ಹೊಸದಾಗಿ ಅಭಿವೃದ್ಧಿಪಡಿಸಿರುವ 'ಸಿಒವಿಸಿ 18061' ಕಬ್ಬು ತಳಿ ಈ ಬಾರಿಯ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕೃಷಿ ಮೇಳದಲ್ಲಿ ರೈತರನ್ನು ತನ್ನತ್ತ ಸೆಳೆಯುತ್ತಿದೆ. ಕೃಷಿ ವಿಶ್ವವಿದ್ಯಾಲಯದ ಮಂಡ್ಯದ ವಿ.ಸಿ. ಫಾರ್ಮ್‌ನ ವಲಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಈ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ.

ಈ ಕಬ್ಬು ತಳಿಯಿಂದ ಎಕರೆಗೆ 70ರಿಂದ 80 ಟನ್ ಇಳುವರಿ ದೊರೆಯುತ್ತದೆ. ಹೆಚ್ಚು ಸಕ್ಕರೆ ಅಂಶ ಇರುವುದರಿಂದ ಬೆಲ್ಲ ತಯಾರಿಕೆಗೆ ಹೆಚ್ಚು ಉಪಯುಕ್ತವಾಗಿದೆ. ಈ ತಳಿಯಲ್ಲಿ ನೀರಿನ ಅಂಶ ಕಡಿಮೆ ಇರುವುದರಿಂದ 'ಸುಕ್ರೋಸ್' ಹೆಚ್ಚಾಗಿದ್ದು, ಶೇಕಡ 19ರಿಂದ 20ರಷ್ಟಿದೆ.

'ಡಿಸೆಂಬರ್ ನಂತರ ಕಬ್ಬು ಬೆಳೆ ನಾಟಿ ಮಾಡುವುದು ಸಾಮಾನ್ಯ. ಆದರೆ, ಈ ತಳಿಯನ್ನು ಎಲ್ಲ ಕಾಲದಲ್ಲಿಯೂ ನಾಟಿ ಮಾಡಬಹುದಾಗಿದೆ. ಆದರೂ, ಜನವರಿ ಮತ್ತು ಫೆಬ್ರುವರಿ ಅವಧಿಯಲ್ಲಿ ನಾಟಿ ಮಾಡುವುದು ಉತ್ತಮ' ಎಂದು ಕೃಷಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಯೂಸುಫ್ ಅಬ್ಬಾಸ್ ತಿಳಿಸಿದ್ದಾರೆ.

'ಎರಡು ಅಥವಾ ಮೂರು ಬಾರಿ ಉತ್ತಮ 'ಕೂಳೆ' ಬೆಳೆ ಸಹ ತೆಗೆಯಬಹುದು. ಸೂಲಂಗಿಯು ಶೇಕಡ 10ರಿಂದ 20ರಷ್ಟು ಮಾತ್ರ ಇದೆ. ಕಬ್ಬು ಬೆಳೆಯುವಾಗ ಸಾಲುಗಳಲ್ಲಿ ಅಂತರ ಕಾಪಾಡುವುದು ಸಹ ಮುಖ್ಯ. ಈ ತಳಿಯನ್ನು ಹಾಕುವಾಗ ಸಾಲುಗಳ ನಡುವೆ 5 ಅಡಿ ಅಂತರ ಕಾಪಾಡಬೇಕು. 12ರಿಂದ 14 ತಿಂಗಳು ಅವಧಿಯಲ್ಲಿ ಇದು ಕಟಾವಿಗೆ ಬರುತ್ತದೆ' ಎಂದು ಅವರು ವಿವರಿಸಿದ್ದಾರೆ.

'2018ರಲ್ಲಿ ಕೊಯಮತ್ತೂರಿನ ಕಬ್ಬು ತಳಿ ಸಂಸ್ಥೆಯಲ್ಲಿ ಈ ತಳಿಯನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆ ಆರಂಭವಾಯಿತು. ಈ ಸಂಸ್ಥೆಯಲ್ಲಿ ಭಾರತ ಮತ್ತು ಬ್ರೆಜಿಲ್ ಸೇರಿದಂತೆ ವಿವಿಧ ದೇಶಗಳಲ್ಲಿನ ತಳಿಗಳನ್ನು ಸಂಗ್ರಹಿಸಿ ಸಂಶೋಧನೆ ಕೈಗೊಳ್ಳಲಾಗುತ್ತಿದೆ. ಸೂಲಂಗಿ ಮತ್ತು ಸಕ್ಕರೆ ಅಂಶಗಳನ್ನು ಪ್ರಮುಖವಾಗಿ ಪರಿಗಣಿಸಿ ಈ ತಳಿಯನ್ನು ಅಭಿವೃದ್ಧಿಪಡಿಸಲಾಯಿತು. ಸತತ ಮೂರು ವರ್ಷಗಳ ಕಾಲ ಸಂಶೋಧನೆ ಕೈಗೊಂಡ ಬಳಿಕ ಬಿಡುಗಡೆ ಮಾಡಲಾಗಿದೆ. ಈ ತಳಿ 12ರಿಂದ 13 ಅಡಿಯಷ್ಟು ಎತ್ತರ ಬೆಳೆಯುತ್ತದೆ' ಎಂದೂ ಹೇಳಿದ್ದಾರೆ.

ಒಂದು ಸಾವಿರ ಲೀಟರ್ ಕಬ್ಬಿನ ಹಾಲಿಗೆ ಒಂದು ಕ್ವಿಂಟಲ್ ಬೆಲ್ಲ ದೊರೆಯುತ್ತದೆ. ಅಂದರೆ ಸುಮಾರು ಶೇಕಡ 10.8ರವರೆಗೂ ಬೆಲ್ಲವೂ ಇದರಿಂದ ದೊರೆಯುತ್ತದೆ. ಈ ತಳಿಯನ್ನು ಸಕ್ಕರೆ ಕಾರ್ಖಾನೆಗಳಿಗೆ ಪೂರೈಸಲಾಗುತ್ತಿದೆ. ಕಾರ್ಖಾನೆಗಳ ಮೂಲಕ ರೈತರು ಪಡೆಯಬಹುದಾಗಿದೆ. ಬಿತ್ತನೆ ಕಬ್ಬಿಗೆ ಪ್ರತಿ ಟನ್‌ಗೆ ₹2700 ರಿಂದ ₹2900 ದರ ನಿಗದಿಪಡಿಸಲಾಗಿದೆ.



ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಶುಕ್ರವಾರ ಹೊಸ ಕಬ್ಬು ತಳಿ 'ಸಿಒವಿಸಿ 18061' ವೀಕ್ಷಿಸಿದ ವಿದ್ಯಾರ್ಥಿಗಳು
—ಪ್ರಜಾವಾಣಿ ಚಿತ್ರ: ಅನೂಪ್ ರಾಘ್.ಟಿ.

ಮೇಳದ 'ಸಲಹಾ ಸೇವಾ ಕೇಂದ್ರ'ಕ್ಕೆ ಉತ್ತಮ ಸ್ಪಂದನೆ ● ಕೃಷಿ ಸುಧಾರಣೆಗೆ ಮಾಹಿತಿ

'ಕೃಷಿ' ಸಮಸ್ಯೆ; ತಜ್ಞರ ಸಲಹೆಗೆ ರೈತ 'ಖುಷಿ'

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಮಣ್ಣಿನ ಫಲವತ್ತತೆ ಹೆಚ್ಚಿಸುವುದು ಹೇಗೆ ? ಯಾವ ಬೆಳೆ ಬೆಳೆದರೆ ಲಾಭದಾಯಕ ? ಬೆಳೆ ರೋಗ ಹಾಗೂ ಕೀಟಗಳ ನಿವಾರಣೆಗೆ ಯಾವ ಔಷಧಿ ಸಿಂಪಡಿಸಬೇಕು? ಲಾಭದಾಯಕ ಕೃಷಿಗಾಗಿ ಯಾವೆಲ್ಲ ಪದ್ಧತಿ ಅನುಸರಿಸಬೇಕು? ಸಾವಯವ ಗೊಬ್ಬರ ತಯಾರಿಕೆ ಹೇಗೆ? ಕೃಷಿ ಜೊತೆಯಲ್ಲೇ ಜೇನು ಸಾಕಿದರೆ ಹಾಗೂ ಕಿರು ಅರಣ್ಯ ಸೃಷ್ಟಿಸಿದರೆ ಲಾಭವೇ? ...

ಈ ರೀತಿಯ ನೂರಾರು ಪ್ರಶ್ನೆಗಳಿಗೆ ಕೃಷಿ ತಜ್ಞರಿಂದ ರೈತರು ಉತ್ತರ ಪಡೆಯಲು 'ಕೃಷಿ ಮೇಳ' ವೇದಿಕೆಯಾಯಿತು. ಕೃಷಿ ಸಂಬಂಧಿತ ಸಮಸ್ಯೆಗಳನ್ನು ಎದುರಿಸುತ್ತಿರುವ ರೈತರಿಗೆ ಉಚಿತವಾಗಿ ಸಲಹೆ ನೀಡಲು ಮೇಳದಲ್ಲಿ 'ಕೃಷಿ ಸಲಹಾ ಕೇಂದ್ರ' ತೆರೆಯಲಾಗಿದ್ದು, ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ಬೆಂಗಳೂರು, ಚಿಕ್ಕಬಳ್ಳಾಪುರ, ರಾಮನಗರ, ಕೋಲಾರ, ತುಮಕೂರು, ಮಂಡ್ಯ, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳ ರೈತರು ಮೇಳಕ್ಕೆ ಬರುತ್ತಿದ್ದಾರೆ. ಆ ಪೈಕಿ ಕೆಲವರು, ಕೃಷಿ ಸಲಹಾ ಕೇಂದ್ರಕ್ಕೆ ಭೇಟಿ ನೀಡಿ ಸಮಸ್ಯೆ ಹೇಳಿಕೊಳ್ಳುತ್ತಿದ್ದಾರೆ. ಅದನ್ನು ಆಲಿಸುತ್ತಿರುವ ತಜ್ಞರು, ಪರಿಹಾರದ ಸಲಹೆಯನ್ನು ಲಿಖಿತವಾಗಿ ನೀಡುತ್ತಿದ್ದಾರೆ.

'ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಕೃಷಿ ಮೇಳದ ಉದ್ದೇಶ. ಹೀಗಾಗಿಯೇ ಸಲಹಾ ಸೇವಾ ಕೇಂದ್ರ ತೆರೆಯಲಾಗಿದೆ. ಒಬ್ಬೊಬ್ಬ ರೈತರದ್ದು ಒಂದೊಂದು ಪ್ರಶ್ನೆಯಾಗಿದ್ದು, ಇಡೀ ಕೃಷಿ ಕ್ಷೇತ್ರದ ಸಮಸ್ಯೆ ಚಿತ್ರಣ ನಮಗಾಗುತ್ತಿದೆ' ಎಂದು ಕೇಂದ್ರದ ಉಸ್ತುವಾರಿ ಡಾ. ಎನ್. ನಾಗರಾಜು 'ಪ್ರಜಾವಾಣಿ'ಗೆ ತಿಳಿಸಿದರು.

'ಒಣ ಬೇಸಾಯದಲ್ಲಿ ಕೃಷಿ ಸುಧಾರಣೆಗೆ ಏನು ಮಾಡಬೇಕೆಂಬ ಗೊಂದಲ ರೈತರಲ್ಲಿದೆ. ತೋಟಗಾರಿಕೆಯಲ್ಲಿ ಪಾಲಿಹೌಸ್ ಕೃಷಿಗೆ ಬೇಡಿಕೆ ಬಂದಿದ್ದು, ಈ ಬಗ್ಗೆ ತಿಳಿದುಕೊಳ್ಳಲು ರೈತರು ಪ್ರಯತ್ನಿಸುತ್ತಿದ್ದಾರೆ. ಪರಾಗ ಸ್ಪರ್ಶದಿಂದ ಇಳುವರಿ ಹೆಚ್ಚಿಸಲು ಜೇನು ಸಾಕಾಣಿಕೆಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಈ ಬಗ್ಗೆಯೇ ಹೆಚ್ಚು ರೈತರು ಪ್ರಶ್ನೆ ಕೇಳುತ್ತಿದ್ದಾರೆ.'

'ಬೆಳೆಗಳಲ್ಲಿ ಕಾಣಿಸುತ್ತಿರುವ ರೋಗಗಳು ಹಾಗೂ ಕೀಟಗಳ ಹಾವಳಿ ಬಗ್ಗೆ ರೈತರಲ್ಲಿ ಆತಂಕ ಶುರುವಾಗಿದೆ. ಇದಕ್ಕೆ ಔಷಧೋಪಚಾರವೇನು ? ಎಂಬುದನ್ನು ವಿಚಾರಿಸುತ್ತಿದ್ದಾರೆ. ಬೆಳೆಗೆ ಸೂಕ್ತ ಮಾರುಕಟ್ಟೆಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಕೃಷಿ ಜೊತೆಯಲ್ಲೇ ಕಿರು ಅರಣ್ಯ ಬೆಳೆಸುವ ಆಲೋಚನೆ ರೈತರಲ್ಲಿದೆ. ಇದಕ್ಕೆಲ್ಲ ಮಣ್ಣಿನ ಫಲವತ್ತತೆ ಹೇಗಿರಬೇಕು ? ಮಣ್ಣಿನ ಆರೋಗ್ಯ ಕಾಯ್ದುಕೊಳ್ಳಲು ಏನು ಮಾಡಬೇಕು ? ಎಂಬ ಬಗ್ಗೆಯೂ ರೈತರು ಸಲಹೆ ಪಡೆಯುತ್ತಿದ್ದಾರೆ' ಎಂದೂ ಹೇಳಿದರು.

'ಬಿತ್ತನೆ ಬೀಜಗಳ ಆಯ್ಕೆ ಹಾಗೂ ಯಾವ ಕಾಲದಲ್ಲಿ ಯಾವ ಬೆಳೆ ಬಿತ್ತನೆ ಮಾಡಬೇಕು ಎಂಬುದನ್ನು ರೈತರು ತಿಳಿದುಕೊಳ್ಳುತ್ತಿದ್ದಾರೆ. ರೋಗ ಹಾಗೂ ಕೀಟ ಮುಕ್ತ ಬೀಜಗಳಿಗೆ ಬೇಡಿಕೆ ಇರಿಸುತ್ತಿದ್ದಾರೆ. ರೈತರ ಪ್ರತಿಯೊಂದು ಸಮಸ್ಯೆಗಳಿಗೆ ಸಲಹೆ ನೀಡಿರುವ ತಜ್ಞರು, ಅದೇ ಸಮಸ್ಯೆಗಳ ಬಗ್ಗೆ ಹೆಚ್ಚಿನ ಅಧ್ಯಯನವನ್ನೂ ನಡೆಸಲಿದ್ದಾರೆ' ಎಂದೂ ನಾಗರಾಜು ಮಾಹಿತಿ ನೀಡಿದರು.

ಬೀಜ ವಿಜ್ಞಾನ, ಪಶು ವಿಜ್ಞಾನ, ಅರಣ್ಯ ಶಾಸ್ತ್ರ, ಆಹಾರ ವಿಜ್ಞಾನ, ಜೇನು ಕೃಷಿ, ಕೃಷಿ ಜೀವಶಾಸ್ತ್ರ, ಮಣ್ಣು ವಿಜ್ಞಾನ, ತೋಟಗಾರಿಕೆ ಸೇರಿದಂತೆ ವಿವಿಧ ವಿಭಾಗಗಳ ತಜ್ಞರು ಕೇಂದ್ರದಲ್ಲಿ ಲಭ್ಯವಿದ್ದಾರೆ. ಕೇಂದ್ರದಲ್ಲಿ 'ಕಿಯೊಸ್ಕ್' ಇರಿಸಲಾಗಿದ್ದು, ಅದರ ಮೂಲಕವೂ ಕೃಷಿ ಹಾಗೂ ಬೆಳೆಗಳ ಬಗ್ಗೆ ರೈತರು ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.

ಆನ್‌ಲೈನ್ ಮೂಲಕವೂ ಸೇವೆ: 'ರೈತರ ಪ್ರಶ್ನೆಗಳಿಗೆ ಆನ್‌ಲೈನ್ ಮೂಲಕವೂ ಉತ್ತರಿಸಲಾಗುತ್ತಿದೆ. ಆನ್‌ಲೈನ್ ವೇದಿಕೆಯಲ್ಲಿ 50 ರೈತರು ಉತ್ತರ ಪಡೆದುಕೊಂಡಿದ್ದಾರೆ' ಎಂದೂ ನಾಗರಾಜು ಹೇಳಿದರು.

'617 ರೈತರ ಭೇಟಿ'

'ಮೇಳಕ್ಕೆ ಬಂದಿದ್ದ ರೈತರ ಪೈಕಿ 617 ರೈತರು, ಸಲಹಾ ಸೇವಾ ಕೇಂದ್ರಕ್ಕೆ ಭೇಟಿ ನೀಡಿ ಸಮಸ್ಯೆಗೆ ಪರಿಹಾರ ಪಡೆದುಕೊಂಡಿದ್ದಾರೆ' ಎಂದು ಎನ್. ನಾಗರಾಜು ಮಾಹಿತಿ ನೀಡಿದರು.

'ಮೊದಲ ದಿನವಾದ ಗುರುವಾರ 186 ರೈತರು ಹಾಗೂ ಶುಕ್ರವಾರ 431 ರೈತರು ಕೇಂದ್ರದ ಸದುಪಯೋಗ ಪಡೆದುಕೊಂಡಿದ್ದಾರೆ' ಎಂದರು.



ರೈತರಿಂದ ರೈತರಿಗಾಗಿ ರೈತರಿಗೋಸ್ಕರ ಕೃಷಿ ಮೇಳ ನಡೆಯುತ್ತಿದೆ. ಇಲ್ಲಿಗೆ ಬಂದ ರೈತರು, ತಮ್ಮ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಂಡು ಹೋಗಬೇಕು. ಇದಕ್ಕಾಗಿ ಕೃಷಿ ತಜ್ಞರ ತಂಡ ಸಜ್ಜುಗೊಳಿಸಲಾಗಿದೆ. ಕೇಂದ್ರಕ್ಕೆ ಬರುವ ರೈತರಿಗೆ ಮಾರ್ಗದರ್ಶನ ಮಾಡುತ್ತಿದೆ
ಡಾ. ಕೆ.ಸಿ. ನಾರಾಯಣಸ್ವಾಮಿ,, ಶಿಕ್ಷಣ ವಿಭಾಗದ ನಿರ್ದೇಶಕ



ಜಮೀನಿನ ಮಣ್ಣಿನ ಬಗ್ಗೆ ತಜ್ಞರ ಸಲಹೆ ಪಡೆದಿದ್ದೇನೆ. ಮಣ್ಣು ಹದ ಮಾಡುವುದು ಹೇಗೆ? ಎಂಬಿತ್ಯಾದಿ ಸಲಹೆಗಳನ್ನು ತಜ್ಞರು ನೀಡಿದ್ದಾರೆ. ತಜ್ಞರು ಆಡು ಭಾಷೆಯಲ್ಲಿ ವಿವರಣೆ ನೀಡಿದ್ದು, ಬೇಗನೇ ಅರ್ಥವಾಯಿತು
ಪಿ. ಪ್ರವೀಣ್, ಶ್ರೀರಂಗಪಟ್ಟಣದ ಪಾಲಹಳ್ಳಿ ರೈತ



ಬೆಳೆ ರೋಗ ಸಮಸ್ಯೆಯಿಂದ ನೊಂದಿದ್ದ ನನಗೆ, ಕೃಷಿ ತಜ್ಞರು ಉತ್ತಮ ಸಲಹೆ ನೀಡಿದ್ದಾರೆ. ಇಂಥ ತಜ್ಞರು ತಾಲ್ಲೂಕಿಗೊಬ್ಬರಂತೆ ಇರಬೇಕು. ಕೃಷಿ ಮೇಳಕ್ಕಾಗಿ ಕಾಯದೇ ನಿತ್ಯವೂ ರೈತರಿಗೆ ಸಲಹೆ ಸಿಗುವ ವೇದಿಕೆ ರೂಪಿಸಲು ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕು
ತ್ಯಾರಮಲ್ಲೇಶ, ಪಾವಗಡದ ಕತ್ತಿಕ್ಯಾತನಹಳ್ಳಿಯ ರೈತ



ಬಾಳೆಗೊನೆಯನ್ನು ರೈತರು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

70 ಕೆ.ಜಿ ತೂಕದ ಬಾಳೆಗೊನೆ ಬೆಳೆದ ರೈತ

ಬೆಂಗಳೂರು: ಯಲಹಂಕ ಹೋಬಳಿ ಜೆ.ಬಿ. ಕಾವಲ್‌ನ ರೈತ ಅಶೋಕ, ಒಂದು ಬಾಳೆ ಗಿಡದಲ್ಲಿ 70 ಕೆ.ಜಿ ತೂಕದ ಬಾಳೆಗೊನೆ ಬೆಳೆದಿದ್ದಾರೆ. ರೈತನ ಸಾಧನೆ ಗುರುತಿಸಿರುವ ತೋಟಗಾರಿಕೆ ಇಲಾಖೆ, ಗಿಡದ ಸಮೇತ ಬಾಳೆಗೊನೆಯನ್ನು ಮೇಳದಲ್ಲಿ ಪ್ರದರ್ಶನಕ್ಕೆ ಇರಿಸಿದೆ.

ಮೇಳದಲ್ಲಿರುವ ತೋಟಗಾರಿಕೆ ಇಲಾಖೆ ಮಳಿಗೆಯಲ್ಲಿ ಬಾಳೆಗೊನೆ ಎಲ್ಲರ ಗಮನ ಸೆಳೆಯುತ್ತಿದೆ.

'ಅಶೋಕ ಅವರು ಒಂದು ಎಕರೆ ಜಮೀನಿನಲ್ಲಿ 'ಜಿ- 9' ತಳಿಯ ಬಾಳೆ ಬೆಳೆದಿದ್ದಾರೆ. ಮಣ್ಣು ಹದದಿಂದ ಹಿಡಿದು, ಗಿಡಗಳು ದೊಡ್ಡದಾಗುವವರೆಗೂ ಹೆಚ್ಚಿನ ಕಾಳಜಿ ಮಾಡಿದ್ದಾರೆ. ಹಂತ ಹಂತವಾಗಿ ಗಿಡಗಳಿಗೆ ಪೋಷಕಾಂಶ ಹಾಗೂ ಔಷಧೋಪಚಾರ ನೀಡಿದ್ದಾರೆ. ಇದರ ಫಲವಾಗಿ, ಇಂದು ಬಾಳೆ ಉತ್ತಮವಾಗಿ ಬೆಳೆದಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

'ಬಹುತೇಕ ಕಡೆ 'ಜಿ-9' ತಳಿಯ ಬಾಳೆ, ಒಂದು ಗಿಡಕ್ಕೆ 10 ಕೆ.ಜಿ. ಯಿಂದ 40 ಕೆ.ಜಿ ಬರುತ್ತದೆ. ಇದೀಗ ಗರಿಷ್ಠ 70 ಕೆ.ಜಿ ತೂಕದ ಬಾಳೆ ಬೆಳೆಯುವ ಮೂಲಕ ಅಶೋಕ ಯಶಸ್ವಿ ರೈತರಾಗಿದ್ದಾರೆ' ಎಂದೂ ತಿಳಿಸಿದರು.

ಹುಣಸೆ ಬೀಜ ಬೇರ್ಪಡಿಸಲು ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಣಸೆ ಹಣ್ಣಿನ ಬೀಜವನ್ನು ಸಲೀಸಾಗಿ ಬೇರ್ಪಡಿಸುವ ಯಂತ್ರವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೊಯ್ಲಿನೋತ್ತರ ಎಂಜಿನಿಯರಿಂಗ್ ವಿಭಾಗ ಆವಿಷ್ಕರಿಸಿದ್ದು, ಕೃಷಿ ಮೇಳದಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ.

ಸಿಪ್ಪೆ ತೆಗೆದು ಹಣ್ಣು ಬೇರ್ಪಡಿಸುವ ಯಂತ್ರವನ್ನು ಈಗಾಗಲೇ ಆವಿಷ್ಕರಿಸಲಾಗಿತ್ತು. ಆದರೆ, ಬೀಜ ಬೇರ್ಪಡಿಸುವ ಯಂತ್ರವಿರಲಿಲ್ಲ. ಆಂಧ್ರಪ್ರದೇಶದಲ್ಲಿ ಖಾಸಗಿ ಕಂಪನಿ ತಯಾರಿಸಿದ್ದ ಯಂತ್ರ ಯಶಸ್ಸು ಕಂಡಿರಲಿಲ್ಲ. ಇದೀಗ ಕೃಷಿ ವಿ.ವಿ ಎಂಜಿನಿಯರ್‌ಗಳು ಆವಿಷ್ಕರಿಸಿರುವ ಯಂತ್ರ ಶೇ 90ರಷ್ಟು ಕಾರ್ಯಕ್ಷಮತೆ ಹೊಂದಿದೆ.

'3 ಫೇಸ್ ವಿದ್ಯುತ್ ಸಾಮರ್ಥ್ಯದ ಯಂತ್ರ ಇದಾಗಿದ್ದು, ಪ್ರತಿ ಗಂಟೆಗೆ 100 ಕೆ.ಜಿ ಹುಣಸೆ ಹಣ್ಣಿನಿಂದ ಬೀಜ ತೆಗೆಯಬಹುದಾಗಿದೆ. ಯಂತ್ರ ನಿರ್ಮಾಣಕ್ಕೆ ಅಂದಾಜು ₹ 1.35 ಲಕ್ಷ ತಗುಲಿದ್ದು, ಅದೇ ದರದಲ್ಲಿ ಮಾರಾಟಕ್ಕೆ ಇರಿಸಲಾಗಿದೆ. ಯಂತ್ರಕ್ಕೆ ಪೇಟೆಂಟ್ ಪಡೆಯುವ ಪ್ರಕ್ರಿಯೆಯೂ ಆರಂಭವಾಗಿದೆ' ಎಂದು ಸಹಾಯಕ ಸಂಶೋಧನಾ ಎಂಜಿನಿಯರ್ ದರ್ಶನ್ ಹೇಳಿದರು.

'ಪಾವಗಡ, ಕೂಡ್ಲಿಗಿ, ಕುಷ್ಟಗಿ, ಚಿಂತಾಮಣಿ, ಬಳ್ಳಾರಿ ಸೇರಿದಂತೆ ರಾಜ್ಯದ ಹಲವೆಡೆ ಹುಣಸೆ ಹಣ್ಣಿನ ಉತ್ಪನ್ನ ಹೆಚ್ಚಿದೆ. ಆಂಧ್ರಪ್ರದೇಶ, ಕೇರಳ ಹಾಗೂ ತಮಿಳುನಾಡಿನಲ್ಲೂ ಹುಣಸೆ ಹಣ್ಣಿನ ಕೃಷಿ ಇದೆ. ಹಣ್ಣಿನ ಬೀಜಗಳನ್ನು ಬೇರ್ಪಡಿಸುವ ಸಂದರ್ಭದಲ್ಲಿ, ಬಹುತೇಕ ಬೀಜಗಳು ನಿರುಪಯುಕ್ತವಾಗುತ್ತಿವೆ. ಇದಕ್ಕೆ ಪರಿಹಾರವಾಗಿ ಹೊಸ ಯಂತ್ರ ತಯಾರಿಸಲಾಗಿದ್ದು, ಶೇ 90ರಷ್ಟು ಗುಣಮಟ್ಟದ ಬೀಜಗಳು ದೊರೆಯುತ್ತವೆ' ಎಂದೂ ತಿಳಿಸಿದರು.

'ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಹುಣಸೆ ಹಣ್ಣಿನ ಬೀಜಗಳನ್ನು ಬಳಸಲಾಗುತ್ತದೆ. ಪ್ರತಿ ಕೆ.ಜಿ ಬೀಜಕ್ಕೆ ಸದ್ಯ ₹ 7 ದರವಿದೆ. ಬೀಜಗಳನ್ನು ಸರಿಯಾಗಿ ಬೇರ್ಪಡಿಸಿ ಕೊಟ್ಟರೆ, ಹೆಚ್ಚಿನ ದರವೂ ಸಿಗಲಿದೆ.'

'ಇದು ದೊಡ್ಡ ಗಾತ್ರದ ಯಂತ್ರ. ಸಣ್ಣ ರೈತರಿಗೆ ಹೊರೆ ಆಗುತ್ತದೆ. ಗ್ರಾಮಕ್ಕೊಂದು ಹಾಗೂ ಹೋಬಳಿಗೊಂದು ಯಂತ್ರವಿದ್ದರೂ ಬಾಡಿಗೆ ಆಧಾರದಲ್ಲಿ ಬಳಸಬಹುದು. ಮುಂದಿನ ದಿನಗಳಲ್ಲಿ ಹುಣಸೆ ನಾರು ತೆಗೆಯುವ ಯಂತ್ರವನ್ನೂ ಆವಿಷ್ಕರಿಸುವ ಯೋಜನೆ ಇದೆ' ಎಂದೂ ದರ್ಶನ್ ಮಾಹಿತಿ ನೀಡಿದರು.



ಹುಣಸೆ ಹಣ್ಣಿನ ಬೀಜ ಬೇರ್ಪಡಿಸುವ ಯಂತ್ರ ಕಾರ್ಯಾಚರಣೆ ಬಗ್ಗೆ ಕೊಯ್ಲಿನೋತ್ತರ ಎಂಜಿನಿಯರಿಂಗ್ ವಿಭಾಗದ ಸಿಬ್ಬಂದಿ ವಿವರಿಸಿದರು
— ಪ್ರಜಾವಾಣಿ ಚಿತ್ರ



ಮಳೆ ನಡುವೆಯೂ ಕೃಷಿ ಮೇಳಕ್ಕೆ ಶುಕ್ರವಾರ ಬಂದ ರೈತರು– ಪ್ರಜಾವಾಣಿ ಚಿತ್ರ

ಕೆಸರುಗದ್ದೆಯಾದ ಆವರಣ: ತಾಂತ್ರಿಕ ಮಾಹಿತಿ ಪಡೆದ ರೈತರು

ಸುರಿವ ಮಳೆಯಲ್ಲೇ ರೈತರ ದಂಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರ ಹಬ್ಬ' ಕೃಷಿ ಮೇಳ ಆರಂಭವಾದ ಮೊದಲ ದಿನವೇ ದರ್ಶನ ನೀಡಿದ್ದ ಮಳೆರಾಯ, ಶುಕ್ರವಾರವೂ ಬಿಡುವು ನೀಡಲಿಲ್ಲ. ಕೃಷಿ ಕ್ಷೇತ್ರದ ಹೊಸ ಅನ್ವೇಷಣೆಗಳು, ತರಹೇವಾರಿ ಮಳಿಗೆಗಳು ಹಾಗೂ ಬೆಳೆಗಳ ತಾಕುಗಳನ್ನು ವೀಕ್ಷಿಸಲು ರೈತರ ದಂಡೇ ಕೃಷಿ ಮೇಳಕ್ಕೆ ಹರಿದು ಬಂತು.

ವಿಶ್ವವಿದ್ಯಾಲಯದ ಆವರಣದಲ್ಲಿ ವ್ಯವಸ್ಥಿತ ಪೆಂಡಾಲ್‌ಗಳನ್ನು ಹಾಕಿ, ಮಳಿಗೆಗಳನ್ನು ನಿರ್ಮಿಸಲಾಗಿದೆ. ನಿರಂತರ ಮಳೆಯಿಂದಾಗಿ, ಇಡೀ ಆವರಣ ಕೆಸರು ಗದ್ದೆಯಾಗಿ ಮಾರ್ಪಟ್ಟಿತ್ತು. ಆದರೂ ರೈತರ ಉತ್ಸಾಹ ಕುಗ್ಗಿರಲಿಲ್ಲ. ಕೆಸರಿನಲ್ಲೇ ಹೆಜ್ಜೆ ಇಟ್ಟು ಮಳಿಗೆಯಿಂದ ಮಳಿಗೆಗೆ ಸುತ್ತಿದರು.

ಬೆಂಗಳೂರು, ಮೈಸೂರು, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ತುಮಕೂರು ಹಾಗೂ ಹೊರ ಜಿಲ್ಲೆಗಳ ಜನ ತಂಡೋಪತಂಡವಾಗಿ ಮೇಳಕ್ಕೆ ಬಂದಿದ್ದರು. ರೈತರ ಜೊತೆಯಲ್ಲೇ ವಿದ್ಯಾರ್ಥಿಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಮೇಳದಲ್ಲಿ ಕಾಣಿಸಿಕೊಂಡರು.

ಇಡೀ ದಿನ ಸುರಿದ ಜಿಟಿ ಜಿಟಿ ಮಳೆಯಲ್ಲೇ ಸರ್ಕಾರಿ ಇಲಾಖೆಗಳು ಮತ್ತು ಖಾಸಗಿ ಕಂಪನಿ ಮಳಿಗೆಗಳಿಗೆ ಜನರು ಭೇಟಿ ನೀಡಿದರು. ಕೃಷಿ ಮತ್ತು ತೋಟಗಾರಿಕೆ ಸಂಬಂಧಿಸಿದಂತೆ ಮಾಹಿತಿ ಪಡೆದುಕೊಳ್ಳುತ್ತಿದ್ದವರ ಸಂಖ್ಯೆಯೂ ಹೆಚ್ಚಿತ್ತು.



ನಗರದ ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿನ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮಳಿಗೆಗೆ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ರಾಜೇಂದ್ರ ಪ್ರಸಾದ್ ಅವರು ಭೇಟಿ ನೀಡಿದರು– ಪ್ರಜಾವಾಣಿ ಚಿತ್ರ



ಎಣ್ಣೆ ತೆಗೆಯುವ ಯಂತ್ರದ ಪ್ರಾತ್ಯಕ್ಷಿಕೆ ತೋರಿಸುತ್ತಿರುವ ಯುವ ವಿಜ್ಞಾನಿ ರಾಜೇಶ್– ಪ್ರಜಾವಾಣಿ ಚಿತ್ರ

ಗಮನಸೆಳೆದ ಎಣ್ಣೆ ತೆಗೆಯುವ ಯಂತ್ರ

ಬೆಂಗಳೂರು: ಸಣ್ಣ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಎಣ್ಣೆ ತೆಗೆಯುವ ಚಿಕ್ಕದಾದ ಯಂತ್ರ ಅಭಿವೃದ್ಧಿಪಡಿಸಲಾಗಿದೆ.

ಕೃಷಿ ವಿಶ್ವವಿದ್ಯಾಲಯದ ಅರಣ್ಯ ಮತ್ತು ಪರಿಸರ ವಿಭಾಗದ ವಿಜ್ಞಾನಿಗಳು ಈ ಯಂತ್ರ ಅಭಿವೃದ್ಧಿಪಡಿಸಿದ್ದಾರೆ. ಯಾವುದೇ ರೀತಿಯ ಎಣ್ಣೆ ಕಾಳುಗಳನ್ನು ಬಳಸಿ ಎಣ್ಣೆ ತೆಗೆಯಬಹುದಾಗಿದೆ.

ಹೊಂಗೆ, ಹಿಪ್ಪೆ, ಬೇವು, ಶೇಂಗಾ, ಸೂರ್ಯಕಾಂತಿ, ಕೊಬ್ಬರಿ, ಸಾಸಿವೆಯಿಂದ ಎಣ್ಣೆ ತೆಗೆಯಬಹುದು. ಒಂದು ಗಂಟೆಯಲ್ಲಿ 10 ಕೆ.ಜಿ. ಬೀಜ ಅರೆಯಬಹುದು. ಕೆಲವು ಬೀಜಗಳಿಗೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಈ ಯಂತ್ರಕ್ಕೆ ₹35 ಸಾವಿರ ಬೆಲೆ ನಿಗದಿಪಡಿಸಲಾಗಿದೆ. ಪ್ರಾಯೋಗಿಕವಾಗಿ ಹಾಸನ ಜಿಲ್ಲೆಯ ಹತ್ತು ಸ್ವಸಹಾಯ ಗುಂಪುಗಳಿಗೆ ಈ ಯಂತ್ರ ನೀಡಲಾಗಿದೆ.

ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಆರ್ಥಿಕ ನೆರವಿನಿಂದ ಈ ಯಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ವಿದ್ಯುತ್ ಚಾಲಿತ ಯಂತ್ರ ಇದಾಗಿದ್ದು, 4ರಿಂದ 5 ಗಂಟೆಗೆ ಒಂದು ಯೂನಿಟ್ ವಿದ್ಯುತ್ ತಗಲುತ್ತದೆ.

'ಈ ಯಂತ್ರಕ್ಕೆ 1 ವರ್ಷ ವಾರಂಟಿ ಇದೆ. ಕಡಿಮೆ ವೆಚ್ಚದಲ್ಲಿ ರೈತರಿಗೆ ಎಣ್ಣೆ, ಹಿಂಡಿ ದೊರೆಯುತ್ತದೆ. ಹೀಗಾಗಿ, ಹೆಚ್ಚು ಅನುಕೂಲಕರ ಮತ್ತು ಎಲ್ಲೆಡೆಯೂ ಕೊಂಡೊಯ್ಯಬಹುದಾಗಿದೆ' ಎಂದು ಯುವ ವಿಜ್ಞಾನಿ ರಾಜೇಶ್ ಹೇಳಿದ್ದಾರೆ.



ರಾಮಪ್ಪ ಅವರು ಮಣ್ಣಿನ ಮಡಿಕೆ ತಯಾರಿಸಿದರು. ಯುವತಿಯೊಬ್ಬರು ಕೈ ಜೋಡಿಸಿದ್ದರು

ಮಡಿಕೆ ತಯಾರಿಸಿ ಖುಷಿಪಟ್ಟ ಜನ

ಬೆಂಗಳೂರು: ಮಣ್ಣಿನ ಮಡಿಕೆಗಳಿಗೆ ಬೇಡಿಕೆ ತಗ್ಗಿರುವ ಇಂದಿನ ದಿನಗಳಲ್ಲಿ ಕುಂಬಾರ ರಾಮಪ್ಪ, ಕೃಷಿ ಮೇಳದ ಬಯಲಿನಲ್ಲೇ ಮಡಿಕೆ ತಯಾರಿಸಿ ಜನರ ಗಮನ ಸೆಳೆದರು

ಮೇಳದ ಪ್ರಮುಖ ರಸ್ತೆಯ ಬದಿಯಲ್ಲಿ ಪತ್ನಿ ಹಾಗೂ ಮಗನ ಜೊತೆ ಸೇರಿ ರಾಮಪ್ಪ ಮಡಿಕೆ ಮಾರುತ್ತಿದ್ದಾರೆ. ಜನರ ಎದುರೇ ಮಣ್ಣಿನ ಮಡಿಕೆ ತಯಾರಿಸಿ, ತಮ್ಮ ಮಡಿಕೆ ಖರೀದಿಸುವಂತೆ ಕೋರುತ್ತಿದ್ದಾರೆ.

ಚಕ್ರದ ಗಾಲಿ ತಿರುಗಿಸಿ, ಹದವಾದ ಮಣ್ಣಿನಿಂದ ಮಡಿಕೆ ತಯಾರಿಸುತ್ತಿದ್ದ ದೃಶ್ಯ ಜನರನ್ನು ಕುತೂಹಲದಿಂದ ನೋಡುವಂತೆ ಮಾಡಿತು. ಮಡಿಕೆ ತಯಾರಿಕೆಯಲ್ಲಿ ಪಾಲ್ಗೊಳ್ಳಲು ಜನರಿಗೂ ಅವಕಾಶ ನೀಡಲಾಗಿತ್ತು.

ಮಕ್ಕಳು ಹಾಗೂ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಚಕ್ರದ ಬಳಿ ಹೋಗಿ ಮಡಿಕೆ ತಯಾರಿಸಲು ಕೈ ಜೋಡಿಸಿದರು. ಚಕ್ರ ಸುತ್ತುತ್ತಿದ್ದಾಗಲೇ ಮಡಿಕೆಯನ್ನು ಸುಂದರ ಆಕೃತಿಗೆ ಪರಿವರ್ತಿಸಿದರು. ಕೆಲವರು ಮಡಿಕೆಯನ್ನು ಖರೀದಿಸಿಕೊಂಡು ಹೋದರು.

'ಇಂದಿನ ದಿನಗಳಲ್ಲಿ ಮಣ್ಣಿನ ಮಡಿಕೆ ಬಳಕೆ ತೀರಾ ಕಡಿಮೆ ಆಗಿದೆ. ಕುಲಕಸುಬು ನಂಬಿರುವ ನಮ್ಮಂಥ ಕುಂಬಾರರ ಜೀವನ ಕಷ್ಟವಾಗಿದೆ. ಇದನ್ನು ಜನರಿಗೆ ತಿಳಿಸಲು ಬಯಲಲ್ಲಿ ಮಡಿಕೆ ತಯಾರಿಸಿ, ಮಾರುತ್ತಿದ್ದೇನೆ' ಎಂದು ರಾಮಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.



ಸುಗ್ಗಿ ಸಂಭ್ರಮ


ಕೃಷಿ ಇಲಾಖೆಯು ಮೇಳದಲ್ಲಿ ತೆರೆದಿರುವ ಮಳಿಗೆಯಲ್ಲಿ ದ್ವಿದಳ ಧಾನ್ಯಗಳ ರಾಶಿಯನ್ನು ಹೂವು, ತಳಿರು–ತೋರಣಗಳಿಂದ ಅಲಂಕರಿಸಲಾಗಿದೆ
– ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಕರ್ನಾಟಕ ಎನ್‌ಇಪಿ ಸಮಾವೇಶ: ಅತಿಥಿ–ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ,ಮಾತನಾಡುವವರು–ಪ್ರೊ.ಗೋಪಾಲಕೃಷ್ಣ ಜೋಶಿ, ಅಶ್ವಿನ್ ಗೌಡ, ಪಿ.ಪ್ರದೀಪ್, ಥೆರೆಸಾ ಜಾಕೊಬ್, ಟಾಮ್ ಎಂ.ಜೋಸೆಫ್, ಕೆ.ಆರ್. ವೇಣುಗೋಪಾಲ್, ರಾಜ್ ಸಿಂಗ್, ಧೀಮಂತ್ ಗಣತ್ರ, ವೈ.ಎಸ್.ಆರ್. ಮೂರ್ತಿ, ಅನುರಾಧ ವರ್ಮಾ, ರಂಗರಾಜನ್ ಸುಬ್ರಮಣಿಯನ್, ಆಯೋಜನೆ–ಉನ್ನತ ಶಿಕ್ಷಣ ಮಂಡಳಿ, ಸಹಯೋಗ–ಅಂತರರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ (ಐಎಸ್‌ಡಿಸಿ), ಸ್ಥಳ–ಹೋಟೆಲ್ ಶಾಂಗ್ರಿಲಾ, ಅರಮನೆ ರಸ್ತೆ, ವಸಂತ ನಗರ, ಬೆಳಿಗ್ಗೆ 10

ನಮ್ಮ ಅಪ್ಪು–ಕ್ರೀಡಾ ಮತ್ತು ಮಕ್ಕಳ ದಿನ: ಉದ್ಘಾಟನೆ–ಶಾಸಕ ಕೃಷ್ಣಬೈರೇಗೌಡ, ಸಚಿವ ಕೆ.ಸುಧಾಕರ್, ಅತಿಥಿಗಳು–ಶ್ರೀಷ್ಮ ಹೆಗ್ಡೆ, ಹನುಮಂತರಾಯ, ಇಂದುಶ್ರೀ, ಆಯೋಜನೆ–ಸಿ.ಕೃಷ್ಣಯ್ಯಚೆಟ್ಟಿ ಪ್ರತಿಷ್ಠಾನ ಮತ್ತು ಇನ್ನರ್‌ವೀಲ್ ಕ್ಲಬ್ ಆಫ್ ಬೆಂಗಳೂರು, ಸ್ಥಳ–ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆ, ದಾಸರಹಳ್ಳಿ, ಹೆಬ್ಬಾಳ, ಬೆಳಿಗ್ಗೆ 10

'ಕಾಂತ ಮತ್ತು ಕಾಂತ' ನಾಟಕ



ಪ್ರದರ್ಶನ:'ಮುಖ್ಯಮಂತ್ರಿ' ಚಂದ್ರು ಮತ್ತು 'ಸಿಹಿಕಹಿ' ಚಂದ್ರು ಆಯೋಜನೆ–ಸಂಕೇತ್ ಪ್ರೊಡಕ್ಷನ್ಸ್, ರಚನೆ, ವಿನ್ಯಾಸ ಮತ್ತು ನಿರ್ದೇಶನ–ಎಸ್.ಸುರೇಂದ್ರನಾಥ್, ಸ್ಥಳ–ರಂಗಶಂಕರ, ಮಧ್ಯಾಹ್ನ 3.30 ಮತ್ತು ಸಂಜೆ 7ಕ್ಕೆ

ಕೃಷಿ ಮೇಳ–ವಿವಿಧ ಕೃಷಿ ಪ್ರಶಸ್ತಿಗಳ ಪ್ರದಾನ: ಅತಿಥಿಗಳು–ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಗೃಹ ಸಚಿವ ಆರಗ ಜ್ಞಾನೇಂದ್ರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಜಲಸಂಪನ್ಮೂಲ ಸಚಿವ ಗೋವಿಂದ ಎಂ.ಕಾರಜೋಳ, ಅಧ್ಯಕ್ಷತೆ–ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ರಾಜೇಂದ್ರ ಪ್ರಸಾದ್, ಸ್ಥಳ–ಜಿಕೆವಿಕೆ, ಮಧ್ಯಾಹ್ನ 2

ಕ್ಯಾನ್ಸರ್ ತಡೆಗಟ್ಟುವ ಕುರಿತು ಜಾಗೃತಿ ಸಮಾವೇಶ: ಆಯೋಜನೆ–ಸೊಸೈಟಿ ಫಾರ್ ಪ್ರಿವೆನ್ಷನ್ ಆಫ್ ಕ್ಯಾನ್ಸರ್ (ಎಸ್‌ಪಿಒಸಿ), ಸ್ಥಳ–ತಾಜ್ ವೆಸ್ಟ್ ಎಂಡ್ ಹೋಟೆಲ್, ಸಂಜೆ 4

ಪೆಟ್ರೋಲ್ ಬಂಕ್ ಬಳಿ ದರೋಡೆಗೆ ಯತ್ನ: ಬಂಧನ

ಬೆಂಗಳೂರು: ಬೈಕ್‌ಗೆ ಪೆಟ್ರೋಲ್ ಹಾಕಿಸಿಕೊಳ್ಳುವ ನೆಪದಲ್ಲಿ ಬಂಕ್‌ಗೆ ಬಂದು ಕ್ಯಾಷಿಯರ್ ಬಳಿ ಇದ್ದ ಹಣ ದೋಚಲು ಯತ್ನಿಸಿದ್ದ ಇಬ್ಬರನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೈಯದ್ ಆಜಂ ಯಾನೆ ಲಂಗ್ಡಾ ಆಜಂ (32) ಹಾಗೂ ರಮೀಜ್ ಖಾನ್ (23) ಬಂಧಿತರು.

'ಲಂಗ್ಡಾ ಆಜಂ ವಿರುದ್ಧ 2012ರಲ್ಲಿ ಜೆಜೆ ನಗರ ಠಾಣೆಯಲ್ಲಿ ಮನೆಗಳವು ಪ್ರಕರಣ ದಾಖಲಾಗಿತ್ತು. ಜೆಜೆ ನಗರ ನಿವಾಸಿಯಾಗಿರುವ ಆರೋಪಿ ಜೆ.ಸಿ. ರಸ್ತೆಯ ಗ್ಯಾರೇಜೊಂದರಲ್ಲಿ ಕೆಲಸ ಮಾಡುತ್ತಿದ್ದ. ಬ್ಯಾಟರಾಯನಪುರ ನಿವಾಸಿ ರಮೀಜ್ ಜೊತೆ ಉತ್ತಮ ಒಡನಾಟ ಹೊಂದಿದ್ದ. ರಮೀಜ್ ವಿರುದ್ಧ ದರೋಡೆಗೆ ಸಿದ್ಧತೆ ಆರೋಪದ ಅಡಿ ಪ್ರಕರಣ ದಾಖಲಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ಲಂಗ್ಡಾ ಆಜಂನ ಭಾವ ಇಮ್ರಾನ್ ಯಾನೆ ಬಿರಿಯಾನಿ ಇಮ್ರಾನ್ ವಿರುದ್ಧ ಸಿಸಿಬಿ ಪೊಲೀಸರು ಒಂದೂವರೆ ತಿಂಗಳ ಹಿಂದೆ ಡಕಾಯಿತಿಗೆ ಸಿದ್ಧತೆ ಆರೋಪದ ಅಡಿ ಪ್ರಕರಣ ದಾಖಲಿಸಿ ಅದನ್ನು ಜೆಜೆ ನಗರ ಠಾಣೆಗೆ ವರ್ಗಾಯಿಸಿದ್ದರು. ನ್ಯಾಯಾಂಗ ಬಂಧನದಲ್ಲಿರುವ ಇಮ್ರಾನ್‌ನನ್ನು ಬಿಡಿಸಿಕೊಳ್ಳಲು ಆರೋಪಿಗಳ ಬಳಿ ಹಣ ಇರಲಿಲ್ಲ. ಹೀಗಾಗಿ ಪೆಟ್ರೋಲ್ ಬಂಕ್‌ನ ಕ್ಯಾಷಿಯರ್ ಬಳಿ ಇದ್ದ ಹಣ ದೋಚಲು ಮುಂದಾಗಿದ್ದರು' ಎಂದರು.

'ಗುರುತು ಸಿಗಬಾರದೆಂದು ಹೆಲ್ಮೆಟ್ ಧರಿಸಿದ್ದ ಆರೋಪಿಗಳು ಬಂಕ್‌ಗೆ ಹೋದ ತಕ್ಷಣವೇ ಬೆನ್ನ ಹಿಂದೆ ಅವಿತಿಟ್ಟುಕೊಂಡಿದ್ದ ಮಾರಕಾಸ್ತ್ರಗಳಿಂದ ಕ್ಯಾಷಿಯರ್‌ಗೆ ಬೆದರಿಸಿ ಹಣ ದೋಚಲು ಮುಂದಾಗಿದ್ದರು. ಕ್ಯಾಷಿಯರ್ ಕೂಗಿಕೊಂಡ ತಕ್ಷಣವೇ ಬಂಕ್‌ನಲ್ಲಿದ್ದ ಸಿಬ್ಬಂದಿ ಓಡಿ ಬಂದಿದ್ದರು. ಇದನ್ನು ನೋಡಿದ್ದ ಇಬ್ಬರೂ ಅಲ್ಲಿಂದ ಪರಾರಿಯಾಗಿದ್ದರು. ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಅದರಲ್ಲಿ ಆರೋಪಿಯೊಬ್ಬ ಕುಂಟುತ್ತಾ ಓಡುವುದು ಕಂಡುಬಂದಿತ್ತು. ಅದರ ಆಧಾರದಲ್ಲಿ ಆಜಂನನ್ನು ಬಂಧಿಸಲಾಯಿತು. ಆತನನ್ನು ವಿಚಾರಿಸಿದಾಗ ರಮೀಜ್ ಕೂಡ ಕೃತ್ಯದಲ್ಲಿ ಭಾಗಿಯಾಗಿದ್ದ ವಿಚಾರ ಬಾಯ್ಬಿಟ್ಟಿದ್ದ' ಎಂದು ವಿವರಿಸಿದರು.

ಕೂಲಿ ವಿಚಾರಕ್ಕೆ ಜಗಳ; ಕೊಲೆಯಲ್ಲಿ ಅಂತ್ಯ

ಬೆಂಗಳೂರು: ಕೂಲಿ ವಿಚಾರವಾಗಿ ಕಾರ್ಮಿಕರಿಬ್ಬರ ನಡುವೆ ನಡೆದ ಜಗಳದಲ್ಲಿ ಅಂಥೋಣಿ ರಾಜ್ (42) ಎಂಬುವರು ಕೊಲೆಯಾಗಿದ್ದಾರೆ. ಆರೋಪಿ ರಾಜು ಎಂಬಾತನನ್ನು ಮೈಕೊ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಗರದ ಮೈಲಸಂದ್ರ ನಿವಾಸಿಯಾಗಿರುವ ಅಂಥೋಣಿ, ಕಟ್ಟಡಗಳ ಅವಶೇಷಗಳನ್ನು ಟಿಪ್ಪರ್ ಲಾರಿಗೆ ತುಂಬುವ ಕೆಲಸ ಮಾಡಿಕೊಂಡಿದ್ದರು. ತಮಿಳುನಾಡು ಮೂಲದ ರಾಜು ಕೂಡ ಇದೇ ಕೆಲಸ ಮಾಡುತ್ತಿದ್ದ. ಇವರಿಬ್ಬರೂ ಬಿಳೇಕಹಳ್ಳಿ ಬಳಿ ಇದ್ದ ಶೆಡ್‌ವೊಂದರಲ್ಲಿ ಇರುತ್ತಿದ್ದರು. ಇದೇ 9ರಂದು ಕೂಲಿ ವಿಚಾರವಾಗಿ ಅಂಥೋಣಿಯು ಆರೋಪಿ ಜೊತೆ ಜಗಳವಾಡಿದ್ದರು. ಗುರುವಾರ ಸಂಜೆಯೂ ಪರಸ್ಪರರ ನಡುವೆ ಗಲಾಟೆ ನಡೆದಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'ಗುರುವಾರ ರಾತ್ರಿ ಜೊತೆಯಾಗಿಯೇ ಶೆಡ್‌ಗೆ ಹೋಗಿದ್ದ ಇಬ್ಬರು ಅಲ್ಲೇ ಮಲಗಿದ್ದರು. ಈ ವೇಳೆ ಮಾತಿನ ಚಕಮಕಿ ನಡೆದಿತ್ತು. ಸಿಟ್ಟಾದ ಅಂಥೋಣಿ, ಕಬ್ಬಿಣದ ಕುರ್ಚಿಯಿಂದ ಆರೋಪಿ ಮೇಲೆ ಹಲ್ಲೆಗೆ ಯತ್ನಿಸಿದ್ದರು. ಈ ವೇಳೆ ಆರೋಪಿಯು ಅಲ್ಲೇ ಇದ್ದ ದೊಣ್ಣೆಯಿಂದ ಅಂಥೋಣಿ ತಲೆಗೆ ಬಲವಾಗಿ ಹೊಡೆದಿದ್ದಾನೆ. ಸ್ಥಳದಲ್ಲೇ ಕುಸಿದಿದ್ದ ಅವರು ತೀವ್ರ ರಕ್ತಸ್ರಾವದಿಂದ ಮೃತರಾಗಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಅಪರಾಧ ಸುದ್ದಿ


'ಕನ್ನಡ ಚಿರಂಜೀವಿ ಪ್ರಶಸ್ತಿ'ಗೆ ನಾ. ಶ್ರೀಧರ, ಸ್ವ್ಯಾನ್ ಕೃಷ್ಣಮೂರ್ತಿ ಆಯ್ಕೆ

ಬೆಂಗಳೂರು: ಕನ್ನಡ ಗೆಳೆಯರ ಬಳಗವು ಕೊಡಮಾಡುವ 'ಕನ್ನಡ ಚಿರಂಜೀವಿ ಪ್ರಶಸ್ತಿ'ಗೆ ಕನ್ನಡಪರ ಹೋರಾಟಗಾರರಾದ ನಾ. ಶ್ರೀಧರ ಹಾಗೂ 'ಕನ್ನಡ ಅರವಿಂದ ಪ್ರಶಸ್ತಿ'ಗೆ ಸ್ವ್ಯಾನ್ ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ.

ನಾ. ಶ್ರೀಧರ ಅವರು ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ. ಕೃಷ್ಣಮೂರ್ತಿ ಅವರು ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ 20 ಸಾವಿರ ಕನ್ನಡ ಪುಸ್ತಕಗಳಿರುವ ಗ್ರಂಥಾಲಯ ತೆರದು, ಗಡಿಯಲ್ಲಿ ಕನ್ನಡದ ಕಂಪು ಹರಡುತ್ತಿದ್ದಾರೆ.

ಉತ್ತಮ ಕನ್ನಡ ಶಾಲೆ ಗೌರವಕ್ಕೆ ಈ ಬಾರಿ ಹಾವೇರಿ ಜಿಲ್ಲೆಯ ಕುಣಿಮೆಳ್ಳಿಹಳ್ಳಿ ಧರ್ಮಾವರ ಹಿರಿಯ ಕನ್ನಡ ಪ್ರಾಥಮಿಕ ಶಾಲೆ ಆಯ್ಕೆಯಾಗಿದೆ.

ನ.30ರಂದು ಇಲ್ಲಿನ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಶಾಸಕ ಎಸ್. ಸುರೇಶ್ ಕುಮಾರ್ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ವಿದ್ವಾಂಸ ಗೊ.ರು. ಚನ್ನಬಸಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಾ. ಶ್ರೀಧರ



ಕೃಷ್ಣಮೂರ್ತಿ

ಪ್ರತಿಭಟನೆ ನಡೆದರೆ, ಮಳೆ ಬಂದರೂ ಓಕಳಿಪುರ ವೃತ್ತದಲ್ಲಿ ವಿಪರೀತ ದಟ್ಟಣೆ • ಸುತ್ತಿ ಬಳಸಿ ಹೋದರೂ ತೊಂದರೆ

ಸೇತುವೆ ನಿರ್ಮಾಣವಾದರೂ ತಪ್ಪಿಲ್ಲ ಸಂಚಾರ ಕಿರಿಕಿರಿ

• ಸಂತೋಷ ಜಿಗಳಿಕೊಪ್ಪ




ಓಕಳಿಪುರ ವೃತ್ತದಿಂದ ರೈಲು ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆ ಕಾಮಗಾರಿ ಪ್ರಗತಿಯಲ್ಲಿದ್ದು, ಸದ್ಯ ವಾಹನಗಳು ಸಂಚರಿಸದಂತೆ ಬ್ಯಾರಿಕೇಡ್‌ಗಳನ್ನು ನಿಲ್ಲಿಸಿರುವುದು (ಎಡ ಚಿತ್ರ) ಮೆಜೆಸ್ಟಿಕ್–ಓಕಳಿಪುರ ಕೆಳಸೇತುವೆಯಲ್ಲಿ ಬಿದ್ದಿರುವ ಗುಂಡಿಯಲ್ಲಿ ನೀರು ನಿಂತಿರುವುದು – ಪ್ರಜಾವಾಣಿ ಚಿತ್ರಗಳು/ ರಂಜು ಪಿ.

ಬೆಂಗಳೂರು: ನಗರದ ಹೃದಯ ಭಾಗ ಮೆಜೆಸ್ಟಿಕ್‌ಗೆ ಹೊಂದಿಕೊಂಡಿರುವ ಓಕಳಿಪುರ ವೃತ್ತದಲ್ಲಿ ಬಹುತೇಕ ದಿನಗಳಂದು ಸಂಚಾರ ಕಿರಿಕಿರಿ ಉಂಟಾಗುತ್ತಿದೆ. ಕೆಳಸೇತುವೆ ನಿರ್ಮಾಣ ಮಾಡಿದರೂ ಮಳೆ ಹಾಗೂ ಪ್ರತಿಭಟನೆಗಳಿಂದಾಗಿ ಸಂಚಾರ ದಟ್ಟಣೆ ಸಾಮಾನ್ಯವಾಗಿಬಿಟ್ಟಿದೆ.

ತುಮಕೂರು ರಸ್ತೆ, ವಿಜಯನಗರ, ರಾಜಾಜಿನಗರ, ಮಾಗಡಿ ರಸ್ತೆ ಹಾಗೂ ಸುತ್ತಮುತ್ತಲ ಪ್ರದೇಶಗಳ ಜನ, ಓಕಳಿಪುರ ವೃತ್ತದ ಮೂಲಕವೇ ಮೆಜೆಸ್ಟಿಕ್‌ನತ್ತ ಬರಬೇಕು. ಇದೇ ವೃತ್ತಕ್ಕೆ ಹೊಂದಿಕೊಂಡೇ ರೈಲು ನಿಲ್ದಾಣವಿದ್ದು, ಅವುಗಳ ಓಡಾಟಕ್ಕೆ ಸೇತುವೆಗಳನ್ನು ನಿರ್ಮಿಸಲಾಗಿದೆ. ಅದರ ಕೆಳ ಸೇತುವೆಗಳಲ್ಲಿ ವಾಹನಗಳು ಸಂಚರಿಸುತ್ತವೆ.

ಓಕಳಿಪುರ ವೃತ್ತದಲ್ಲಿ ಈ ಹಿಂದೆ ಕಿರಿದಾದ ರಸ್ತೆ ಇತ್ತು. ವಿಪರೀತ ದಟ್ಟಣೆ ಉಂಟಾಗುತ್ತಿತ್ತು. ದಟ್ಟಣೆ ಸಮಸ್ಯೆಗೆ ಪರಿಹಾರ ಕಲ್ಪಿಸಲು, ಎರಡು ಕೆಳ ಸೇತುವೆಗಳನ್ನು ನಿರ್ಮಿಸಲಾಗಿದೆ. ಆದರೆ, ಮಳೆ ಬಂದ ಸಂದರ್ಭದಲ್ಲಿ ಕೆಳ ಸೇತುವೆಯಲ್ಲೇ ನೀರು ಹರಿಯುತ್ತಿದೆ. ವಾಹನಗಳು ನಿಧಾನವಾಗಿ ಸಂಚರಿಸುತ್ತಿದ್ದು, ದಟ್ಟಣೆ ಹೆಚ್ಚುತ್ತಿದೆ.

ಪ್ರಯಾಣ ಪ್ರಯಾಸ

ದಟ್ಟಣೆ ಸಂದರ್ಭದಲ್ಲಿ ಬಸ್ಸಿನಲ್ಲಿ ಸಂಚರಿಸುವ ಪ್ರಯಾಣಿಕರು, ವೃತ್ತದಲ್ಲೇ ಇಳಿದು ನಡೆದುಕೊಂಡೇ ಮೆಜೆಸ್ಟಿಕ್‌ನತ್ತ ಹೋಗುವ ಸ್ಥಿತಿಯೂ ಆಗಾಗ ನಿರ್ಮಾಣವಾಗುತ್ತದೆ.

‘ಮಳೆ ಬಂದ ಸಂದರ್ಭದಲ್ಲಿ, ಮೆಜೆಸ್ಟಿಕ್ ಬಳಿಯ ರೈಲ್ವೆ ಕೆಳಸೇತುವೆ ಹಾಗೂ ಓಕಳಿಪುರದ ಕೆಳಸೇತುವೆಯಲ್ಲಿ 3 ಅಡಿಗಳಷ್ಟು ನೀರು ಧಾರಾಕಾರವಾಗಿ ಹರಿಯುತ್ತದೆ. ಇಂಥ ಸಂದರ್ಭದಲ್ಲಿ ವಾಹನ ಚಲಾಯಿಸುವುದು ಕಷ್ಟವಾಗುತ್ತದೆ. ಕೆಲ ವಾಹನಗಳು, ನೀರಿನಲ್ಲೇ ಕೆಟ್ಟು ನಿಲ್ಲುತ್ತವೆ. ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿ, ದಟ್ಟಣೆ ಉಂಟಾಗುತ್ತದೆ’ ಎಂದು ಸ್ಥಳೀಯ ನಿವಾಸಿ ರಾಮಾಂಜನೇಯ ಹೇಳಿದರು.

‘ಕೆಳ ಸೇತುವೆಗಳಲ್ಲಿ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಮಾಡಿಲ್ಲ. ನೀರು ನಿಲ್ಲುತ್ತಿರುವುದರಿಂದ ರಸ್ತೆ ಸಹ ಹಾಳಾಗಿ, ಗುಂಡಿಗಳು ಬೀಳುತ್ತಿವೆ. ಗುಂಡಿಗಳನ್ನು ತಾತ್ಕಾಲಿಕವಾಗಿ ಮುಚ್ಚಿದರೂ ಶಾಶ್ವತ ಪರಿಹಾರ ಸಿಗುತ್ತಿಲ್ಲ. ರಾತ್ರಿ ವೇಳೆ ಕೆಲ ದ್ವಿಚಕ್ರ ವಾಹನಗಳು, ಗುಂಡಿಯಿಂದಾಗಿ ಉರುಳಿ ಬಿದ್ದು ಸವಾರರು ಗಾಯಗೊಂಡ ಘಟನೆಗಳೂ ನಡೆದಿವೆ’ ಎಂದೂ ದೂರಿದರು.

ಪ್ರತಿಭಟನೆ ಬಿಸಿ: ನಗರ ರೈಲು ನಿಲ್ದಾಣ, ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ ಹಾಗೂ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆಗಳು ನಡೆದರೆ, ಅದರ ಬಿಸಿ ಓಕಳಿಪುರದ ವೃತ್ತವನ್ನು ಬಳಸುವ ಪ್ರಯಾಣಿಕರಿಗೆ ತಟ್ಟುತ್ತದೆ.

ರೈಲು ನಿಲ್ದಾಣದಿಂದ ಮೇಲ್ಸೇತುವೆ ಮೂಲಕ ಉದ್ಯಾನದವರೆಗೂ ಮೆರವಣಿಗೆಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ವಾಹನಗಳ ಸಂಚಾರವನ್ನು ಬಂದ್ ಮಾಡಲಾಗುತ್ತದೆ. ಪರಿಣಾಮ, ಓಕಳಿಪುರ ವೃತ್ತದಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ.

ಕೆಲ ವಾಹನಗಳನ್ನು, ಜೆಡಿಎಸ್ ಕಚೇರಿ ರಸ್ತೆ ಹಾಗೂ ಮಲ್ಲೇಶ್ವರದ ಸಂಪಿಗೆ ರಸ್ತೆಯತ್ತ ಕಳುಹಿಸಲಾಗುತ್ತದೆ. ಈ ಮಾರ್ಗದಲ್ಲೂ ದಟ್ಟಣೆ ಉಂಟಾಗಿ ವಾಹನಗಳು ನಿಂತಲೇ ನಿಲ್ಲಬೇಕಾಗುತ್ತದೆ.

‘ರಾಜ್ಯದ ವಿವಿಧ ಜಿಲ್ಲೆಗಳಿಂದ ಬರುವ ಜನ, ಅಧಿವೇಶನ ಹಾಗೂ ಇತರೆ ದಿನಗಳಂದು ಪ್ರತಿಭಟನೆ ನಡೆಸುತ್ತಾರೆ. ಇಂಥ ದಿನಗಳಂದು ವಿಪರೀತ ದಟ್ಟಣೆ ಇರುತ್ತದೆ. ಕಚೇರಿಗೆ ನಿಗದಿತ ಸಮಯಕ್ಕೆ ಹೋಗಲು ಸಾಧ್ಯವಾಗುವುದಿಲ್ಲ’ ಎಂದು ರಾಜಾಜಿನಗರದ ನಿವಾಸಿ ಎಸ್. ರಘುರಾವ್ ಹೇಳಿದರು.

‘ರಾಮಮಂದಿರ ಮೈದಾನದ ರಸ್ತೆಯಲ್ಲಿ ಸಾಗಿ ಓಕಳಿಪುರಕ್ಕೆ ಹೋಗುತ್ತೇನೆ. ದಟ್ಟಣೆಯಿಂದಾಗಿ ಅಲ್ಲಿಂದ ಮುಂದಕ್ಕೆ ಹೋಗಲು ಆಗುವುದಿಲ್ಲ. ಸಂಪಿಗೆ ರಸ್ತೆ ಮೂಲಕ ಹೋದರೂ ದಟ್ಟಣೆಯಲ್ಲಿ ಸಿಲುಕುತ್ತೇನೆ. ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆಯಲ್ಲಿ ಪ್ರತಿಭಟನಾ ಮೆರವಣಿಗೆಗಳು ನಡೆದರೆ ತೊಂದರೆ ಹೆಚ್ಚು’ ಎಂದೂ ತಿಳಿಸಿದರು.

ಸೇತುವೆಗಳ ನಿರ್ಮಾಣ ಕೆಲಸ ಪ್ರಗತಿಯಲ್ಲಿ: ‘ಓಕಳಿಪುರ ವೃತ್ತದಿಂದ ರೈಲು ನಿಲ್ದಾಣಕ್ಕೆ ಹೋಗಲು ಎರಡು ಮೇಲ್ಸೇತುವೆ ನಿರ್ಮಾಣ ಮಾಡಲಾಗುತ್ತಿದ್ದು, ಅದರ ಕೆಲಸ ಪ್ರಗತಿಯಲ್ಲಿದೆ. ಅದು ಪೂರ್ಣಗೊಂಡರೆ ದಟ್ಟಣೆ ಕಡಿಮೆಯಾಗಬಹುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಆಶಾವಾದ ವ್ಯಕ್ತಪಡಿಸಿದರು.

‘ಓಕಳಿಪುರ ವೃತ್ತದಲ್ಲಿ ಉಂಟಾಗುವ ದಟ್ಟಣೆ ನಿವಾರಣೆಗೆ ಸಾಕಷ್ಟು ಸಭೆಗಳನ್ನು ನಡೆಸಲಾಗಿದೆ. ಈ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಹುಡುಕಲಾಗುತ್ತಿದೆ. ಎಷ್ಟೇ ಪ್ರಯತ್ನಿಸಿದರೂ ಒಂದಿಲ್ಲೊಂದು ಸಮಸ್ಯೆಗಳು ಉದ್ಭವಿಸುತ್ತಿವೆ’ ಎಂದೂ ತಿಳಿಸಿದರು.

‘ಮಳೆ ನೀರು ಹರಿವಿಗೆ ಜಾಗ ಮಾಡಿ’

‘ಕೆಳ ಸೇತುವೆಗಳು ಇಳಿಜಾರಿನಲ್ಲಿದ್ದು, ಮಳೆ ಬಂದೊಡನೆ ಇಲ್ಲಿ ನೀರು ಹೆಚ್ಚಿನ ಪ್ರಮಾಣದಲ್ಲಿ ಹರಿಯುತ್ತದೆ. ಇಂಥ ನೀರು ಸರಾಗವಾಗಿ ಹರಿದು ಹೋಗಲು ಜಾಗ ಮಾಡಿದರೆ, ದಟ್ಟಣೆ ಸಮಸ್ಯೆ ಸ್ವಲ್ಪ ಕಡಿಮೆ ಆಗಲಿದೆ’ ಎಂದು ಸ್ಥಳೀಯ ನಿವಾಸಿಗಳು ತಿಳಿಸಿದರು.

‘ಕಾಮಗಾರಿ ನಡೆಯುವಾಗ ಮಾತ್ರ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸ್ಥಳಕ್ಕೆ ಭೇಟಿ ನೀಡುತ್ತಾರೆ. ಮೇಲ್ಸೇತುವೆ ಹಾಗೂ ಕೆಳ ಸೇತುವೆ ಮಾಡಿರುವುದಾಗಿ ಬೀಗುವ ಅವರೆಲ್ಲ, ಸದ್ಯದ ಪರಿಸ್ಥಿತಿಯಲ್ಲೂ ಸ್ಥಳಕ್ಕೆ ಭೇಟಿ ನೀಡಿ ಅವಲೋಕಿಸಬೇಕು. ಆಗ ಮಾತ್ರ ಜನರ ಕಷ್ಟ ತಿಳಿಯುತ್ತದೆ’ ಎಂದೂ ಹೇಳಿದರು.

‘ಪಿಐಎಲ್ ಹಾಕುವುದನ್ನು ವೃತ್ತಿ ಮಾಡಿಕೊಂಡಿದ್ದೀರಾ?’

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ’ನಾನು ಎಂಜಿನಿಯರಿಂಗ್ ಪದವಿ ಪಡೆದು ಸಮಾಜಕ್ಕೆ ಏನಾದರೂ ಸೇವೆ ಮಾಡಬೇಕು ಎಂಬ ಸದುದ್ದೇಶದಿಂದಲೇ ವಕೀಲಿ ವೃತ್ತಿ ಆಯ್ಕೆ ಮಾಡಿಕೊಂಡಿದ್ದೇನೆ. ಒಂದು ವೇಳೆ ನಾನು ಅನ್ಯ ಉದ್ದೇಶಗಳಿಂದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸುತ್ತಿದ್ದೇನೆ ಎಂದು ತಮಗೇನಾದೂ ಅನಿಸಿದರೆ ತಾವು ಯಾವುದೇ ತನಿಖೆಗೆ ಆದೇಶಿಸಿ ಸತ್ಯ ಸಂಗತಿ ಅರಿಯಬಹುದು...’

ತುಮಕೂರಿನ ದೇವರಾಯನ ದುರ್ಗ ಬೆಟ್ಟದಲ್ಲಿ ಅಕ್ರಮ ಗಣಿಗಾರಿಕೆ ಪ್ರಶ್ನಿಸಿ ತುಮಕೂರು ಜಿಲ್ಲೆಯ ಹುರಡಿಗೆರೆ ಹೋಬಳಿ ಕದರನಹಳ್ಳಿ ತಾಂಡಾದ ಯುವ ವಕೀಲ ಎಲ್. ರಮೇಶ್ ನಾಯಕ್ ಸಲ್ಲಿಸಿರುವ ಪಿಐಎಲ್ ಕಾಳಜಿ ಕುರಿತು ಮುಖ್ಯ ನ್ಯಾಯಮೂರ್ತಿಗಳು ಪ್ರಶ್ನಿಸಿದ ಪರಿಗೆ ರಮೇಶ್ ನಾಯಕ್ ಕೊಟ್ಟ ಉತ್ತರ ಇದು.

ವಿಚಾರಣೆ ಆರಂಭವಾಗುತ್ತಿದ್ದಂತೆಯೇ ಮುಖ್ಯ ನ್ಯಾಯಮೂರ್ತಿಗಳು, ‘ಪಿಐಎಲ್ ಹಾಕುವುದನ್ನೇ ವೃತ್ತಿ ಮಾಡಿಕೊಂಡಿದ್ದೀರಾ’ ಎಂದು ಪ್ರಶ್ನಿಸಿದರು.

ಇದಕ್ಕೆ ರಮೇಶ್ ನಾಯಕ್ ಆ ರೀತಿ ಇಲ್ಲ ಸ್ವಾಮಿ, ‘ನಾನು ಸಾರ್ವಜನಿಕ ಬದುಕಿನಲ್ಲಿ ತೊಡಗಿಸಿಕೊಳ್ಳಬೇಕೆಂಬ ಏಕೈಕ ಸದುದ್ದೇಶದಿಂದಲೇ ಸಾಫ್ಟ್‌ವೇರ್ ಎಂಜಿನಿಯರ್ ವೃತ್ತಿ ತೊರೆದು ಬಂದಿದ್ದೇನೆ. ಸಾರ್ವಜನಿಕ ಹಿತಾಸಕ್ತಿಯಿಂದ ಈತನಕ 30 ಅರ್ಜಿ ಸಲ್ಲಿಸಿ ನ್ಯಾಯ ಪಡೆಯುವ ದಾರಿ ತುಳಿದಿದ್ದೇನೆ. ಈ ಕುರಿತು ನ್ಯಾಯಾಲಯ ಯಾವುದೇ ತನಿಖೆ ನಡೆಸಬಹುದು’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಹಾಗಾದರೆ, ಈ ಪ್ರಕರಣದಲ್ಲಿ ಒಂದು ಲಕ್ಷ ರೂಪಾಯಿ ಭದ್ರತಾ ಠೇವಣಿ ಇಡಲು ಸಿದ್ಧರಿದ್ದೀರಾ’ ಎಂದು ಕೇಳಿ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿದೆ.

‘ವರ್ಗಾವಣೆಗೆ ರಾಜಕೀಯ ಹಸ್ತಕ್ಷೇಪ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಅಥವಾ ನಿಯೋಜನೆಯಲ್ಲಿ ನಡೆಯುವ ಹಸ್ತಕ್ಷೇಪಗಳು ಸಾರ್ವಜನಿಕ ಕಚೇರಿಗಳನ್ನು ರಾಜಕೀಕರಣಗೊಳಿಸಿದಂತೆ. ಅಂತೆಯೇ, ಇಂತಹ ಪ್ರವೃತ್ತಿಯು ಸಾರ್ವಜನಿಕ ದಕ್ಷತೆ ಮತ್ತು ಉತ್ತಮ ಆಡಳಿತಕ್ಕೆ ಗಂಡಾಂತರ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಅಧಿಕಾರಿಯೊಬ್ಬರ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಅರ್ಜಿಯನ್ನು ವಿಲೇವಾರಿ ಮಾಡಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತನ್ನ ಆದೇಶದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಶಾಸಕರೊಬ್ಬರು ರಾಜಕೀಯ ಹಸ್ತಕ್ಷೇಪ ಮಾಡಿದ ಕಾರಣ ಅರ್ಜಿದಾರರು ತಮನ್ನು ವರ್ಗಾವಣೆ ಮಾಡಿದ್ದ ಹುದ್ದೆ ವಹಿಸಿಕೊಳ್ಳಲು ಆಗಿಲ್ಲ. ಅರ್ಜಿದಾರರು ವರ್ತೂರು ಘಟಕದಲ್ಲಿ ನಿಯೋಜನೆಗೊಂಡಿದ್ದ ಹುದ್ದೆಯನ್ನು ನಿರಾಕರಿಸಿರುವುದು ಸರ್ಕಾರದ ವರ್ಗಾವಣೆ ನಿಯಮಗಳಿಗೆ ವಿರುದ್ಧವಾಗಿದೆ’ ಎಂದು ನ್ಯಾಯಪೀಠ ಹೇಳಿದೆ.

‘ಕೆಪಿಟಿಸಿಎಲ್ ತನ್ನ ಸಿಬ್ಬಂದಿಯನ್ನು ಎಸ್ಕಾಂಗಳಿಗೆ ವರ್ಗಾವಣೆ ಮಾಡುವ ವಿಶಿಷ್ಟ ನಿಯಮ ಅಳವಡಿಸಿಕೊಂಡಿದೆ. ಹೀಗಾಗಿ, ಕೆಪಿಟಿಸಿಎಲ್ ಆದೇಶ ನೀಡಿದ ನಂತರ ಎಸ್ಕಾಂ ಕೂಡಾ ಅಧಿಕಾರಿಗಳ ನಿಯೋಜನೆಗೆ ಮತ್ತೊಂದು ಆದೇಶ ಹೊರಡಿಸಬೇಕಾಗಿದೆ. ಇದು ಹಲವು ವಾರ ಮತ್ತು ತಿಂಗಳುಗಳನ್ನೇ ತೆಗೆದುಕೊಳ್ಳುವ ಪರಿಣಾಮ ಹತ್ತು ಹಲವು ವ್ಯಾಜ್ಯಗಳು ಸೃಷ್ಟಿಯಾಗುತ್ತಿವೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಅಧಿಕಾರಿಗಳ ಬೇಜವಾಬ್ದಾರಿ ಸಲ್ಲ’

‘ಅಕ್ರಮ ಗಣಿಗಾರಿಕೆ ಸ್ಥಗಿತಗೊಳಿಸಿದ್ದರೂ ಸರ್ಕಾರದ ಜಮೀನಿನಲ್ಲಿ ಗಣಿಗಾರಿಕೆ ನಡೆಸಿದವರ ವಿರುದ್ಧ ಯಾವುದೇ ಕ್ರಮ ಕೈಗೊಂಡ ಬಗ್ಗೆ ಕೋರ್ಟ್‌ಗೆ ಮಾಹಿತಿ ನೀಡಿಲ್ಲ. ಇದು ಅಧಿಕಾರಿಗಳ ಬೇಜವಾಬ್ದಾರಿ ನಡವಳಿಕೆ’ ಎಂದು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ತುಮಕೂರಿನ ಕೊರಟಗೆರೆ ತಾಲ್ಲೂಕಿನ ಬರ್ಕ ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆ ತಡೆ ಕೋರಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

‘ಈ ಹಿಂದಿನ ವಿಚಾರಣೆ ವೇಳೆ, ಪ್ರತಿವಾದಿಯಾದ ಕೊರಟಗೆರೆ ತಾಲ್ಲೂಕು ತಹಶೀಲ್ದಾರ್ ಅವರಿಗೆ ಸ್ಥಳ ಪರಿಶೀಲನೆ ನಡೆಸಲು ನಿರ್ದೇಶಿಸಲಾಗಿತ್ತು. ಒಂದು ವೇಳೆ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಕಂಡು ಬಂದಲ್ಲಿ ಕೂಡಲೇ ಅದನ್ನು ಸ್ಥಗಿತಗೊಳಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿತ್ತು. ಆದರೆ, ಅಧಿಕಾರಿ ಕಾನೂನು ಕ್ರಮ ಕೈಗೊಂಡ ಬಗ್ಗೆ ಕೋರ್ಟ್‌ಗೆ ವಿವರಣೆ ನೀಡಿಲ್ಲ’ ಎಂದು ಗರಂ ಆದ ನ್ಯಾಯಪೀಠ ವಿಚಾರಣೆ ಮುಂದೂಡಿ ಆದೇಶಿಸಿದೆ.

ಬೀದಿನಾಯಿ ಸಂತಾನ ನಿಯಂತ್ರಣ- ಇರಲಿ ಕಾಳಜಿ

ಪ್ರಜಾವಾಣಿ ವಾರ್ತೆ

ಬೀದಿನಾಯಿ ಸಂತಾನ ನಿಯಂತ್ರಣ- ಸಹಾಯವಾಣಿ

ವಲಯ	ಸಂಸ್ಥೆ	ಮೊಬೈಲ್ ಸಂಖ್ಯೆ
ಪೂರ್ವ/ ಬೊಮ್ಮನಹಳ್ಳಿ	ವಿಎಸ್‌ಎಡಬ್ಲ್ಯುಆರ್‌ಡಿ	9032959895/ 8080631070
ದಾಸರಹಳ್ಳಿ	ಅಭಿಲಾಷಾ	7019361837/ 9945604188
ದಕ್ಷಿಣ	ಕ್ಯೂಪಾ	8317356697
ಆರ್.ಆರ್.ನಗರ	ಆಸ್ರ	9964193210
ಯಲಹಂಕ	ಆಸ್ರ	8050721033
ಮಹದೇವಪುರ	ಆಸ್ರ	6360782691
ಪಶ್ಚಿಮ ವಲಯ	ಸರ್ವೋದಯ	9886593140/7975008214



ಪ್ರಜಾವಾಣಿ CUPA ಸಹಯೋಗ

ಬೆಂಗಳೂರು: ಬೀದಿನಾಯಿಗಳಿಗೂ ನೆಮ್ಮದಿಯ ಬದುಕು ಕಲ್ಪಿಸುವುದು ಸಾಧ್ಯವಾಗಬೇಕಾದರೆ ಅವುಗಳ ಸಂತಾನ ವೃದ್ಧಿಯನ್ನು ನಿಯಂತ್ರಿಸುವುದು ಬಲು ಮುಖ್ಯ. ಆದರೆ, ಈ ಕಾರ್ಯವನ್ನು ಅತ್ಯಂತ ವೈಜ್ಞಾನಿಕವಾಗಿ ಹಾಗೂ ಅವುಗಳಿಗೆ ಹಿಂಸೆ ಆಗದ ರೀತಿಯಲ್ಲಿ ನಡೆಸುವುದು ಸವಾಲಿನ ಕೆಲಸ.

ನಾಗರಿಕರು ಬೀದಿನಾಯಿಗಳ ಬಗ್ಗೆಯೂ ಒಂದಿನಿತು ಆಸ್ಥೆ ತೋರಿಸಿದರೆ ಈ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಬಹುದು ಎನ್ನುತ್ತಾರೆ ಪ್ರಾಣಿಪ್ರಿಯರು.

ಬೀದಿನಾಯಿಗಳ ಸಂತಾನ ನಿಯಂತ್ರಣಕ್ಕಾಗಿ ಬಿಬಿಎಂಪಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನಗರದ 198 ವಾರ್ಡ್‌ಗಳಲ್ಲಿರುವ ಬೀದಿನಾಯಿಗಳನ್ನು ಹಿಡಿದು ಅವುಗಳಿಗೆ ವೈಜ್ಞಾನಿಕವಾಗಿ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸುವುದಕ್ಕೆಂದೇ ಏಳು ವಲಯಗಳಿಗೆ ತಲಾ ಒಂದು ಸಂಸ್ಥೆಯನ್ನು ನೇಮಿಸಿದೆ.

‘ಸಂತಾನ ಶಕ್ತಿಹರಣ ಶಸ್ತ್ರ ಚಿಕಿತ್ಸೆ ನಡೆಸಲು ಬೀದಿನಾಯಿಗಳನ್ನು ಹಿಡಿಯುವುದು ಸವಾಲಿನ ಕೆಲಸ. ಸ್ವಲ್ಪ ಸುಳಿವು ಸಿಕ್ಕರೂ ಹಿಡಿಯುವವರ ಕೈಗೆ ಸಿಗದೇ ಅವು ತಪ್ಪಿಸಿಕೊಳ್ಳುತ್ತವೆ. ಆಹಾರ ನೀಡಿ ಅವುಗಳ ಜೊತೆ ಗೆಳೆತನ ಬೆಳೆಸಿಕೊಂಡವರು ನೆರವಾದರೆ ಬೀದಿ ನಾಯಿಗಳನ್ನು ಹಿಡಿಯುವುದು ಸುಲಭ. ಈಗಾಗಲೇ ಈ ಮೂಕಪ್ರಾಣಿಗಳ ಬಗ್ಗೆ ಕಾಳಜಿ ಹೊಂದಿರುವ ಅನೇಕ ನಾಗರಿಕರು ಈ ಕಾರ್ಯಕ್ಕೆ ಬಿಬಿಎಂಪಿ ನೇಮಿಸಿರುವ ಸಂಸ್ಥೆಗಳಿಗೆ ನೆರವಾಗುತ್ತಿದ್ದಾರೆ. ಇಂತಹ ಕಾಳಜಿ ಪ್ರತಿಯೊಬ್ಬ ನಾಗರಿಕರಲ್ಲೂ ಮೂಡಬೇಕು’ ಎನ್ನುತ್ತಾರೆ ಕ್ಯೂಪಾ ಸಂಸ್ಥೆಯ ಟ್ರಸ್ಟಿ ಶೀಲಾ ರಾವ್. ಕ್ಯೂಪಾ ಸಂಸ್ಥೆಯು ಬಿಬಿಎಂಪಿಯ ದಕ್ಷಿಣ ವಲಯದಲ್ಲಿ ಇಂತಹ ಶಸ್ತ್ರಚಿಕಿತ್ಸಾ ಕೇಂದ್ರವನ್ನು ನಡೆಸುತ್ತಿದೆ.

‘ಶಸ್ತ್ರಚಿಕಿತ್ಸೆ ನಡೆಸಿದ ನಾಯಿಗೆ ವಿಶೇಷ ಆರೈಕೆ ಬೇಕು. ಹಾಗಾಗಿ ಶಸ್ತ್ರಚಿಕಿತ್ಸೆ ನಡೆಸಿ ಬಳಿಕ ಮೂರು ದಿನಗಳ ಕಾಲ ಅವುಗಳ ಬಗ್ಗೆ ನಿಗಾ ವಹಿಸುತ್ತೇವೆ. ಯಾವುದೇ ಅಪಾಯ ಇಲ್ಲ ಎಂಬುದು ಖಾತರಿಯಾದ ಬಳಿಕವಷ್ಟೇ ಅವುಗಳನ್ನು ಹಿಡಿದ ಜಾಗದಲ್ಲೇ ಮರಳಿ ಬಿಡುತ್ತೇವೆ’ ಎಂದು ಅವರು ತಿಳಿಸಿದರು.

‘ಹೆಣ್ಣು ನಾಯಿ ಬೆದೆಗೆ ಬಂದಾಗ ಅದರ ಜನನಾಂಗದಲ್ಲಿ ರಕ್ತದ ಕಲೆ ಕಾಣಿಸುತ್ತದೆ. ಬೆದೆಗೆ ಬಂದಿರುವ ನಾಯಿಗೆ ಹಾಗೂ ಗರ್ಭ ಧರಿಸಿರುವ ನಾಯಿಗಳಿಗೆ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸುವುದಿಲ್ಲ’ ಎಂದು ಹೇಳಿದರು.

‘ಪ್ರಜಾವಾಣಿ’– ಕ್ಯೂಪಾ ಅಭಿಯಾನಕ್ಕೆ ಕೈಜೋಡಿಸಿ

ಬೀದಿಪ್ರಾಣಿಗಳನ್ನು ದ್ವೇಷಿಸುವವರ ದೃಷ್ಟಿಕೋನ ಬದಲಾಯಿಸಲು ಹಾಗೂ ಅವುಗಳ ಬಗ್ಗೆ ಕಾಳಜಿ ವಹಿಸುವ ಜನರು ಮತ್ತು ಸಂಸ್ಥೆಗಳ ಜೊತೆ ಕೈಜೋಡಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ‘ಪ್ರಜಾವಾಣಿ’ಯು ಕ್ಯೂಪಾ ಸಂಸ್ಥೆ ಜೊತೆ ಸೇರಿ ಅಭಿಯಾನ ಆರಂಭಿಸಿದೆ.

ಮೂಕ ಪ್ರಾಣಿಗಳ ಬದುಕಿನಲ್ಲೂ ಭರವಸೆ ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ತಾವೂ ಕೈಜೋಡಿಸಬಹುದು. ಸ್ವಯಂಸೇವಕರಾಗುವ ಮೂಲಕ ಬೀದಿ ಪ್ರಾಣಿಗಳ ರಕ್ಷಿಸಲು, ಆರೈಕೆ ಮಾಡಲು ಹಾಗೂ ಅವುಗಳ ಮೇಲಾಗುವ ದೌರ್ಜನ್ಯ ತಪ್ಪಿಸಲು ನೆರವಾಗಬಹುದು. ಬೀದಿಪಾಲಾದ ಪ್ರಾಣಿಗಳನ್ನು ದತ್ತು ಪಡೆದು ಸಾಕಬಹುದು. ಬೀದಿ ಪ್ರಾಣಿಗಳ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ನೆರವಾಗುವ ಈ ಅಭಿಯಾನದಲ್ಲಿ ಪಾಲ್ಗೊಳ್ಳುವಿರಾದರೆ, ಇಲ್ಲಿರುವ ಕೊಂಡಿಯನ್ನು (bit.ly/PVCUPA) ಕ್ಲಿಕ್ಕಿಸಿ ನೋಂದಾಯಿಸಿಕೊಳ್ಳಬಹುದು.

‘ಸ್ಥಳಾಂತರ ಅಪಾಯಕಾರಿ’

‘ಬೀದಿನಾಯಿಗಳನ್ನು ಯಾವ ಪ್ರದೇಶದಲ್ಲಿ ಹಿಡಿಯಲಾಗುತ್ತದೆಯೋ, ಶಸ್ತ್ರಚಿಕಿತ್ಸೆ ಬಳಿಕ ಅದೇ ಜಾಗದಲ್ಲೇ ಬಿಡಬೇಕು. ಅವುಗಳನ್ನು ಬೇರೆ ಸ್ಥಳಗಳಲ್ಲಿ ಬಿಡುವುದು ಅಪಾಯಕಾರಿ’ ಎಂದು ಶೀಲಾ ರಾವ್ ತಿಳಿಸಿದರು.

‘ಸ್ಥಳ ಬದಲಾದರೆ ನಾಯಿಗಳು ಗಾಬರಿಗೊಳಗಾಗುತ್ತವೆ. ನಿರ್ದಿಷ್ಟ ಸ್ಥಳದಲ್ಲಿ ವಾಸಿಸುವ ಬೀದಿ ನಾಯಿಗಳು ಆ ಪ್ರದೇಶಕ್ಕೆ ಬಂದು ಸೇರುವ ಹೊಸ ನಾಯಿಯ ಮೇಲೆ ದಾಳಿ ನಡೆಸುತ್ತವೆ. ಇಂತಹ ಸಂದರ್ಭದಲ್ಲಿ ಅಭದ್ರತೆ ಎದುರಿಸುತ್ತಿರುವ ಬೀದಿ ನಾಯಿಗಳು ಇತರರ ಮೇಲೆ ದಾಳಿ ನಡೆಸುವ ಅಥವಾ ಕಚ್ಚುವ ಸಾಧ್ಯತೆ ಹೆಚ್ಚು. ನಾಯಿಗಳನ್ನು ಸ್ಥಳಾಂತರ ಮಾಡುವುದು ಕಾನೂನು ಬಾಹಿರವೂ ಆಗಿದೆ’ ಎಂದು ಅವರು ವಿವರಿಸಿದರು.

ಸಾದಹಳ್ಳಿ ಕಲ್ಲುಗಣಿಗಾರಿಕೆ ಸ್ಥಗಿತ: ಹೈಕೋರ್ಟ್‌ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ನಗರದ ಹೊರವಲಯದಲ್ಲಿರುವ ಸಾದಹಳ್ಳಿಯಲ್ಲಿ ನಡೆಯುತ್ತಿದ್ದ ಕಲ್ಲು ಗಣಿಗಾರಿಕೆ ಚಟುವಟಿಕೆಯನ್ನು ಸ್ಥಗಿತಗೊಳಿಸಲಾಗಿದೆ’ ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ತಿಳಿಸಿದೆ.

ಕಲ್ಲು ಗಣಿಗಾರಿಕೆ ಪ್ರಶ್ನಿಸಿ ಸಾದಹಳ್ಳಿಯ ಹಾಲಿವುಡ್ ಟೌನ್‌ನ ಹಿರಿಯ ನಾಗರಿಕರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು, ‘ಸಾದಹಳ್ಳಿ ಕಲ್ಲು ಗಣಿಗಾರಿಕೆ ಘಟಕದ ಕಾರ್ಯ ನಿರ್ವಹಣೆಯನ್ನು ಈಗಾಗಲೇ ಸ್ಥಗಿತಗೊಳಿಸಲಾಗಿದೆ. ಇದರಿಂದ, ಈ ಪ್ರದೇಶದ ಸುತ್ತಮುತ್ತ ನಾಗರಿಕರಿಗೆ ಸದ್ಯ ಯಾವುದೇ ತೊಂದರೆ ಎದುರಾಗುತ್ತಿಲ್ಲ’ ಎಂದು ನ್ಯಾಯಪೀಠಕ್ಕೆ ಸ್ಪಷ್ಟಪಡಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ಕಲ್ಲು ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದೆ ಎಂಬ ಸರ್ಕಾರದ ವಿವರಣೆಯಿಂದಾಗಿ ಅರ್ಜಿ ವಿಚಾರಣೆ ಮುಂದುವರಿಸುವ ಅಗತ್ಯವಿಲ್ಲ’ ಎಂದು ಅಭಿಪ್ರಾಯಪಟ್ಟು ಅರ್ಜಿ ವಜಾಗೊಳಿಸಿತು.

ಏನಿದು ಅರ್ಜಿ?: ‘ದೇವನಹಳ್ಳಿ ತಾಲ್ಲೂಕಿನ ಹಾಲಿವುಡ್ ಟೌನ್ ಮತ್ತು ಸ್ವಿಸ್ ಟೌನ್ ವಸತಿ ಬಡಾವಣೆಯಿಂದ 100 ಮೀಟರ್ ಅಂತರದಲ್ಲಿರುವ ಸಾದಹಳ್ಳಿ ಕಲ್ಲು ಗಣಿಗಾರಿಕೆ ಘಟಕದಲ್ಲಿ 2020ರ ನವೆಂಬರ್‌ನಿಂದ ಗಣಿಗಾರಿಕೆ ಚಟುವಟಿಕೆ ನಡೆಯುತ್ತಿದೆ. ಗಣಿಗಾರಿಕೆ ಧೂಳಿನಿಂದ ಸುತ್ತಮುತ್ತಲ ಬಡಾವಣೆ ಸೇರಿದಂತೆ ಜನಪ್ರದೇಶಗಳಲ್ಲಿ ಹಿರಿಯ ನಾಗರಿಕರು ವಿವಿಧ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಆದ್ದರಿಂದ, ಕಲ್ಲು ಗಣಿಗಾರಿಕೆ ಘಟಕದ ಕಾರ್ಯಚರಣೆ ನಿಲ್ಲಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಕೋವಿಡ್ ಪೂರ್ವದಲ್ಲಿದ್ದಂತೆ ಟಿಕೆಟ್ ದರ ನಿಗದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಎಕ್ಸ್‌ಪ್ರೆಸ್ ಸೇರಿದಂತೆ ಎಲ್ಲ ರೈಲುಗಳ ಟಿಕೆಟ್ ದರಗಳನ್ನು ಕೋವಿಡ್–19 ಪಿಡುಗು ಕಾಣಿಸಿಕೊಳ್ಳುವುದಕ್ಕೂ ಮೊದಲು ಇದ್ದಂತೆಯೇ ನಿಗದಿ ಮಾಡಿ ಭಾರತೀಯ ರೈಲ್ವೆ ಶುಕ್ರವಾರ ಆದೇಶ ಹೊರಡಿಸಿದೆ.

ಈ ದರಗಳು ತಕ್ಷಣದಿಂದ ಜಾರಿಗೆ ಬರಲಿವೆ ಎಂದು ರೈಲ್ವೆ ತಿಳಿಸಿದೆ. ಕೆಲವು ವರ್ಗಗಳ ವಿಶೇಷ ರೈಲುಗಳ ಟಿಕೆಟ್‌ಗೆ ಮಾಮೂಲಿ ದರಕ್ಕಿಂತ ಗರಿಷ್ಠ ಶೇ 30ರಷ್ಟು ಹೆಚ್ಚು ದರ ನಿಗದಿ ಮಾಡಲಾಗಿತ್ತು.

‘ಭೂಕಬಳಿಕೆ ಆರೋಪ ಸಾಬೀತುಪಡಿಸಿ’

ಸಿರಿಗೆರೆಯ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸವಾಲು

ಪ್ರಜಾವಾಣಿ ವಾರ್ತೆ

ಉಚ್ಚಂಗಿದುರ್ಗ (ಬಳ್ಳಾರಿ ಜಿಲ್ಲೆ): ‘ಈಚೆಗೆ ಭೂ ಕಬಳಿಕೆ ಹಾಗೂ ₹ 19 ಕೋಟಿ ಪಡೆದಿರುವ ಹಣದ ಲೆಕ್ಕವನ್ನು ನೀಡುತ್ತಿಲ್ಲ ಎನ್ನುವ ಆರೋಪ ಮಾಡಿರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರಿಂದ ಮಠ ಹಾಗೂ ಮಠದ ಭಕ್ತರಿಗೆ ತೀವ್ರ ನೋವುಂಟಾಗಿದೆ. ವಿಡಿಯೊ ಹರಿಬಿಟ್ಟವರು ನ. 19ರೊಳಗೆ ಸಾಕ್ಷ್ಯ ಸಮೇತ ರುಜುವಾತು ಪಡಿಸುವಂತೆ ಮಠದ ವತಿಯಿಂದ ನ. 11ರಂದು ನೋಟಿಸ್ ಜಾರಿ ಮಾಡಲಾಗಿದೆ. ಯಾರು, ಯಾವಾಗ, ಎಲ್ಲಿ ನಗದು, ಚೆಕ್, ಡಿಡಿ ಹೀಗೆ ಯಾವುದರ ಮೂಲಕ ಹಣವನ್ನು ನೀಡಿದ್ದಾರೆ’ ಎಂದು ಸ್ಪಷ್ಟಪಡಿಸಬೇಕು ಎಂದು ಸಿರಿಗೆರೆಯ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸವಾಲೆಸೆದರು.

ಸಮೀಪದ ಶ್ರೀನಿವಾಸಪುರ ಗ್ರಾಮದಲ್ಲಿ ಶುಕ್ರವಾರ ನೂತನವಾಗಿ ನಿರ್ಮಿಸಿರುವ ಚೌಡೇಶ್ವರಿ ದೇವಸ್ಥಾನ ಉದ್ಘಾಟನೆ ಹಾಗೂ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ಭಕ್ತರು ನಿರ್ಮಲ ಮನಸ್ಸಿನಿಂದ ನೀಡಿರುವ ₹5 ಕೋಟಿ ಹಣ ಮಠದ ಖಾತೆಯಲ್ಲಿ ಈಗಲೂ ಇದೆ. ಕೇಳದೇ ನೀಡುವ ಭಕ್ತರು ರಾಜ್ಯದಾದ್ಯಂತ ಇರುವಾಗ ಹಣದ ಅವಶ್ಯಕತೆ ನಮಗೇಕೆ’ ಎಂದು ಅವರು ಪ್ರಶ್ನಿಸಿದರು.

‘ಮಠದ ಆಗುಹೋಗುಗಳ ನೋಡಿಕೊಳ್ಳುತ್ತಿದ್ದ ಸಿಬ್ಬಂದಿಯೊಬ್ಬರು ಮಠವನ್ನು ವಾಣಿಜ್ಯ ಕೇಂದ್ರವಾಗಿಸಲು ಮುಂದಾಗಿದ್ದರಿಂದ ಅವರನ್ನು ಮಠದಿಂದ ಹೊರದಬ್ಬಲಾಯಿತು. ಅಸ್ತಿತ್ವ ಕಳೆದುಕೊಂಡ ನಂತರ ಗುಂಪುಗಾರಿಕೆ ಮೂಲಕ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ’ ಎಂದು ಹೇಳಿದರು.



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಸಮಾರಂಭದಲ್ಲಿ ಪಕ್ಷದ ಅಸಂಘಟಿತ ಕಾರ್ಮಿಕರ ವಿಭಾಗದ ನೂತನ ಅಧ್ಯಕ್ಷ ಮಂಜುನಾಥ್ ಮತ್ತು ರಾಜ್ಯ ಪದಾಧಿಕಾರಿಗಳ ಪದಗ್ರಹಣ ನಡೆಯಿತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷರಾದ ಆರ್. ಧ್ರುವನಾರಾಯಣ, ರಾಮಲಿಂಗಾರೆಡ್ಡಿ, ಶಾಸಕ ರಘುಮೂರ್ತಿ, ಪಕ್ಷದ ಮುಖಂಡರಾದ ಕೆ.ಎಚ್. ಮುನಿಯಪ್ಪ, ಚಂದ್ರಪ್ಪ, ಪುಷ್ಪಾ ಅಮರನಾಥ್ ಇದ್ದರು –ಪ್ರಜಾವಾಣಿ ಚಿತ್ರ

ಆ.25ರಂದು ನಂದಿಗಿರಿಧಾಮದಲ್ಲಿ ದಿಬ್ಬ ಕುಸಿತ: ಪ್ರವೇಶ ಬಂದ್

ನಂದಿಬೆಟ್ಟ: ವಾರದೊಳಗೆ ಪ್ರವೇಶಕ್ಕೆ ಮುಕ್ತ?

• ಡಿ.ಎಂ.ಕುರ್ಕೆ ಪ್ರಶಾಂತ್



ಕಾಮಗಾರಿ ಪೂರ್ಣವಾಗಿರುವ ನಂದಿಗಿರಿಧಾಮದ ರಸ್ತೆ –ಪ್ರಜಾವಾಣಿ ಚಿತ್ರ

ಚಿಕ್ಕಬಳ್ಳಾಪುರ: ಪ್ರಸಿದ್ಧ ನಂದಿಗಿರಿಧಾಮದ ಪ್ರವೇಶಕ್ಕೆ ನ.20ರಿಂದ ಮುಕ್ತ ಅವಕಾಶ ದೊರೆಯುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ.

ದಿಬ್ಬ ಕುಸಿದ ಕಾರಣ ಮೂರು ತಿಂಗಳಿಂದ ನಂದಿಬೆಟ್ಟಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ದಿಬ್ಬ ಕುಸಿದ ಸ್ಥಳದಲ್ಲಿದ್ದ ರಸ್ತೆಯ ಕಾಮಗಾರಿ ಬಹುತೇಕ ಪೂರ್ಣವಾಗಿದ್ದು, ಕ್ಯೂರಿಂಗ್ ನಡೆಯುತ್ತಿದೆ. ಲೋಕೋಪಯೋಗಿ ಇಲಾಖೆಯ ಮೂಲಗಳ ಪ್ರಕಾರ ನ.20ರ ವೇಳೆಗೆ ಕ್ಯೂರಿಂಗ್ ಪೂರ್ಣವಾಗಲಿದ್ದು, ಕಾರು ಸೇರಿದಂತೆ ಇತರ ವಾಹನಗಳ ಸಂಚಾರಕ್ಕೆ ರಸ್ತೆ ಮುಕ್ತವಾಗಲಿದೆ.

ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಕಾಮಗಾರಿಯ ಸ್ಥಳಕ್ಕೆ ಆಗಾಗ್ಗೆ ಭೇಟಿ ನೀಡಿ ಕ್ಯೂರಿಂಗ್ ಸಹ ಪರಿಶೀಲಿಸುತ್ತಿದ್ದಾರೆ. ಎಲ್ಲವೂ ಅಂದುಕೊಂಡ ರೀತಿಯಲ್ಲಿ ನಡೆದರೆ 8 ದಿನದಲ್ಲಿ ಪ್ರವಾಸಿಗರಿಗೆ ಗಿರಿಧಾಮ ಪ್ರವೇಶದ ಬಾಗಿಲು ತೆರೆಯಲಿದೆ. ಜಿಲ್ಲೆಯ ಜನರಷ್ಟೇ ಅಲ್ಲ ಬೆಂಗಳೂರಿಗರೂ ನಂದಿಗಿರಿಧಾಮದ ಪ್ರವೇಶಕ್ಕೆಕಾತರದಿಂದಕಾಯುತ್ತಿದ್ದಾರೆ.

ಆ.25ರಂದು ನಂದಿಗಿರಿಧಾಮದಲ್ಲಿ ದಿಬ್ಬ ಕುಸಿಯಿತು. ಅಂದಿನಿಂದ ಗಿರಿಧಾಮದ ಪ್ರವೇಶದ ಹಾದಿಯೂ ಬಂದ್ ಆಯಿತು. ಆರಂಭದಲ್ಲಿ 20ದಿನಗಳಲ್ಲಿ ಮತ್ತೆ ಪ್ರವೇಶ ಆರಂಭವಾಗುತ್ತದೆ ಎಂದು ಜಿಲ್ಲಾಡಳಿತ ತಿಳಿಸಿತ್ತು. ಆದರೆ ಕಾಮಗಾರಿ, ಪರಿಶೀಲನೆ ಇತ್ಯಾದಿ ಕಾರಣದಿಂದ ದೀರ್ಘ ಅವಧಿ ತೆಗೆದುಕೊಂಡಿದೆ.

ಲೋಕೋಪಯೋಗಿ ಇಲಾಖೆ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಜಯಪ್ರಸಾದ್ ಸೇರಿದಂತೆ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸ್ಟೀಲ್ ಬ್ರಿಡ್ಜ್ ನಿರ್ಮಾಣದ ಬಗ್ಗೆ ಮಾತುಕತೆ ನಡೆಸಿದ್ದರು. ಸೆಪ್ಟೆಂಬರ್‌ನಲ್ಲಿ ಗಿರಿಧಾಮ ರಸ್ತೆ ಕಾಮಗಾರಿಗೆ ರಾಜ್ಯ ಸರ್ಕಾರ ₹ 80 ಲಕ್ಷ ಬಿಡುಗಡೆ ಮಾಡಿತು.

ನಂದಿಗಿರಿಧಾಮದ ಪ್ರವೇಶದ ಹಾದಿ ಬಂದ್ ಆಗಿದ್ದು ಚಾರಣ ಪ್ರಿಯರು, ಪ್ರವಾಸಿಗರಲ್ಲಿ ನಿರಾಸೆಗೆ ಕಾರಣವಾಗಿತ್ತು. ಪ್ರವೇಶವಿಲ್ಲದಿದ್ದರೂ ಗಿರಿಧಾಮದತ್ತ ನಿತ್ಯವೂ ಪ್ರವಾಸಿಗರು ಎಡತಾಕುತ್ತಿದ್ದರು. ಪೊಲೀಸರು ಅವಳವಡಿಸಿರುವ ಬ್ಯಾರಿಕೇಡ್‌ವರೆಗೂ ತಲುಪಿ ನಿರಾಸೆಯಿಂದ ವಾಪಸಾಗುತ್ತಿದ್ದರು.

‘ಪರಿಶೀಲಿಸಿದ ನಂತರ ತೀರ್ಮಾನ’

ಕಾಮಗಾರಿ ಪೂರ್ಣವಾಗಿದೆ. ಕ್ಯೂರಿಂಗ್ ನಡೆಯುತ್ತಿದೆ. ಲೋಕೋಪಯೋಗಿ ಇಲಾಖೆಯಿಂದ ಮಾಹಿತಿ ಪಡೆದು ಸ್ಥಳಕ್ಕೆ ಭೇಟಿ ನೀಡುತ್ತೇನೆ. ಎಲ್ಲ ರೀತಿಯ ಪರಿಶೀಲನೆ ನಂತರ ಹಾಗೂ ಅಧಿಕಾರಿಗಳ ಜತೆ ಮಾತುಕತೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಆರ್.ಲತಾ ‘ಪ್ರಜಾವಾಣಿ’ಗೆ ತಿಳಿಸಿದರು.

ಮೇಲುಕೋಟೆ; ವೈಭವದ ರಾಜಮುಡಿ ಉತ್ಸವ

ಪ್ರಜಾವಾಣಿವಾರ್ತೆ

ಮೇಲುಕೋಟೆ (ಮಂಡ್ಯ): ಚೆಲುವನಾರಾಯಣ ಸ್ವಾಮಿಗೆ ಮೈಸೂರು ರಾಜ ಒಡೆಯರ್ ಸಮರ್ಪಿಸಿದ ವಜ್ರಖಚಿತ ರಾಜಮುಡಿ ಕಿರೀಟ ಅಳವಡಿಸಿ ಶುಕ್ರವಾರ ರಾತ್ರಿ ಉತ್ಸವ ನೆರವೇರಿಸಲಾಯಿತು.

ಶ್ರೀದೇವಿ- ಭೂದೇವಿ ಸಮೇತನಾದ ಸ್ವಾಮಿಗೆ ಅಲಂಕಾರಮಾಡಿ ಶಂಖ, ಚಕ್ರ, ಗಧಾ, ಪದ್ಮ, ಶಿರಚಕ್ರ, ಮೈಸೂರು ಲಾಂಛನದ ಗಂಡಭೇರುಂಡ ಪದಕ ಸೇರಿ 14 ಬಗೆಯ ವಜ್ರಖಚಿತ ಆಭರಣಗಳನ್ನು ತೊಡಿಸಿ ಮಹಾ ಮಂಗಳಾರತಿ ಮಾಡಲಾಯಿತು.

ಉತ್ಸವವನ್ನು ದೇವಾಲಯದ ಒಳಭಾಗಕ್ಕೆ ಸೀಮಿತವಾಗಿಸುವಂತೆ ಜಿಲ್ಲಾಧಿಕಾರಿ ಮೊದಲು ಆದೇಶಿಸಿದ್ದರು. ನಂತರ, ಧಾರ್ಮಿಕ ದತ್ತಿ ಆಯುಕ್ತರು ನೀಡಿದ ನಿರ್ದೇಶನದಂತೆ ಪರಿಷ್ಕೃತ ಆದೇಶ ಹೊರಡಿಸಿ ರಾಜಮುಡಿ ಉತ್ಸವವನ್ನು ದೇವಾಲಯದ ಹೊರಪ್ರಾಕಾರದಲ್ಲಿ ದಿವ್ಯಪ್ರಬಂಧ ಪಾರಾಯಣದೊಂದಿಗೆ ನಡೆಸಲಾಯಿತು.

ಪಾಂಡವಪುರ ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ ನೇತೃತ್ವದಲ್ಲಿ ಮಂಡ್ಯ ಜಿಲ್ಲಾ ಖಜಾನೆಯಿಂದ ರಾಜಮುಡಿ ತಿರುವಾಭರಣ ಪೆಟ್ಟಿಗೆ ತಂದು ಪರಿಶೀಲಿಸಿ ಸ್ಥಾನಿಕರು, ಅರ್ಚಕ, ಪರಿಚಾರಕ ಕಾವಲುಗಾರರ ವಶಕ್ಕೆ ನೀಡಲಾಯಿತು.

ದೇವಾಲಯದ ಹೊರ ಪ್ರಾಕಾರದಲ್ಲಿ ನಡೆದ ರಾಜಮುಡಿ ಉತ್ಸವದಲ್ಲಿ ಪಾಂಡವಪುರ ತಹಶೀಲ್ದಾರ್ ಪ್ರಮೋದ್ ಪಾಟೀಲ್, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಂಗಳಮ್ಮ, ಎಸ್‌ಐ ಗಣೇಶ್, ಭಕ್ತರು ದೇವರ ದರ್ಶನ ಮಾಡಿದರು.

ವೈದ್ಯರ ಸಮಯ ಪ್ರಜ್ಞೆಯಿಂದ ಬದುಕುಳಿದ ಶಿಶು

ಪ್ರಜಾವಾಣಿ ವಾರ್ತೆ

ಗದಗ: ಹೃದಯಾಘಾತದಿಂದ ಗರ್ಭಿಣಿ ಮೃತಪಟ್ಟರೂ ವೈದ್ಯರ ಸಮಯಪ್ರಜ್ಞೆಯಿಂದ ಆಕೆಗೆ ಶಸ್ತ್ರಚಿಕಿತ್ಸೆ ಮಾಡಿ ಹೊಟ್ಟೆಯಿಂದ ಮಗುವನ್ನು ಜೀವಂತವಾಗಿ ಹೊರತೆಗೆದ ಅಪರೂಪದ ಘಟನೆ ನಗರದ ದಂಡಪ್ಪ ಮಾನ್ವಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಇತ್ತೀಚೆಗೆ ನಡೆದಿದ್ದು, ತಡವಾಗಿ ತಿಳಿದಿದೆ.

‘ವೈದ್ಯರ ಸಮಯಪ್ರಜ್ಞೆ ಹಾಗೂ ಮೃತ ಗರ್ಭಿಣಿಯ ಸಂಬಂಧಿಕರ ಸಹಕಾರದಿಂದ ಮಗುವಿನ ಜೀವ ಉಳಿದಿದೆ’ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಕರೀಗೌಡರ ತಿಳಿಸಿದ್ದಾರೆ.

ಗದಗ ಜಿಲ್ಲೆ ಗಜೇಂದ್ರಗಡ ತಾಲ್ಲೂಕಿನ ಮುಶಿಗೇರಿಯ ಅನ್ನಪೂರ್ಣ ಅಬ್ಬಿಗೇರಿ ಲೋ ಬಿಪಿ ಹಾಗೂ ಮೂರ್ಛೆ ರೋಗದಿಂದ ಬಳಲುತ್ತಿದ್ದರು. ತುಂಬು ಗರ್ಭಿಣಿಯಾಗಿದ್ದ ಅವರಿಗೆ ನ.4ರಂದು ಬೆಳಿಗ್ಗೆ ಆರೋಗ್ಯದಲ್ಲಿ ಏರುಪೇರಾಗಿತ್ತು. ಕುಟುಂಬದವರು ತಕ್ಷಣವೇ ಆಕೆಯನ್ನು ಕರೆದುಕೊಂಡು ಊರಿಂದ ಹೊರಟರಾದರೂ ಆಸ್ಪತ್ರೆಗೆ ಬರುವಷ್ಟರಲ್ಲಿ ಬಹುತೇಕ ಸಾಯುವ ಹಂತದಲ್ಲಿದ್ದರು. ಆ ಸಂದರ್ಭದಲ್ಲಿ ಗರ್ಭಿಣಿಯ ಕಡೆಯವರು ಒಪ್ಪಿಗೆ ನೀಡಿದ್ದರಿಂದ 30 ನಿಮಿಷದೊಳಗೆ ಶಸ್ತ್ರಚಿಕಿತ್ಸೆ ಮಾಡಿ ವೈದ್ಯರು ಮಗುವನ್ನು ಹೊರತೆಗೆದಿದ್ದಾರೆ.

ದೇವು ಪತ್ತಾರ್, ವಿದ್ಯಾರಶ್ಮಿಗೆ ಫೆಲೋಶಿಪ್

ಬೆಂಗಳೂರು: ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ 2021ನೇ ಸಾಲಿನ ಫೆಲೋಶಿಪ್ ಘೋಷಿಸಿದ್ದು, ಗೋಕಾಕರ ಮುನ್ನುಡಿಗಳ ಅಧ್ಯಯನಕ್ಕೆ ದೇವು ಪತ್ತಾರ್ ಮತ್ತು ಗೋಕಾಕರ ಕುರಿತ ಕವಿತೆಗಳ ಅಧ್ಯಯನಕ್ಕೆ ವಿದ್ಯಾರಶ್ಮಿ ಪೆಲತ್ತಡ್ಕ ಆಯ್ಕೆಯಾಗಿದ್ದಾರೆ.

ಈ ಫೆಲೋಶಿಪ್ ₹10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಟ್ರಸ್ಟ್‌ನ ಅಧ್ಯಕ್ಷರಾದ ವೈ.ಎನ್. ಗಂಗಾಧರ ಶೆಟ್ಟಿ, ಕಾರ್ಯದರ್ಶಿ ಅನಿಲ್ ಗೋಕಾಕ್, ಸಹಕಾರಿ ಮುಖಂಡ ಬಿ.ಎಸ್. ವಿಶ್ವನಾಥ್, ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ಅಭಿನವ ಪ್ರಕಾಶನದ ನ. ರವಿ ಕುಮಾರ್ ಆಯ್ಕೆ ಸಮಿತಿಯಲ್ಲಿ ಇದ್ದರು. ಶೀಘ್ರದಲ್ಲಿ ಫೆಲೋಶಿಪ್ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.
ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್: 08192–208008

ಸಂಖ್ಯೆ:ದಾವಿವಿ/ಶೈಕ್ಷಣಿಕ/517/2021–22/2545 ದಿನಾಂಕ:11.11.2021

ಪ್ರವೇಶ ಪ್ರಕಟಣೆ

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಮತ್ತು ಡಿಪ್ಲೋಮಾ ಕೋರ್ಸುಗಳಿಗೆ 2021–22ನೇ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:11.11.2021.

ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ, ಘಟಕ ಕಾಲೇಜುಗಳು, ಸ್ವಾಯತ್ತ ಕಾಲೇಜುಗಳು ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿನ ವಿವಿಧ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಮತ್ತು ಡಿಪ್ಲೋಮಾ ಕೋರ್ಸುಗಳಿಗೆ 2021–22ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಳಿಗೆ "ಆನ್‌ಲೈನ್" ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

i. ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ದಾವಣಗೆರೆ – ಇಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ವಿವರ:

ಕ್ರ.ಸಂ.	ನಿಕಾಯದ ಹೆಸರು	ವ್ಯಾಸಂಗ ವಿಷಯಗಳು
1	ಕಲಾ	ಎಂ.ಎ: ಕನ್ನಡ; ಇಂಗ್ಲೀಷ್; ಅರ್ಥಶಾಸ್ತ್ರ; ಇತಿಹಾಸ; ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ; ಸಮಾಜ ಕಾರ್ಯ(ಎಂ.ಎಸ್.ಡಬ್ಲ್ಯೂ); ರಾಜ್ಯಶಾಸ್ತ್ರ; ಸಮಾಜಶಾಸ್ತ್ರ; ಹಿಂದಿ; ಉರ್ದು; ಅಪರಾಧಶಾಸ್ತ್ರ; ತತ್ವಶಾಸ್ತ್ರ; ಮನಃಶಾಸ್ತ್ರ; ಮ್ಯೂಸಿಕ್ & ಶ್ರವ್ಯಕಲೆ; ಮಾಸ್ಟರ್ ಆಫ್ ವಿಜುವಲ್ ಆರ್ಟ್ಸ್ (ಎಂ.ವಿ.ಎ) ಇನ್ ಅಪ್ಲೈಡ್ ಆರ್ಟ್ & ಪೈಂಟಿಂಗ್.
2	ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ	ಎಂ.ಕಾಂ. ಎಂ.ಬಿ.ಎ.(ಪ್ರವೇಶಾತಿಯು ಪಿ.ಜಿ.ಸಿ.ಇ.ಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ)
3	ಶಿಕ್ಷಣ	ಎಂ.ಇಡಿ./ಎಂ.ಪಿ.ಇಡಿ./ಬಿ.ಪಿ.ಇಡಿ.
4	ವಿಜ್ಞಾನ ಮತ್ತು ತಂತ್ರಜ್ಞಾನ	ಎಂ.ಎಸ್ಸಿ: ಜೀವರಸಾಯನಶಾಸ್ತ್ರ; ಜೈವಿಕತಂತ್ರಜ್ಞಾನ; ಸಸ್ಯಶಾಸ್ತ್ರ; ರಸಾಯನಶಾಸ್ತ್ರ; ಗಣಕಯಂತ್ರ ವಿಜ್ಞಾನ; ಪರಿಸರ ವಿಜ್ಞಾನ; ಎಲೆಕ್ಟ್ರಾನಿಕ್ಸ್; ಆಹಾರ ತಂತ್ರಜ್ಞಾನ; ಫ್ಯಾಷನ್ ಡಿಸೈನ್; ಲೈಬ್ರರಿ ಅಂಡ್ ಇನ್ಫಾರ್ಮೇಷನ್ ಸೈನ್ಸ್; ಗಣಿತಶಾಸ್ತ್ರ; ಸೂಕ್ಷ್ಮಾಣುಜೀವಶಾಸ್ತ್ರ; ಭೌತಶಾಸ್ತ್ರ, ಸಂಖ್ಯಾಶಾಸ್ತ್ರ; ಯೋಗ ವಿಜ್ಞಾನ; ಪ್ರಾಣಿಶಾಸ್ತ್ರ.
5	ಪಿ.ಜಿ. ಡಿಪ್ಲೋಮೊ	(1) ಪಿ.ಜಿ. ಡಿಪ್ಲೋಮಾ ಇನ್ ಫೈನಾನ್ಸಿಯಲ್ ಸರ್ವಿಸ್ – ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ (2) ಪಿ.ಜಿ. ಡಿಪ್ಲೋಮ ಇನ್ ಕಮ್ಯೂನಿಕೇಟಿವ್ ಇಂಗ್ಲೀಷ್ – ಇಂಗ್ಲೀಷ್ ಅಧ್ಯಯನ ವಿಭಾಗ (3) ಪಿ.ಜಿ. ಡಿಪ್ಲೋಮ ಇನ್ ಡೇಟಾ ಎನಾಲ್ಸಿಸ್ – ಅರ್ಥಶಾಸ್ತ್ರ ಅಧ್ಯಯನ ವಿಭಾಗ (4) ಪಿ.ಜಿ. ಡಿಪ್ಲೋಮ ಇನ್ ಯೋಗ ವಿಜ್ಞಾನ – ಯೋಗ ವಿಜ್ಞಾನ ಅಧ್ಯಯನ ವಿಭಾಗ (5) ಪಿ.ಜಿ. ಡಿಪ್ಲೋಮಾ ಇನ್ ಎಂ.ವೋಕ್ ಇನ್ ಸೈಬರ್ ಸೆಕ್ಯೂರಿಟಿ – ಗಣಕ ವಿಜ್ಞಾನ ಅಧ್ಯಯನ ವಿಭಾಗ (6) ಪಿ.ಜಿ. ಡಿಪ್ಲೋಮಾ ಇನ್ ಕ್ಲಿನಿಕಲ್ ಡಯಟಿಕ್ಸ್ & ಅಪ್ಲೈಡ್ ನ್ಯೂಟ್ರಿಷನ್ – ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ (7) ಪಿ.ಜಿ. ಡಿಪ್ಲೋಮಾ ಇನ್ ಡಿಜಿಟಲ್ ಮೀಡಿಯಾ – ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ ಅಧ್ಯಯನ ವಿಭಾಗ. (8) ಡಿಪ್ಲೋಮಾ ಇನ್ ಡಿಜಿಟಲ್ ಆರ್ಟ್ – ದೃಶ್ಯಕಲಾ ಕಾಲೇಜು, ದಾವಣಗೆರೆ. (9) ಯೋಗ ವಿಜ್ಞಾನದ ಮೂರು ತಿಂಗಳ ಸರ್ಟಿಫಿಕೆಟ್ ಕೋರ್ಸ್ – ಯೋಗ ವಿಜ್ಞಾನ ಅಧ್ಯಯನ ವಿಭಾಗ

ii. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ, ಚಿತ್ರದುರ್ಗ–ಇಲ್ಲಿರುವ ಸ್ನಾತಕೋತ್ತರ ವಿಷಯಗಳು:

ಕ್ರ.ಸಂ.	ನಿಕಾಯದ ಹೆಸರು	ವ್ಯಾಸಂಗ ವಿಷಯಗಳು
1	ಕಲಾ	ಎಂ.ಎ: ಕನ್ನಡ; ಇಂಗ್ಲೀಷ್; ಅರ್ಥಶಾಸ್ತ್ರ; ಸಮಾಜಕಾರ್ಯ
2	ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ	ಎಂ.ಕಾಂ.
3	ವಿಜ್ಞಾನ ಮತ್ತು ತಂತ್ರಜ್ಞಾನ	ಎಂ.ಎಸ್ಸಿ: ಸಸ್ಯಶಾಸ್ತ್ರ; ರಸಾಯನಶಾಸ್ತ್ರ; ಗಣಕಯಂತ್ರ ವಿಜ್ಞಾನ; ಗಣಿತಶಾಸ್ತ್ರ; ಭೌತಶಾಸ್ತ್ರ; ಪ್ರಾಣಿಶಾಸ್ತ್ರ;

iii. ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ನಡೆಸುತ್ತಿರುವ ಸ್ನಾತಕೋತ್ತರ ಕೋರ್ಸ್‌ಗಳ ವಿವರ:

ಕ್ರ.ಸಂ.	ಕಾಲೇಜಿನ ಹೆಸರು	ವ್ಯಾಸಂಗ ವಿಷಯಗಳು
	ದಾವಣಗೆರೆ ಜಿಲ್ಲೆ	
1	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.	ಎಂ.ಎ: ಕನ್ನಡ, ಇಂಗ್ಲೀಷ್. ಎಂ.ಕಾಂ. ಎಂ.ಬಿ.ಎ. (ಪಿ.ಜಿ.ಸಿಇಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ)
2	ಶ್ರೀ ಶ್ರೀ ಶಿವಲಿಂಗೇಶ್ವರಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ.	ಎಂ.ಎ: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ. ಎಂ.ಕಾಂ.
3	ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.	ಎಂ.ಕಾಂ.
4	ಎ.ಆರ್.ಜಿ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ	ಎಂ.ಕಾಂ.
5	ಎಸ್.ಬಿ.ಸಿ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ದಾವಣಗೆರೆ	ಎಂ.ಎ: ಇಂಗ್ಲೀಷ್; ಅರ್ಥಶಾಸ್ತ್ರ ಎಂ.ಕಾಂ.
6	ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್, ದಾವಣಗೆರೆ	ಎಂ.ಬಿ.ಎ. (ಪಿ.ಜಿ.ಸಿ.ಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ)
7	ಭದ್ರಾ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ & ಇನ್‌ಫಾರ್ಮೇಷನ್ ಸ್ಟಡೀಸ್, ದಾವಣಗೆರೆ.	ಎಂ.ಕಾಂ.
8	ಎಸ್.ಜೆ.ವಿ.ಪಿ. ಕಾಲೇಜು, ಹರಿಹರ.	ಎಂ.ಎ. ಕನ್ನಡ; ಎಂ.ಕಾಂ.
	ಚಿತ್ರದುರ್ಗ ಜಿಲ್ಲೆ	
9	ಸರ್ಕಾರಿ ಕಲಾ ಕಾಲೇಜು, (ಸ್ವಾಯತ್ತ) ಚಿತ್ರದುರ್ಗ.	ಎಂ.ಎ: ಕನ್ನಡ, ಇಂಗ್ಲೀಷ್. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ. ಸಮಾಜಶಾಸ್ತ್ರ ಎಂ.ಕಾಂ.
10	ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ.	ಎಂ.ಎಸ್ಸಿ: ಸಸ್ಯಶಾಸ್ತ್ರ; ರಸಾಯನಶಾಸ್ತ್ರ; ಗಣಿತಶಾಸ್ತ್ರ ; ಭೌತಶಾಸ್ತ್ರ;
11	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ.	ಎಂ.ಎ: ಕನ್ನಡ; ಇತಿಹಾಸ ಎಂ.ಕಾಂ
12	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.	ಎಂ.ಎ: ಕನ್ನಡ; ಸಮಾಜಶಾಸ್ತ್ರ ಎಂ.ಕಾಂ.
13	ಶ್ರೀಮತಿ ಯಶೋಧರಮ್ಮ ಬೋರಪ್ಪ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ	ಎಂ.ಎ: ಇಂಗ್ಲೀಷ್

ಕ್ರ.ಸಂ.	ಶುಲ್ಕ ವಿವರಗಳು	ಸಾಮಾನ್ಯ/ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ	ಪ.ಜಾ/ಪ.ಪಂ/ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ	ಪಾವತಿಸುವ ವಿಧಾನ
1	ಅರ್ಜಿಗಳ ಪರಿಶೀಲನೆ ಮತ್ತು ಪ್ರವೇಶ ಪರೀಕ್ಷಾ ಶುಲ್ಕ	ರೂ.965/–	ರೂ.490/–	ಶುಲ್ಕಗಳನ್ನು ಆನ್‌ಲೈನ್ ಮೂಲಕ ಸಂಬಂಧಪಟ್ಟ ಖಾತೆಗೆ ಪಾವತಿಸುವುದು
2	ಹೆಚ್ಚುವರಿ ಕೋರ್ಸುಗಳಿಗೆ ಪ್ರವೇಶ ಪರೀಕ್ಷಾ ಶುಲ್ಕ	ರೂ.880/–	ರೂ.440/–	

ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಅರ್ಹ ಅಭ್ಯರ್ಥಿಗಳು **"ಆನ್‌ಲೈನ್"** ಮೂಲಕ ಅರ್ಜಿಗಳನ್ನು **ದಿನಾಂಕ: 15.11.2021**ರಿಂದ **ದಿನಾಂಕ: 01.12.2021**ರವರೆಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್ ಮೂಲಕ ಸಲ್ಲಿಸಬಹುದು. ವೆಬ್‌ಸೈಟ್ ವಿಳಾಸ: **www.davangereuniversity.ac.in**

ಮುಖ್ಯ ಸೂಚನೆ: ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತಹ ಮಾಹಿತಿಯನ್ನು ವಿಶ್ವವಿದ್ಯಾನಿಲಯವು ಆಗಾಗ್ಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತದೆ. ಅಭ್ಯರ್ಥಿಗಳಿಗೆ ಪ್ರವೇಶಾತಿ ಕುರಿತು ಪ್ರತ್ಯೇಕವಾಗಿ ಯಾವುದೇ ಮಾಹಿತಿಯನ್ನು ರವಾನಿಸಲಾಗುವುದಿಲ್ಲ. ಆದುದರಿಂದ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ಆಗಾಗ್ಗೆ ನಿಯಮಿತವಾಗಿ ಸಂಪರ್ಕಿಸಿ, ದೈನಂದಿನ ಅಥವಾ ಹೆಚ್ಚುವರಿ ಮಾಹಿತಿಗಳನ್ನು ಪಡೆಯಬಹುದಾಗಿದೆ.

iV. ಅರ್ಜಿಗಳೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪ್ರತಿಗಳ ವಿವರಗಳು:

1. ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ ಪ್ರತಿ.
2. ಪದವಿ ಅಂಕಪಟ್ಟಿಗಳು (ಎಲ್ಲಾ ವರ್ಷಗಳ ಮತ್ತು ಎಲ್ಲಾ ಸೆಮಿಸ್ಟರ್‌ಗಳ ಪ್ರತಿಗಳು)
3. ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಪ್ರತಿ.
4. ಆಧಾರ್ ಕಾರ್ಡ್ ಪ್ರತಿ.
5. ಮೀಸಲಾತಿ/ವಿಕಲಾಂಗ/ಕ್ರೀಡಾ/ರಾ.ಸೆ.ಯೋ./ಎನ್.ಸಿ.ಸಿ./ರೇಂಜರ್ಸ್ ಮತ್ತು ರೋವರ್ಸ್/ಮಾಜಿ ಸೈನಿಕರ ಅವಲಂಭಿತರು, ಹೆಚ್.ಕೆ–371(ಜೆ)/ಕನ್ನಡ ಮಾಧ್ಯಮ ಬಗ್ಗೆ–ಸಂಬಂಧಪಟ್ಟ ಅಧಿಕೃತ ಅಧಿಕಾರಿಗಳಿಂದ ನೀಡಲ್ಪಟ್ಟ ದಾಖಲೆಗಳ ಪ್ರತಿ.

V. ಸ್ನಾತಕೊತ್ತರ/ಡಿಪ್ಲೋಮಾ ಪ್ರವೇಶಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ಸಾಮಾನ್ಯ ಮಾರ್ಗಸೂಚಿಗಳು:

1 ಅರ್ಹ ಅಭ್ಯರ್ಥಿಗಳು ವಿವಿಧ ಸ್ನಾತಕೋತ್ತರ/ಡಿಪ್ಲೋಮಾ ಪದವಿ ಕೋರ್ಸುಗಳ ಪ್ರವೇಶಾತಿಗೆ ಅರ್ಜಿಗಳನ್ನು ಕಂಡಿಕೆ (IV) ರಲ್ಲಿ ತಿಳಿಸಿರುವ ಅಧಿಕೃತ ದಾಖಲಾತಿಗಳ ಪ್ರತಿಗಳೊಂದಿಗೆ ದಿನಾಂಕ: 15.11.2021 ರಿಂದ 01.12.2021 ರೊಳಗೆ ಆನ್‌ಲೈನ್ ಮೂಲಕ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ www.davangereuniversity.ac.in ಸಲ್ಲಿಸಬಹುದಾಗಿದೆ.

2 ಅರ್ಹ ಅಭ್ಯರ್ಥಿಗಳು ಪ್ರವೇಶಾತಿ ಬಯಸುವ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆದಾಗ್ಯೂ, ಪ್ರತಿ ಕೋರ್ಸಿಗೂ ಪ್ರತ್ಯೇಕ ಅರ್ಜಿ ಶುಲ್ಕ ಹಾಗೂ ಪ್ರವೇಶ ಪರೀಕ್ಷಾ ಶುಲ್ಕಗಳನ್ನು ಪಾವತಿಸತಕ್ಕದ್ದು.

3 ಪ್ರವೇಶಾತಿಗೆ ಸಂಬಂಧಿಸಿದ ವಿಭಾಗವಾರು ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದರಿಂದ – ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆಯತಕ್ಕದ್ದು. ಯಾವುದೇ ಸಂದರ್ಭಗಳಲ್ಲಿ ಪ್ರತ್ಯೇಕವಾಗಿ ಮಾಹಿತಿ ನೀಡಲಾಗುವುದಿಲ್ಲ. ಆದುದರಿಂದ ಅರ್ಜಿದಾರರು ಮಾಹಿತಿಗಾಗಿ ಆಗಾಗ್ಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ಸಂಪರ್ಕಿಸುವುದು (ವೆಬ್‌ಸೈಟ್: www.davangereuniversity.ac.in)

ಪ್ರವೇಶ ಪರೀಕ್ಷೆಯ ವೇಳಾಪಟ್ಟಿ ಹಾಗೂ ಸಂದರ್ಶನ ಹಾಗೂ ವಿವರಗಳು:

ಕ್ರ.ಸಂ.	ವಿವರಗಳು	ದಿನಾಂಕ
1	ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	01.12.2021
2	ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿ: (ಪ್ರತಿಯೊಂದು ವಿಭಾಗಗಳ ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು)	04.12.2021 05.12.2021 06.12.2021
3	ಮೆರಿಟ್ ಸೀಟ್‌ಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರಕಟಣೆ	08.12.2021
	ಕೇಂದ್ರಿಕೃತ ಸಂದರ್ಶನ ಹಾಗೂ ಎಲ್ಲಾ ಸ್ನಾತಕೋತ್ತರ ಪದವಿ ಪ್ರವೇಶಾತಿಗಳು:	
4	ಮೆರಿಟ್ ಮತ್ತು ಸ್ಪೆಷಲ್ ಕ್ಯಾಟಗರಿ	09.12.2021
5	ಓಪನ್ ಮೆರಿಟ್ ಕ್ಯಾಟಗರಿ	10.12.2021
6	ತರಗತಿಗಳ ಪ್ರಾರಂಭ	13.12.2021

4 ಅಭ್ಯರ್ಥಿಗಳು ಅರ್ಜಿಗಳೊಂದಿಗೆ ಅಧಿಕೃತ ದಾಖಲೆಗಳ ಪ್ರತಿಗಳನ್ನು ಒದಗಿಸದಿದ್ದಲ್ಲಿ, ನಿಗದಿತ ಶುಲ್ಕವನ್ನು ಸೂಕ್ತ ಸಮಯದಲ್ಲಿ ಪಾವತಿ ಮಾಡದಿದ್ದಲ್ಲಿ ಅಥವಾ ಪ್ರವೇಶಾತಿ ಪ್ರಕ್ರಿಯೆಗಳಿಂದ ವಿದ್ಯಾರ್ಥಿಗಳು ನಿಗದಿತ ದಿನಾಂಕ ಮತ್ತು ಸಮಯದೊಳಗೆ ಸಂಬಂಧಪಟ್ಟ ವಿಭಾಗದಲ್ಲಿ ಹಾಜರಾಗದಿದ್ದಲ್ಲಿ, ವಿದ್ಯಾರ್ಥಿಗಳ ಪ್ರವೇಶಾತಿಯು ಸ್ವಯಂ ಚಾಲಿತವಾಗಿ (automatically) ರದ್ದಾಗುತ್ತದೆ.

5 ಪ್ರವೇಶಾತಿ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸುವ ಅಧಿಕೃತ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ನಕಲಿ/ಕೊಟ್ಟಿ ಅಥವಾ ಅನಧಿಕೃತ ದಾಖಲಾತಿಗಳೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಪ್ರವೇಶಾತಿಗಳನ್ನು ರದ್ದುಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು.

6 ಪ್ರವೇಶಾತಿ ಪಡೆದಿರುವ ಅಭ್ಯರ್ಥಿಗಳನ್ನು ವಿಶ್ವವಿದ್ಯಾನಿಲಯದ ಮುಖ್ಯಕೇಂದ್ರದಿಂದ – ಸ್ನಾತಕೋತ್ತರ ಕೇಂದ್ರ ಅಥವಾ ಸ್ವಾಯತ್ತ ಕಾಲೇಜು ಅಥವಾ ಸಂಲಗ್ನ ಕಾಲೇಜುಗಳಿಗೆ ವರ್ಗಾಯಿಸುವ ಅಧಿಕಾರವನ್ನು ಹೊಂದಿರುತ್ತದೆ. ಅಲ್ಲದೆ, ಯಾವುದೇ ಕೇಂದ್ರದಲ್ಲಿ ಯಾವುದೇ ವಿಷಯದಲ್ಲಿ ಪ್ರವೇಶಾತಿ ಪ್ರಮಾಣ ಕನಿಷ್ಠ 15 ಕ್ಕಿಂತ ಕಡಿಮೆ ಇದ್ದಲ್ಲಿಯೂ – ಕನಿಷ್ಠ ಪ್ರವೇಶಾತಿಯನ್ನು ಸರಿದೂಗಿಸುವ ಸಲುವಾಗಿ ವರ್ಗಾವಣೆ ಮಾಡಲಾಗುವುದು.

7 ಪ್ರವೇಶಾತಿ ಪ್ರಕ್ರಿಯೆ ಮುಗಿದ ನಂತರ ವಿದ್ಯಾರ್ಥಿಗಳಿಂದ ಭರಿಸಲಾದ ಯಾವುದೇ (ಅರ್ಜಿ ಶುಲ್ಕ, ಪ್ರವೇಶ ಪರೀಕ್ಷಾ ಶುಲ್ಕ, ನೋಂದಣಿ ಶುಲ್ಕ ಅಥವಾ ಇನ್ನಾವುದೇ ಶುಲ್ಕ) ಶುಲ್ಕಗಳನ್ನು ಮರಿಭರಿಕೆ ಮಾಡಲಾಗುವುದಿಲ್ಲ.

8 ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ತರಗತಿಗಳು ಪ್ರಾರಂಭವಾಗಲಿದ್ದು, ಪ್ರವೇಶಾತಿ ಪಡೆದ ಅಭ್ಯರ್ಥಿಗಳು ಶೇ.75 ರಷ್ಟು ಹಾಜರಾತಿಯನ್ನು ಪಡೆಯುವುದು ಕಡ್ಡಾಯವಾಗಿದೆ.

9 ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಅಥವಾ ಅವರ ಪೋಷಕರು–ವಿಶ್ವವಿದ್ಯಾನಿಲಯದ ಕಾರ್ಯಾವಧಿಯಲ್ಲಿ ಪೂರ್ವಾಹ್ನ 10:30 ರಿಂದ ಸಂಜೆ 5:30ರವರೆಗೆ ಈ ಕೆಳಕಂಡ ಸಹಾಯ ಕೇಂದ್ರವನ್ನು ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ. ಸಹಾಯ ಕೇಂದ್ರದ ದೂರವಾಣಿ ಸಂಖ್ಯೆಗಳು:
6363341215,
6363337901,
6363351762.
ಅಲ್ಲದೆ, ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗಾಧ್ಯಕ್ಷರು ಅಥವಾ ಸಂಯೋಜನಾಧಿಕಾರಿಗಳನ್ನು ವಿಭಾಗಗಳ ಕಾರ್ಯಾವಧಿಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

ರೈತರ ಅಲೆದಾಟ ತಪ್ಪಿಸಲು ನವೋದ್ಯಮ ಆರಂಭಿಸಿದ ಎಂಜಿನಿಯರ್

ಅಂಗೈಯಲ್ಲೇ ಗುಣಮಟ್ಟದ ಪ್ರಮಾಣ

● ಸಂತೋಷ್ ಜಿಗಳಿಕೊಪ್ಪ

ಬೆಂಗಳೂರು: ಕಟಾವಿನ ನಂತರ ಬೆಳೆಗಳ ಗುಣಮಟ್ಟ (ಗ್ರೇಡ್) ಪ್ರಮಾಣೀಕರಣಕ್ಕಾಗಿ ಅಲೆದಾಡುವುದನ್ನು ತಪ್ಪಿಸಲು ಹೊಸದೊಂದು ತಂತ್ರಜ್ಞಾನದ ವೇದಿಕೆ ಕಲ್ಪಿಸಿರುವ 'ರೂಟ್ಸ್‌ಗೂಡ್ಸ್' ನವೋದ್ಯಮ, ಬೆಳೆಗಳ ಪ್ರಮಾಣ ಪತ್ರವನ್ನು ಅಂಗೈಯಲ್ಲೇ ಒದಗಿಸುವ ವ್ಯವಸ್ಥೆ ರೂಪಿಸಿದೆ.

ಬೆಳೆಗಳನ್ನು ವೈಜ್ಞಾನಿಕವಾಗಿ ಪ್ರಮಾಣೀಕರಿಸಲು ಪ್ರಯೋಗಾಲಯಗಳಿಗೆ ರೈತರು ಅಲೆದಾಡುವ ಸ್ಥಿತಿ ಸದ್ಯಕ್ಕಿದೆ. ಇದಕ್ಕೆ ಮುಕ್ತಿ ನೀಡಲು 'ರೂಟ್ಸ್‌ಗೂಡ್ಸ್' ಜಾಲತಾಣ ಹಾಗೂ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಇವುಗಳಿಗೆ ನ.17ರಂದು ಟೆಕ್ ಸಮ್ಮೇಳನದಲ್ಲಿ ಚಾಲನೆ ದೊರೆಯಲಿದೆ.



'ರೂಟ್ಸ್‌ಗೂಡ್ಸ್' ನವೋದ್ಯಮ ತಂಡದ ಜೊತೆಯಲ್ಲಿ ಸಂಸ್ಥಾಪಕ ಸಚಿನ್ ಹೆಗ್ಡೆ ಕುಡ್ಗಿ (ಬಲದಿಂದ ಮೊದಲನೆಯವರು) – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಆರ್.ವಿ. ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಸಚಿನ್ ಹೆಗ್ಡೆ ಕುಡ್ಗಿ ಅವರು ಜರ್ಮನಿಯಲ್ಲಿ ಉನ್ನತ ವ್ಯಾಸಂಗ ಮಾಡಿದ್ದಾರೆ. ಕೃಷಿಯಲ್ಲಿ ಆಸಕ್ತಿ ಹೊಂದಿರುವ ಅವರು, ಬೆಳೆಗಳ ಗುಣಮಟ್ಟ ಪ್ರಮಾಣೀಕರಿಸಲು ಹಾಗೂ ಕೃಷಿ ಉತ್ಪನ್ನ ಮಾರಾಟ ಮಾಡಲು ರೈತರು ಪಡುತ್ತಿದ್ದ ಕಷ್ಟ ಗಮನಿಸಿದರು. ರೈತರಿಗೆ ನೆರವಾಗಲು ರೂಟ್ಸ್ ಗೂಡ್ಸ್ ನವೋದ್ಯಮ ಆರಂಭಿಸಿದರು. ಉತ್ತಮ ನವೋದ್ಯಮವೆಂದು ಗುರುತಿಸಿದ ರಾಜ್ಯ ಸರ್ಕಾರ, ಮಾನ್ಯತೆಯನ್ನೂ ನೀಡಿದೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಸಚಿನ್, 'ಕಟಾವು ಆದ ಕೂಡಲೇ ಬೆಳೆ ಮಾರುವುದು ಉತ್ತಮ. ಗುಣಮಟ್ಟದ ಪ್ರಮಾಣೀಕರಣಕ್ಕಾಗಿ ಹೆಚ್ಚು ಸಮಯ ಹೋದರೆ, ಬೆಳೆ ಹಾಳಾಗುತ್ತದೆ. ದರವೂ ಕಡಿಮೆ ಸಿಗುತ್ತದೆ. ಇದಕ್ಕೆಲ್ಲ ಪರಿಹಾರವಾಗಿ ನವೋದ್ಯಮ ಆರಂಭಿಸಲಾಗಿದೆ. ಜಾಲತಾಣ ಹಾಗೂ ಆ್ಯಪ್ ನೋಂದಣಿ ಸಹ ಉಚಿತ' ಎಂದರು.

'ಕಟಾವು ಮಾಡಿದ ಬೆಳೆ ಫೋಟೊವನ್ನು ತೆಗೆದು ಅಪ್‌ಲೋಡ್ ಮಾಡಬೇಕು. ಅದನ್ನು ತಜ್ಞರು ಪರಿಶೀಲನೆ ನಡೆಸುತ್ತಾರೆ. ಮುಸುಕಿನ ಜೋಳ, ನುಗ್ಗೆ ಸೊಪ್ಪು, ದಾಳಿಂಬೆ, ದ್ರಾಕ್ಷಿ, ಸೀಬೆ ಹಣ್ಣು ಬೆಳೆಗಳಿಗೆ ಮಾತ್ರ ಸದ್ಯಕ್ಕೆ ಗ್ರೇಡ್ ನೀಡಲಾಗುತ್ತಿದೆ. ತೇವಾಂಶ ಹಾಗೂ ಕಪ್ಪು– ಬಿಳಿ ಫಂಗಸ್ ಆಧಾರದಲ್ಲಿ ಮೂರು ಗ್ರೇಡ್‌ಗಳಾಗಿ ವಿಂಗಡಿಸಲಾಗುವುದು. ಯಾವ ಬೆಳೆಗೆ ಯಾವ ಗ್ರೇಡ್ ಎಂಬುದನ್ನು ಪ್ರಮಾಣೀಕರಿಸಿ 'ಪಿಡಿಎಫ್' ರೂಪದಲ್ಲಿ ಪ್ರಮಾಣ ಪತ್ರವನ್ನೂ ರೈತರಿಗೆ ಕಳುಹಿಸಲಾಗುವುದು' ಎಂದೂ ಹೇಳಿದರು.

'ಪ್ರಮಾಣೀಕರಿಸಿದ ಮಾಹಿತಿ ಕಾರ್ಗಿಲ್, ಸುಗುಣ ಚಿಕನ್ ಸೇರಿದಂತೆ 20 ಕಂಪನಿಗಳಿಗೆ ರವಾನೆಯಾಗುತ್ತದೆ. ಕಂಪನಿ ಪ್ರತಿನಿಧಿಗಳು, ರೈತರನ್ನು ಸಂಪರ್ಕಿಸಿ ಮಾರುಕಟ್ಟೆ ದರದನ್ವಯ ಬೆಳೆ ಖರೀದಿಸುತ್ತಾರೆ. ಕಂಪನಿಗಳು ಇಷ್ಟವಿಲ್ಲದಿದ್ದರೆ, ಬೇರೆಯವರಿಗೂ ಮಾರಲು ಅವಕಾಶವಿದೆ' ಎಂದೂ ವಿವರಿಸಿದರು.

ದತ್ತಾಂಶಗಳ ಸಹಿತ ಮಾಹಿತಿ: 'ಬೆಳೆ ಬೆಳೆದ ಪ್ರದೇಶದ ಕೃಷಿ ಸ್ಥಿತಿಗತಿ ಮಾಹಿತಿಯನ್ನೂ ದತ್ತಾಂಶ ಸಹಿತ ಒದಗಿಸಲಾಗುವುದು.ಇದು, ರೈತರ ಭವಿಷ್ಯದ ಕೃಷಿಗೂ ಅನುಕೂಲವಾಗಲಿದೆ' ಎಂದೂ ಸಚಿನ್ ತಿಳಿಸಿದರು.

ಬಯಲುಸೀಮೆ ರೈತರಿಗೆ ಆತಂಕ ತಂದ ಮಳೆ, ಚಳಿ

ಜಡಿ ಮಳೆಗೆ ತಲೆ ಬಾಗಿದ ರಾಗಿ ತೆನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಯಲುಸೀಮೆ ಜಿಲ್ಲೆಗಳಲ್ಲಿ ಎರಡು ದಿನಗಳಿಂದ ಸತತವಾಗಿ ಸುರಿಯುತ್ತಿರುವ ತುಂತುರು ಮಳೆಗೆ ರಾಗಿ ಬೆಳೆ ನೆಲಕಚ್ಚಿದ್ದು, ಸಾಕಷ್ಟು ಹಾನಿ ಸಂಭವಿಸಿದೆ.

ತೆನೆ ಕಟ್ಟಿದ್ದ ರಾಗಿ ನಿರಂತರ ಮಳೆಯಿಂದಾಗಿ ನೆಲಕ್ಕೆ ಒರಗಿ ಚಾಪೆ ಹಾಸಿದಂತೆ ಮಲಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ರಾಗಿ ತೆನೆಯಲ್ಲೇ ಮೊಳಕೆ ಬಂದು ಮತ್ತಷ್ಟು ಹಾನಿಯಾಗಲಿದೆ. ಜಾನುವಾರುಗಳ ಮೇವು ಹಾಳಾಗಲಿದೆ ಎಂಬ ಆತಂಕ ರೈತರಿಗೆ.



ಗುಬ್ಬಿ ಸಮೀಪ ನೆಲ ಕಚ್ಚಿರುವ ರಾಗಿ

ರಾಗಿ ಬೆಳೆಯುವ ತುಮಕೂರು, ಗುಬ್ಬಿ, ಕುಣಿಗಲ್, ತುರುವೇಕೆರೆ, ತಿಪಟೂರು ಭಾಗದಲ್ಲಿ ಹೆಚ್ಚು ಹಾನಿಯಾಗಿದೆ. ಮಳೆ ಕೊರತೆಯಿಂದಾಗಿ ಆಗಸ್ಟ್ ಮಧ್ಯಭಾಗ ಹಾಗೂ ತಿಂಗಳ ಅಂತ್ಯಕ್ಕೆ ಸಾಕಷ್ಟು ಕಡೆಗಳಲ್ಲಿ ರಾಗಿ ಬಿತ್ತನೆಯಾಗಿತ್ತು, ಈಗ ತೆನೆ ಕಟ್ಟಿದ್ದು, ಒಂದೆರಡು ವಾರ ಕಳೆದಿದ್ದರೆ ಕೊಯ್ಲಿಗೆ ಬರುತಿತ್ತು. ಅಷ್ಟರಲ್ಲಿ ಮಳೆಯಾಗಿರುವುದು ಬೆಳೆ ಮಣ್ಣುಪಾಲಾಗುವಂತೆ ಮಾಡಿದೆ.

ಕೋಲಾರ ಜಿಲ್ಲೆಯ ವಾತಾವರಣದಲ್ಲಿ ತೇವಾಂಶ ಹೆಚ್ಚಳಗೊಂಡು ತೋಟಗಾರಿಕೆ ಬೆಳೆ ಮತ್ತು ಹಣ್ಣಿನ ಬೆಳೆಗಳಲ್ಲಿ ಶಿಲೀಂಧ್ರ ರೋಗ ಕಾಣಿಸಿಕೊಂಡಿದೆ. ಹೂವು ಕಟಾವಿಗೆ ಸಮಸ್ಯೆಯಾಗಿದ್ದು, ಬಗೆ, ಬಗೆಯ ಹೂವುಗಳು ಜಮೀನಿನಲ್ಲೇ ಕೊಳೆಯಲಾರಂಭಿಸಿವೆ.

ಕೋಲಾರ ಜಿಲ್ಲೆಯ 64,567 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆಯಾಗಿದ್ದು, ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದ ರೈತರಿಗೆ ಮಳೆ ಆತಂಕ ತಂದೊಡ್ಡಿದೆ. ರಾಗಿ ಕೊಯ್ಲು ಆರಂಭದ ಸಂದರ್ಭದಲ್ಲೇ ಮಳೆ ಬಿಟ್ಟು ಬಿಡದೆ ಸುರಿಯುತ್ತಿದ್ದು, ರಾಗಿ ತೆನೆಗಳು ನೆಲಕ್ಕೆ ಬಾಗಿ ಜಮೀನಿನಲ್ಲೇ ಮೊಳಕೆಯೊಡೆಯಲಾರಂಭಿಸಿವೆ. ಜಮೀನುಗಳು ಕೆಸರು ಗದ್ದೆಯಂತಾಗಿದ್ದು, ಬೆಳೆ ನಷ್ಟದ ಸಮೀಕ್ಷೆಗೂ ಮಳೆ ಬಿಡುವು ಕೊಟ್ಟಿಲ್ಲ.

ಟೊಮೆಟೊ, ಆಲೂಗಡ್ಡೆಗೆ ಅಂಗಮಾರಿ: ಹೆಚ್ಚು ಆರ್ದ್ರತೆಯುಳ್ಳ ಹವಾಗುಣ ಮತ್ತು ಮೋಡ ಕವಿದ ವಾತಾವರಣದಿಂದ ಕೋಲಾರ ಜಿಲ್ಲೆಯಲ್ಲಿ ಟೊಮೆಟೊ ಹಾಗೂ ಆಲೂಗಡ್ಡೆ ಬೆಳೆಯಲ್ಲಿ ಅಂಗಮಾರಿ ರೋಗ ಕಾಣಿಸಿಕೊಂಡಿದೆ. ಬಿತ್ತನೆಯಾಗಿರುವ ಆಲೂಗಡ್ಡೆಗಳು ಮಣ್ಣಿನಲ್ಲೇ ಕರಗುತ್ತಿವೆ.



ಮೈಸೂರಿನಲ್ಲಿ ರಾತ್ರಿಯಿಂದ ಸುರಿದ ಮಳೆಗೆ ಶ್ರೀಹರ್ಷ ರಸ್ತೆಯಲ್ಲಿ ಶುಕ್ರವಾರ ಮರವೊಂದು ಉರುಳಿ 2 ಕಾರುಗಳು ಜಖಂಗೊಂಡವು

> **ಕಟಾವಿನ ಹಂತದಲ್ಲಿರುವ ರಾಗಿ ಮತ್ತು ಶೇಂಗಾ ಕೆಲವು ಕಡೆಗಳಲ್ಲಿ ನೆಲಕ್ಕೆ ಉರುಳುತ್ತಿದೆ. ಮಳೆ ಹೀಗೆ ಮುಂದುವರಿದರೆ ರಾಗಿ, ಶೇಂಗಾ ಭಾರಿ ಪ್ರಮಾಣದಲ್ಲಿ ಹಾಳಾಗಲಿದೆ.**
> **ಚಂದ್ರಕುಮಾರ್,** ಸಹಾಯಕ ನಿರ್ದೇಶಕ, ಕೃಷಿ ಇಲಾಖೆ (ಚಿಕ್ಕಬಳ್ಳಾಪುರ)

> **ಪ್ರಸಕ್ತ ವರ್ಷ ಉತ್ತಮ ಮಳೆಯಾದ ಕಾರಣ ರಾಗಿ ಬೆಳೆ ಉತ್ಕೃಷ್ಟವಾಗಿದೆ. ಜಿಟಿಜಿಟಿ ಮಳೆಯ ಕಾರಣ ತೆನೆಯು ಬಾರ ತಡೆಯದೆ ನೆಲಕ್ಕೆ ಬಾಗಿದೆ. ಕೆಲವು ಕಡೆ ಮೊಳಕೆಯೂ ಮೂಡಿದೆ**
> **ಗಿರೀಶ್,** ರೈತ, ಯಲುವಳ್ಳಿ (ಚಿಕ್ಕಬಳ್ಳಾಪುರ)

7 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡು ಹಾಗೂ ಆಂಧ್ರ ಪ್ರದೇಶ ಕರಾವಳಿಗಳಲ್ಲಿ ಉಂಟಾಗಿದ್ದ ವಾಯುಭಾರ ಕುಸಿತದ ಪ್ರಬಲತೆ ತಗ್ಗಿರುವುದರಿಂದ ರಾಜ್ಯದಲ್ಲಿ ನ.13ರಿಂದ ಮಳೆ ತಗ್ಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ರಾಮನಗರ, ಮೈಸೂರು, ಮಂಡ್ಯ, ಕೊಡಗು, ಹಾಸನ, ಚಿಕ್ಕಮಗಳೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಮಾತ್ರ ಗುಡುಗು, ಸಿಡಿಲು ಸಹಿತ ಹೆಚ್ಚು ಮಳೆಯಾಗುವ ಸಾಧ್ಯತೆ ಇರುವುದರಿಂದ ನ.15ರವರೆಗೆ 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ.

ಕರಾವಳಿ ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಮುಂದಿನ ಐದು ದಿನಗಳು ಮಳೆಯಾಗುವ ಸೂಚನೆಗಳಿಲ್ಲ. ಆದರೆ, ಕೆಲವು ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಬಹುದು.

'ನೆರೆಯ ರಾಜ್ಯಗಳಲ್ಲಿ ಉಂಟಾಗಿರುವ ಹವಾಮಾನ ವೈಪರೀತ್ಯದಿಂದಾಗಿ ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಎರಡು ದಿನಗಳಿಂದ ದಟ್ಟವಾದ ಮೋಡ ಕವಿದು, ಜಿಟಿಜಿಟಿ ಮಳೆಯಾಗಿತ್ತು. ಶೀತ ಗಾಳಿ ಬೀಸುತ್ತಿರುವುದರಿಂದ ಥರಗುಟ್ಟುವ ಚಳಿಯ ವಾತಾವರಣವಿದೆ. ಶನಿವಾರದಿಂದ ಮಳೆ ತಗ್ಗುವ ಸಾಧ್ಯತೆ ಇರುವುದರಿಂದ ವಾತಾವರಣದಲ್ಲಿ ಬದಲಾವಣೆಯ ನಿರೀಕ್ಷೆಯಿದೆ' ಎಂದು ಹವಾಮಾನ ತಜ್ಞ ಸದಾನಂದ ಅಡಿಗ ವಿವರಿಸಿದರು.

ಮಳೆ–ಎಲ್ಲಿ, ಎಷ್ಟು?: ಚಾಮರಾಜನಗರದ ಗುಂಡ್ಲುಪೇಟೆಯಲ್ಲಿ ಶುಕ್ರವಾರ 8 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಚಾಮರಾಜನಗರ 6, ಕೊಳ್ಳೇಗಾಲ 5, ನಂಜನಗೂಡು, ಮಧುಗಿರಿ 4, ಮುಳಬಾಗಿಲು, ಮಂಡ್ಯ, ಮದ್ದೂರು, ಮಳವಳ್ಳಿ, ಚನ್ನಪಟ್ಟಣ, ಶಿರಾ, ಚಿಂತಾಮಣಿ, ಗೌರಿಬಿದನೂರು, ಆನೇಕಲ್ 3, ತುಮಕೂರು, ಪಾವಗಡ, ಕುಣಿಗಲ್, ತಿಪಟೂರು, ತೊಂಡೆಬಾವಿ, ಮೈಸೂರು, ರಾಮನಗರ, ಕನಕಪುರ, ಬಂಗಾರಪೇಟೆ, ಹೊಸಕೋಟೆ, ಪಾಂಡವಪುರ 2, ದೊಡ್ಡಬಳ್ಳಾಪುರ, ನೆಲಮಂಗಲ, ಗುಬ್ಬಿ, ಶ್ರೀರಂಗಪಟ್ಟಣ, ಮಾಗಡಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಮಾಲೂರು, ಸಕಲೇಶಪುರ ಹಾಗೂ ಕಂಪ್ಲಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಬೀದರ್ ಹಾಗೂ ಚಿತ್ರದುರ್ಗದಲ್ಲಿ ತಲಾ 17 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂ ವಿಚಾರಣೆ ಸಂಖ್ಯೆ. 1) ಬಿಸಿಪಿ–1322/2021–22 ರ ಅನ್ವಯ 25ಕೆವಿಎ ಸ್ಟಾರ್–1 (4 ಸ್ಟಾರ್) ನಮೂದಿತ ವಿತರಣಾ ಪರಿವರ್ತಕಗಳ ಸರಬರಾಜು, ವಿಚಾರಣೆ ಸಂಖ್ಯೆ. 2) ಬಿಸಿಪಿ–1323/2021–22 ರ ಅನ್ವಯ 250ಕೆವಿಎ ಸ್ಟಾರ್–2 (5 ಸ್ಟಾರ್) ನಮೂದಿತ ವಿತರಣಾ ಪರಿವರ್ತಕಗಳ ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದೆ. ಬಿಡ್ ದಸ್ತಾವೇಜುಗಳ ಲಭ್ಯತೆ: 15.11.2021 ರಿಂದ 29.11.2021 ರ 15:00 ಗಂಟೆಯವರೆಗೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 29–11–2021 ರ 15:00 ಗಂಟೆಯವರೆಗೆ. ಬಿಡ್ ದಸ್ತಾವೇಜುಗಳನ್ನು ತೆರೆಯುವುದು: 30.11.2021 ರ 15:15 ಗಂಟೆಗೆ. ಟೆಂಡರ್‌ಗಳನ್ನು ವೆಬ್‌ಸೈಟ್ http://eproc.karnataka.gov.in ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದು. ಆಸಕ್ತ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು 8046010000, +91–8068948777 ಅಥವಾ support@eprochelpdesk@ intarvo.com ಮೂಲಕ ಸಹಾಯ ಪಡೆಯಬಹುದು

ಸಹಿ/– ಪ್ರಧಾನ ವ್ಯವಸ್ಥಾಪಕರು, ವಿದ್ಯುತ್, ಖರೀದಿ,
ಬೆವಿಕಂ, 4ನೇ ಮಹಡಿ, ಕೆ.ಆರ್.ವೃತ್ತ, ಬೆಂಗಳೂರು–560001.
ವಾ.ಸಾ.ಸಂ.ಇ/ಬೆಂ.ನಗರ/2144/ಆಕಾರ್/2021–22 ದೂರವಾಣಿ : 080–22354939, ಫ್ಯಾಕ್ಸ್: 080–22352485.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	124.80	6,544	6,333
ಹಾರಂಗಿ	2,859	2,857.57	626	983
ಕಬಿನಿ	2,284	2,283.82	1,750	700
ಹೇಮಾವತಿ	2,922	2,908.75	2,061	3,556
ಲಿಂಗನಮಕ್ಕಿ	1,819	1,813.70	2,624	-
ಸೂಪಾ (ಮೀ)	564	555.60	-	2,951
ಮಾಣಿ	594.36	586.72	-	-
ತುಂಗಭದ್ರಾ	1,633	1,632.41	8,051	9,715
ಮಲಪ್ರಭಾ	2,079.50	2,076.81	-	2,444
ಘಟಪ್ರಭಾ	2,175	2,168.26	-	5,427
ಭದ್ರಾ	186	185.3	2,656	2,969
ಆಲಮಟ್ಟಿ (ಮೀ)	519.60	518.74	-	1,817
ನಾರಾಯಣಪುರ (ಮೀ)	492.25	491.15	811	195

* ನೆಲಮಟ್ಟದಿಂದ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ.

ಸಂಖ್ಯೆ :ಕಾಪಾಅ/ಶಿವಿಶಿ/ಎಇ–2/ಐಎಫ್‌ಟಿ–25/2021–22
ದಿನಾಂಕ: 09–11–2021

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ (http://eproc. karnataka. gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

1. **ಹೊಸನಗರ ತಾಲ್ಲೂಕು:** 1 ಕಾಮಗಾರಿ. 141930
2. **ಸಾಗರ ತಾಲ್ಲೂಕು:** 1 ಕಾಮಗಾರಿ. 142410

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು : ದಿನಾಂಕ:11–11–2021 ರಿಂದ 13–12–2021 ರವರೆಗೆ, ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ 11 ತಿಂಗಳು (ಮಳೆಗಾಲ ಸೇರಿ) ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–2301900 / 080–23010901 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋ.ಇ ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–14/11/ಎಂಸಿಎ/21–22/816

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602

ಸಂಖ್ಯೆ: ಡಿವೈಇಎಸ್/ಎಸ್‌ಎಸ್‌ಹೆಚ್/83/2021–22 ದಿನಾಂಕ: 09–11–2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ವಿಜಯಪುರ ಜಿಲ್ಲೆಯಲ್ಲಿರುವ ಕ್ರೀಡಾ ವಸತಿ ನಿಲಯದ ನವೀಕರಣ ಕಾಮಗಾರಿ ಕುರಿತು.	ರೂ. 88.90 ಲಕ್ಷಗಳು	ರೂ. 1.77/– ಲಕ್ಷಗಳು

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **http://eproc.karnataka.gov.in** ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **20–11–2021ರಂದು ಸಮಯ: 16.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23–11–2021ರಂದು ಸಮಯ: 16.30 ಗಂಟೆಗೆ.** 3) ಹಣಕಾಸು ಬಿಡ್ ತೆರೆಯುವ ದಿನಾಂಕ: **ನಂತರ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ವಾಸಾಸಂಇ/ಬೆಂ.ನ/ಅಡ್ವರ್ಟೋರ್/2151/2021–22

ಫಲವಂತಿಕೆ ಚಿಕಿತ್ಸೆ ಕಾಯುವಿಕೆಗೆ ಕೊನೆಯೆಂದು?



ಡಾ. ವಿದ್ಯಾ ಭಟ್

ಶಿವಮೊಗ್ಗದ ದಂಪತಿ ಅನಿಲ್ ಮತ್ತು ರೇಣುಕಾಗೆ ಮದುವೆಯಾಗಿ 6-7 ವರ್ಷಗಳಾದರೂ ಮಕ್ಕಳಿಲ್ಲ. ಸ್ಥಳೀಯ ವೈದ್ಯರ ಚಿಕಿತ್ಸೆ ಪಡೆದರೂ ಪ್ರಯೋಜನವಾಗದಿದ್ದಾಗ ಬೆಂಗಳೂರಿನಲ್ಲಿ ಆಧುನಿಕ ಚಿಕಿತ್ಸೆ ನೀಡುವ ಆಸ್ಪತ್ರೆಯ ಮೊರೆ ಹೋದರು. ಐವಿಎಫ್ ಚಿಕಿತ್ಸೆ ಆಗಷ್ಟೇ ಆರಂಭಿಸಿದ್ದರಷ್ಟೇ. ಆದರೆ ಕೋವಿಡ್ ಕಾರಣದಿಂದಾಗಿ ಅರ್ಧಕ್ಕೇ ನಿಲ್ಲಿಸಬೇಕಾಯಿತು. ಕೋವಿಡ್ ಕಡಿಮೆಯಾದ ಮೇಲೆ ಪುನಃ ಚಿಕಿತ್ಸೆ ಆರಂಭಿಸುವುದಾಗಿ ವೈದ್ಯರು ಭರವಸೆಯನ್ನೇನೋ ನೀಡಿದ್ದರು. ಆದರೆ ಒಂದೂವರೆ ವರ್ಷದ ನಂತರ ಇನ್ನಿತರ ಆರೋಗ್ಯ ಸಮಸ್ಯೆಗಳಿಂದಾಗಿ ಸಂತಾನಹೀನತೆಗೆ ಚಿಕಿತ್ಸೆ ಪಡೆಯಲು ದಂಪತಿ ಹಿಂದೆಮುಂದೆ ನೋಡುತ್ತಿದ್ದಾರೆ.

ಇದು ಅನಿಲ್- ರೇಣುಕಾ ಸಮಸ್ಯೆ ಮಾತ್ರವಲ್ಲ, ಕೋವಿಡ್-19 ಸಾಂಕ್ರಾಮಿಕವು ಸಾರ್ವಜನಿಕ ಆರೋಗ್ಯದ ಮೇಲೆ ಪರಿಣಾಮ ಬೀರಿದಂತೆಯೇ ಮಕ್ಕಳಿಗಾಗಿ ಪರಿತಪಿಸುತ್ತಿರುವ ದಂಪತಿ ಮೇಲೆ ಒತ್ತಡ ಜಾಸ್ತಿ ಮಾಡಿದೆ. ಭಾವನಾತ್ಮಕ, ಸಾಮಾಜಿಕ, ವೈಯಕ್ತಿಕ ಮತ್ತು ಹಣಕಾಸು ಪರಿಸ್ಥಿತಿಗಳಿಂದಾಗಿ ಒತ್ತಡ ಉಂಟಾಗುತ್ತಿದ್ದು, ಪೋಷಕರಾಗಲು ಬಯಸುವ ದಂಪತಿ ಹತಾಶರಾಗಿದ್ದಾರೆ. ದೇಶದಲ್ಲಿ ಕೋವಿಡ್ ಹಿನ್ನೆಲೆಯಲ್ಲಿ ರೂಪುಗೊಂಡ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರ್ಗಸೂಚಿಗಳಿಂದಾಗಿ ಸಾಕಷ್ಟು ಜನರು ಉದ್ಯೋಗ ಕಳೆದುಕೊಂಡರು. ಕುಟುಂಬದಲ್ಲಿ ದುಡಿಯುವ ಕೈಗಳ ಸಂಖ್ಯೆಯೂ ಕಡಿಮೆಯಾಯಿತು. ಆರ್ಥಿಕ ಪರಿಸ್ಥಿತಿಯಿಂದಾಗಿ ಫಲವಂತಿಕೆ ಚಿಕಿತ್ಸೆಯನ್ನು ತಿಂಗಳುಗಟ್ಟಲೆ ಸ್ಥಗಿತಗೊಳಿಸಬೇಕಾಯಿತು.

ವಿಶ್ವದಾದ್ಯಂತ ಸಂತಾನಹೀನತೆ ಎಂಬುದು ಗಂಭೀರ ಸಮಸ್ಯೆ. ವಿಶ್ವದಾದ್ಯಂತ ಶೇ 8-10 ರಷ್ಟು ದಂಪತಿಗಳ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. 60-80 ಮಿಲಿಯನ್ ದಂಪತಿಗಳು ಪ್ರತಿವರ್ಷ ಈ ಸಮಸ್ಯೆಗೆ ತುತ್ತಾಗುತ್ತಿದ್ದಾರೆ. ಭಾರತ ಒಂದರಲ್ಲೇ ಇವರ ಸಂಖ್ಯೆ 15ರಿಂದ 20 ಮಿಲಿಯನ್ (ಶೇ 25)ನಷ್ಟು.

> ಕೋವಿಡ್ ಎನ್ನುವುದು ಸಂತಾನಹೀನತೆ ಇರುವ ದಂಪತಿಗೆ ಸಾಕಷ್ಟು ಸಮಸ್ಯೆ ಸೃಷ್ಟಿಸಿದೆ. ಫಲವಂತಿಕೆ ಚಿಕಿತ್ಸೆಯಲ್ಲಾದ ವಿಳಂಬವು ಅವರಿಗೆ ಮಕ್ಕಳಾಗುವ ಸಾಧ್ಯತೆಯನ್ನು ಕಡಿಮೆ ಮಾಡಿದೆ. ಇದಕ್ಕೆ ಪರಿಹಾರಗಳೇನು?

ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಪ್ರತಿ ನಾಲ್ಕು ದಂಪತಿಗಳ ಪೈಕಿ ಒಂದು ದಂಪತಿಯಲ್ಲಿ ಸಂತಾನಹೀನತೆ ಕಂಡುಬರುತ್ತಿದೆ. ಭಾರತದಲ್ಲಿ ಪ್ರಾಥಮಿಕ ಸಂತಾನಹೀನತೆ ಪ್ರಮಾಣ ಶೇ 3.9 ರಿಂದ 16.8 ರಷ್ಟಿದೆ ಎಂದು ಅಂದಾಜಿಸಲಾಗಿದೆ.

ಎಗ್ ಫ್ರೀಜಿಂಗ್

'ಎಗ್ ಫ್ರೀಜಿಂಗ್' ಪ್ರಸ್ತುತ ಪೀಳಿಗೆಯಲ್ಲಿ ನಿಧಾನವಾಗಿ ಜನಪ್ರಿಯತೆಯನ್ನು ಗಳಿಸುತ್ತಿದೆ. ಆದರೆ, ಸಮಾಜದಲ್ಲಿ ಇದರ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ. ಮದುವೆಯಾಗಲು ಅಥವಾ ಮಗುವನ್ನು ಮಾಡಿಕೊಳ್ಳಲು ಪ್ರಸ್ತುತ ವಿಳಂಬದ ಪ್ರವೃತ್ತಿಯಿದೆ. ಹೀಗಾಗಿ ಚಿಕ್ಕ ವಯಸ್ಸಿನಲ್ಲಿಯೇ ಎಗ್ ಫ್ರೀಜ್ ಮಾಡುವ ಮೂಲಕ ನಂತರದ ಹಂತದಲ್ಲಿ ಆರೋಗ್ಯಕರವಾದ ಮಗುವನ್ನು ಹೊಂದುವ ಅವಕಾಶ ಇರುತ್ತದೆ. ಇದು ವಿಶೇಷವಾಗಿ ಗರ್ಭಧಾರಣೆಯನ್ನು ಯೋಜಿಸದ ಮಹಿಳೆಯರಿಗೆ ಸುರಕ್ಷಿತವಾದ ಮತ್ತು ಸಹಾಯಕವಾದ ವಿಧಾನವಾಗಿದೆ. ಆದರೆ, ಭವಿಷ್ಯದಲ್ಲಿ ಗರ್ಭ ಧರಿಸುವ ಅಥವಾ ಜೈವಿಕ ಮಗುವನ್ನು ಹೊಂದುವ ಅವರ ಸಾಮರ್ಥ್ಯದ ಬಗ್ಗೆ ಖಚಿತತೆ ಒದಗಿಸುತ್ತದೆ. ಮೊಟ್ಟೆಗಳನ್ನು 35 ವರ್ಷಕ್ಕಿಂತ ಮುನ್ನವೇ ಫ್ರೀಜ್ ಮಾಡಬೇಕು. ಈ ವಯೋಮಾನದ ನಂತರವಾದರೆ ಮೊಟ್ಟೆಗಳ ಸಂಖ್ಯೆ ಮತ್ತು ಗುಣಮಟ್ಟವು ತೀವ್ರವಾಗಿ ಕುಸಿಯುತ್ತದೆ.

ಮನೆಯಿಂದಲೇ ಕಚೇರಿ ಕೆಲಸವೂ ಒಂದು ಕಾರಣವೇ?

ಮನೆಯಿಂದಲೇ ಹೆಚ್ಚು ಸಮಯದವರೆಗೆ ಕೆಲಸ ಮಾಡುತ್ತಿರುವುದರಿಂದ ಒತ್ತಡ ಹೆಚ್ಚಾಗುತ್ತಿದೆ. ತೂಕದಲ್ಲಿ ಹೆಚ್ಚಳ, ಅನಾರೋಗ್ಯಕರವಾದ ಜೀವನಶೈಲಿ, ಚಿಕಿತ್ಸೆ ಪಡೆಯುವಲ್ಲಿ ವಿಳಂಬ, ಅನಿಯಮಿತವಾಗಿ ವೈದ್ಯರಿಂದ ಚಿಕಿತ್ಸೆ ಪಡೆದುಕೊಳ್ಳುವುದು ಮತ್ತು ಫಾಲೋಅಪ್ ಮಾಡದೇ ಇರುವುದು ಸಂತಾನಹೀನತೆ ಹೆಚ್ಚಲು ಕಾರಣ. ಪಿಸಿಓಎಸ್, ಅನಿಯಮಿತ ಋತುಚಕ್ರದ ಬಗ್ಗೆ ನಿರ್ಲಕ್ಷ್ಯ ಸಹ ಸಂತಾನಹೀನತೆಗೆ ಕಾರಣ.

ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ಕಾರಣದಿಂದಾಗಿ ಸಾಕಷ್ಟು ಜನರು ಗರ್ಭಧಾರಣೆಯನ್ನು ಮುಂದಕ್ಕೆ ಹಾಕಿದ್ದಾರೆ. ಎರಡು ವರ್ಷಗಳ ಹಿಂದೆ 30 ವರ್ಷದವರಾಗಿದ್ದ ಮಹಿಳೆಯರು ಈಗ 32 ಕ್ಕೆ ತಲುಪಿದ್ದಾರೆ. 34 ಇದ್ದವರು 36 ಕ್ಕೆ ತಲುಪಿದ್ದಾರೆ. ಈ ಕಾರಣದಿಂದಾಗಿ ಮಹಿಳೆಯರ ಅಂಡಾಶಯದಲ್ಲಿ ಅಂಡಾಣುಗಳ ಸಂಖ್ಯೆ ಕಡಿಮೆಯಾಗಿದೆ ಮತ್ತು ಬಹುಶಃ ಗರ್ಭಧಾರಣೆಯ ಸಾಧ್ಯತೆಗಳು ಕಡಿಮೆಯಾಗುತ್ತವೆ. ಮಹಿಳೆಯರು ಫೈಬ್ರಾಯ್ಡ್ ಮತ್ತು ಎಂಡ್ರೋಮೆಟ್ರಿಯೊಸಿಸ್ ಹೊಂದಿದ್ದರೆ ಎರಡು ವರ್ಷಗಳವರೆಗೆ ಚಿಕಿತ್ಸೆ ಇಲ್ಲದೇ ಮನೆಯಲ್ಲೇ ಇದ್ದಾಗ ಅದು ಕೆಟ್ಟ ಪರಿಣಾಮವನ್ನು ಉಂಟು ಮಾಡುತ್ತದೆ. ಅಲ್ಲದೇ, ಫೈಬ್ರಾಯ್ಡ್ ದೊಡ್ಡದಾಗುತ್ತದೆ ಮತ್ತು ಎಂಡ್ರೋಮೆಟ್ರಿಯೊಸಿಸ್ ಸಮಸ್ಯೆ ತೀವ್ರವಾಗುತ್ತದೆ. ಸುಮಾರು 2 ಸೆಂಟಿಮೀಟರ್‌ನಷ್ಟು ಇರುವ ಎಂಡೋಮೆಟ್ರಿಯಾಟಿಕ್ ಸಿಸ್ಟ್ 5 ಸೆಂಟಿಮೀಟರ್‌ವರೆಗೆ ಹಿಗ್ಗಬಹುದು. ಹೀಗಾಗಿ ಫಲವಂತಿಕೆ ಹೆಚ್ಚಿಸುವ ಶಸ್ತ್ರ ಚಿಕಿತ್ಸೆಯ ಅಗತ್ಯವೂ ಹೆಚ್ಚಾಗುತ್ತದೆ.

ಕಳೆದ ಎರಡುವ ವರ್ಷಗಳಿಂದ ಅಂಡಾಶಯದ ಮಿತಿಯು ಕೆಲವು ಕಾರಣಗಳಿಂದ ಕಡಿಮೆಯಾದರೆ ಗರ್ಭಧಾರಣೆಯ ಸಾಧ್ಯತೆಗಳು ಕಡಿಮೆಯಾಗುತ್ತವೆ. ಹೊಸದಾಗಿ ಮದುವೆಯಾದವರ ಪೈಕಿ ಕಡಿಮೆ ವೀರ್ಯ ಪ್ರಮಾಣ ಇರುವ ಪುರುಷರಿಗೆ ಹಾಗೂ ಫಲವತ್ತತೆ ಮತ್ತು ಅಂಡಾಶಯದ ಮಿತಿ ಇರುವ ಮಹಿಳೆಯರಿಗೆ ಫಲವಂತಿಕೆ ಪರೀಕ್ಷೆಯಲ್ಲಾಗುವ ವಿಳಂಬದ ಬಗ್ಗೆ ಸೂಕ್ತ ಮಾಹಿತಿ ಇದ್ದಂತೆ ಕಾಣುವುದಿಲ್ಲ.

ಗರ್ಭಾವಸ್ಥೆಯ ಮಧುಮೇಹ

ತಡವಾದ ಗರ್ಭಧಾರಣೆಯು ಗರ್ಭಿಣಿಯರಲ್ಲಿ ಗರ್ಭಾವಸ್ಥೆಯ ಮಧುಮೇಹ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗಬಹುದು. ಇದು ಕೆಲವೊಮ್ಮೆ ಟೈಪ್ 2 ಮಧುಮೇಹವಾಗಿ ಬದಲಾಗುತ್ತದೆ. ತಡವಾಗಿ ಗರ್ಭಧಾರಣೆಯನ್ನು ಹೊಂದಿರುವ ಮಹಿಳೆಯರು ತಮ್ಮ ಗರ್ಭಧಾರಣೆಯ ಆರಂಭದಿಂದಲೂ ದೀರ್ಘಕಾಲದ ಅಧಿಕ ರಕ್ತದೊತ್ತಡದಿಂದ ಬಳಲುವ ಸಾಧ್ಯತೆ ಹೆಚ್ಚು.

ಅವರು ಹೆರಿಗೆ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬಹುದು. ಉದಾಹರಣೆಗೆ ಹೆರಿಗೆಯ ಪ್ರಗತಿಯಾಗದಿರುವುದು ಮತ್ತು ಭ್ರೂಣದ ತಲೆಯ ಮೂಲದಿಂದ ಕೆಳಗಿಳಿಯದಿರುವುದು. 35 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರಲ್ಲಿ ಸ್ವಾಭಾವಿಕ ಗರ್ಭಪಾತದ ಅಪಾಯವೂ ಹೆಚ್ಚಿರುತ್ತದೆ. ಇದರ ಜೊತೆಗೆ ಮಗುವಿನಲ್ಲಿ ಕಂಡು ಬರುವ ವರ್ಣತಂತು ವೈಪರೀತ್ಯಗಳು ಸಹ ಉಂಟಾಗುತ್ತವೆ. ಸ್ಥೂಲಕಾಯತೆಯು ಫಲವತ್ತತೆಗೆ ಸಂಬಂಧಿಸಿದಂತೆ ಬಹಳಷ್ಟು ಸಮಸ್ಯೆಗಳನ್ನು ಉಂಟುಮಾಡುತ್ತದೆ. ಗರ್ಭಾವಸ್ಥೆಯಲ್ಲಿನ ಹೆಚ್ಚಿನ ತೂಕವನ್ನು ಹೊಂದಿರುವ ಮಹಿಳೆಯರು ಮೆಟಾಬಾಲಿಕ್ ಸಿಂಡ್ರೋಮ್ ಮತ್ತು ಪದೇ ಪದೇ ಗರ್ಭಸ್ರಾವ ಎದುರಿಸಬಹುದು.

ಐವಿಎಫ್ ಅಗತ್ಯವಿರುವ ದಂಪತಿಗಳಿಗೆ ಐವಿಎಫ್‌ಗೆ ಹೋಗಲು ಸಾಧ್ಯವಾಗಿಲ್ಲ. ಕೆಲವರು ದಾನಿಗಳಿಂದ ಎಗ್ ಪಡೆಯಬಹುದು.

ಪರಿಹಾರ

- ಆದಷ್ಟೂ ಬೇಗ ವೈದ್ಯರನ್ನು ಭೇಟಿ ಮಾಡಿ ಸರಿಯಾದ ಕೌನ್ಸೆಲಿಂಗ್ ಮತ್ತು ಚಿಕಿತ್ಸೆಯ ಯೋಜನೆಯನ್ನು ರೂಪಿಸಿಕೊಳ್ಳಬೇಕು.
- ದಂಪತಿ ಆದಷ್ಟೂ ಬೇಗ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು.
- ಫಲವತ್ತತೆಯನ್ನು ಹೆಚ್ಚಿಸುವ ಶಸ್ತ್ರ ಚಿಕಿತ್ಸೆಯ ಅಗತ್ಯವಿದ್ದಲ್ಲಿ, ಅದನ್ನು ತಕ್ಷಣವೇ ಮಾಡಬೇಕು. ತೂಕ ನಷ್ಟ ಮತ್ತು ಸಂತಾನಹೀನತೆಗೆ ಆರಂಭಿಕ ಚಿಕಿತ್ಸೆಗಳನ್ನು ತೆಗೆದುಕೊಳ್ಳಬೇಕು.
- ಕಳಪೆ ಅಂಡಾಶಯದ ಮಿತಿ ಅಥವಾ ಕಡಿಮೆ ವೀರ್ಯಾಣು ಸಾಂದ್ರತೆಯಿರುವ ಜನರು ಅಗತ್ಯವಿದ್ದರೆ ಗ್ಯಾಮೆಟ್ ದಾನಕ್ಕಾಗಿ ಪ್ರಯತ್ನಿಸಬೇಕು.

(ಲೇಖಕಿ: ಮೆಡಿಕಲ್ ಡೈರೆಕ್ಟರ್, ರಾಧಾಕೃಷ್ಣ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್, ಬೆಂಗಳೂರು)

ಜಾಲಿ ಆಲೂ ಸಮೋಸ, ಕಚೋರಿ



ಅನುಪಮ ಸುನೀಲ್ ಕುಮಾರ್

ಜಾಲಿ ಆಲೂ ಸಮೋಸ

ಬೇಕಾಗುವ ಸಾಮಗ್ರಿಗಳು: ಮೈದಾಹಿಟ್ಟು – 2 ಕಪ್, ಉಪ್ಪು– 1 ಟೀ ಚಮಚ, ಅಜ್ವಾನಾ – 1/2 ಚಮಚ, ಎಣ್ಣೆ – ಕಾಲು ಕಪ್, ಆಲೂಗೆಡ್ಡೆ – 2 (ಬೇಯಿಸಿ ತುರಿದುಕೊಂಡಿದ್ದು), ಖಾರದ ಪುಡಿ– ಒಂದೂವರೆ ಚಮಚ, ಕೊತ್ತಂಬರಿ ಸೊಪ್ಪು, ಗರಂಮಸಾಲೆ – ಕಾಲು ಚಮಚ, ಉಪ್ಪು– ರುಚಿಗೆ, ಕರಿಬೇವು– ಸ್ವಲ್ಪ, ಚಾಟ್ ಮಸಾಲೆ –1/2 ಚಮಚ, ಈರುಳ್ಳಿ – 1, ಅರಿಸಿನ ಪುಡಿ – 1/4 ಚಮಚ, ಅಕ್ಕಿಹಿಟ್ಟು – 1/4 ಕಪ್, ಎಣ್ಣೆ.

ತಯಾರಿಸುವ ವಿಧಾನ: ಒಂದು ಪಾತ್ರೆಯಲ್ಲಿ ಮೈದಾಹಿಟ್ಟು, ಉಪ್ಪು, ಅಜ್ವಾನಾ, ಎಣ್ಣೆ, ನೀರು ಹಾಕಿ ಚೆನ್ನಾಗಿ ಕಲೆಸಿಕೊಳ್ಳಿ. ಇದನ್ನು 15 ನಿಮಿಷಗಳ ಕಾಲ ನೆನೆಸಿಡಿ. ಇನ್ನೊಂದು ಪಾತ್ರೆಯಲ್ಲಿ ಆಲೂಗೆಡ್ಡೆ, ಖಾರದ ಪುಡಿ, ಕೊತ್ತಂಬರಿ ಸೊಪ್ಪು, ಗರಂಮಸಾಲೆ, ಉಪ್ಪು, ಕರಿಬೇವು, ಚಾಟ್ ಮಸಾಲೆ, ಈರುಳ್ಳಿ, ಅರಿಸಿನ ಪುಡಿ, ಅಕ್ಕಿಹಿಟ್ಟು ಹಾಕಿ ಚೆನ್ನಾಗಿ ಕಲೆಸಿಕೊಳ್ಳಿ. ಚಿಕ್ಕ ಚಿಕ್ಕ ಉಂಡೆಗಳನ್ನು ಮಾಡಿ ಇಟ್ಟುಕೊಳ್ಳಿ. ಒಂದು ಬೌಲ್‌ನಲ್ಲಿ ಮೈದಾಹಿಟ್ಟು, ನೀರು ಸೇರಿಸಿ ಪೇಸ್ಟ್ ತಯಾರಿಸಿಕೊಳ್ಳಿ. ನೆನೆಸಿಟ್ಟ ಹಿಟ್ಟಿನಿಂದ ಸ್ವಲ್ಪ ತೆಗೆದುಕೊಂಡು ಅದನ್ನು ಲಟ್ಟಿಸಿ 4 ಭಾಗಗಳಾಗಿ ಮಾಡಿಕೊಳ್ಳಿ. ನಂತರ ಮೈದಾಹಿಟ್ಟಿನ ಪೇಸ್ಟ್ ಅನ್ನು ಹಚ್ಚಿ ತುದಿಯನ್ನು ಮಡಿಚಿ. ಮಧ್ಯದಲ್ಲಿ ಆಲೂಗೆಡ್ಡೆ ಉಂಡೆಗಳನ್ನು ಇಟ್ಟು ಮಡಿಚಿ. ಪಾತ್ರೆಯಲ್ಲಿ ಎಣ್ಣೆ ಕಾಯಲು ಇಟ್ಟು ಬಿಸಿಯಾದ ಮೇಲೆ ಸಮೋಸಗಳನ್ನು ಕರಿಯಿರಿ. ಇದನ್ನು ಹುಣಸೆಚಟ್ನಿ ಅಥವಾ ಖಾರದ ಚಟ್ನಿ ಜೊತೆ ತಿನ್ನಲು ಚೆನ್ನಾಗಿರುತ್ತದೆ.

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಎಲೆಕೋಸಿನ ಮಂಚೂರಿ



ಬೇಕಾಗುವ ಸಾಮಗ್ರಿಗಳು: ಕ್ಯಾಪ್ಸಿಕಂ – 1 (ಹೆಚ್ಚಿದ್ದು), ಮೈದಾಹಿಟ್ಟು – 4 ಚಮಚ, ಕಾರ್ನ್‌ಫ್ಲೋರ್ – 4 ಚಮಚ, ಕೊತ್ತಂಬರಿ ಸೊಪ್ಪು – ಸ್ವಲ್ಪ, ಗರಂಮಸಾಲೆ – 1 ಟೀ ಚಮಚ, ಖಾರದಪುಡಿ – 1 ಚಮಚ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ – 1 ಚಮಚ, ಅಡುಗೆಸೋಡಾ– ಚಿಟಿಕೆ, ಟೊಮೆಟೊ ಕೆಚಪ್ – 4 ಚಮಚ, ವಿನೆಗರ್ – 1 ಚಮಚ, ಸೋಯಾ ಸಾಸ್ – 1 ಚಮಚ, ಈರುಳ್ಳಿ – 1 (ಹೆಚ್ಚಿದ್ದು), ಉಪ್ಪು – ರುಚಿಗೆ, ಕ್ಯಾಬೆಜ್– 3 ಕಪ್

ತಯಾರಿಸುವ ವಿಧಾನ: ಕ್ಯಾಬೆಜ್ ಅನ್ನು ಹೆಚ್ಚಿಕೊಂಡು ಚೆನ್ನಾಗಿ ತೊಳೆದು ಉಪ್ಪು ನೀರಿನಲ್ಲಿ 30 ನಿಮಿಷ ನೆನೆಸಿಡಿ. ಅದನ್ನು ಸೋಸಿಕೊಂಡು ಪಾತ್ರೆಯೊಂದಕ್ಕೆ ಹಾಕಿ ಅದಕ್ಕೆ ಅಡುಗೆಸೋಡಾ, ಖಾರದಪುಡಿ, ಗರಂಮಸಾಲೆ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಮೈದಾಹಿಟ್ಟು, ಜೋಳದ ಹಿಟ್ಟು ಫುಡ್ ಕಲರ್ ಚಿಟಿಕೆ ಸೇರಿಸಿ ಎಲ್ಲವನ್ನೂ ಚೆನ್ನಾಗಿ ಕಲೆಸಿ. ಸ್ವಲ್ಪ ನೀರು ಸೇರಿಸಿಕೊಂಡು ಚಪಾತಿಹಿಟ್ಟಿನ ಹದಕ್ಕೆ ಕಲೆಸಿ. ಅದರಿಂದ ಚಿಕ್ಕ ಚಿಕ್ಕ ಉಂಡೆ ಮಾಡಿಕೊಂಡು ಎಣ್ಣೆಯಲ್ಲಿ ಕರಿಯಿರಿ. ಈಗ ಬೇರೊಂದು ಪಾತ್ರೆಗೆ ಸ್ವಲ್ಪ ಎಣ್ಣೆ ಹಾಕಿ ಬಿಸಿಯಾದ ಮೇಲೆ ಈರುಳ್ಳಿ ಹಾಕಿ ಹುರಿಯಿರಿ. ಅದಕ್ಕೆ ಶುಂಠಿ ಬೆಳ್ಳುಳ್ಳಿ ಪೇಸ್ಟ್, ಕ್ಯಾಪ್ಸಿಕಂ ಹಾಗೂ ಚಿಟಿಕೆ ಉಪ್ಪು ಸೇರಿಸಿ ಹುರಿದುಕೊಳ್ಳಿ. ಟೊಮೆಟೊ ಕೆಚಪ್ ಸೇರಿಸಿ ಮಿಶ್ರಣ ಮಾಡಿ, ನಂತರ ಖಾರದಪುಡಿ ಸೇರಿಸಿ ಚೆನ್ನಾಗಿ ಕಲೆಸಿ. ಅದಕ್ಕೆ ಸೋಯಾ ಸಾಸ್, ವಿನೆಗರ್, ನೀರಿನಲ್ಲಿ ಕಲೆಸಿದ ಕಾರ್ನ್‌ಫ್ಲೋರ್ ಸೇರಿಸಿ ಎಲ್ಲವನ್ನು ಚೆನ್ನಾಗಿ ಮಿಶ್ರಣ ಮಾಡಿ. ಇದು ಸ್ವಲ್ಪ ದಪ್ಪಗಾದ ಮೇಲೆ ಕರಿದುಕೊಂಡ ಎಲೆಕೋಸಿನ ಉಂಡೆಯನ್ನು ಸೇರಿಸಿ. ಅದರ ಮೇಲೆ ಕೊತ್ತಂಬರಿ ಸೊಪ್ಪು ಉದುರಿಸಿ.

ನಳಪಾಕ

ಕಚೋರಿ



ಬೇಕಾಗುವ ಸಾಮಗ್ರಿಗಳು: ಮೈದಾಹಿಟ್ಟು – 2 ಕಪ್, ಉಪ್ಪು– ಚಿಟಿಕೆ, ಅಜ್ವಾನ – ಅರ್ಧ ಚಮಚ, ಎಣ್ಣೆ – ಕಾಲು ಕಪ್, ಕೊತ್ತಂಬರಿ – 1 ಚಮಚ, ಜೀರಿಗೆ – 1 ಚಮಚ, ಸೋಂಪು – 1 ಚಮಚ, ಎಣ್ಣೆ – 3 ಚಮಚ, ಈರುಳ್ಳಿ – 3 ದೊಡ್ಡದು (ಹೆಚ್ಚಿಕೊಂಡಿದ್ದು), ಹಸಿಮೆಣಸು – 2, ಕಡಲೆಹಿಟ್ಟು – 2 ಚಮಚ, ಖಾರದ ಪುಡಿ – 1 ಚಮಚ, ಗರಂಮಸಾಲೆ – ಅರ್ಧ ಚಮಚ, ಕಾಳುಮೆಣಸಿನ ಪುಡಿ – ಅರ್ಧ ಚಮಚ, ಅರಿಸಿನ ಪುಡಿ – ಚಿಟಿಕೆ, ಆಲೂಗೆಡ್ಡೆ – 3 ಬೇಯಿಸಿದ್ದು, ಕೊತ್ತಂಬರಿ ಸೊಪ್ಪು – 1 ಚಮಚ (ಕತ್ತರಿಸಿದ್ದು), ಸಕ್ಕರೆ– 1 ಚಮಚ.

ತಯಾರಿಸುವ ವಿಧಾನ: ಮೈದಾಹಿಟ್ಟಿಗೆ ಉಪ್ಪು, ಅಜ್ವಾನ ಹಾಗೂ 1 ಚಮಚ ಎಣ್ಣೆ ಹಾಕಿ ಚೆನ್ನಾಗಿ ಕಲೆಸಿ. ಅದಕ್ಕೆ ಸ್ವಲ್ಪ ಸ್ವಲ್ಪ ನೀರು ಸೇರಿಸಿ ಚಪಾತಿ ಹಟ್ಟಿನ ಹದಕ್ಕೆ ಕಲೆಸಿಕೊಂಡು 20 ನಿಮಿಷಗಳ ಕಾಲ ನೆನೆಸಿಡಿ. ಕೊತ್ತಂಬರಿ, ಜೀರಿಗೆ ಹಾಗೂ ಸೋಂಪನ್ನು ಹುಡಿ ಮಾಡಿಕೊಳ್ಳಿ. ಪಾತ್ರೆಯೊಂದಕ್ಕೆ 3 ಚಮಚ ಎಣ್ಣೆ ಹಾಕಿ. ಅದಕ್ಕೆ ಹೆಚ್ಚಿದ ಈರುಳ್ಳಿ, ಹಸಿಮೆಣಸು ಸೇರಿಸಿ ಹುರಿದುಕೊಳ್ಳಿ. ಇದಕ್ಕೆ ಪುಡಿ ಮಾಡಿಕೊಂಡ ಮಿಶ್ರಣ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಕಡಲೆಹಿಟ್ಟು ಸೇರಿಸಿ ಚೆನ್ನಾಗಿ ಕಲೆಸಿ. ತಳ ಹಿಡಿಯದಂತೆ ನೋಡಿಕೊಳ್ಳಿ. ಅದಕ್ಕೆ ಖಾರದಪುಡಿ, ಗರಂಮಸಾಲೆ, ಕಾಳುಮೆಣಸಿನ ಪುಡಿ, ಅರಿಸಿನ ಪುಡಿ, ಅಮ್ಚೂರ್ ಪುಡಿ, ಇಂಗು ಸೇರಿಸಿ ಎಲ್ಲವನ್ನೂ ಮಿಶ್ರಣ ಮಾಡಿ. ಅದಕ್ಕೆ ಪುಡಿ ಮಾಡಿದ ಆಲೂಗೆಡ್ಡೆ ಕೊತ್ತಂಬರಿ ಸೊಪ್ಪು ಸೇರಿಸಿ ಮಿಶ್ರಣ ಮಾಡಿ. ಕೊನೆಯಲ್ಲಿ ಸಕ್ಕರೆ ಸೇರಿಸಿ ಕಲೆಸಿ. ಇದನ್ನು ಉಂಡೆ ಮಾಡಿಕೊಳ್ಳಿ. ಮೈದಾಹಿಟ್ಟಿನ ಮಿಶ್ರಣವನ್ನು ಉಂಡೆ ಮಾಡಿಕೊಂಡು ಅಂಗೈ ಅಗಲಕ್ಕೆ ತಟ್ಟಿಕೊಳ್ಳಿ. ಅದರೊಳಗೆ ಆಲೂಗೆಡ್ಡೆ ಉಂಡೆಯನ್ನು ಇರಿಸಿ ಲಟ್ಟಿಸಿಕೊಳ್ಳಿ. ಇದನ್ನು ಎಣ್ಣೆಯಲ್ಲಿ ಕರಿಯಿರಿ. ಕಚೋರಿಯನ್ನು ಸಿಹಿ ಚಟ್ನಿ, ಪಾನಿ ಜೊತೆ ತಿನ್ನಲು ಕೊಡಿ.

(ಲೇಖಕಿ: ಅನು ಸ್ವಯಂ ಕಲಿಕೆ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಪ್ರೀತಿ– ಆಕರ್ಷಣೆಗಳ ನಡುವಿನ ಗೆರೆ ಎಲ್ಲಿದೆ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ಪ್ರೀತಿ– ಪ್ರೇಮ ಮತ್ತು ಆಕರ್ಷಣೆಗಳಿಗೆ ಇರುವ ವ್ಯತ್ಯಾಸವೇನು? ಬದಲಾವಣೆಗಳೇನು? ಇದು ನನ್ನೊಬ್ಬನ ಪ್ರಶ್ನೆಯಲ್ಲ ಎಂದುಕೊಂಡಿದ್ದೇನೆ! ಉತ್ತರಕ್ಕಾಗಿ ಕಾಯುತ್ತಿರುತ್ತೇನೆ.**

ಮಿಥುನ್, ಶಿವಮೊಗ್ಗ.

ಪ್ರೇಮ, ಆಕರ್ಷಣೆಗಳ ಕುರಿತು ತಿಳಿದುಕೊಳ್ಳಬೇಕೆನ್ನುವ ನಿಮ್ಮ ಕುತೂಹಲ ಶ್ಲಾಘನೀಯ. ಗಂಡು– ಹೆಣ್ಣಿನ ದೇಹಗಳು ಸಂತಾನಾಭಿವೃದ್ಧಿಗೆ ಸಿದ್ಧವಾಗುತ್ತಿದ್ದಂತೆ ಪ್ರಕೃತಿ ದೇಹದಲ್ಲಿ ಸೃಜನೆಯಾಗುವ ಹಾರ್ಮೋನ್‌ಗಳ ಮೂಲಕ ಇಬ್ಬರಲ್ಲಿಯೂ ಆಕರ್ಷಣೆಯನ್ನು ಮೂಡಿಸುತ್ತದೆ. ಆಕರ್ಷಣೆ ಮೂಡಿಸಲು ಪ್ರಕೃತಿಗೆ ತನ್ನದೇ ಆದ ತರ್ಕ, ಸಮೀಕರಣಗಳಿವೆ. ಅದು ಜಾತಿ, ವಿದ್ಯೆ, ಬಣ್ಣ, ಆಕಾರಗಳನ್ನು ನೋಡುವುದಿಲ್ಲ. ಆಕರ್ಷಣೆ ಸಹಜವಾಗಿ ದೈಹಿಕವಾಗಿದ್ದರೂ ಮುಂದಿನ ಸಂತಾನವನ್ನು ಒಟ್ಟಾಗಿ ಪೋಷಿಸಲು ಪ್ರೇರೇಪಿಸುವ ಇದನ್ನು ಕೀಳೆಂದುಕೊಳ್ಳುವಂತಿಲ್ಲ. ಹಾಗಾಗಿ ಆಕರ್ಷಣೆ, ಪ್ರೇಮ– ಪ್ರೀತಿಗಳ ಮೊದಲ ಮೆಟ್ಟಿಲು. ಪ್ರೀತಿಯಲ್ಲಿ ಆಕರ್ಷಣೆ ಇರಲೇಬೇಕು, ಆದರೆ ಆಕರ್ಷಣೆಯೇ ಪ್ರೀತಿಯಲ್ಲ. ಆಕರ್ಷಣೆಯನ್ನು ದೀರ್ಘಕಾಲ ಉಳಿಯಬಲ್ಲ ಪ್ರೀತಿಯಾಗಿ ಬದಲಾಯಿಸಲು ಪರಸ್ಪರ ಹೆಚ್ಚಿನ ಪರಿಚಯ, ಒಡನಾಟ ಮತ್ತು ಸಮಯದ ಅಗತ್ಯವಿರುತ್ತದೆ. ಪ್ರೀತಿಯಲ್ಲಿ ಭಿನ್ನಾಭಿಪ್ರಾಯಗಳಿದ್ದೇ ಇರುತ್ತದೆ. ಆದರೆ ಪರಸ್ಪರ ನಂಬಿಕೆ ಮತ್ತು ಗೌರವವಿರುವುದರಿಂದ ಅವುಗಳ ಪರಿಹಾರ ಸುಲಭವಾಗುತ್ತದೆ ಅಥವಾ ಭಿನ್ನಾಭಿಪ್ರಾಯಗಳ ನಡುವೆಯೂ ಬದುಕು ಹಸನಾಗಿರುತ್ತದೆ.

- **8 ವರ್ಷದಿಂದ ಹುಡುಗನೊಬ್ಬನನ್ನು ಪ್ರೀತಿಸುತ್ತಿದ್ದೆ. ಮನೆಯಲ್ಲಿ ಹೇಳಲಾಗಿರಲಿಲ್ಲ. 21 ವರ್ಷದ ನನ್ನನ್ನು 40 ವರ್ಷದ ಮಾವನ ಜೊತೆ ಮದುವೆ ಮಾಡಿದರು. ನಮ್ಮಿಬ್ಬರ ನಡುವೆ ಹೊಂದಾಣಿಕೆಯಿಲ್ಲ. ನನಗೆ ಸಂಸಾರ ಮಾಡಲು ಇಷ್ಟವಿಲ್ಲ. ಪ್ರೀತಿಸಿದವನೊಂದಿಗೆ ಮದುವೆಯಾಗಲು ಅವರ ಮನೆಯವರು ಒಪ್ಪುತ್ತಿಲ್ಲ. ಇಬ್ಬರಿಗೂ ಒಬ್ಬರನ್ನೊಬ್ಬರು ಬಿಟ್ಟು ಬದುಕುವ ಆಸೆಯಿಲ್ಲ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ

ಮದುವೆಗೆ ಮೊದಲೇ ನಿಮ್ಮ ಪ್ರೀತಿಯನ್ನು ಮನೆಯಲ್ಲಿ ಹೇಳಿಕೊಳ್ಳಲಾಗದ ಹಿಂಜರಿಕೆ ಏನಿತ್ತು? ಅಂತಹ ಹಿಂಜರಿಕೆಗಳನ್ನು ಮೀರದೆ ನಿಮ್ಮ ಬದುಕನ್ನು ನಿಮ್ಮ ಹಿಡಿತಕ್ಕೆ ಹೇಗೆ ತೆಗೆದುಕೊಳ್ಳುತ್ತೀರಿ? ನಿಮಗೆ ಈಗಾಗಲೇ ಮದುವೆಯಾಗಿರುವುದರಿಂದ ಮೊದಲು ಕಾನೂನು ಪ್ರಕಾರ ವಿಚ್ಛೇದನ ಪಡೆದುಕೊಳ್ಳಬೇಕಾಗುತ್ತದೆ. ಇದಕ್ಕೆ ನಿಮ್ಮ ಪತಿಯ ಒಪ್ಪಿಗೆಯೂ ಬೇಕು. ಅಷ್ಟು ಸಮಯ ಕಾಯ್ದು ನಿಮ್ಮನ್ನು ಮರುಮದುವೆಯಾಗಲು ಪ್ರಿಯಕರ ಸಿದ್ಧನಿದ್ದಾನೆಯೇ? ಅವನಿಗೂ ಮನೆಯವರನ್ನು ಒಪ್ಪಿಸಲಾಗದಿದ್ದರೆ ನಿಮ್ಮ ಬದುಕಿನ ದಾರಿಯೇನು? ಸದ್ಯದ ಮದುವೆಯಲ್ಲಿ ಹೊಂದಾಣಿಕೆಯಿಲ್ಲವೆಂದಾದರೆ ವಿಚ್ಛೇದನ ಪಡೆದು ನಿಮ್ಮದೇ ಬದುಕನ್ನು ಕಟ್ಟಿಕೊಳ್ಳುವ ಆರ್ಥಿಕಶಕ್ತಿ ನಿಮಗಿದೆಯೇ? ಇಲ್ಲವೆಂದಾದರೆ ಮೊದಲು ಆರ್ಥಿಕವಾಗಿ ಸ್ವತಂತ್ರಳಾಗುವುದು ಹೇಗೆಂದು ಯೋಚಿಸಿ. ನಿಧಾನವಾಗಿ ಮುಂದಿನ ದಾರಿಗಳು ತೆರೆದುಕೊಳ್ಳುತ್ತಾ ಹೋಗಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ಟೆರ್ರಾಕೋಟ: ಧರಿಸಿದರೆ ಬದಲಾಗುವ ನೋಟ!







ಫ್ಯಾಷನ್

ಸುಕೃತ ಎಸ್.

ಸರಳವಾದ ಉಡುಗೆ; ಹೆಚ್ಚು ಡಿಸೈನ್ ಅಥವಾ ಗಾಢ ಬಣ್ಣವಿಲ್ಲದ ತೀರಾ ಸೌಮ್ಯ ಎನಿಸುವ ಬಟ್ಟೆ. ಆದರೂ ಉಡುಪಿನ ಬಣ್ಣಕ್ಕೆ ಅಥವಾ ಡಿಸೈನ್‌ಗೆ ಹೊಂದುವ ಟೆರ್ರಾಕೋಟ ಶೈಲಿಯ ಸರವನ್ನೋ ಅಥವಾ ಕೇವಲ ತುಸು ಉದ್ದದ ಕಿವಿಯೋಲೆಯನ್ನೋ ಹಾಕಿಕೊಳ್ಳಿ. ನಿಮ್ಮ ಒಟ್ಟಾರೆ ನೋಟವೇ ಬದಲಾಗಿ ಬಿಡುತ್ತದೆ!

ಟೆರ್ರಾಕೋಟ ಎಂದರೆ, ಬೇಯಿಸಿದ ಮಣ್ಣು ಎಂದರ್ಥ. ಕೈಮಗ್ಗ ಬಟ್ಟೆಗಳಿಗೆ ಇರುವ ಕ್ರೇಜ್ ಮತ್ತು ಬೇಡಿಕೆ ಟೆರ್ರಾಕೋಟ ಒಡವೆಗೂ ಇದೆ. ಇವನ್ನು ಕೈಮಗ್ಗದ ಉಡುಗೆಗಳೊಂದಿಗೆ ಹೊಂದಿಸಿಕೊಂಡರೆ, ಅದರ ಅಂದವೇ ಬೇರೆ. ಕೈಮಗ್ಗದ ಬಟ್ಟೆಗಳ ಬಳಕೆ ಮತ್ತು ಟೆರ್ರಾಕೋಟದ ಬಳಕೆ ಹಿಂದೆ, ಫ್ಯಾಷನ್ ಬಗೆಗಿನ ಆಸಕ್ತಿ ಮಾತ್ರ ಕಾರಣವಲ್ಲ, ಆ ಎರಡರ ಇತಿಹಾಸಕ್ಕೆ ಇರುವ ದೇಸಿ ಸಂಸ್ಕೃತಿಯೂ ಕಾರಣವಾಗಿದೆ.

ಪರಿಸರ ಸ್ನೇಹಿಯಾದ ಟೆರ್ರಾಕೋಟದ ಬಳಕೆ ತುಸು ಕಷ್ಟ ಎನಿಸುವಂಥದ್ದು. ಮಣ್ಣಿನಿಂದ ಮಾಡಿರುವ ಕಾರಣ ಬಿದ್ದರೆ ಮುರಿದು ಹೋಗುವ ಸಂಭವವೇ ಹೆಚ್ಚು. ಇದರ ಖರೀದಿ ಜೇಬು ಖಾಲಿ ಮಾಡುವ ಬಾಬತ್ತಿನದಲ್ಲ. ಹತ್ತಿ ಬಟ್ಟೆಯಿಂದ ಸುತ್ತಿ ಇಟ್ಟರೂ ಇದನ್ನು ಕಾಪಾಡಿಕೊಳ್ಳಬಹುದು. ವಿವಿಧ ಶೈಲಿಯ, ಬಣ್ಣದ, ವಿನ್ಯಾಸಗಳ ಸರಗಳು, ಕಿವಿಯೋಲೆ, ಬಳೆ, ಬ್ರೇಸ್‌ಲೆಟ್, ಹೂಪ್ಸ್‌ಗಳು ಮುಂತಾದ ವೈವಿಧ್ಯಮಯ ಶೈಲಿಯಲ್ಲಿ ಟೆರ್ರಾಕೋಟ ಆಭರಣಗಳು ಸಿಗುತ್ತವೆ. ನೈಸರ್ಗಿಕ ಬಣ್ಣಗಳನ್ನು ಇಲ್ಲಿ ಬಳಸಲಾಗುತ್ತದೆ.


ಟೆರ್ರಾಕೋಟ ಒಡವೆಗಳು ಸಾಂಪ್ರದಾಯಿಕ ಅಥವಾ ಮಾಡರ್ನ್ ಲುಕ್ ಎರಡಕ್ಕೂ ಹೊಂದಿಕೆ ಆಗುತ್ತವೆ. ಇತ್ತೀಚಿನ ವರ್ಷಗಳಲ್ಲಿ ಈ ಒಡವೆಗಳು ಮದುವಣಗಿತ್ತಿಯರ ಅಚ್ಚುಮೆಚ್ಚಿನ ಆಯ್ಕೆ ಕೂಡ ಆಗಿದೆ. ಖಾದಿ ಸೀರೆಗಳು, ಕಾಟನ್ ಸೀರೆಗಳೊಂದಿಗೂ ಟೆರ್ರಾಕೋಟ ಅಂದವಾಗಿ ಕಾಣುತ್ತವೆ. ಅಜ್ರಖ್, ಡಾಬು ಪ್ರಿಂಟ್ ಇರುವ ಸೀರೆ, ಚೂಡಿದಾರ್, ಉದ್ದನೆಯ ಸ್ಕರ್ಟ್ ಜೊತೆಗೂ ಈ ಒಡವೆಗಳು ಸಾಂಪ್ರದಾಯಿಕ ಲುಕ್ ನೀಡುತ್ತವೆ.

ಆಫೀಸ್‌ಗೆ ಹೋಗುವಾಗ, ಮೀಟಿಂಗ್, ಪಾರ್ಟಿಗಳಿಗೂ ಟೆರ್ರಾಕೋಟದ ಬಳಕೆ ಮಾಡಬಹುದಾಗಿದೆ. ಜೀನ್ಸ್ ಹಾಕಿ, ಅದರ ಮೇಲೊಂದು ಟಾಪ್ ಹಾಕಿಕೊಂಡಾಗಲೂ ಮಾಡರ್ನ್ ಲುಕ್ ನಿಮ್ಮದಾಗುತ್ತದೆ. ಚೂಡಿದಾರ್, ಉದ್ದನೆಯ ಸ್ಕರ್ಟ್‌ನೊಂದಿಗೂ ಟೆರ್ರಾಕೋಟದ ಕಾಂಬಿನೇಷನ್ ಉತ್ತಮವಾಗಿರುತ್ತದೆ.

ಸೀರೆಯೊಂದಿಗೆ ಮ್ಯಾಚ್ ಮಾಡುವಾಗ ಹಲವು ರೀತಿಯ ಬ್ಲೌಸ್‌ನ ವಿನ್ಯಾಸಕ್ಕೂ ಟೆರ್ರಾಕೋಟದ ಸರಗಳು ಮ್ಯಾಚ್ ಆಗುತ್ತವೆ. ಹೈನೆಕ್ ಬ್ಲೌಸ್, ಸ್ಲೀವ್‌ಲೆಸ್ ಬ್ಲೌಸ್‌ಗಳು, ಬೋಟ್ ನೆಕ್ ಸೇರಿದಂತೆ ವಿವಿಧ ವಿನ್ಯಾಸದ ಕತ್ತಿನ ರವಿಕೆಗಳ ಜೊತೆಗೆ ಈ ಆಭರಣವನ್ನು ಹೊಂದಿಸಿಕೊಳ್ಳಬಹುದಾಗಿದೆ.

ಟೆರ್ರಾಕೋಟ ಶೈಲಿಯ ಒಡವೆಗಳು ಯುವತಿಯ ಅಚ್ಚುಮೆಚ್ಚು ಸರಿ. ಹಾಗೆಯೇ ಇದು ಎಲ್ಲಾ ವಯಸ್ಸಿನವರಿಗೂ ಹೊಂದುವಂಥ ಒಡವೆ ಆಗಿದೆ. ಇದರ ಕ್ರೇಜ್ ಹೇಗಿದೆ ಎಂದರೆ, ಇದನ್ನು ಬಿಟ್ಟು ಬೇರೆ ಯಾವುದನ್ನೂ ಧರಿಸದವರೂ ಇದ್ದಾರೆ. ಸಣ್ಣ ಮಕ್ಕಳಿಂದ ಹಿಡಿದು ವಯಸ್ಸಾದವರವರೆಗೂ ಎಲ್ಲರೂ ಇದನ್ನು ಇಷ್ಟಪಡುತ್ತಾರೆ.

ಟೆರ್ರಾಕೋಟ ಒಡವೆ ಧರಿಸಿದಾಗ ಇದರೊಂದಿಗೆ ಬಂಗಾರವನ್ನೋ ಅಥವಾ ಬೇರೆ ಆಭರಣಗಳನ್ನೋ ಬಳಸದಿದ್ದರೆ ಉತ್ತಮ. ಹೀಗೆ ಬಳಕೆ ಮಾಡುವುದು ಟೆರ್ರಾಕೋಟದ ಅಂದವನ್ನು ಕಡಿಮೆ ಮಾಡಬಹುದು.



❦ ಸುಭಾಷಿತ ❦

ವಿದ್ಯಾರ್ಥಿಯು ನೀವು ತುಂಬಿಸಬೇಕಾದ ಪಾತ್ರೆಯಲ್ಲ. ಬದಲಿಗೆ, ನೀವು ಬೆಳಗಿಸಬೇಕಾದ ದೀಪ.

–ಆಲ್ಬರ್ಟ್ ಐನ್‌ಸ್ಟೀನ್

ಎರಡನೇ ಡೋಸ್ ಲಸಿಕೆಗೆ ಉದಾಸೀನ ಜನ, ಸರ್ಕಾರದ ನಿರ್ಲಕ್ಷ್ಯ ಅಕ್ಷಮ್ಯ

ಕೋವಿಡ್ ಸಾಂಕ್ರಾಮಿಕವು ಎಷ್ಟೊಂದು ಮಾರಕ ಎಂಬುದು ಅನುಮಾನಕ್ಕೆ ಎಡೆ ಇಲ್ಲದ ರೀತಿಯಲ್ಲಿ ಇಡೀ ಜಗತ್ತಿಗೆ ಅರ್ಥವಾಗಿದೆ. ಇದು ಆರೋಗ್ಯ ಸಮಸ್ಯೆಯಷ್ಟೇ ಅಲ್ಲ; ಅರ್ಥವ್ಯವಸ್ಥೆಯನ್ನು ಕೂಡ ಇಲ್ಲದಂತೆ ಕಾಡಿದೆ. ಸುಮಾರು ಎರಡು ವರ್ಷ ಜಗತ್ತನ್ನು ಬಹುಪಾಲು ಸ್ತಬ್ಧಗೊಳ್ಳುವಂತೆ ಮಾಡಿತ್ತು ಎಂಬುದು ಈಗಲೂ ಜನರ ಮನದಲ್ಲಿ ಹಸಿರಾಗಿರುವ ವಿಚಾರ. ಲಸಿಕೆಯಿಂದ ಮಾತ್ರ ಸಾಂಕ್ರಾಮಿಕವನ್ನು ನಿಯಂತ್ರಣದಲ್ಲಿ ಇರಿಸಬಹುದು ಎಂಬುದು ಸಾಬೀತಾಗಿರುವ ವಿಚಾರ. ಹಾಗಿದ್ದರೂ ಲಸಿಕೆ ಅಭಿಯಾನದ ವಿಚಾರದಲ್ಲಿ ಭಾರತದಲ್ಲಿ ಉದಾಸೀನ ಮನೆ ಮಾಡಿದೆ ಎಂಬುದಕ್ಕೆ ಮತ್ತೆ ಪುರಾವೆಗಳು ಸಿಗುತ್ತಲೇ ಇವೆ. ಲಸಿಕೆಯ ಮೊದಲ ಡೋಸ್ ಪಡೆದುಕೊಂಡ 12 ಕೋಟಿಗೂ ಹೆಚ್ಚು ಜನರು ನಿಗದಿತ ಅವಧಿಯ ಒಳಗೆ ಎರಡನೇ ಡೋಸ್ ಹಾಕಿಸಿಕೊಂಡಿಲ್ಲ ಎಂದು ಕೇಂದ್ರದ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಹೇಳಿದ್ದಾರೆ. ನೂರು ಕೋಟಿ ಡೋಸ್ ಲಸಿಕೆ ನೀಡಿಕೆಯನ್ನು ನಾವು ಸಂಭ್ರಮಿಸಿ ಬಹಳ ದಿನಗಳೇನೂ ಆಗಿಲ್ಲ. ಸಂಭ್ರಮ ಮರೆಯಾಗುವ ಮುನ್ನವೇ, ನಾವು ಗಂಭೀರವಾಗಿ ಪರಿಗಣಿಸಬೇಕಾದ ಈ ಸುದ್ದಿ ಹೊರಬಿದ್ದಿದೆ. ಲಸಿಕೆ ಅಭಿಯಾನದ ಪ್ರಗತಿ ಪರಿಶೀಲನೆಗಾಗಿ ರಾಜ್ಯ ಆರೋಗ್ಯ ಸಚಿವರ ಜತೆ ನಡೆಸಿದ ಸಭೆಯಲ್ಲಿ ಮಾಂಡವೀಯ ಅವರು 12 ಕೋಟಿ ಜನರು ಲಸಿಕೆಯ ಎರಡನೇ ಡೋಸ್ ಹಾಕಿಸಿಕೊಳ್ಳುವುದರಲ್ಲಿ ತಪ್ಪಿಸಿಕೊಂಡಿರುವ ವಿಚಾರ ತಿಳಿಸಿದ್ದಾರೆ. ವಿವಿಧ ಕಾರ್ಯತಂತ್ರಗಳನ್ನು ಹಮ್ಮಿಕೊಂಡು ಈ 12 ಕೋಟಿ ಜನರಿಗೆ ಲಸಿಕೆಯ ಎರಡನೇ ಡೋಸ್ ಹಾಕಿಸುವುದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಮಾಂಡವೀಯ ಸೂಚಿಸಿದ್ದಾರೆ.



ಲಸಿಕೆ ಹಾಕಿಸಿಕೊಳ್ಳುವ ವಿಚಾರದಲ್ಲಿನ ನಿರ್ಲಕ್ಷ್ಯಕ್ಕೆ ಭಾರಿ ಬೆಲೆ ತೆರಬೇಕಾದೀತು ಎಂಬ ಎಚ್ಚರ ಆಡಳಿತ ನಡೆಸುವವರು ಮತ್ತು ಜನರಲ್ಲಿ ಇರಬೇಕು

12 ಕೋಟಿ ಜನರು ಲಸಿಕೆಯ ಎರಡನೇ ಡೋಸ್ ಹಾಕಿಸಿಕೊಂಡಿಲ್ಲ ಎಂದರೆ, ಸರ್ಕಾರವು ಮಾಡಿರುವ ಜಾಗೃತಿ ಕಾರ್ಯಕ್ರಮವು ಪರಿಣಾಮಕಾರಿ ಆಗಿಲ್ಲ ಎಂದು ಭಾವಿಸಬೇಕಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಗಂಭೀರವಾಗಿ ಯೋಚಿಸಬೇಕಿದೆ. ಏಕೆಂದರೆ, ಕೋವಿಡ್ ಸಾಂಕ್ರಾಮಿಕವು ಇನ್ನೂ ಮರೆಯಾಗಿಲ್ಲ. ಪ್ರತಿದಿನ ದೃಢಪಡುತ್ತಿರುವ ಪ್ರಕರಣಗಳ ಸಂಖ್ಯೆಯು ಇಳಿಕೆಯಾಗುತ್ತಿರುವುದು ಜನರು ಅಸಡ್ಡೆ ತೋರಲು ಕಾರಣ ಆಗಿರಬಹುದು. ಆದರೆ, ಸರ್ಕಾರದ ಮಟ್ಟದಲ್ಲಿ ನಿರ್ಲಕ್ಷ್ಯ ಇರಬಾರದು. ಎರಡನೇ ಡೋಸ್ ಅನ್ನು ನಿಗದಿತ ಅಂತರದಲ್ಲಿ ಹಾಕಿಸಿಕೊಂಡರೆ ಮಾತ್ರ ಕೋವಿಡ್‌ನಿಂದ ರಕ್ಷಣೆ ಕೊಡುತ್ತದೆ ಎಂಬ ವಿಚಾರವನ್ನು ಜನರಿಗೆ ಮನದಟ್ಟು ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಕೆಲವು ದೇಶಗಳಲ್ಲಿ ಜನರಿಗೆ ಮೂರನೇ ಡೋಸ್ ಅಥವಾ ಬೂಸ್ಟರ್ ಡೋಸ್ ಹಾಕಿಸುವ ಬಗ್ಗೆ ಚಿಂತನೆಗಳು ನಡೆದಿವೆ. ಹಾಗಿರುವಾಗ ಎರಡನೇ ಡೋಸ್ ವಿಚಾರದಲ್ಲಿಯೇ ನಾವು ಎಡವಿದರೆ ಹೇಗೆ? ಜರ್ಮನಿ, ಶೇ 80ರಷ್ಟಕ್ಕೂ ಹೆಚ್ಚು ಜನರು ಸಂಪೂರ್ಣ ಲಸಿಕೆ ಹಾಕಿಸಿಕೊಂಡಿರುವ ಯುರೋಪ್‌ನ ಹಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿವೆ. ಆಸ್ಟ್ರಿಯಾ, ನೆದರ್‌ಲೆಂಡ್ಸ್ ದೇಶಗಳು ಮತ್ತೆ ಭಾಗಶಃ ಲಾಕ್‌ಡೌನ್ ನಿರ್ಧಾರಕ್ಕೆ ಬಂದಿವೆ. ಭಾರತದಲ್ಲಿ ಸಂಪೂರ್ಣ ಲಸಿಕೆ ಹಾಕಿಸಿಕೊಂಡಿರುವ ಜನರ ಪ್ರಮಾಣ ಶೇ 38ರಷ್ಟು ಮಾತ್ರ ಎಂಬುದು ಕಳವಳಕಾರಿಯಾದ ಅಂಶವೇ ಆಗಿದೆ. ಹೀಗಿರುವಾಗ, ಲಸಿಕೆ ಹಾಕಿಸುವ ವಿಚಾರದಲ್ಲಿನ ನಿರ್ಲಕ್ಷ್ಯಕ್ಕೆ ಭಾರಿ ಬೆಲೆ ತೆರಬೇಕಾದೀತು ಎಂಬ ಎಚ್ಚರ ಆಡಳಿತ ನಡೆಸುವವರು ಮತ್ತು ಜನರಲ್ಲಿ ಇರಬೇಕು.

ಕೋವಿಡ್ ಸಾಂಕ್ರಾಮಿಕದಿಂದ ಅನುಭವಿಸಿದ ಕಷ್ಟ ನಷ್ಟಗಳು ಏನು ಎಂಬುದನ್ನು ಜನರು ಮರೆಯಬಾರದು. ಅತ್ಯಂತ ವೇಗವಾಗಿ ಹರಡುವ ಕೊರೊನಾ ಸೋಂಕು, ಜನಸಂಖ್ಯೆ ಮತ್ತು ಜನಸಾಂದ್ರತೆ ಹೆಚ್ಚಾಗಿರುವ ಭಾರತದಲ್ಲಿ ಮತ್ತೊಂದು ಅನಾಹುತ ಸೃಷ್ಟಿಸಲು ಜನರು ಅವಕಾಶ ಕೊಡಬಾರದು. ಮೊದಲ ಡೋಸ್ ಹಾಕಿಸಿಕೊಂಡ ಜನರು ಎರಡನೇ ಡೋಸ್ ಪಡೆಯುವ ವಿಚಾರದಲ್ಲಿ ಉದಾಸೀನ ತೋರಿಸಬಾರದು. ಲಸಿಕೆಯ ಎರಡೂ ಡೋಸ್ ಹಾಕಿಸಿಕೊಂಡು ದೇಶವನ್ನು ಕೋವಿಡ್‌ಮುಕ್ತ ಮಾಡುವುದು ಜನರ ಸಾಮಾಜಿಕ ಹೊಣೆಗಾರಿಕೆಯೂ ಹೌದು. ಸೋಂಕು ಮತ್ತೆ ಹೆಚ್ಚಳವಾಗಿ, ದೊಡ್ಡ ಅನಾಹುತವಾದರೆ ಅದು ಅಕ್ಷಮ್ಯ. ಲಸಿಕೆ ಅಭಿಯಾನಕ್ಕೆ ಇನ್ನಷ್ಟು ಕಸುವು ತುಂಬುವುದು ಅಗತ್ಯ. ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದಂದು 2.5 ಕೋಟಿ ಡೋಸ್ ಲಸಿಕೆ ಹಾಕಿಸಲಾಗಿದೆ. ಆ ಬಳಿಕ, ಲಸಿಕೆ ಹಾಕಿಸುವಿಕೆಯು ಜಡಗೊಂಡಿದೆ. ಕೋವಿಡ್‌ನಂತಹ ಸಾಂಕ್ರಾಮಿಕವನ್ನು ತೊಡೆದು ಹಾಕುವಲ್ಲಿ ಸಾಂಕೇತಿಕವಾದ ನಡೆಯು ಉಪಯುಕ್ತ ಎನಿಸದು. 18 ವರ್ಷದ ಒಳಗಿನ ಮಕ್ಕಳಿಗೆ ಲಸಿಕೆ ಹಾಕಿಸುವಿಕೆ ಇನ್ನೂ ಆರಂಭ ಆಗಿಲ್ಲ. ಬ್ರಿಟನ್‌ನಲ್ಲಿ 18ರ ಒಳಗಿನವರಿಗೆ ಲಸಿಕೆ ನೀಡಿಕೆ ಪ್ರಮಾಣವು ಕಡಿಮೆ ಇರುವುದೇ ಸಾಂಕ್ರಾಮಿಕವು ಮತ್ತೆ ಸಕ್ರಿಯವಾಗಲು ಕಾರಣ ಎನ್ನಲಾಗುತ್ತಿದೆ. ಅದನ್ನು ದೇಶದಲ್ಲಿ ಶೀಘ್ರವಾಗಿ ಆರಂಭಿಸಬೇಕು. ಕೊರೊನಾ ಸೋಂಕು ನಿರ್ಮೂಲನೆಯಲ್ಲಿ ಸರ್ಕಾರ ಮತ್ತು ಜನರು ಹೆಚ್ಚು ಜವಾಬ್ದಾರಿಯಿಂದ ವರ್ತಿಸುವುದು ಜಗತ್ತಿನ ಒಳಿತಿನ ದೃಷ್ಟಿಯಿಂದ ಮಹತ್ವದ್ದಾಗಿದೆ.

ದಿನದ ಟ್ವೀಟ್



ಮಾದರಿ ಹೋರಾಟ

ದೇಶದಾದ್ಯಂತ ಇತ್ತೀಚೆಗೆ ವರದಿಯಾದ ಮಾದಕವಸ್ತು ಪ್ರಕರಣಗಳಲ್ಲಿ ವಶಪಡಿಸಿಕೊಂಡ ಮಾದಕವಸ್ತುಗಳು ಹೆಚ್ಚಾಗಿ ಆಂಧ್ರ ಪ್ರದೇಶದಲ್ಲಿ ಪತ್ತೆಯಾಗಿವೆ ಅಥವಾ ಪ್ರಕರಣಗಳು ಆ ರಾಜ್ಯದೊಂದಿಗೆ ನಂಟು ಹೊಂದಿವೆ. ಈ ಗಂಭೀರ ವಿಷಯದ ಬಗ್ಗೆ ಪವನ್ ಕಲ್ಯಾಣ್ ಅವರು ಆಂಧ್ರಪ್ರದೇಶದಲ್ಲಿ ಧ್ವನಿ ಎತ್ತಿದ್ದಾರೆ. ಮಾದಕವಸ್ತು ಭಯೋತ್ಪಾದನೆ ವಿರುದ್ಧದ ಹೋರಾಟದ ಕುರಿತು ಜಾಗೃತಿ ಮೂಡಿಸುವಲ್ಲಿ ಇತರ ರಾಜ್ಯಗಳಲ್ಲಿಯೂ ಇಂತಹ ಮಾದರಿ ನಡೆಯ ಅಗತ್ಯವಿದೆ.

ಅನ್ಷುಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

ಕಿಡಿನುಡಿ

ಪಕ್ಷಕ್ಕೆ ದುಡಿದ ಕಾರ್ಯಕರ್ತರನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಇದು ಅಪ್ಪ, ಮಕ್ಕಳ ಪಕ್ಷ ಅಲ್ಲ. ಪ್ರತೀ ವಿಧಾನಸಭಾ ಕ್ಷೇತ್ರದಲ್ಲೂ ಪ್ರವಾಸ ಮಾಡಿ ಶಾಸಕರು, ಆಕಾಂಕ್ಷಿಗಳು, ಕಾರ್ಯಕರ್ತರ ಅಭಿಪ್ರಾಯ ಪಡೆದು ಅಭ್ಯರ್ಥಿ ಘೋಷಣೆ ಮಾಡಲಾಗುವುದು. ಎಚ್.ಡಿ. ಕುಮಾರಸ್ವಾಮಿ ಅವರು ಸ್ಥಳೀಯರ ಅಭಿಪ್ರಾಯ ಪಡೆದು ವಿಧಾನಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಯನ್ನು ಪ್ರಕಟಿಸುವರು.



ಎಚ್.ಡಿ.ದೇವೇಗೌಡ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ

25 ವರ್ಷಗಳ ಹಿಂದೆ

ಬುಧವಾರ, 13-11-1996

● **ಸೌಂದರ್ಯ ಸ್ಪರ್ಧೆಗೆ ಬೆಳಕಿನ ಹಬ್ಬದ ಮೆರುಗು**

ಬೆಂಗಳೂರು, ನ.12– ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸಲು ಆಗಮಿಸಿರುವ ವಿವಿಧ ದೇಶಗಳ ಸುಂದರಿಯರು ಬಲಿಪಾಡ್ಯಮಿಯ ದಿನವಾದ ಇಂದು ನಗರದಲ್ಲಿ ದೀಪಾವಳಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು. ಇದರೊಂದಿಗೆ ಭಾರತದಲ್ಲಿ ಇದೇ ಪ್ರಥಮ ಬಾರಿಗೆ ನಡೆಯುತ್ತಿರುವ ವಿಶ್ವಸುಂದರಿ ಸ್ಪರ್ಧೆ ಆರಂಭವಾಯಿತು.

ಸ್ಪರ್ಧೆಯನ್ನು ಸಂಘಟಿಸಿರುವ ಎಬಿಸಿಎಲ್ ಸಂಸ್ಥೆಯು ವಿಮಾನ ಪಡೆಯ ತರಬೇತಿ ಕೇಂದ್ರದ ಪರೇಡ್ ಮೈದಾನದಲ್ಲಿ ದೀಪಾವಳಿ ಆಚರಣೆಗಾಗಿ ಸಮಾರಂಭ ಏರ್ಪಡಿಸಿತ್ತು.

● **ಹರಿಯಾಣ ಬಳಿ ವಿಮಾನಗಳ ಡಿಕ್ಕಿ: 351 ಸಾವು**

ನವದೆಹಲಿ, ನ. 12 (ಯುಎನ್ಐ, ಪಿಟಿಐ)– ಹರಿಯಾಣದ ರೋಟಕ್ ಜಿಲ್ಲೆಯ ಜಾಜಾರ್ ಮೇಲೆ ಹಾರಾಡುವಾಗಲೇ ಇಂಟರ್ ನ್ಯಾಷನಲ್ ಏರ್‌ವೇಸ್‌ಗೆ ಸೇರಿದ ಎರಡು ವಿಮಾನಗಳು ಪರಸ್ಪರ ಡಿಕ್ಕಿ ಹೊಡೆದುದರಿಂದ ಕನಿಷ್ಠ 351 ಮಂದಿ ಸತ್ತ ಘೋರ ಘಟನೆ ಇಂದು ಸಂಜೆ ಸಂಭವಿಸಿದೆ. ಸತ್ತವರಲ್ಲಿ 200ಕ್ಕೂ ಹೆಚ್ಚು ಮಂದಿ ಭಾರತೀಯರು.

50 ವರ್ಷಗಳ ಹಿಂದೆ

ಶನಿವಾರ, 13-11-1971

● **ನಗರದ ಸುತ್ತಮುತ್ತ ಬೆಳೆಯಲು ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳಿಗೆ ಮಾತ್ರ ಅವಕಾಶ: ಧರ್ಮವೀರ**

ಬೆಂಗಳೂರು, ನ. 12– ಬೆಂಗಳೂರು ಸುತ್ತಮುತ್ತ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಉತ್ತೇಜನ ನೀಡದು.

ಸರ್ಕಾರದ ಈ ಸಂಬಂಧದ ನೀತಿಯನ್ನು ಇಂದು ವರದಿಗಾರರಿಗೆ ವಿವರಿಸಿದ ರಾಜ್ಯಪಾಲ ಧರ್ಮವೀರ ಅವರು, ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳ ಬೆಳವಣಿಗೆಗೆ ಮಾತ್ರ ಅವಕಾಶ ಕೊಡಲಾಗುವುದು ಎಂದರು.

‘ಬೆಂಗಳೂರು ಸುತ್ತಮುತ್ತ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ಕೊಡಬಾರದೆಂದು ನಿರ್ಧರಿಸಲಾಗಿದೆ. ಇದು ಸರ್ಕಾರದ ನೀತಿ ಎಂದೇ ಭಾವಿಸಬಹುದು. ಆದರೆ, ಕಳೆದುಕೊಳ್ಳಬಾರದೆಂದು ಭಾವಿಸುವ ಕೈಗಾರಿಕೆಯೊಂದು ಬಂದರೆ ಅದಕ್ಕೆ ಒಪ್ಪಿಗೆ ನೀಡಬಹುದು’ ಎಂದರು.

● **ರಾಜ್ಯದಲ್ಲಿ ರೂ. 3 ಕೋಟಿ ಹೆಚ್ಚುವರಿ ತೆರಿಗೆ**

ಬೆಂಗಳೂರು, ನ. 12– ಬಾಂಗ್ಲಾ ಸಮಸ್ಯೆಯಿಂದುಂಟಾಗಿರುವ ಆರ್ಥಿಕ ಸಮಸ್ಯೆಯನ್ನೆದುರಿಸಲು ಇತರ ರಾಜ್ಯಗಳಂತೆ ಮೈಸೂರು ರಾಜ್ಯ ಕೆಲವು ತೆರಿಗೆಗಳ ಮೇಲೆ ‘ಸರ್‌ಚಾರ್ಜ್’ ವಿಧಿಸುವುದರ ಮೂಲಕ 2ರಿಂದ 3 ಕೋಟಿ ರೂ. ಹೆಚ್ಚು ಆದಾಯ ಪಡೆಯಲಿದೆ. ಮಾರಾಟ ತೆರಿಗೆ, ಸಿನಿಮಾ ಟಿಕೆಟ್‌ಗಳು, ಒಂದು ರೂ.ಗಿಂತ ಹೆಚ್ಚಿನ ಬಸ್ ಟಿಕೆಟ್‌ಗಳು, ಸ್ಟ್ಯಾಂಪ್ ಹಾಗೂ ರಿಜಿಸ್ಟ್ರೇಷನ್ ತೆರಿಗೆಗಳ ಮೇಲೆ ‘ಸರ್‌ಚಾರ್ಜ್’ ವಿಧಿಸುವ ಸಲಹೆಗಳನ್ನು ರಾಜ್ಯ ಸರ್ಕಾರ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ.

ನೆಹರೂ ವ್ಯಕ್ತಿತ್ವ, ವೈಚಾರಿಕತೆಗಳನ್ನು ಮುಕ್ತ ಮನಸ್ಸಿನಿಂದ ಅರಿಯಬೇಕಾದ ಕಾಲ

ಮಕ್ಕಳನ್ನು ಬೆಳೆಸುವುದು; ದೇಶ ಕಟ್ಟುವುದು



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಆಧುನಿಕ ಭಾರತವನ್ನು ನಿರ್ಮಿಸಿದ ಶ್ರೇಷ್ಠ ನಾಯಕರಲ್ಲೊಬ್ಬರಾದ ಜವಾಹರಲಾಲ್ ನೆಹರೂ ಸ್ವಾತಂತ್ರ್ಯ ಚಳವಳಿಗೆ ಪೂರ್ಣವಾಗಿ ಸಮರ್ಪಿಸಿಕೊಂಡಿದ್ದ ಕಾಲದಲ್ಲಿ, ಮಗಳನ್ನು ಜ್ಞಾನಿಯಾಗಿ ಬೆಳೆಸುವ ಕರ್ತವ್ಯವೂ ಅವರನ್ನು ಕಾಡತೊಡಗಿತು. ಬೋರ್ಡಿಂಗ್ ಸ್ಕೂಲಿನಲ್ಲಿದ್ದ ಹತ್ತು ವರ್ಷದ ಮಗಳು ಇಂದಿರಾ ಭಾರತ, ಇಂಗ್ಲೆಂಡ್‌ಗಳ ಇತಿಹಾಸವನ್ನು ಅಷ್ಟಿಷ್ಟು ಓದಿಕೊಂಡಿದ್ದರಿಂದ, ನೆಹರೂ ತಾವು ಬಲ್ಲ ಜಗತ್ತಿನ ಚರಿತ್ರೆಯನ್ನು ಪತ್ರ ರೂಪದಲ್ಲಿ ಮಗಳಿಗೆ ಬರೆಯತೊಡಗಿದರು. ಅಲ್ಲಿ ಬೆಚ್ಚನೆಯ ಪ್ರೀತಿಯಿತ್ತು; ಮಗಳಿಗೆ ಲೋಕವನ್ನು ನೋಡುವ ಆರೋಗ್ಯಕರ ನೋಟ ಕಲಿಸುವ ಹೊಣೆಯಿತ್ತು. ‘ಲೆಟರ್ ಫ್ರಂ ಎ ಫಾದರ್ ಟು ಹಿಸ್ ಡಾಟರ್’ ಎಂದು 1929ರಲ್ಲಿ ಪ್ರಕಟವಾದ ಪತ್ರಗಳನ್ನು ಕಾದಂಬರಿಕಾರ ಪ್ರೇಮಚಂದ್ ಅವರು ಹಿಂದಿಗೆ ಅನುವಾದಿಸಿ ಜನಪ್ರಿಯಗೊಳಿಸಿದರು. 1941ರಲ್ಲಿ ಕಪಟರಾಳ ಕೃಷ್ಣರಾಯರು ಅವನ್ನು ‘ಮಗಳಿಗೆ ಅಪ್ಪ ಬರೆದ ಪತ್ರಗಳು’ ಎಂದು ಅನುವಾದಿಸಿ ಕನ್ನಡ ಪ್ರಜ್ಞೆಯನ್ನು ಜಾಗೃತಗೊಳಿಸುವ ಕರ್ತವ್ಯ ಮಾಡಿದರು.


ಇಂಥ ಅರ್ಥಪೂರ್ಣ ಸಾಂಸ್ಕೃತಿಕ ಕರ್ತವ್ಯಗಳ ಮುಂದುವರಿಕೆಯಾಗಿ ಹೊಸ ತಲೆಮಾರಿನ ‘ಋತುಮಾನ’ ಈ ಕನ್ನಡಾನುವಾದವನ್ನು ಪ್ರಿಂಟ್ (store.ruthumana.com) ಹಾಗೂ ಇ-ಪುಸ್ತಕ (ruthumana app) ರೂಪಗಳಲ್ಲಿ ಪ್ರಕಟಿಸಿದೆ. ನೆಹರೂ ಪತ್ರಗಳು ‘ಚರಿತ್ರೆಯನ್ನು ಸರಿಯಾದ ಕ್ರಮದಲ್ಲಿ ಅರಿಯುವುದನ್ನು ಕಲಿಸುತ್ತಲೇ, ಮಕ್ಕಳಲ್ಲಿ ಆಧುನಿಕ ದೃಷ್ಟಿಕೋನ ಮತ್ತು ವೈಚಾರಿಕ ಮನೋಭಾವ’ ಬೆಳೆಸುತ್ತವೆ ಎನ್ನುವ ಪ್ರಕಾಶಕರು, ‘ಇದನ್ನು ನಾವು ಪ್ರಕಟಿಸಲು ಇನ್ನೊಂದು ಸ್ಪಷ್ಟ ಕಾರಣ- ನೆಹರೂ ಸುತ್ತ ದ್ವೇಷದ ಗೋಡೆ ಕಟ್ಟಿ ಅವರ ವ್ಯಕ್ತಿತ್ವವನ್ನು ದಮನಿಸುವ ವಿಷಕಾರಿ ಬೆಳವಣಿಗೆಗಳು’ ಎಂದಿರುವುದು ಗಮನಾರ್ಹವಾಗಿದೆ. ‘ಸ್ವಾತಂತ್ರ್ಯೋತ್ತರ ಹೊಸ ಭಾರತವನ್ನು ಸೆಕ್ಯುಲರ್, ವೈಜ್ಞಾನಿಕ ಚಿಂತನೆಯ ಅಡಿಪಾಯದ ಮೇಲೆ ಕಟ್ಟಬೇಕು’ ಎಂದು ಕನಸಿದ್ದ ನೆಹರೂ ವ್ಯಕ್ತಿತ್ವ, ಉದಾರವಾದಿ ನೋಟ, ಸಾಧನೆಗಳನ್ನು ಈಚಿನ ‘ಚೀರ್‍ರಾಜಕಾರಣ’ ವ್ಯವಸ್ಥಿತವಾಗಿ ಹಿನ್ನೆಲೆಗೆ ತಳ್ಳಲೆತ್ನಿಸುತ್ತಿದೆ. ಇತ್ತ ಕಾಂಗ್ರೆಸ್ಸಿಗರಲ್ಲಿ ತಮ್ಮ ಪಕ್ಷವೇ ರೂಪಿಸಿದ ವಿಶ್ವನಾಯಕರೊಬ್ಬರ ಮಾದರಿಯನ್ನು ಮರುಸ್ಥಾಪಿಸುವ ತಾತ್ವಿಕ ಬದ್ಧತೆ, ಬೌದ್ಧಿಕ ಸಿದ್ಧತೆಗಳು ಕಾಣೆಯಾಗತೊಡಗಿವೆ. ನೆಹರೂ ಜನ್ಮದಿನದ (ನವೆಂಬರ್ 14) ನೆನಪಿನಲ್ಲಾದರೂ ಕಣ್ಣು ಮಬ್ಬಾಗಿರುವ ಕಾಂಗ್ರೆಸ್ಸಿಗರೂ, ‘ಮೆಳ್ಳೆಗಣ್ಣಿನ’ ಕೋಮುವಾದಿಗಳೂ ಈ ಪುಸ್ತಕವನ್ನು ಮುಕ್ತ ಮನಸ್ಸಿನಿಂದ ಓದಬೇಕು; ಮಗಳನ್ನು ಬೆಳೆಸುತ್ತಲೇ ದೇಶದ ಕಿರಿಯರಿಗೂ, ಹಿರಿಯರಿಗೂ ಚರಿತ್ರೆಯನ್ನು ನೋಡುವ ಹೊಸ ನೋಟ ಕೊಟ್ಟು, ದೇಶನಿರ್ಮಾಣದ ತಳಹದಿ ಹಾಕಿದ ನೆಹರೂ ಮಾರ್ಗವನ್ನು ಅರಿತು, ಅನುಸರಿಸಬೇಕು.

ವಾಚಾಳಿ ನಾಲಗೆಗಳು ಗಳಹಿದ್ದೇ ಚರಿತ್ರೆ, ನಾಯಕರಿಗೆ ಭಾಷಣ ಬರೆದುಕೊಡುವ ವಿಕೃತ ಆಸಕ್ತ ಹಿತಗಳು ನೇಯ್ದಿದ್ದೇ ಚರಿತ್ರೆ ಎಂಬ ಬುರುಗು ನೊರೆ ಎದ್ದಿರುವ ಕಾಲದಲ್ಲಿ ನೆಹರೂ ಪತ್ರಗಳ ಮೂಲಕ ಲೋಕವನ್ನು ನೋಡಿದರೆ ನಮ್ಮ ಸಂಕುಚಿತತೆ ಕಡಿಮೆಯಾಗಬಲ್ಲದು. ಮಕ್ಕಳು, ತಂದೆತಾಯಿಗಳು, ಸಮಾಜ ಹಾದಿ ತಪ್ಪದಿರಲು ಚರಿತ್ರೆಯನ್ನು ಹೇಗೆ ಹೇಳಿಕೊಡಬೇಕೆಂಬ ಪಾಠವೂ ಇಲ್ಲಿದೆ: ‘ಈ ಪತ್ರದಲ್ಲಿ ಹೇಳುತ್ತಿರುವುದು ಈ ಜಗತ್ತನ್ನು ಒಟ್ಟಾಗಿ ನೋಡುವುದಕ್ಕೂ, ಅಲ್ಲಿರುವ ಬೇರೆ ಬೇರೆ ಜನರು ನಮ್ಮ ಸಹೋದರ ಸಹೋದರಿಯರೆಂದು ತಿಳಿಯುವುದಕ್ಕೂ ನಿನ್ನನ್ನು ತೊಡಗಿಸುವುದೆಂದು ನನ್ನ ನಂಬಿಕೆ.’

‘ಮನೆಯೇ ಮೊದಲ ಪಾಠಶಾಲೆ’ ಎಂಬ ನಾಣ್ಣುಡಿಯ ಅರ್ಥವನ್ನು ತಂದೆಯೊಬ್ಬ ಬರೆದ ಈ ಪತ್ರ-ಪಾಠಗಳು ವಿಸ್ತರಿಸುತ್ತವೆ. ಮುಕ್ತ ಮನಸ್ಸಿನ ಎಳೆಯ ಮಕ್ಕಳಿಗೆ ಯಾವುದೇ ಒಂದು ರೀತಿಯ ವಿಶಾಲ ನೋಟ ಕಲಿಸಿದರೂ ಸಾಕು, ಅವರು ಜಾತಿ, ಧರ್ಮ, ನಾಡುಗಳ ಸಂಕುಚಿತ ಗಡಿಗೆರೆ ಮೀರಿ ಎಲ್ಲರನ್ನೂ ಸಮಾನರನ್ನಾಗಿ ಕಾಣುವ ನೋಟ ಬೆಳೆಸಿಕೊಳ್ಳಬಲ್ಲರು. ಈ ಉದ್ದೇಶದಿಂದ ಮಗಳಿಗೆ ಭೂಮಿ, ಪ್ರಾಣಿ, ಮನುಷ್ಯನ ವಿಕಾಸ, ಭಾಷೆ, ಧರ್ಮ, ಪ್ರಾಚೀನ ಸಂಸ್ಕೃತಿ, ನಾಗರಿಕತೆ...ಎಲ್ಲದರ ಬಗೆಗೂ ಬರೆಯುವ ನೆಹರೂ, ಮಗಳನ್ನು ಜಾಣೆಯಾಗಿಸುತ್ತಲೇ ಉದಾರ ನೋಟವನ್ನೂ ಬೆಳೆಸಲೆತ್ನಿಸುತ್ತಾರೆ. ಜನರ ಮೈಬಣ್ಣದ ಬಗ್ಗೆ ಬರೆಯುತ್ತಾ ನೆಹರೂ ಹೇಳುತ್ತಾರೆ:‘ದೊಡ್ಡ ದೊಡ್ಡ ಮನೆಗಳಲ್ಲಿರುವ ಶ್ರೀಮಂತರು ತಮ್ಮನ್ನೂ, ತಮ್ಮ ರೂಪವನ್ನೂ ಕಾಪಾಡಿಕೊಳ್ಳುತ್ತಿರಬಹುದು...ಆದರೆ ಸ್ವತಃ ದುಡಿಯದೆ ಇತರರ ದುಡಿತದ ಮೇಲೆ ಬಾಳುವೆ ಮಾಡುವುದೇನೂ ದೊಡ್ಡತನದ ಲಕ್ಷಣವಲ್ಲ’.

ಭಾಷೆಗಳಲ್ಲಿನ ಹೋಲಿಕೆ, ಏಕತೆ ಕುರಿತು ಬರೆಯುತ್ತಾ, ಭಾಷಿಕರ ನಡುವಣ ಕಚ್ಚಾಟಕ್ಕೆ ಪರಿಹಾರ ಸೂಚಿಸುವ ನೆಹರೂ, ಸಂಸ್ಕೃತಿಯನ್ನು ಚರ್ಚಿಸುತ್ತಾ ಹೇಳುತ್ತಾರೆ: ‘ಸ್ವಾರ್ಥವಿಲ್ಲದೆ ಎಲ್ಲರ ಹಿತಕ್ಕಾಗಿ ಪರರೊಂದಿಗೆ ದುಡಿಯುವ ಮನುಷ್ಯನೇ ಸಂಸ್ಕೃತಿಯ ಹೆಗ್ಗುರುತು. ಒಂಟಿಗನಾಗಿ ದುಡಿಯುವುದಕ್ಕಿಂತ ಒಂದಾಗಿ ದುಡಿಯುವುದು ಮಿಗಿಲಾದ ಕೆಲಸ.’ ಧರ್ಮವನ್ನು ವಿವರಿಸುತ್ತಾ, ‘ಧರ್ಮದ ಕಲ್ಪನೆ ಎಷ್ಟು ಬೆಳೆದರೂ ಧರ್ಮದ ಹೆಸರಿನಲ್ಲಿ ಜನರು ತಮ್ಮಲ್ಲಿ ಕಚ್ಚಾಡುವುದನ್ನು ಇಂದಿಗೂ ನೋಡುತ್ತೇವೆ. ಎಷ್ಟೋ ಜನರಿಗೆ ಧರ್ಮವೆಂದರೆ ಈಗಲೂ ಹೆದರಿಕೆಯ ಮಾತಾಗಿದೆ’ ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ಎಳೆಯ ಮಗಳನ್ನು ಜನಪರ ಕಾಳಜಿಯ ಜ್ಞಾನಿಯಾಗಿಸಬಲ್ಲ ಕಿವಿಮಾತುಗಳೂ ಇಲ್ಲಿವೆ: ‘ಈಗಿನ ಕಾಲದಲ್ಲಿ ಏನೂ ದುಡಿಯದ ಮನುಷ್ಯನಿಗೆ ಹೆಚ್ಚು ಉಳಿತಾಯವಾಗುತ್ತಿದೆ, ಕಷ್ಟ ಪಡುವವನಿಗೆ ಮಾತ್ರ ಅದರ ಪಾಲು ಸಿಕ್ಕುವುದಿಲ್ಲ.’



‘ನೈಲ್,ಗಂ ಗಾ ನದಿಗಳು ಅನ್ನ, ನೀರನ್ನು ಕೊಡುತ್ತಿರುವುದೇ ಅವು ಪವಿತ್ರವೆಂದು ತಿಳಿಯಲು ಕಾರಣ’.

ಮಗಳನ್ನು ಮುಕ್ತ ಮನಸ್ಸಿನ ಜಾತ್ಯತೀತ ಪ್ರಜೆಯನ್ನಾಗಿ ಬೆಳೆಸುವ ನೆಹರೂ ಮಾರ್ಗ ಎಲ್ಲ ತಂದೆ ತಾಯಿಗಳಿಗೂ ಆದರ್ಶ ಮಾದರಿಯಾಗಿದೆಯಲ್ಲವೆ? ಈ ಮಾತು ಬರೆಯುವಾಗ, ಕನ್ನಡ ಚಿಂತನೆ ಒಂದು ಕಾಲಕ್ಕೆ ನೆಹರೂ ವೈಚಾರಿಕತೆಯಿಂದ ಪ್ರೇರಣೆ ಪಡೆದು, ಬರಬರುತ್ತಾ ನಿರುತ್ಸಾಹ ತಳೆದದ್ದೇಕೆ ಎಂಬ ಪ್ರಶ್ನೆ ಎದುರಾಗುತ್ತದೆ. ನೆಹರೂ ಗುರಿ-ದಾರಿಗಳನ್ನು, ಯೋಜನೆಗಳನ್ನು ಒಪ್ಪದ ಲೋಹಿಯಾರ ಕಟು ವಿಮರ್ಶೆಯ ಪ್ರಭಾವದಿಂದಲೂ ನವ್ಯ ಘಟ್ಟದ ಕನ್ನಡ ಲೇಖಕರು ನೆಹರೂ ಬಗ್ಗೆ ನಿರಾಸಕ್ತರಾದರು; ಹೀಗಾಗಿ ಕನ್ನಡದಲ್ಲಿ ನೆಹರೂ ಚಿಂತನೆಯ ಪ್ರಭಾವ ಕಡಿಮೆಯಾಯಿತು. ತಮ್ಮ ವಿಮರ್ಶೆ ಮೀರಿ ನೆಹರೂ ವ್ಯಕ್ತಿತ್ವವನ್ನು ಗ್ರಹಿಸಬೇಕೆಂದು ಲೋಹಿಯಾರೇ ಸೂಚಿಸಿದ್ದನ್ನು ಸಮಾಜವಾದಿ ನಾಯಕ ಕೋಣಂದೂರು ಲಿಂಗಪ್ಪ ನೆನೆಯುತ್ತಾರೆ: ಲೋಹಿಯಾ ಬೆಂಗಳೂರಿನ ಶಾಸಕರ ಭವನದಲ್ಲಿ ಉಳಿದುಕೊಂಡಿದ್ದ ಕಾಲದಲ್ಲಿ ಸಮಾಜವಾದಿ ನಾಯಕರೊಬ್ಬರು ನೆಹರೂ ಟೀಕೆಯಿಂದ ಲೋಹಿಯಾಗೆ ಖುಷಿಯಾಗಬಹುದೆಂದು ನೆಹರೂರನ್ನು ಬಯ್ಯತೊಡಗಿದರು. ಸಿಟ್ಟಿಗೆದ್ದ ಲೋಹಿಯಾ ರೇಗಿದರು: ‘ಏನು ತಲೆಹರಟೆ ಮಾತಾಡ್ತಾ ಇದೀಯಯ್ಯಾ. ನನ್ನ ಜಗಳ ಪ್ರೈಂ ಮಿನಿಸ್ಟರ್ ನೆಹರೂ ಜೊತೆಗೇ ಹೊರತು, ಪಂಡಿತ್ ನೆಹರೂ ಜೊತೆಗಲ್ಲ; ಪಂಡಿತ್‌ಜೀ ದೊಡ್ಡ ಮನುಷ್ಯ. ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಮಾಡಿರೋ ತ್ಯಾಗ ಎಂಥದ್ದೂಂತ ನಿನಗೆ ಗೊತ್ತಿದೆಯೆ?’ ನೆಹರೂ ಟೀಕೆಗಾಗಿ ಮಾತ್ರ ಲೋಹಿಯಾ ಹೆಸರು ಪಠಿಸುವ ಬಿಜೆಪಿಯ ಕೆಲವರು ಲೋಹಿಯಾ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳಬೇಕು!

ಮತ್ತೊಂದು ಪ್ರಸಂಗ: ಒಮ್ಮೆ ಲೋಹಿಯಾರಂತೆಯೇ ನೆಹರೂ ಟೀಕಾಕಾರರಾಗಿದ್ದ ಲಂಕೇಶ್, 1991ರ ವಿಚಾರ ಸಂಕಿರಣವೊಂದರಲ್ಲಿ ಹೇಳಿದರು: ‘ಸರ್ದಾರ್ ಪಟೇಲ್ ಮತ್ತು ನೆಹರೂ ನಡುವೆ, ಪ್ರಧಾನಿಯಾಗಲು ನೆಹರೂ ಅವರನ್ನು ಗಾಂಧೀಜಿ ಆಯ್ಕೆ ಮಾಡಿಕೊಂಡಿದ್ದಕ್ಕೆ ಕಾರಣ: ನೆಹರೂ ಜಾತ್ಯತೀತವಾಗಿ ಎಲ್ಲರನ್ನೂ ಒಟ್ಟಾಗಿಸಿ ದೇಶ ಕಟ್ಟಬಲ್ಲರೆಂಬ ನಂಬಿಕೆ’. ಈ ಒಳನೋಟವನ್ನು ನೆಹರೂರನ್ನು ಟೀಕಿಸುವ ಲೋಹಿಯಾವಾದಿಗಳು ಹಾಗೂ ನೆಹರೂ ಕೊಡುಗೆಯನ್ನೇ ಮರೆತಂತಿರುವ ಅಂಬೇಡ್ಕರ್ ವಾದಿಗಳಿಬ್ಬರೂ ಅರಿಯಬೇಕು. ನೆಹರೂ ಚಿಂತನೆ-ಯೋಜನೆಗಳ ಏಳುಬೀಳುಗಳೇನೇ ಇರಲಿ, ಸ್ವಾತಂತ್ರ್ಯ ಚಳವಳಿಯೇ ಕಲಿಸಿದ ಜವಾಬ್ದಾರಿ, ಲೋಕಸಾಹಿತ್ಯದ ವಿಸ್ತಾರ ಓದು, ಲೇಖಕನ ಆತ್ಮಪರೀಕ್ಷೆ, ವೈಚಾರಿಕತೆ, ಜಾತಿ-ಮತಾತೀತತೆ ಇವೆಲ್ಲವೂ ಅವರನ್ನು ಭಾರತದ ಶ್ರೇಷ್ಠ ಪ್ರಧಾನಮಂತ್ರಿಯನ್ನಾಗಿ ಮಾಡಿವೆ; ಲೋಕದ ದೊಡ್ಡ ನಾಯಕರ ಸಾಲಿನಲ್ಲೂ ಇರಿಸಿವೆ. ನೆಹರೂ ಅವರ ‘ಮಗಳಿಗೆ ಅಪ್ಪ ಬರೆದ ಪತ್ರಗಳು’ ಪುಸ್ತಕದ ಮುಂದುವರಿದ ರೂಪ ‘ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ’, ‘ಡಿಸ್ಕವರಿ ಆಫ್ ಇಂಡಿಯಾ’, ‘ಆ್ಯನ್ ಆಟೋಬಯಾಗ್ರಫಿ’ ಪುಸ್ತಕಗಳ ಆಳ, ಆರೋಗ್ಯ, ಇಂಗ್ಲಿಷಿನ ಸೊಬಗು ಇವೆಲ್ಲವನ್ನೂ ನೋಡುತ್ತಿದ್ದರೆ, ಈ ದೇಶದ ಪ್ರಧಾನಿಯಾಗುವ ಮುನ್ನ ಅವರ ಸಿದ್ಧತೆ, ಅರ್ಹತೆಗಳನ್ನು ಕಂಡು ಹೆಮ್ಮೆಯಾಗುತ್ತದೆ.

ಚುರುಮುರಿ



ಆದದ್ದೆಲ್ಲ ಒಳ್ಳೇದಕ್ಕೆ...

● ಕೆ.ವಿ.ರಾಜಲಕ್ಷ್ಮಿ

‘ಹೀಗಾಗ್ಬಿಟ್ರೆ ಹೇಗೆ? ಮಧ್ಯಮ ವರ್ಗಕ್ಕೆ ಮೇಲಿಂದ ಮೇಲೆ ಪೆಟ್ಟು, ಸಹಿಸ್ಕೊಳ್ಳೋದಾದ್ರೂ ಹೇಗೆ?’

ನನ್ನವಳ ಮಹಿಳಾ ಮಂಡಳಿ ಮೀಟಿಂಗ್‌ನ ಮಾತುಕತೆ ಹಾಲಿನವರೆಗೂ ಕೇಳಿಸುತ್ತಿತ್ತು.

‘ಎಲ್ಲರೂ ಕಾರು, ಸ್ಕೂಟರ್ ಇಟ್ಕೊಂಡಿರ್ತಾರ? ನಾವೆಲ್ಲ ಆಟೋನೇ ನಂಬಿರೋವ್ರು?’ ಹಿರಿಯ ಸದಸ್ಯೆಯೊಬ್ಬರ ದುಃಖ.

‘ನಿಜ, ಆದರೆ ಈ ಕಷ್ಟಕಾಲದಲ್ಲಿ ಪೆಟ್ರೋಲು, ಡೀಸೆಲ್ಲು ಬೆಲೆ ಜಾಸ್ತಿ ಆಗಿರುವಾಗ ಅವರು ತಾನೇ ಏನು ಮಾಡ್ತಾರೆ ಪಾಪ?’

‘ದಿನಸಿ, ತರಕಾರಿ ಬೆಲೆ ಏರಿರೋ ಬಿಸಿ ಎಲ್ಲರಿಗೂ ತಟ್ಟಿದೆ...’

‘ಯೆಸ್, ಹೋಟೆಲ್ ರೇಟ್‌ಗಳು ಇನ್‌ಕ್ರೀಸ್ಡ್... ಕಾಫಿ, ಸ್ನ್ಯಾಕ್ಸ್, ಲಂಚ್, ಚಾಟ್ಸ್... ಬಟ್ ಹಾಗಂತ ಹೋಟೆಲ್‌ಗೆ ಹೋಗದೆ ಇರ್ತೀವಾ? ಪಾರ್ಟಿ ಕೊಡದೇ ಇರ್ತೀವಾ?’ ಎಂದಿತು ಮತ್ತೊಂದು ದನಿ ಶುದ್ಧ ಕನ್ನಡದಲ್ಲಿ!

‘ಅನಿವಾರ್ಯವಾದಾಗ ಎಲ್ಲಕ್ಕೂ ಹೊಂದಿಕೊಂಡು ಹೋಗೋದ್ರಲ್ಲಿ ಜಾಣತನವಿದೆ. ಆಟೊಲಿ ಒಬ್ಬೊಬ್ಬರೇ ಓಡಾಡೋ ಬದಲು ಹತ್ತಿರದವರೊಂದಿಗೆ ಸೇರಿಕೊಂಡು ಫೇರ್ ಶೇರ್ ಮಾಡಿ, ಹೋಟೆಲ್ ವಿಸಿಟ್‌ನ ವಾರಕ್ಕೊಮ್ಮೆ ಬದಲು ಹದಿನೈದು ದಿನಕ್ಕೊಮ್ಮೆ ಇಟ್ಕೊಂಡರಾಯ್ತು. ನಾಲಿಗೆ ಚಪಲಾನೂ ತೀರುತ್ತೆ, ಆದದ್ದೆಲ್ಲ ಒಳ್ಳೇದಕ್ಕೆ ಅಂದ್ಕೊಂಡ್ರಾಯ್ತು, ಪರ್ಸೂ ಕಚ್ಚೊಲ್ಲ ಏನಂತೀರಿ?’ ಇದು ನನ್ನವಳ ಸಲಹೆ, ಹಿಂದೆಯೇ ಚಪ್ಪಾಳೆಯ ಮೂಲಕ ಸದಸ್ಯರ ಅನುಮೋದನೆ!

‘ನನ್ನ ಐಡಿಯಾಗಳನ್ನು ಯಥಾವತ್ ಸಭೆಯಲ್ಲಿ ಮಂಡಿಸಿ ಮೆಚ್ಚುಗೆ ಗಿಟ್ಟಿಸಿದೆ! ಮುಂದಿನ ಅಧ್ಯಕ್ಷೆ ನೀನೇ ಹಾಗಾದರೆ?’ ಮೀಟಿಂಗ್ ಮುಗಿಯುತ್ತಲೇ ಬೆಣ್ಣೆ ಹಚ್ಚಿದೆ.

ಹಿರಿಹಿರಿ ಹಿಗ್ಗಿದಳು. ಅಷ್ಟರಲ್ಲೇ ಕಂಠಿ ಬಂದ, ಕೈಯಲ್ಲಿ ಸ್ವೀಟ್ ಬಾಕ್ಸ್ ‘ನಿಮಗೇ’ ಎನ್ನುತ್ತಾ ನನ್ನವಳ ಕೈಗಿತ್ತ.

‘ರಾಜ್ಯೋತ್ಸವ ಪ್ರಶಸ್ತಿ ಮಿಸ್ ಆಯ್ತು ಅಂತ ಬಾಸ್ ಬೇಜಾರಾಗಿದ್ರು. ‘ಈ ಬಾರಿ ಸಿಕ್ಕದ್ದು ಒಳ್ಳೆಯದೇ ಆಯಿತು, ಮುಂದಿನ ವರ್ಷದಿಂದ ಪ್ರಶಸ್ತಿ ಮೊತ್ತ ಐದು ಲಕ್ಷಕ್ಕೆ ಏರಿಕೆಯಾಗಿದೆ’ ಅಂತ ಹುರಿದುಂಬಿಸಿದ ಪರಿಣಾಮ ಆಫೀಸಿನಲ್ಲಿ ಎಲ್ಲರಿಗೂ ಸಿಹಿ ಹಂಚಿದರು’ ಹಲ್ಕಿರಿದ.

‘ಉಸ್ತುವಾರಿ ನಿಮ್ಮದೇ ಇರುತ್ತೆ ಬಿಡಿ’ ಎನ್ನುತ್ತಾ ಕಾಫಿ ತಂದಳು ನನ್ನವಳು.

ಸಂಗತ

ಹೋಲಿಕೆ ಸಲ್ಲ... ಅದು ನಿಮ್ಮದೇ ಮಗು!

‘ಕೈ ಕಟ್ಟು, ಬಾಯಿ ಮುಚ್ಚು’ ಎನ್ನುವುದೇ ಶಿಸ್ತಾದರೆ ಮಕ್ಕಳ ಜ್ಞಾನಾರ್ಜನೆಯ ರಾಜಬೀದಿಗಳನ್ನು ಹಿರಿಯರೇ ಬಂದ್ ಮಾಡಿದಂತಾಗುತ್ತದೆ

● ಯೋಗಾನಂದ

ಅಮ್ಮ, ಅಪ್ಪನೊಂದಿಗೆ ಆ ಪೋರ ಕಡಲ ತೀರದಲ್ಲಿ ಸೂರ್ಯಾಸ್ತದ ದೃಶ್ಯ ಕಣ್ತುಂಬಿಕೊಂಡ. ‘ನಡಿ ಹೊರಡೋಣ’ ಎಂದಾಗ ‘ಸೂರ್ಯನನ್ನೂ ಮನೆಗೆ ಕರೆದೊಯ್ಯೋಣ’ ಅಂತ ಅವನ ಹಟ. ದಂಪತಿ ತಳಮಳಿಸಲಿಲ್ಲ. ‘ಪುಟ್ಟ, ನಾಳೆಯೂ ನಮ್ಮ ಹಾಗೆ ಜನ ಇಲ್ಲಿಗೆ ಬಂದು ನೋಡಿ ಆನಂದಿಸಬೇಕು ತಾನೆ? ಸೂರ್ಯ ಇಲ್ಲೇ ಇರಲಿ’ ಎಂದು ಮಗನಿಗೆ ಮನವರಿಕೆ ಮಾಡುತ್ತಾರೆ! ಮಕ್ಕಳನ್ನು ಸಾಮಾಜಿಕವಾಗಿ, ಭಾವನಾತ್ಮಕವಾಗಿ ಬೆಳಸುವ ಪರಿಯೆಂದರೆ ಇದೇ ಅಲ್ಲವೆ?

ನಮಗೆ ವಿಶ್ವದ ಏಳು ಅದ್ಭುತಗಳು ಕಂಡರೆ, ಮಕ್ಕಳಿಗೆ ಕಂಡಿದ್ದೆಲ್ಲ ಅದ್ಭುತಗಳೇ. ಮಗುವಿನ ಕಣ್ಣಿನಿಂದ ಜಗತ್ತನ್ನು ನೋಡಿದರೆ ಅದು ಮತ್ತಷ್ಟು ಸುಂದರ. ಮಕ್ಕಳು ಕಾರಣವಿಲ್ಲದೆಯೆ ನಗಬಲ್ಲರು, ಸರ್ವದಾ ಯಾವುದರಲ್ಲಾದರೂ ತನ್ಮಯರಾಗಿರಬಲ್ಲರು. ಚಿಣ್ಣರ ಪ್ರಶ್ನೆಗಳು ಸ್ವಾಭಾವಿಕವಾಗಿರುವ ಕಾರಣ ತೋರಿಕೆಗೆ ಅತೀತ, ಪ್ರಾಮಾಣಿಕ. ಅವರು ಹಿರಿಯರಿಂದಲೂ ಅಷ್ಟೇ ಮುಗ್ಧತೆ, ಪಾರದರ್ಶಕತೆ ನಿರೀಕ್ಷಿಸುತ್ತಾರೆ. ನೀನು ರೊಟ್ಟಿಗೆ ಹಿಟ್ಟು ಕಲೆಸಲಾರೆ ಎನ್ನುವ ನಿರುತ್ತೇಜನ ಮಗುವಿನ ಮನಸ್ಸಿನಲ್ಲಿ ದಾಖಲಾಗಿರುತ್ತದೆ. ಮತ್ತೊಂದು ಸನ್ನಿವೇಶದಲ್ಲಿ ‘ನೀನೇ ಲೆಕ್ಕ ಹಾಕಬಹುದು, ಯತ್ನಿಸು’ ಎನ್ನುತ್ತಲೇ ಮಗು ‘ನೀನು ಹೇಳುವುದು ಸುಳ್ಳು’ ಅಂತ ತಿರುಗೇಟು ನೀಡುವ ಸಾಧ್ಯತೆಯುಂಟು!


ಮಕ್ಕಳು ಎಡೆಬಿಡದೆ ಮಾರ್ಗದರ್ಶನ ಬಯಸುತ್ತಾರೆ. ಅವರ ತಾಕೀತು, ವಿಚಾರಣೆಗಳನ್ನು ಅಬದ್ಧವೆಂದು ಕಡೆಗಣಿಸದೆ ಗೌರವಿಸಿ ಹಿರಿಯರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಬೇಕು. ತಾಯಿ, ತಂದೆ ಅತಿ ಮುಖ್ಯವಾಗಿ ತಮ್ಮ ಮಕ್ಕಳ ಪರ ತೊಡಗಿಸಬೇಕಾದ ಬಂಡವಾಳವೆಂದರೆ ತಮ್ಮ ಗುಣಮಟ್ಟದ ಸಮಯವನ್ನು ಅವರಿಗಾಗಿ ಮೀಸಲಿಡುವುದು. ಮಕ್ಕಳೊಂದಿಗೆ ಕಳೆದ ಸಂದರ್ಭಗಳು ಅವರಿಗೂ ತಮ್ಮ ಜೀವಿತದಪರ್ಯಂತ ಹಸಿರಾಗಿರುತ್ತವೆ. ಮಾತೃತ್ವ, ಪಿತೃತ್ವದ ಹೊಣೆಗಾರಿಕೆ ಬಹು ಸೂಕ್ಷ್ಮ, ಸಂಕೀರ್ಣ. ಮಗುವಿನತ್ತ ಸೂಕ್ತ ನಿಗಾ ವಹಿಸದ ಪೋಷಕರ ತಾತ್ಸಾರವನ್ನು ಜನಪದರು ‘ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯ್ತು’ ಅಂತ ಕೆಣಕುತ್ತಾರೆ.

ತಮ್ಮ ತಾಯಿ, ತಂದೆ ತಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ಮಾತಾಡಿಸಿದಾಗ ಮಕ್ಕಳಿಗೆ ಆಗುವ ಹಿಗ್ಗಿಗೆ ಪಾರವಿಲ್ಲ. ಅದು ಇಂದು ಶಾಲೆಯಲ್ಲಿ ಕಲಿತಿದ್ದೇನು, ಪರೀಕ್ಷೆಯಲ್ಲಿ ಬಂದ ಗ್ರೇಡ್ ಯಾವುದು, ಹೋಂವರ್ಕ್ ಏನು ಕೊಟ್ಟಿದ್ದಾರೆ... ಇತ್ಯಾದಿ ಕುಶಲೋಪರಿಗೂ ಮೀರಿದ್ದು. ಮಗು ಮಾತನಾಡಲು ಹಂಬಲಿಸುತ್ತದೆನ್ನಿ. ಪೋಷಕರು ತಾವು ಎಂಥದ್ದೇ ಕೆಲಸದಲ್ಲಿರಲಿ, ಅದನ್ನು ಬಿಟ್ಟು ಮಗುವಿನೊಡನೆ ಒಂದಾಗಬೇಕು. ಶಾಲೆಯಲ್ಲಾಗಲಿ, ಮನೆಯಲ್ಲಾಗಲಿ ‘ಕೈ ಕಟ್ಟು, ಬಾಯಿ ಮುಚ್ಚು’ ಎನ್ನುವುದೇ ಶಿಸ್ತಾದರೆ ಮಕ್ಕಳು ಕುತೂಹಲ, ಅಚ್ಚರಿಗಳಿಂದ ವಂಚಿತರಾಗುವರು. ಜ್ಞಾನಾರ್ಜನೆಯ ರಾಜಬೀದಿಗಳನ್ನು ಹಿರಿಯರೇ ಬಂದ್ ಮಾಡಿದಂತಾಗುತ್ತದೆ.

ಒಂದು ವರ್ಷ ವಯಸ್ಸಿನ ಯಾವುದೇ ಮಗು ಎಡವಿಬಿದ್ದ ಕಾರಣಕ್ಕೆ ನಡಿಗೆ ಬಿಡುವುದೇ? ಎಷ್ಟೇ ಬಾರಿ ಬಿದ್ದರೂ ಅದು ನಡೆಯುವುದನ್ನು ಮುಂದುವರಿಸುವುದು. ವೈಫಲ್ಯಕ್ಕೆ ಅದು ಅಂಜದು. ‘ಮಗು ಮನುಷ್ಯನ ತಂದೆ’ ಎಂಬ ನುಡಿಯಲ್ಲಿ ಏನೆಲ್ಲ ಸತ್ಯ ಅಡಗಿದೆ.

ಪೋಷಕತ್ವ ಎಂಬುದು ಸಂಬಂಧಕ್ಕಿಂತಲೂ ಹೆಚ್ಚಾಗಿ ಗುರುತರ ಹೊಣೆಗಾರಿಕೆ. ಮಕ್ಕಳು ಕಲಿಯುವ ಶೈಲಿ ಅರಿಯದೆ ಅವರಿಗೆ ಕಲಿಸಲಾಗದು. ಮಾತನಾಡುವುದಕ್ಕಿಂತ ದುಪ್ಪಟ್ಟು ಆಲಿಸುವ ಕೌಶಲವನ್ನು ಹಿರಿಯರು ಅವರಲ್ಲಿ ಬೇರೂರಿಸುವ ಅಗತ್ಯವಿದೆ.

ಪ್ರೀತಿಯ ಅಪ್ಪುಗೆಗೆ ಪರ್ಯಾಯವಿಲ್ಲ. ಹಿರಿಯರ ಕೋಪದಿಂದ ವ್ಯತಿರಿಕ್ತ ಪರಿಣಾಮ. ‘ಹುರಿದ ಕಾಳನ್ನು ಬಿತ್ತಿದರೆ ಮೊಳಕೆಯೊಡೆಯವುದೇ?’ ಎಂದು ಪ್ರಶ್ನಿಸುತ್ತಾರೆ ಅಲ್ಲಮರು. ಅಂದಹಾಗೆ ಇತರ ಮಕ್ಕಳೊಡನೆ ನಿಮ್ಮ ಮಗುವಿನ ಹೋಲಿಕೆ ಏಕೆ ಸಲ್ಲದು ಎನ್ನುವುದಕ್ಕೆ ಉತ್ತರ ಸ್ಪಷ್ಟವಿದೆ: ‘ಅದು ನಿಮ್ಮದೇ ಮಗು’. ಅಚ್ಚುಕಟ್ಟು, ರೀತಿ, ನೀತಿಗಳ ಹಿನ್ನೆಲೆ ವಿವರಿಸಿದರೆ ಮಕ್ಕಳನ್ನು ಶಿಸ್ತಿಗೊಳಪಡಿಸುವುದು ಸರಾಗ. ಒಬ್ಬರಂತೆ ಇನ್ನೊಬ್ಬರಿಲ್ಲ ಎನ್ನುವುದೇ ಪ್ರಕೃತಿಯ ಸೊಬಗು, ಹಿರಿಮೆ.



ಚಿಣ್ಣರು ಕೇಳುವ ಎಲ್ಲ ಪ್ರಶ್ನೆ, ಅನುಮಾನಗಳಿಗೆ ಉತ್ತರಿಸಬೇಕೆಂದೇನಿಲ್ಲ. ಮತ್ತೆ ಮತ್ತೆ ಏನು, ಎತ್ತ ಎಂದು ಕೇಳಲಾದ ಸಂದೇಹಗಳ ಸ್ಪಷ್ಟೀಕರಣವನ್ನು ಹಿರಿಯರು ಬಯಸಬೇಕು. ಆಗ ಮಕ್ಕಳಿಗೆ ಪರಿಹಾರಗಳ ಹಾದಿ ಸುಗಮವಾಗುವುದಿದೆ.

ತಂತ್ರಜ್ಞಾನವು ಚಿಣ್ಣರ ಕಲಿಕೆಯನ್ನು ಸರಾಗವಾಗಿಸಿದೆ. ಆದರೆ ಸಣ್ಣ ಪುಟ್ಟ ಲೆಕ್ಕಾಚಾರಗಳಿಗೆಲ್ಲ ಅವರು ಪರಿಕರಗಳನ್ನು ಅವಲಂಬಿಸಿದರೆ ಎಡವಟ್ಟೇ. ಸ್ಮಾರ್ಟ್ ಫೋನ್ ಅಲ್ಲದೆ ಕೈಗಳಿಗೆ ಅಪರೂಪಕ್ಕಾದರೂ ಸ್ಲೇಟು, ಬಳಪ ಹಿಡಿಯುವ ಬಿಡುವು ಸಿಗಲಿ!

ಮಕ್ಕಳು ಸಮಾಜದ ನಿಜವಾದ ಸಂಪತ್ತು. ಅವರು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾದರೇನೆ ದೇಶಕ್ಕೆ ಭವಿತವ್ಯ ಎಂದು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಒತ್ತಿ ಹೇಳಿದರು. ಮಕ್ಕಳನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಅವರು ‘ಚಾಚಾ ನೆಹರೂ’ ಆದರು. ತಮ್ಮ ಜನ್ಮದಿನವನ್ನು (ನ. 14) ‘ಮಕ್ಕಳ ದಿನಾಚರಣೆ’ ಎಂದು ಆಚರಿಸಲು ಆಶಿಸಿದರು.

ಮಕ್ಕಳಲ್ಲಿ ದಯೆ, ಅನುಕಂಪ, ಪರರೊಂದಿಗೆ ಗೌರವಯುತ ನಡೆ, ಧಾರಾಳತನ ಮೈದಳೆಯಬೇಕು. ತಮ್ಮ ಮಕ್ಕಳು ಪರೀಕ್ಷೆಗಳಲ್ಲಿ ಉತ್ತಮ ಗ್ರೇಡ್ ಪಡೆಯಬೇಕು, ಪಠ್ಯೇತರ ಚಟುವಟಿಕೆಗಳಲ್ಲಿ ಬಹುಮಾನ ಗಳಿಸಬೇಕು ಎಂದು ಹಂಬಲಿಸದ ಪೋಷಕರಿಲ್ಲ. ಇದು ಸರಿಯೆ, ಮಕ್ಕಳು ಯಶೋವಂತ ಮನುಜರಾಗಿ ರೂಪುಗೊಳ್ಳುವುದು ಎಲ್ಲಕ್ಕಿಂತ ಮುಖ್ಯವಾಗುತ್ತದೆ.

ವಾಚಕರ ವಾಣಿ

ಸೃಜನಶೀಲ ಮನಸ್ಸಿಗೆ ಸ್ಪಂದಿಸಲಿ

ಕನ್ನಡದ ಅಸ್ಮಿತೆಗಳಲ್ಲಿ ಒಂದಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಚುನಾವಣೆ ಹತ್ತಿರವಾಗುತ್ತಿದೆ. ಹೊಸದಾಗಿ ಆಯ್ಕೆಯಾಗಲಿರುವ ರಾಜ್ಯ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷರು ಪರಿಷತ್ತಿಗೆ ಹೊಸ ಸ್ಪರ್ಶ ನೀಡುವ ಆಲೋಚನೆ ಮಾಡಬೇಕಿದೆ. ಕಸಾಪ ಎಂದರೆ ಸಾಹಿತ್ಯ ಸಮ್ಮೇಳನ ನಡೆಸುವುದು ಎಂಬ ಭಾವನೆ ಹೋಗಲಾಡಿಸಿ, ಕನ್ನಡ ಭಾಷೆ ಹಾಗೂ ಸಾಹಿತ್ಯದ ಕುರಿತಾಗಿ ಅರ್ಥಪೂರ್ಣ ಚಟುವಟಿಕೆಗಳಿಗೆ ಚಾಲನೆ ನೀಡಬೇಕಿದೆ. ತುಂಬಾ ಪ್ರಸ್ತುತ, ಆದರೆ ನಿರ್ಲಕ್ಷ್ಯಕ್ಕೊಳಗಾಗುತ್ತಿರುವ ವಿಜ್ಞಾನ ಸಾಹಿತ್ಯ ಮತ್ತು ಮಕ್ಕಳ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಈ ದಿಸೆಯಲ್ಲಿ ಜಿಲ್ಲಾ ಘಟಕಗಳು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ಕಡಿಮೆ ಖರ್ಚಿನಲ್ಲಿ ಕಾರ್ಯಾಗಾರಗಳನ್ನು ನಡೆಸಬಹುದು. ಯುವ ಬರಹಗಾರರನ್ನು ಗುರುತಿಸಿ ಸೃಜನಶೀಲ ಬರಹಗಳಿಗೆ ಪ್ರೋತ್ಸಾಹ ನೀಡಬಹುದು.

ಸಾಹಿತ್ಯ ಸಮ್ಮೇಳನಗಳ ಖರ್ಚು- ವೆಚ್ಚದ ವಿವರಗಳನ್ನು ಕಾಲಮಿತಿಯಲ್ಲಿ ಸಾರ್ವಜನಿಕವಾಗಿ ಪ್ರಕಟಿಸುವ ಬಗ್ಗೆ ಜಿಲ್ಲಾ- ತಾಲ್ಲೂಕು ಘಟಕಗಳ ಅಧ್ಯಕ್ಷರು ಸ್ವಯಂ ನಿಯಮ ಹಾಕಿಕೊಂಡಲ್ಲಿ ಪಾರದರ್ಶಕತೆ ಕಾಯ್ದುಕೊಂಡಂತೆ ಆಗುತ್ತದೆ. ಕಸಾಪವು ಸಾಹಿತ್ಯದ ಸೂಕ್ಷ್ಮ ಸಂವೇದನೆಗಳನ್ನು ಉಳಿಸಿಕೊಂಡ ಸೃಜನಶೀಲ ಮನಸ್ಸುಗಳಿಗೆ ಸ್ಪಂದಿಸಿ ಅರ್ಥಪೂರ್ಣ ಹೆಜ್ಜೆಗಳನ್ನಿಡಲಿ.

ನಾಗರಾಜ ಹೆಗಡೆ, ಕುಮಟಾ

ಅಗೋಚರ ಭ್ರಷ್ಟಾಚಾರ: ಬದಲಾಗಲಿ ವ್ಯವಸ್ಥೆ

ಹಲವು ಐಎಎಸ್ ಅಧಿಕಾರಿಗಳು ತಮ್ಮ ಅಧಿಕಾರಾವಧಿಯಲ್ಲಿ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ, ನಿವೃತ್ತಿಯ ನಂತರ ಯಾವುದೋ ಖಾಸಗಿ ಕಂಪನಿಗಳಲ್ಲಿ ಕಾರ್ಯನಿರ್ವಹಿಸುವ ಪರಿಪಾಟ ಕಾಣುತ್ತಿರುವ ಕುರಿತು ನಿವೃತ್ತ ಐಎಎಸ್ ಅಧಿಕಾರಿ ಸಂಜಯ್ ದೀಕ್ಷಿತ್ ಪ್ರಸ್ತಾಪಿಸಿದ್ದಾರೆ (ದಿನದ ಟ್ವೀಟ್, ಪ್ರ.ವಾ., ನ.11). ಇಂತಹ ಬೆಳವಣಿಗೆಯಿಂದ ಆಗುವ ಬಹುದೊಡ್ಡ ಅಗೋಚರ ಭ್ರಷ್ಟಾಚಾರದ ಜ್ವಲಂತ ಸಮಸ್ಯೆ ಕುರಿತ ಅವರ ಹೇಳಿಕೆಯು ವಾಸ್ತವ ಎನಿಸುತ್ತಿದೆ. ಸರ್ಕಾರ ಈ ಸಂಬಂಧ ಕಾನೂನಿಗೆ ತಿದ್ದುಪಡಿ ತರಬೇಕಿದೆ.

ಐಎಎಸ್, ಐಪಿಎಸ್, ಕೆಎಎಸ್‌ನಂತಹ ಹುದ್ದೆಗಳಲ್ಲಿ ಸೇವೆ ಸಲ್ಲಿಸುವಾಗಲೇ ಸರ್ಕಾರವು ಬಹಳಷ್ಟು ವೇತನ ಹಾಗೂ ಸೌಲಭ್ಯಗಳನ್ನು ನೀಡುವುದಲ್ಲದೆ ನಿವೃತ್ತಿಯ ನಂತರವೂ ನಿವೃತ್ತಿ ವೇತನ ಹಾಗೂ ಸೌಲಭ್ಯಗಳನ್ನು ಮುಂದುವರಿಸಿರುತ್ತದೆ. ಆದರೆ ಯಾಕೋ ಏನೋ ಬಹುತೇಕರು ನಿವೃತ್ತಿಯ ನಂತರ ಮೊದಲಿದ್ದ ಅಧಿಕಾರ ಬಳಸಿ ಯಾವುದೋ ಖಾಸಗಿ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವಂತಹ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವುದು, ರಾಜಕೀಯ ಪಕ್ಷಗಳಲ್ಲಿ ಸಕ್ರಿಯರಾಗುವುದು, ಚುನಾವಣೆಗಳಲ್ಲಿ ಸ್ಪರ್ಧಿಸಿರುವುದನ್ನು ನೋಡಿದರೆ, ಅಧಿಕಾರದಲ್ಲಿದ್ದಾಗ ಅವರ ಮೇಲಿದ್ದ ಜನರ ಭಾವನೆ ನಿವೃತ್ತಿ ನಂತರ ಬದಲಾಗುವಂತಿರುತ್ತದೆ. ಈ ವ್ಯವಸ್ಥೆ ಬದಲಾಗಬೇಕು. ಸರ್ಕಾರ ಈ ಸಂಬಂಧ ಸೂಕ್ತ ಕಾನೂನು ತಿದ್ದುಪಡಿ ತರಬೇಕಿದೆ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಬಂದಿಗಳಿಗೆ ಸಿಗಲಿ ‘ಮಾನಸಿಕ ಬಿಡುಗಡೆ’

ಕಳೆದ ವರ್ಷದ ಮಾರ್ಚ್ ತಿಂಗಳಿನಿಂದ ರಾಜ್ಯದ ಕಾರಾಗೃಹಗಳಿಗೆ ಸಾರ್ವಜನಿಕರು ಭೇಟಿ ನೀಡುವುದಕ್ಕೆ ನಿರ್ಬಂಧ ಹೇರಲಾಗಿದೆ. ಕೊರೊನಾ ಸೋಂಕಿನ ಕಾರಣದಿಂದ ವಿಚಾರಣಾಧೀನ ಮತ್ತು ಸಜಾ ಬಂದಿಗಳನ್ನು ಭೇಟಿಯಾಗುವುದಕ್ಕೆ ಅವರ ಕುಟುಂಬ ಮತ್ತು ಸ್ನೇಹಿತರಿಗೆ ತಡೆಯೊಡ್ಡಲಾಯಿತು. ಅಂದಿನಿಂದ ಇಂದಿನವರೆಗೂ ಬಂದಿಗಳು ತಮ್ಮ ಸಮೀಪದ ಬಂಧುಗಳು, ಮಕ್ಕಳು ಮರಿಗಳನ್ನು ನೋಡಲಾಗದಂತಹ ಸ್ಥಿತಿ ಇದೆ. ಅಂತಹ ಕಠಿಣವಾದ ನಿರ್ಬಂಧ ಹೇರಲಾಗಿದೆ. ವಾರಕ್ಕೊಮ್ಮೆ ಸಿಗುವ ದೂರವಾಣಿ ಸಂಪರ್ಕದಿಂದ ಮೂರ್ನಾಲ್ಕು ನಿಮಿಷ ಅವರು ಮಾತನಾಡಬಹುದಾಗಿದೆ. ಕಡೇಪಕ್ಷ ಕರ್ನಾಟಕದ ಜೈಲುಗಳಲ್ಲಿ ಲಭ್ಯವಿರುವ ವಿಡಿಯೊ ಕಾನ್ಫರೆನ್ಸ್ ಸೌಲಭ್ಯವನ್ನು ಬಳಸಿ ಸಮೀಪದ ಬಂಧುಗಳೊಂದಿಗೆ ಮಾತನಾಡುವ ವ್ಯವಸ್ಥೆಯನ್ನಾದರೂ ಕಲ್ಪಿಸಬಹುದಾಗಿತ್ತು.

ಅತಿ ಹೆಚ್ಚು ಕಾಲ ಬಂಧಿತರನ್ನು ಅವರ ಕುಟುಂಬದಿಂದ ಬೇರ್ಪಡಿಸುವುದು ಬಂಧಿತರು ಮತ್ತು ಅವರ ಅವಲಂಬಿತರ ಮೇಲೆ ಮಾನಸಿಕವಾಗಿ ಕೆಟ್ಟ ಪರಿಣಾಮವನ್ನು ಉಂಟು ಮಾಡಬಲ್ಲದು. ಬಂದಿಗಳು ತಮ್ಮ ಕುಟುಂಬದ ಸದಸ್ಯರು ಮತ್ತು ಆಪ್ತರೊಡನೆ ಒಂದಿಷ್ಟು ಕಾಲ ಜೈಲು ಆವರಣದಲ್ಲಿ ಕಳೆಯಲು ಬಯಸುವುದು ಒಂದು ಸ್ವಾಭಾವಿಕ ಹಕ್ಕಾಗಿದೆ ಎಂದು ಸುಪ್ರೀಂ ಕೋರ್ಟ್ ಕೂಡ ಹಲವು ತೀರ್ಪುಗಳಲ್ಲಿ ಉಲ್ಲೇಖಿಸಿದೆ. ಕೋವಿಡ್ ಎರಡನೇ ಅಲೆಯ ನಂತರ ಎಲ್ಲಾ ಕ್ಷೇತ್ರಗಳು ಸಾರ್ವಜನಿಕರಿಗೆ ಮುಕ್ತವಾಗಿವೆ. ಆದಷ್ಟು ಬೇಗ ಜೈಲುಗಳಿಗೆ ಸಾರ್ವಜನಿಕ ಪ್ರವೇಶ ಒದಗಿಸುವುದು ತುರ್ತಾಗಿ ಆಗಬೇಕಿದೆ.

ಕೆ.ಬಿ.ಕೆ.ಸ್ವಾಮಿ, ಬೆಂಗಳೂರು

ಕಚೇರಿಯಿಂದ ಕೆಲಸ: ಆತುರ ಬೇಡ

ಕೊರೊನಾ ಮಹಾಮಾರಿಯ ಕಾರಣದಿಂದಾಗಿ ಸಣ್ಣ, ಮಧ್ಯಮ ಹಾಗೂ ಪ್ರತಿಷ್ಠಿತ ದೊಡ್ಡ ಐಟಿ-ಬಿಟಿ ಕಂಪನಿಗಳು ತಮ್ಮೆಲ್ಲಾ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶವನ್ನು ಒದಗಿಸಿಕೊಟ್ಟು ಒಂದೂವರೆ ವರ್ಷವೇ ಕಳೆದಿದೆ. ಪ್ರಸ್ತುತ ದಿನಗಳಲ್ಲಿ ಕೊರೊನಾ ಸೋಂಕು ಹರಡುವಿಕೆ ಕ್ಷೀಣಿಸುತ್ತಿರುವ ಹಾಗೂ ಅನೇಕ ಮಂದಿ ಲಸಿಕೆಯನ್ನು ತೆಗೆದುಕೊಂಡಿರುವ ಕಾರಣದಿಂದ ಬಹುತೇಕ ಕಂಪನಿಗಳು ಕಚೇರಿಯಿಂದ ಕೆಲಸ ಮಾಡಲು ಉದ್ಯೋಗಿಗಳನ್ನು ಕರೆಸಿಕೊಳ್ಳಲು ಮುಂದಾಗಿವೆ. ಆದರೆ, ಕೊರೊನಾದ ಮೂರನೇ ಅಲೆಯ ನಿರೀಕ್ಷೆ ಇದ್ದು, ಇಂತಹ ಸಂದರ್ಭದಲ್ಲಿ ಮನೆಯಿಂದಲೇ ಸುಸೂತ್ರವಾಗಿ ಕೆಲಸ ನಡೆಯುತ್ತಿರುವಾಗ ಅನವಶ್ಯಕವಾಗಿ ಉದ್ಯೋಗಿಗಳನ್ನು ಕರೆಸಿಕೊಳ್ಳಲು ಮುಂದಾಗುವುದು ಎಷ್ಟು ಸರಿ? ಈ ನಿರ್ಧಾರವು ಕೊರೊನಾ ಹರಡುವಿಕೆಗೆ ಕಾರಣವಾಗಬಹುದೇನೊ. ಅಷ್ಟೇ ಅಲ್ಲದೆ ಹಲವರು ವಿವಿಧ ಪ್ರದೇಶಗಳಿಂದ ಬೆಂಗಳೂರಿಗೆ ಬರುವುದರಿಂದ ಜನದಟ್ಟಣೆ, ವಾಯುಮಾಲಿನ್ಯ, ಸಂಚಾರ ದಟ್ಟಣೆಯಂತಹ ಹಲವಾರು ಸಮಸ್ಯೆಗಳು ತಲೆದೋರುತ್ತವೆ. ಈಗಾಗಲೇ ದೆಹಲಿಯಲ್ಲಿ ಜನದಟ್ಟಣೆ, ವಾಯುಮಾಲಿನ್ಯದ ಪರಿಣಾಮವನ್ನು ಕಾಣುತ್ತಿದ್ದೇವೆ.


ಪ್ರಸ್ತುತ ಬೆಂಗಳೂರಿನ ವಾತಾವರಣವು ತಕ್ಕಮಟ್ಟಿಗೆ ಸುಧಾರಣೆಯಾಗಿದೆ. ಆದಕಾರಣ ಕಂಪನಿಗಳು ಆತುರದ ನಿರ್ಧಾರ ತೆಗೆದುಕೊಳ್ಳದೆ, ಅತಿ ಅವಶ್ಯವಿರುವವರನ್ನು ಮಾತ್ರ ಆಹ್ವಾನಿಸಿ ಇತರರಿಗೆ ಇನ್ನೂ ಕೆಲವು ದಿನಗಳ ಕಾಲ ಮನೆಯಿಂದಲೇ ಕೆಲಸ ಮಾಡುವ ಅವಕಾಶವನ್ನು ಒದಗಿಸಿಕೊಟ್ಟರೆ ಸಮಾಜಕ್ಕೆ, ಕಂಪನಿಗಳಿಗೆ ಹಾಗೂ ಉದ್ಯೋಗಿಗಳಿಗೆ ಹಲವು ಅನುಕೂಲಗಳಾಗುವ ಸಂಭವವಿದೆ.

ಮಹೇಶ್ ಸಿ.ಎಚ್., ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜ್ಯಗಳಲ್ಲಿ ತನಿಖೆ ನಡೆಸಲು ಸಿಬಿಐಗೆ ಮುಕ್ತ ಅವಕಾಶ ಇರಬೇಕೇ?

ಸಿಬಿಐ ವಿಶ್ವಾಸಾರ್ಹತೆ ಕುಗ್ಗಿಸುತ್ತಿರುವ ರಾಜಕೀಯ ಹಸ್ತಕ್ಷೇಪ



• ರೂಪಕ್ ಕುಮಾರ್ ದತ್ತ

‘ದೆಹಲಿ ವಿಶೇಷ ಪೊಲೀಸ್ (ಡಿಎಸ್‌ಪಿಇ) ಕಾಯ್ದೆ–1946’ರ ಅಡಿಯಲ್ಲಿ ಸಿಬಿಐ ಕಾರ್ಯನಿರ್ವಹಿಸುತ್ತಿದೆ. ಸಂವಿಧಾನದ ಪ್ರಕಾರ ಪೊಲೀಸಿಂಗ್ ರಾಜ್ಯ ಪಟ್ಟಿಯಲ್ಲಿದೆ. ಭೌಗೋಳಿಕ ವ್ಯಾಪ್ತಿಯ ಆಧಾರದಲ್ಲೇ ಪೊಲೀಸಿಂಗ್ ಕೆಲಸದ ಅಧಿಕಾರ ನಿರ್ಣಯವಾಗುತ್ತದೆ. ಪಟ್ಟಿ ಎರಡರಲ್ಲಿರುವ ಈ ವಿಷಯದ ಮೇಲೆ ರಾಜ್ಯಗಳು ಸಂಪೂರ್ಣ ಅಧಿಕಾರ ಹೊಂದಿವೆ. ಈ ಕಾರಣಕ್ಕಾಗಿ ಯಾವುದೇ ರಾಜ್ಯದೊಳಗೆ ಕೇಂದ್ರದ ಪೊಲೀಸ್ ಏಜೆನ್ಸಿಗಳು ನೇರವಾಗಿ ತನಿಖೆ ನಡೆಸಲು ಸಂವಿಧಾನದಲ್ಲೇ ಅವಕಾಶವಿಲ್ಲ. ರಾಜ್ಯಗಳು ಸಮ್ಮತಿಸಿದರೆ ಮಾತ್ರವೇ ಕೇಂದ್ರದ ಏಜೆನ್ಸಿಗಳು ಅಲ್ಲಿ ಕೆಲಸ ಮಾಡಲು ಸಾಧ್ಯವಿದೆ. ಈ ಕಾರಣಕ್ಕಾಗಿ ಡಿಎಸ್‌ಪಿಇ ಕಾಯ್ದೆಯ ಸೆಕ್ಷನ್ 6ರ ಪ್ರಕಾರ, ತನಿಖೆ ನಡೆಯಲಿರುವ ರಾಜ್ಯಕ್ಕೆ ಸಿಬಿಐ ಅಧಿಕಾರಿಗಳು ಪತ್ರ ಬರೆದು ಅನುಮತಿ ಕೋರಬೇಕಾಗುತ್ತದೆ. ರಾಜ್ಯವು ಅನುಮತಿಸಿದರೆ ಸಿಬಿಐಗೆ ತನಿಖೆ ನಡೆಸುವ ಅಧಿಕಾರ ಬರುತ್ತದೆ. ರಾಜ್ಯವು ಅನುಮತಿಸಿದ ಬಳಿಕ ಕೇಂದ್ರ ಸರ್ಕಾರವು ಡಿಎಸ್‌ಪಿಇ ಕಾಯ್ದೆಯ ಸೆಕ್ಷನ್ 5ರ ಅಡಿಯಲ್ಲಿ ಸಂಬಂಧಿಸಿದ ರಾಜ್ಯದೊಳಗೆ ಹೋಗಿ ತನಿಖೆ ನಡೆಸಲು ಸಿಬಿಐಗೆ ಅಧಿಕಾರ ನೀಡಿ ಅಧಿಸೂಚನೆಯೊಂದನ್ನು ಹೊರಡಿಸಬೇಕು. ಆ ಬಳಿಕವೇ ರಾಜ್ಯದಲ್ಲಿ ತನಿಖೆ ನಡೆಸಲು ಸಿಬಿಐಗೆ ಅವಕಾಶ ಲಭಿಸುತ್ತದೆ.

ಸಿಬಿಐ ಹೆಚ್ಚಾಗಿ ಭ್ರಷ್ಟಾಚಾರ ಪ್ರಕರಣಗಳ ತನಿಖೆ ನಡೆಸುತ್ತದೆ. ಆರ್ಥಿಕ ಅಪರಾಧಕ್ಕೆ ಸಂಬಂಧಿಸಿದ ಪ್ರಕರಣಗಳ ತನಿಖೆಯನ್ನೂ ನಡೆಸುತ್ತದೆ. ಉಳಿದಂತೆ ವಿಶೇಷ ಸಂದರ್ಭಗಳಲ್ಲಿ ಭಾರತೀಯ ದಂಡ ಸಂಹಿತೆ ಅಡಿ ದಾಖಲಾದ ಪ್ರಕರಣಗಳ ತನಿಖೆಯನ್ನೂ ನಡೆಸುತ್ತದೆ. ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳ ತನಿಖೆ ನಡೆಸುವುದೇ ಸಿಬಿಐನ ಮುಖ್ಯ ಕೆಲಸ. ಇಂತಹ ಪ್ರಕರಣಗಳ ತನಿಖೆಯಲ್ಲಿ ರಾಜ್ಯದ ಪೊಲೀಸರು ಮತ್ತು ಸಿಬಿಐ ಅಧಿಕಾರಿಗಳ ನಡುವಿನ ಸಮನ್ವಯಕ್ಕಾಗಿ ಸಿಬಿಐ ಕಾರ್ಯನಿರ್ವಹಣಾ ಕೈಪಿಡಿಯಲ್ಲೇ ಒಂದು ಸೆಕ್ಷನ್ ಇದೆ. ಅದರ ಪ್ರಕಾರ, ಯಾವುದೇ ರಾಜ್ಯದೊಳಗಿನ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳ ಅಧಿಕಾರಿಗಳ ವಿರುದ್ಧದ ಪ್ರಕರಣಗಳನ್ನು ಮಾತ್ರ ಸಿಬಿಐ ತನಿಖೆ ನಡೆಸುತ್ತದೆ. ರಾಜ್ಯಗಳ ಅಧಿಕಾರಿಗಳು ಅಥವಾ ರಾಜ್ಯ ಪೊಲೀಸರಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆಯನ್ನು ನೇರವಾಗಿ ಕೈಗೆತ್ತಿಕೊಳ್ಳುವುದಿಲ್ಲ. ಶೇಕಡ 99ರಷ್ಟು ಪ್ರಕರಣಗಳಲ್ಲಿ ಈ ರೀತಿಯೇ ನಡೆಯುತ್ತದೆ. ಕೇಂದ್ರದ ಅಧಿಕಾರಿಗಳು ಮತ್ತು ಆ ರಾಜ್ಯದ ಅಧಿಕಾರಿಗಳು ಅಥವಾ ಜನರು ಶಾಮೀಲಾಗಿ ನಡೆಸಿದಂತಹ ಕೃತ್ಯಗಳ ಬಗ್ಗೆ ಮಾತ್ರ ಸಿಬಿಐ ತನಿಖೆಗೆ ಮುಂದಾಗುತ್ತದೆ. ಇದೇ ರೀತಿ ಯಾವಾಗಲೂ ನಡೆದುಕೊಂಡು ಬಂದಿತ್ತು.

ಹಿಂದೆ ಹೆಚ್ಚಾಗಿ ಭ್ರಷ್ಟಾಚಾರ ಪ್ರಕರಣಗಳ ತನಿಖೆಯಷ್ಟೇ ಸಿಬಿಐಗೆ ಬರುತ್ತಿತ್ತು. ಇತ್ತೀಚಿನ ದಶಕಗಳಲ್ಲಿ ರಾಜಕೀಯ ನಂಟು ಹೊಂದಿರುವ ಅಥವಾ ಸಮಾಜದಲ್ಲಿ ಅತಿಯಾದ ಪ್ರಚಾರ ಪಡೆದ ಪ್ರಕರಣಗಳ (ಉದಾಹರಣೆಗೆ ಚಿತ್ರನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ಪ್ರಕರಣ) ತನಿಖೆಯನ್ನೂ ಸಿಬಿಐಗೆ ವಹಿಸಲಾಗುತ್ತಿದೆ. ಇತ್ತೀಚಿನ ದಶಕಗಳಲ್ಲಿ ಚುನಾವಣೆಗಳು ಸಮೀಪಿಸಿದ ತಕ್ಷಣವೇ ಕೆಲವು ಪ್ರಕರಣಗಳ ತನಿಖೆಯಲ್ಲಿ ದಿಢೀರ್ ಕ್ರಮಗಳನ್ನು ಕೈಗೊಳ್ಳುವುದು ಹೆಚ್ಚುತ್ತಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೂ ಮುನ್ನ ಶಾರದಾ ಚಿಟ್‌ಫಂಡ್ ಹಗರಣ ಮತ್ತು ನಾರದಾ ಹಗರಣಗಳ ವಿಚಾರದಲ್ಲಿ ಕೈಗೊಂಡ ಕ್ರಮಗಳು ಇದಕ್ಕೆ ಉದಾಹರಣೆ. ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೇ ವಿರೋಧ ಪಕ್ಷದ ಮುಖಂಡರ ವಿರುದ್ಧದ ಪ್ರಕರಣಗಳ ತನಿಖೆ ದಿಢೀರ್ ಚುರುಕಾಯಿತು. ರಾಜಕಾರಣದಲ್ಲಿ ಸಕ್ರಿಯವಾಗಿದ್ದವರನ್ನು ಕರೆಸಿ ದಿನಕ್ಕೆ ಎಂಟು ಗಂಟೆಗಳವರೆಗೆ ವಿಚಾರಣೆ ನಡೆಸಲಾಯಿತು. ಈ ಬಗ್ಗೆ ಮಾಹಿತಿಯನ್ನು ಮಾಧ್ಯಮಗಳಿಗೂ ಸೋರಿಕೆ ಮಾಡಲಾಯಿತು. ಇಂತಹ ಬೆಳವಣಿಗೆಗಳೇ ಸಿಬಿಐ ವಿಶ್ವಾಸಾರ್ಹತೆಯನ್ನು ಕುಗ್ಗಿಸಿದವು ಎಂಬುದನ್ನು ಒಪ್ಪಲೇಬೇಕು. ಇದು ಒಂದು ಪಕ್ಷದ ನೇತೃತ್ವದ ಸರ್ಕಾರಕ್ಕೆ ಸೀಮಿತವಾಗಿಲ್ಲ. ಕೆಲವು ದಶಕಗಳಿಂದ ಈಚೆಗೆ ಕೇಂದ್ರ ಸರ್ಕಾರವನ್ನು ಮುನ್ನಡೆಸಿದ ಎಲ್ಲ ಪಕ್ಷಗಳೂ ಸಿಬಿಐ ಅನ್ನು ಈ ರೀತಿ ದುರ್ಬಳಕೆ ಮಾಡಿಕೊಂಡಿವೆ. ಹೀಗಾಗಿ ಜನರಲ್ಲಿ ಸಿಬಿಐ ಕುರಿತ ವಿಶ್ವಾಸ ಕಳೆದುಹೋಗಿದೆ. ಮೊದಲು ಬಹುತೇಕ ರಾಜ್ಯಗಳು ಕೇಂದ್ರ ಸರ್ಕಾರದ ಅಧಿಕಾರಿಗಳು ಮತ್ತು ಕೇಂದ್ರದ ಸಂಸ್ಥೆಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸಿಬಿಐ ತನಿಖೆಗೆ ಮುಕ್ತ ಅನುಮತಿ ನೀಡಿದ್ದವು. ಆದರೆ, ತನಿಖಾ ಸಂಸ್ಥೆಯನ್ನು ರಾಜಕೀಯ ದಾಳವಾಗಿ ಬಳಕೆ ಮಾಡಲಾಗುತ್ತಿದೆ ಎಂಬ ಭಾವನೆ ಗಟ್ಟಿಯಾದ ಬಳಿಕ ಹೆಚ್ಚಿನ ರಾಜ್ಯಗಳು ಮುಕ್ತ ಅನುಮತಿಯನ್ನು ಹಿಂಪಡೆದು ಆದೇಶ ಹೊರಡಿಸಿವೆ.

ಸಿಬಿಐ ಮಾತ್ರವಲ್ಲ ಯಾವುದೇ ಸಂಸ್ಥೆ ಅಥವಾ ಪೊಲೀಸರು ಸ್ವತಂತ್ರವಾಗಿ ಕೆಲಸ ಮಾಡಬೇಕು. ಯಾವುದೇ ತನಿಖಾ ಸಂಸ್ಥೆಯೂ ಒಂದು ರಾಜಕೀಯ ಪಕ್ಷಕ್ಕೆ ಸೇರಿಲ್ಲ. ಸಂವಿಧಾನ ಮತ್ತು ಕಾನೂನಿನ ಪ್ರಕಾರವೇ ಕೆಲಸ ಮಾಡಬೇಕು. ಒಮ್ಮೆ ವಿಶ್ವಾಸ ಕಳೆದುಕೊಂಡರೆ ಅದನ್ನು ಮರಳಿ ಪಡೆಯುವುದು ಕಷ್ಟ. ಸಿಬಿಐ ಮಾತ್ರವಲ್ಲ ಯಾವುದೇ ತನಿಖಾ ಸಂಸ್ಥೆಯ ಮುಖ್ಯಸ್ಥರು ಗಟ್ಟಿ ನಿಲುವು ತಾಳಿದರೆ ವಿಶ್ವಾಸ ಉಳಿಸಿಕೊಳ್ಳುವುದು ಕಷ್ಟವಲ್ಲ. ಯಾವುದೇ ರಾಜಕಾರಣಿ ಅಥವಾ ಪ್ರಭಾವಿ ವ್ಯಕ್ತಿಗಳು ಹೇಳಿದರೂ ಮಣಿಯದೆ ಕಾನೂನು ಮತ್ತು ಸಂವಿಧಾನದ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಬದ್ಧತೆಯನ್ನು ತನಿಖಾ ಸಂಸ್ಥೆಗಳ ಮುಖ್ಯಸ್ಥರು ತೋರಿಸಬೇಕು. ಆಗ, ಸಿಬಿಐನಂತಹ ಸಂಸ್ಥೆಗಳ ಕುರಿತು ಜನರಲ್ಲಿ ಇಂತಹ ಭಾವನೆ ಬರುವುದಿಲ್ಲ. ಕೆಲವು ರಾಜ್ಯಗಳು ಸಿಬಿಐ ತನಿಖೆಗೆ ನೀಡಿದ್ದ ಮುಕ್ತ ಅನುಮತಿಯನ್ನು ಹಿಂಪಡೆದಿರುವ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ‘ಈ ಬೆಳವಣಿಗೆ ಸರಿಯಾದುದಲ್ಲ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನಿಜ, ಇಂತಹ ಬೆಳವಣಿಗೆ ನಡೆಯುತ್ತಿರುವುದು ದುರದೃಷ್ಟಕರ. ಇದು ಸಾಮಾನ್ಯ ಜನರ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಂತೂ ಅಲ್ಲ.

ಸಿಬಿಐ ಸೇರಿದಂತೆ ಎಲ್ಲ ಕಡೆಗಳಲ್ಲೂ ‘ಮಾತು ಕೇಳುವವರು’ ಬೇಕೆಂಬ ಧೋರಣೆ ಹೆಚ್ಚುತ್ತಿದೆ. ನಿವೃತ್ತಿ ನಂತರದ ಹುದ್ದೆಗಳ ಆಮಿಷವೊಡ್ಡಿ ಕೆಲಸ ಮಾಡಿಸುತ್ತಿರುವುದೂ ಸಂಸ್ಥೆಯ ವಿಶ್ವಾಸಾರ್ಹತೆ ಕುಗ್ಗಿಸುತ್ತಿದೆ. ಅನೇಕ ಸಂದರ್ಭಗಳಲ್ಲಿ, ಅಧಿಕಾರದಲ್ಲಿರುವವರ ಹಸ್ತಕ್ಷೇಪ ಅಥವಾ ಧೋರಣೆಗಳನ್ನು ಪ್ರಶ್ನಿಸಲು, ವಿರೋಧಿಸಲು ಹೆಚ್ಚಿನ ಅಧಿಕಾರಿಗಳು ಹಿಂದೇಟು ಹಾಕುತ್ತಾರೆ. ಮೌನಕ್ಕೆ ಶರಣಾಗುವವರೂ ಇದ್ದಾರೆ. ಈ ಎಲ್ಲವೂ ಈಗ ಸೃಷ್ಟಿಯಾಗಿರುವ ಪರಿಸ್ಥಿತಿಗೆ ಕಾರಣ. ಸಿಬಿಐ ನಿರ್ದೇಶಕರ ಆಯ್ಕೆ ಹೇಗೆ ನಡೆಯಬೇಕು ಎಂಬುದನ್ನು ವಿನೀತ್ ನಾರಾಯಣ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಕೇಂದ್ರ ಜಾಗೃತ ಆಯೋಗ ಕೂಡ ಸಿಬಿಐ ಕಾರ್ಯನಿರ್ವಹಣೆ ಮೇಲೆ ನಿಗಾ ಇರಿಸಬೇಕಿದೆ. ಎರಡೂ ಸರಿಯಾಗಿ ಆಗುತ್ತಿಲ್ಲ. ಸಿಬಿಐ ನಿರ್ದೇಶಕರು ಮತ್ತು ಹಿರಿಯ ಅಧಿಕಾರಿಗಳ ಆಯ್ಕೆ ಪ್ರಕ್ರಿಯೆಯ ಕುರಿತು ಪ್ರಶ್ನೆಗಳು ಇವೆ. ಸಿಬಿಐನ ವಿವಿಧ ಹುದ್ದೆಗಳಲ್ಲಿ ಯಾರು ಇರಬೇಕು ಎಂಬುದನ್ನು ನಿರ್ದೇಶಕರು ಆಯ್ಕೆಮಾಡುವ ಪದ್ಧತಿ ಇತ್ತು. ಇತ್ತೀಚಿನ ವರ್ಷಗಳಲ್ಲಿ ಈ ಪದ್ಧತಿಗೆ ತಿಲಾಂಜಲಿ ಇಟ್ಟು, ಹೊರಗಿನಿಂದ ಅಧಿಕಾರಿಗಳನ್ನು ನಿಯೋಜಿಸುವುದು ಹೆಚ್ಚಾಗಿದೆ. ‘ಮಾತು ಕೇಳುವವರ’ ಸಂಖ್ಯೆ ಹೆಚ್ಚಿರುವುದೇ ಈಗಿನ ದುಸ್ಥಿತಿಗೆ ಕಾರಣ. ಸಿಬಿಐ ದೇಶದ ಅತ್ಯುನ್ನತ ತನಿಖಾ ಸಂಸ್ಥೆ. ಅದನ್ನು ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿರಿಸಿದರೆ ಮಾತ್ರ ಸಂಸ್ಥೆಯ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಅಧಿಕಾರದಲ್ಲಿದ್ದವರ ಮಾತು ಕೇಳುವುದಕ್ಕಿಂತಲೂ ಜನರ ಮಾತುಗಳಿಗೆ ಕಿವಿಯಾಗಿ ಕೆಲಸ ಮಾಡಬೇಕು. ಆಗ, ದೇಶದ ಜನರು ಒಕ್ಕೊರಲಿನಿಂದ ಸಿಬಿಐ ಅನ್ನು ನಂಬುವ ವಾತಾವರಣ ನಿರ್ಮಾಣವಾಗುತ್ತದೆ. ಹಾಗೆ ಆದಲ್ಲಿ, ಯಾವ ರಾಜ್ಯವೂ ತಮ್ಮ ವ್ಯಾಪ್ತಿಯಲ್ಲಿ ಸಿಬಿಐ ಕೆಲಸ ಮಾಡುವುದಕ್ಕೆ ವಿರೋಧ ಅಥವಾ ಅಡ್ಡಿಪಡಿಸುವ ಪ್ರಮೇಯವೇ ಉದ್ಭವಿಸಲಾರದು ಎಂಬುದು ನನ್ನ ಭಾವನೆ.

– **ಲೇಖಕ:** ಸಿಬಿಐನ ನಿವೃತ್ತ ವಿಶೇಷ ನಿರ್ದೇಶಕ, ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯ

ನಿರೂಪಣೆ– ವಿ.ಎಸ್. ಸುಬ್ರಹ್ಮಣ್ಯ

ಕೆಲವು ದಶಕಗಳಿಂದ ಈಚೆಗೆ ಕೇಂದ್ರ ಸರ್ಕಾರವನ್ನು ಮುನ್ನಡೆಸಿದ ಎಲ್ಲ ಪಕ್ಷಗಳೂ ಸಿಬಿಐ ಅನ್ನು ದುರ್ಬಳಕೆ ಮಾಡಿಕೊಂಡಿವೆ. ಹೀಗಾಗಿ ಜನರಲ್ಲಿ ಸಿಬಿಐ ಕುರಿತ ವಿಶ್ವಾಸ ಕಳೆದುಹೋಗಿದೆ. ಮೊದಲು ಬಹುತೇಕ ರಾಜ್ಯಗಳು ಕೇಂದ್ರ ಸರ್ಕಾರದ ಅಧಿಕಾರಿಗಳು ಮತ್ತು ಕೇಂದ್ರದ ಸಂಸ್ಥೆಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸಿಬಿಐ ತನಿಖೆಗೆ ಮುಕ್ತ ಅನುಮತಿ ನೀಡಿದ್ದವು. ಆದರೆ, ತನಿಖಾ ಸಂಸ್ಥೆಯನ್ನು ರಾಜಕೀಯ ದಾಳವಾಗಿ ಬಳಕೆ ಮಾಡಲಾಗುತ್ತಿದೆ ಎಂಬ ಭಾವನೆ ಗಟ್ಟಿಯಾದ ಬಳಿಕ ಹೆಚ್ಚಿನ ರಾಜ್ಯಗಳು ಮುಕ್ತ ಅನುಮತಿಯನ್ನು ಹಿಂಪಡೆದು ಆದೇಶ ಹೊರಡಿಸಿವೆ



ಪ್ರಜಾವಾಣಿ ಚರ್ಚೆ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಸತ್ಯ ಅರಿಯಲು ಬೇಕು ಒಳ್ಳೇ ಮನಸ್ಸು

ಈ ಜಗತ್ತಿನಲ್ಲಿ ಸತ್ಯ ಯಾರಿಗೂ ಬೇಡ. ಸುಳ್ಳಿನ ಭ್ರಮೆ ಹೊದ್ದು ಮಲಗುವುದನ್ನು ಜನ ತಲತಲಾಂತರಗಳಿಂದ ರಕ್ತಗತ ಮಾಡಿಕೊಂಡುಬಿಟ್ಟಿದ್ದಾರೆ. ಹೀಗಾಗಿ ನಾವು ಈಗಿರುವುದೇ ಸತ್ಯ, ನಾವು ನಂಬಿಕೊಂಡು ಬಂದಿರುವ ವಿಚಾರವೇ ಪರಮಸತ್ಯ ಅಂದುಕೊಳ್ಳುತ್ತಾರೆ. ಸತ್ಯ ಹೇಳುವ ಬಾಯಿ ಮುಚ್ಚಿಸಲು ಕ್ರೂರವಾಗಿ ವರ್ತಿಸಲು ನಿರ್ದಯಿಗಳಾಗುತ್ತಾರೆ. ಹೀಗಾಗಿಯೇ, ಮನುಷ್ಯನ ಸತ್ಯಾನ್ವೇಷಣೆ ಕಾಲದಿಂದ ಕಾಲದ ಸಂಘರ್ಷದಲ್ಲಿ ಹಿಂದುಳಿಯುತ್ತ ಬಂದಿದೆ. ಆಧುನಿಕ ಕಾಲವೆಂದುಕೊಳ್ಳುವ ನಮ್ಮ ವರ್ತಮಾನಕಾಲದಲ್ಲೂ ಸತ್ಯಕ್ಕೆ ಅಡ್ಡಿ ಆತಂಕ ತಪ್ಪಿದ್ದಲ್ಲ.

ಮನುಷ್ಯನನ್ನು ನಾಗರಿಕನನ್ನಾಗಿ ರೂಪಿಸಿದ ಧರ್ಮಗಳನ್ನೂ ಸ್ವಾರ್ಥ ಮಾನವ ಸಂಕುಚಿತ ಬುದ್ಧಿಯಿಂದ ಬಂಧಿಸಿಡುವ ಪ್ರಯತ್ನ ಮಾಡುತ್ತಿದ್ದಾನೆ. ಮಾನವರ ಬದುಕಿಗೆ ಅಗತ್ಯವಾದ ಧರ್ಮಗಳ ವಿಚಾರಗಳ ವಿನಿಮಯಕ್ಕು ಅಡ್ಡಗೋಡೆ ಹಾಕಿ ನಿರ್ಬಂಧಿಸುತ್ತಿದ್ದಾನೆ. ಇದರ ಪರಿಣಾಮವಾಗಿ ಧರ್ಮವಿಚಾರಗಳು ಸರಾಗವಾಗಿ ಮಾನವರ ಬಳಿಗೆ ಸಾಗದೆ, ಅವು ಕೊಳೆಯುವಂತೆ ಮಾಡಿದ್ದಾನೆ. ಯಾವುದೇ ವಿಚಾರಗಳು ಮುಂದೆ ಸಾಗದೆ ನಿಂತ ನೀರಾದಾಗ ಕೊಳೆಯಲಾರಂಭಿಸುತ್ತವೆ. ಹೀಗಾಗಿ ಧರ್ಮದ ವಿಶಾಲತೆ ಅರಿಯದ ಮನುಷ್ಯರಲ್ಲಿ ಸದ್ಭಾವನೆ ಕ್ಷೀಣಿಸಿ, ದುರ್ಭಾವನೆಗಳು ಹೆಚ್ಚುತ್ತಿವೆ.

ಮನುಷ್ಯ ಕ್ರೂರನಾಗಬಾರದೆಂದೇ ಧರ್ಮಗಳು ಹುಟ್ಟಿವೆ. ಧರ್ಮದ ಮೂಲ ಆಶಯವೇ ಮನುಷ್ಯರನ್ನು ಒಳ್ಳೆಯವರನ್ನಾಗಿ ಬೆಳೆಸುವುದು ಆದರೆ ಜನರನ್ನು ಸನ್ಮಾರ್ಗಕ್ಕೆ ತರುವ ಧರ್ಮವನ್ನೇ ಮಾನವ ಸಂಕುಚಿತ ಸರಪಣಿ ಯಿಂದ ಕಟ್ಟಿ ಹಾಕಿದ್ದಾನೆ. ದೈವಿಕ ಅಂಶವಿರುವ ಧರ್ಮಗಳ ನಡುವೆ ತಾರತ ಮ್ಯದ ಲೇಪ ಹಾಕಿ ಒಣ ಪ್ರತಿಷ್ಠೆ ತೋರಿಸುತ್ತಿದ್ದಾನೆ. ಸ್ವಾರ್ಥಮನುಷ್ಯರಿಂದ ನಡೆಯುತ್ತಿರುವ ಇಂಥ ಕುಕೃತ್ಯಗಳು ಧರ್ಮದ ಪಾವಿತ್ರ್ಯಕ್ಕೆ ಧಕ್ಕೆ ತರುತ್ತಿವೆ. ಧರ್ಮದ ಮೂಲ ಹರವನ್ನೇ ತಿಳಿಯದ ಮತಾಂಧರು, ತನ್ನ ಧರ್ಮ ಶ್ರೇಷ್ಠ, ಉಳಿದ ಧರ್ಮಗಳು ನಿಕೃಷ್ಟ ಅನ್ನೋ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ತಾನು ನಂಬಿದ ದೇವರು ಮಾತ್ರ ದೇವರು. ಬೇರೆ ಧರ್ಮದ ದೇವರು ದೇವರೇ ಅಲ್ಲ ಅನ್ನೋ ಕೆಟ್ಟ ಬುದ್ಧಿಯನ್ನ ಬೆಳೆಸಿಕೊಳ್ಳುತ್ತಿದ್ದಾರೆ. ಈ ಬುದ್ಧಿಯನ್ನ ಇತರರಿಗೂ ಹರಡಿ ಸಮಾಜದ ನೆಮ್ಮದಿಯನ್ನು ಹಾಳು ಮಾಡುತ್ತಿದ್ದಾರೆ.

ಮತೀಯ ವಿಕಲ್ಪಕ್ಕೆ ಮಾನಸಿಕ ವಿಕಲ್ಪತೆಯು ಕಾರಣವಾಗಿದೆ. ಮನುಷ್ಯರ ನಡುವೆ ಉದ್ಭವಿಸುವ ದೀರ್ಘ ಕಾಲದ ಹಗೆತನ, ಇದರಿಂದ ಉದ್ಭವಿಸುವ ಖಿನ್ನತೆ ಮನುಷ್ಯನಲ್ಲಿನ ಮಾನಸಿಕ ಶಕ್ತಿಯನ್ನ ಕುಂದಿಸುತ್ತದೆ. ಮಾನಸಿಕವಾಗಿ ದುರ್ಬಲನಾದ ಮನುಷ್ಯ ಸದಾ ಅಸೂಯೆ ಪಡುತ್ತಿರುತ್ತಾನೆ. ತನಗಾಗದವರ ಬಗ್ಗೆ ಸದಾ ಹೊಟ್ಟೆಕಿಚ್ಚು ಪಡುತ್ತಾ ವಿವೇಚನಾ ಶಕ್ತಿ ಕಳೆದುಕೊಳ್ಳುತ್ತಾನೆ. ಎದುರಾಳಿಯ ಬಾಳು ಹಾಳು ಮಾಡುವ ಹೇಡಿತನ ತೋರಿಸುತ್ತಾನೆ. ಅವನ ದುರಾಲೋಚನೆಗಳು ಅವನನ್ನೇ ಹಾಳುಮಾಡುತ್ತವೆ ಎಂಬ ಸತ್ಯ ತಿಳಿಯದೆ ತನ್ನ ಬದುಕನ್ನು ನರಕವಾಗಿಸಿಕೊಳ್ಳುತ್ತಿದ್ದಾನೆ.

ಕೆಟ್ಟ ಯೋಚನೆಗಳನ್ನು ಬಿಡದೆ ಮನಸ್ಸಿಗೆ ಶಾಂತಿ ಸಿಗುವುದಿಲ್ಲ. ಕೆಟ್ಟ ಆಲೋಚನೆಗಳೆ ನಮ್ಮ ಶತ್ರು. ಈ ಸತ್ಯವನ್ನು ಮನುಷ್ಯನಿಗೆ ತಿಳಿಸುವುದೇ ಧರ್ಮ. ಇಂಥ ಸರಳ ಸತ್ಯ ಅರಿಯಲು ಒಳ್ಳೆಯ ಮನಸ್ಸು ಬೇಕು. ಒಳ್ಳೇ ಮನಸ್ಸಿ ಲ್ಲದಿದ್ದರೆ ಸತ್ಯವನ್ನ ಗ್ರಹಿಸಲು ಸಾಧ್ಯವಾಗುವುದಿಲ್ಲ. ಮನಸ್ಸು ಕೆಡಬಾರದೆಂದೇ ನಿತ್ಯವೂ ದೇವರ ಪ್ರಾರ್ಥನೆ ಮಾಡುತ್ತೇವೆ. ಇದರ ಜೊತೆಗೆ ಪರೋಪಕಾರದ ಚಿಂತನೆ ಸಹ ಮಾಡಬೇಕು. ಪರರ ಒಳಿತಿನಲ್ಲಿ ನಮ್ಮ ಬದುಕು ಬೆಳಗಲಿ ಅನ್ನೋ ಸದ್ಬುದ್ಧಿಯನ್ನ ಬೆಳೆಸಿಕೊಳ್ಳಬೇಕು. ನಾವು ಬದುಕಿದ್ದಷ್ಟು ದಿನ ಎಲ್ಲರಿಗೂ ಒಳ್ಳೆಯದನ್ನು ಬಯಸಬೇಕು. ಇಂಥ ವಿವೇಕ ಹೇಳಿಕೊಡುವ ಧರ್ಮಗಳನ್ನು ದುರ್ಭಾವನೆಗಳಿಂದ ಅಳೆದು, ಸಮಾಜದಲ್ಲಿ ನೆಮ್ಮದಿ ಕದಡಬಾರದು. ಜನರು ಶತ್ರುತ್ವ ಬೆಳೆಸಿಕೊಂಡು ನಿತ್ಯ ಕಾದಾಡುವಂತಾಗಬಾರದು. ಒಳ್ಳೆಯ ಮನಸ್ಸಿನವರಿಂದಲೇ ‘ಸಚ್ಚಿದಾನಂದ’ದ ಸೌಹಾರ್ದ ಬದುಕು ಸಾಕಾರವಾಗುವುದು ಎಂಬುದನ್ನು ಮರೆಯಬಾರದು.

ಸಿಬಿಐಗೆ ರಾಜ್ಯವು ಅವಕಾಶ ಕೊಡದಿದ್ದರೆ ತನಿಖೆಗೆ ಅಡ್ಡಿ

• ಶಾಂತಿ ಭೂಷಣ್ ಎಚ್.



ಯಾವುದೇ ತನಿಖಾ ಸಂಸ್ಥೆಯು ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಿಕೊಳ್ಳುವುದು ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 154 (1)ರ ಪ್ರಕಾರ. ಸಂಜ್ಞೇಯ ಅಪರಾಧಗಳಿಗೆ ಸಂಬಂಧಿಸಿದಂತೆ ತನಿಖಾ ಸಂಸ್ಥೆಗಳು ಈ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳುತ್ತವೆ. ತನಿಖಾ ಪ್ರಕ್ರಿಯೆಯನ್ನು ಯಾವುದೇ ತನಿಖಾ ಸಂಸ್ಥೆಯು ನಡೆಸುತ್ತಿದ್ದರೂ ಅದು ಸಿಆರ್‌ಪಿಸಿಯಲ್ಲಿ ವಿವರಿಸಿರುವ ಪ್ರಕಾರವೇ ನಡೆಯಬೇಕು. ಇದು ಕಡ್ಡಾಯ. ಬೇರೆ ಯಾವುದೇ ಪ್ರಕ್ರಿಯೆಯನ್ನು ಅನುಸರಿಸಿ ತನಿಖೆ ಮಾಡಲು ಅವಕಾಶ ಇಲ್ಲ.

ಸಿಆರ್‌ಪಿಸಿಯ ಐದನೆಯ ಅಧ್ಯಾಯದಲ್ಲಿ ಹೇಳಿರುವ ಪ್ರಕಾರ, ತನಿಖಾ ಸಂಸ್ಥೆಯು ತನಿಖೆಗಾಗಿ ಯಾವುದೇ ವ್ಯಕ್ತಿಗೆ ನೋಟಿಸ್ ನೀಡಬಹುದು ಮತ್ತು ಆತನನ್ನು ದಸ್ತಗಿರಿ ಮಾಡಬಹುದು. ಅಧ್ಯಾಯ 13ರ (ಇದು ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ವ್ಯಾಪ್ತಿ ಮತ್ತು ವಿಚಾರಣಾ ಅಧಿಕಾರ ವ್ಯಾಪ್ತಿಯನ್ನು ಒಳಗೊಂಡಿದೆ) ಅನ್ವಯ, ಅಪರಾಧವು ಒಂದಕ್ಕಿಂತ ಹೆಚ್ಚು ಪ್ರದೇಶಗಳಲ್ಲಿ ನಡೆದಿದ್ದರೆ, ಅಲ್ಲಿಗೆ ಹೋಗಿ ತನಿಖೆ ನಡೆಸುವ ಅಧಿಕಾರ ಇರುತ್ತದೆ.

ಇದರಲ್ಲಿನ ಸೆಕ್ಷನ್ 178(ಸಿ) ತನಿಖೆಯ ಸ್ಥಳದ ಬಗ್ಗೆ ಕೆಲವು ವಿವರಗಳನ್ನು ನೀಡುತ್ತದೆ. ತನಿಖೆ ನಡೆಸಬೇಕಾದ ಸ್ಥಳವು ಬೇರೆ ಯಾವುದೋ ರಾಜ್ಯ ಆಗಿದ್ದಲ್ಲಿ, ಅಲ್ಲಿನ ರಾಜ್ಯ ಸರ್ಕಾರ ಆ ನಿರ್ದಿಷ್ಟ ಅಪರಾಧದ ಬಗ್ಗೆ ತನಿಖೆ ನಡೆಸಲು ತಾನು ಅನುಮತಿ ನೀಡುವುದಿಲ್ಲ ಎಂದು ಹೇಳಲಾಗದು. ದೆಹಲಿ ವಿಶೇಷ ಪೊಲೀಸ್ ಕಾಯ್ದೆಯ (ಡಿಎಸ್‌ಪಿಇ ಕಾಯ್ದೆ) ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದ್ದರೆ, ತನಿಖೆಗೆ ಅವಕಾಶ ಕೊಡುವುದಿಲ್ಲ ಎಂದು ಹೇಳುವುದು ತನಿಖೆಯ ಪ್ರಕ್ರಿಯೆಗೆ ಅಡ್ಡಿ ಉಂಟುಮಾಡಿದಂತೆ ಆಗುತ್ತದೆ.

ಪೊಲೀಸರು ಅಥವಾ ಇತರ ಯಾವುದೇ ವಿಶೇಷ ತನಿಖಾ ದಳ (ಸಿಬಿಐ, ಎನ್‌ಐಎ, ಇ.ಡಿ. ಇತ್ಯಾದಿ) ಸಿಆರ್‌ಪಿಸಿ ಅಡಿಯಲ್ಲಿಯೇ ತನಿಖೆಯನ್ನು ಕೈಗೊಂಡು ಅಂತಿಮ ವರದಿಯನ್ನು ಸಂಬಂಧಪಟ್ಟ ನ್ಯಾಯಾಲಯದ ವ್ಯಾಪ್ತಿಯಲ್ಲಿ ಸಲ್ಲಿಸಬೇಕು. ಯಾವುದೇ ತನಿಖಾದಳದ ಕೆಲಸವು ಸೂಕ್ತವಾದ ಸಾಕ್ಷ್ಯವನ್ನು ಸಂಗ್ರಹಿಸಿ ನ್ಯಾಯಾಲಯದ ಮುಂದೆ ಇರಿಸುವುದಾಗಿರುತ್ತದೆ. ತನಿಖೆಗೆ ಅನುಮತಿ ನಿರಾಕರಿಸುವುದರಿಂದ ಸಾಕ್ಷ್ಯ ಸಂಗ್ರಹಿಸಲು, ದಾಖಲೆಗಳನ್ನು ಸಂಗ್ರಹಿಸಲು, ಅವುಗಳನ್ನು ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಹಾಜರುಪಡಿಸಲು ಅಡ್ಡಿ ಉಂಟಾಗುತ್ತದೆ. ತನಿಖೆಯನ್ನು ಹತ್ತಿಕ್ಕುವುದಕ್ಕೆ ಸಮ ಅದು. ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯವೇ ಸಿಬಿಐ ತನಿಖೆಗೆ ಆದೇಶ ನೀಡುವುದಿದೆ. ಅಂತಹ ಸಂದರ್ಭಗಳಲ್ಲಿಯಂತೂ ಯಾರಿಗೂ ಅವರಿಗೆ ಅನುಮತಿ ನಿರಾಕರಿಸಲು ಆಗದು. ಡಿಎಸ್‌ಪಿಇ ಕಾಯ್ದೆಯು, ಅಪರಾಧ ಎಲ್ಲಿಯೇ ನಡೆದಿದ್ದರೂ ತನಿಖೆ ನಡೆಸಬೇಕು ಎನ್ನುತ್ತದೆ.

ಕೆಲವು ಪ್ರಕರಣಗಳ ತನಿಖೆಗೆ ಅವಕಾಶ ಕೊಡುತ್ತೇವೆ, ಇನ್ನು ಕೆಲವು ಪ್ರಕರಣಗಳ ತನಿಖೆಗೆ ಅವಕಾಶ ಕೊಡಲಾಗದು ಎಂಬ ನಿಲುವು ಕಾನೂನಿನ ಉಲ್ಲಂಘನೆಯೇ ಆಗುತ್ತದೆ.

ಸಂವಿಧಾನದ ಏಳನೆಯ ಪರಿಚ್ಛೇದದಲ್ಲಿ ಇರುವ ಕೆಲವು ವಿವರಣೆಗಳ ಬಗ್ಗೆಯೂ ಇಲ್ಲಿ ಉಲ್ಲೇಖಿಸಬಹುದು. ರಾಜ್ಯ ಸರ್ಕಾರಗಳು ಹಾಗೂ ಅವುಗಳ ಅಧೀನದ ತನಿಖಾ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯನ್ನು ಮೀರಿದ ವಿಷಯಗಳ ಬಗ್ಗೆ ತನಿಖೆ ನಡೆಸುವ ವಿಶೇಷ ಅಧಿಕಾರವನ್ನು ಸಿಬಿಐಗೆ ನೀಡಲಾಗಿದೆ.

ಎಂ. ಬಾಲಕೃಷ್ಣ ರೆಡ್ಡಿ ಮತ್ತು ಸಿಬಿಐ ನಡುವಿನ ಪ್ರಕರಣವು ಇಲ್ಲಿ ಸ್ಮರಣೀಯ. ಡಿಎಸ್‌ಪಿಇ ಕಾಯ್ದೆಯ ಸೆಕ್ಷನ್ 5 ಹಾಗೂ 6ರ ಅನ್ವಯ, ‘ಕೇಂದ್ರಾಡಳಿತ ಪ್ರದೇಶಗಳು ಹಾಗೂ ರೈಲ್ವೆಗೆ ಸಂಬಂಧಿಸಿದ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯಗಳ ವ್ಯಾಪ್ತಿಯಲ್ಲಿ ಸಿಬಿಐ ಕಾರ್ಯ ನಿರ್ವಹಿಸಬೇಕು ಎಂದಾದರೆ ರಾಜ್ಯ ಸರ್ಕಾರಗಳ ಅನುಮತಿ ಅಗತ್ಯ’. ಆದರೆ, ರಾಜ್ಯವೊಂದರಲ್ಲಿ ತನಿಖೆ ನಡೆಸಲು ಅಲ್ಲಿನ ಸರ್ಕಾರವು ಅನುಮತಿಯನ್ನು ಹಿಂದಕ್ಕೆ ಪಡೆದರೂ, ಡಿಎಸ್‌ಪಿಇ ಕಾಯ್ದೆಯ ಅಡಿಯಲ್ಲಿ ರೈಲ್ವೆಗೆ ಸಂಬಂಧಿಸಿದ ಪ್ರದೇಶಗಳಲ್ಲಿ ತನಿಖೆ ನಡೆಸುವ ಅಧಿಕಾರವು ಸಿಬಿಐ ಬಳಿಯಲ್ಲಿ ಉಳಿದಿರುತ್ತದೆ. ಸಿಬಿಐ ಅಧಿಕಾರ ವ್ಯಾಪ್ತಿಯಲ್ಲಿ ‘ರೈಲ್ವೆಗೆ ಸಂಬಂಧಿಸಿದ ಪ್ರದೇಶ’ಗಳನ್ನು ಸೇರಿಸಿದ್ದರ ಹಿಂದೆ ಕಾರಣ ಇದೆ. ಈ ಪ್ರದೇಶಗಳು ದೇಶದ ಉದ್ದಗಲಕ್ಕೂ ಹರಡಿಕೊಂಡಿವೆ. ಬೇರೆ ಬೇರೆ ರಾಜ್ಯಗಳ ಪ್ರದೇಶಗಳ ಒಳಗೆಯೂ ಇವು ಚಾಚಿಕೊಂಡಿವೆ. ಹಾಗಾಗಿ, ಪ್ರಕರಣಗಳ ತನಿಖೆಯ ಮೊದಲು ಸಿಬಿಐ ಪ್ರತಿ ರಾಜ್ಯ ಸರ್ಕಾರದಿಂದಲೂ ಅನುಮತಿ ಕೋರಬೇಕು ಎನ್ನುವುದು ಡಿಎಸ್‌ಪಿಇ ಕಾಯ್ದೆಯ ಮೂಲ ಆಶಯವನ್ನು ಹಾಳುಗೆಡವಿದಂತೆ.

ರಾಜ್ಯಗಳ ವ್ಯಾಪ್ತಿಯಲ್ಲಿ ತನಿಖೆ ನಡೆಸುವ ಮೊದಲು ಸಿಬಿಐ ರಾಜ್ಯ ಸರ್ಕಾರಗಳ ಅನುಮತಿ ಪಡೆದುಕೊಂಡಿರಬೇಕು ಎಂದು ಡಿಎಸ್‌ಪಿಇ ಕಾಯ್ದೆಯ ಸೆಕ್ಷನ್ 6ರಲ್ಲಿ ಹೇಳಿರುವ ಮಾತು, ಕಡ್ಡಾಯ ಸ್ವರೂಪದ್ದಲ್ಲ. ಅದು ಒಂದು ನಿರ್ದೇಶನದ ಸ್ವರೂಪದ್ದು, ಅಷ್ಟೇ.

ದೇಶದ ಇತರ ಎಲ್ಲ ತನಿಖಾ ಸಂಸ್ಥೆಗಳಿಗಿಂತಲೂ ಸಿಬಿಐ ಭಿನ್ನವಾಗಿ ನಿಲ್ಲುತ್ತದೆ. ತನಿಖೆಯ ಪ್ರತಿ ಆಯಾಮಕ್ಕೆ ಅನ್ವಯ ಆಗುವಂತೆ ಸಿಬಿಐ ನಿರ್ದಿಷ್ಟ ಕಾರ್ಯಾಚರಣೆ ಪ್ರಕ್ರಿಯೆಗಳನ್ನು (ಎಸ್‌ಒಪಿ) ರೂಪಿಸಿಕೊಂಡಿದೆ. ಈ ಎಸ್‌ಒಪಿಗಳು, ತನಿಖೆಯನ್ನು ನಡೆಸುವ ಬಗೆಯು ನ್ಯಾಯಬದ್ಧವಾಗಿ ಇರುವಂತೆ ನೋಡಿಕೊಳ್ಳುತ್ತವೆ. ಸಿಬಿಐ ನಡೆಸುವ ತನಿಖೆಯ ಮೇಲ್ವಿಚಾರಣೆಗೆ ಬಹುಹಂತಗಳ ವ್ಯವಸ್ಥೆಯೊಂದು ಇದೆ. ಸಿಬಿಐನ ಒಟ್ಟು ಕಾರ್ಯವೈಖರಿಯ ಮೇಲ್ವಿಚಾರಣೆಗೆ ಕೂಡ ಒಂದು ವ್ಯವಸ್ಥೆ ಇದೆ. ಇದು ತನಿಖೆಯಲ್ಲಿ ಗರಿಷ್ಠ ಪ್ರಮಾಣದ ಪಾರದರ್ಶಕತೆ ಮತ್ತು ದಕ್ಷತೆಯನ್ನು ಖಾತರಿಪಡಿಸುತ್ತದೆ.

ಲೇಖಕ: ಕರ್ನಾಟಕ ಹೈಕೋರ್ಟ್‌ನಲ್ಲಿ ಸಹಾಯಕ ಸಾಲಿಸಿಟರ್ ಜನರಲ್

ನಿರೂಪಣೆ: ವಿಜಯ್ ಜೋಷಿ

ಯಾವುದೇ ತನಿಖಾದಳದ ಕೆಲಸವು ಸೂಕ್ತವಾದ ಸಾಕ್ಷ್ಯವನ್ನು ಸಂಗ್ರಹಿಸಿ ನ್ಯಾಯಾಲಯದ ಮುಂದೆ ಇರಿಸುವುದಾಗಿರುತ್ತದೆ. ತನಿಖೆಗೆ ಅನುಮತಿ ನಿರಾಕರಿಸುವುದರಿಂದ ಸಾಕ್ಷ್ಯ ಸಂಗ್ರಹಿಸಲು, ದಾಖಲೆಗಳನ್ನು ಸಂಗ್ರಹಿಸಲು, ಅವುಗಳನ್ನು ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಹಾಜರುಪಡಿಸಲು ಅಡ್ಡಿ ಉಂಟಾಗುತ್ತದೆ. ತನಿಖೆಯನ್ನು ಹತ್ತಿಕ್ಕುವುದಕ್ಕೆ ಸಮ ಅದು. ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯವೇ ಸಿಬಿಐ ತನಿಖೆಗೆ ಆದೇಶ ನೀಡುವುದಿದೆ. ಅಂತಹ ಸಂದರ್ಭಗಳಲ್ಲಿಯಂತೂ ಯಾರಿಗೂ ಅವರಿಗೆ ಅನುಮತಿ ನಿರಾಕರಿಸಲು ಆಗದು

ಪದಬಂಧ 4776


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಾರಾಜಮಾನವಾಗಿರುವ ಚಕ್ರವರ್ತಿ (4)
3.ಅತಿ ಘೋರವಾದ ವಿಷ (4)
5.ನಲಿಯುತ್ತಿರುವ ಕೇಕಿ (3)
7.ಹಸುವಿನ ಮರಿಗೆ ತೋರಿರುವ ದಯೆ (3)
9.ಆಸ್ಥಾನದಲ್ಲಿ ಗಿಟ್ಟಿಸಿಕೊಂಡಿರುವ ನೆಲೆ (2)
10.ಮುಂದಾಗುವ ಕಾಲ (3)
11.ತೊಡೆಯಲ್ಲಿನ ಗುರುತು! (2)
12.ತಾಟಕಿ ತೆರೆದಿರುವ ವಾತಾಯನ (3)
14.ನಸುಕಿನಲ್ಲಿ ಬಿದ್ದ ಸ್ವಪ್ನ (3)
16.ಬೆಲೆಯುಳ್ಳ ಮಣಿಗಳನ್ನು ಅಡಗಿಸಿಕೊಂಡಿರುವ ಸಮುದ್ರ (4)
17.ವಟಗುಟ್ಟುತ್ತಾ ಮಾಡಿದ ಮೋಸ (4)

ಮೇಲಿಂದ ಕೆಳಕ್ಕೆ

1.ಸೊಳ್ಳೆ ಇಲ್ಲಿಗೆ ಹಾರಿ ಬಂದಿದೆ (3)
2.ಜನನಿ ಹತ್ತಿರ ನೆರೆದಿರುವ ಮಂದಿ (2)
3.ಭೂಲೋಕದ ಅಮೃತ (2)
4.ಶುನಕ ಮೂಸುತ್ತಿರುವ ಬೆಳ್ಳುಳ್ಳಿ (3)
6.ಡೈವೋರ್ಸ್ ಅನ್ನು ಕನ್ನಡೀಕರಿಸಿ (7)
8.ದುಃಖಾಂತವಾದ ಪ್ರಹಸನ (5)
9.ಸ್ಥಳಾಂತರವಾಗುವುದು (5)
11.ಬರವಿದ್ದಾಗ ದಿಟ್ಟಿಸಿ ನೋಡಿದ ಆಕಾಶ (3)
13.ಕಿಟಕಿ ಹತ್ತಿರ ಈ ಜಗಳವೇ? (3)
14.ಪರಿಕರ ಹಿಡಿದಿರುವ ಕೈ (2)
15.ಹರಸುತಲಿದ್ದಾಗ ಬಂದ ಮಗ (2)



4775ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹರವಿ 3.ಶೀತವಲಯ 5.ಸಮ 6.ಪಾರಿವಾಳ 7.ಅಗ್ನಿಶಾಮಕದಳ 10.ನಳಪಾಕ 11.ನಾಕ 13.ಜಲತರಂಗ 14.ಕಸಾಯಿ

ಮೇಲಿಂದ ಕೆಳಕ್ಕೆ: 1.ಹಚ್ಚೆ 2.ವಿದ್ರುಮ 4.ಯಮಳ 5.ಸಗಅ 6.ಪಾನಕ 8.ಶಾಸಕ 9.ಳವಕ 10.ನದೀಜ 11.ನಾಟಕ 12.ಕಾಯಿ

ಸುಡೊಕು 5162

7	5			1			8	
		6			9			7
4			7				9	6
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

5161 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ನವೆಂಬರ್ 13, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ನವಮೀ ಗಂ. 6-57 (ಬೆ. 9-10) ಶನಿವಾರ ನಿತ್ಯ ನಕ್ಷತ್ರ ಶತಭಿಷ ಗಂ. 32-29 (ರಾ. 7-22) ಧ್ರುವ ನಾಮ ಯೋಗ ಗಂ. 4-12 ಉಪರಿ ವ್ಯಾಘಾ ನಾಮ ಯೋಗ ಗಂ. 55-49 ಕೌಲವ ಕರಣ ಗಂ. 6-57 ವಿಷ ಗಂ. 48-30 ಅಮೃತ ಗಂ 15-14 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-21 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 3 4

ಮೇಷ: ಹಿರಿಯರೊಂದಿಗೆ ಮನಸ್ತಾಪ. ಇಷ್ಟ ಮಿತ್ರರ ಆಗಮನದಿಂದ ಪರಿಸ್ಥಿತಿ ತಿಳಿಯಾಗಲಿದೆ. ದಿನದಂತ್ಯದಲ್ಲಿ ಯಶಸ್ಸನ್ನು ಕಾಣುವಿರಿ. ದೇವತಾರಾಧನೆಯಿಂದ ಉಲ್ಲಾಸ.

ವೃಷಭ: ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಶೀಘ್ರಗತಿಯಲ್ಲಿ ಲಾಭ ದೊರಕಲಿದೆ. ತೈಲ ವಸ್ತುಗಳ ವ್ಯವಹಾರದಲ್ಲಿ ಉತ್ತಮ ಪ್ರಗತಿ. ಗುರು ಆರಾಧನೆಯಿಂದ ಹೆಚ್ಚಿನ ಯಶಸ್ಸು.

ಮಿಥುನ: ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಮುಖ ದಿನವಾಗಲಿದೆ. ನಿರುದ್ಯೋಗಿಗಳು ಜೀವನದಲ್ಲಿ ತಿರುವು ಪಡೆಯುವ ಸಾಧ್ಯತೆ. ಕುಲದೇವತಾ ಆರಾಧನೆಯಿಂದ ಯಶಸ್ಸು.

ಕರ್ಕಾಟಕ: ಗುರುಹಿರಿಯರಿಂದ ಪ್ರಶಂಸೆ ಗಳಿಸುವಿರಿ. ಆಕಸ್ಮಿಕ ಧನಲಾಭ. ಪ್ರೀತಿಪಾತ್ರದವರಿಂದ ಸ್ವಲ್ಪ ಮಟ್ಟಿನ ಕಿರಿಕಿರಿ ಅನುಭವಿಸುವಿರಿ. ಶಿವನ ಅನುಗ್ರಹದಿಂದ ಅನುಕೂಲ.

ಸಿಂಹ: ವೆಚ್ಚದ ಮೇಲೆ ಹಿಡಿತವಿರಲಿ. ಅನಾವಶ್ಯಕ ವಿಷಯಗಳಿಂದ ಮನಸ್ಸಿಗೆ ಕಿರಿಕಿರಿಯುಂಟಾಗಿ ವ್ಯತಿರಿಕ್ತ ಪರಿಣಾಮ ಎದುರಿಸುವಿರಿ. ಪತ್ನಿಯ ಸಕಾಲ ನೆರವಿನಿಂದ ಹಿತಾನುಭವ.

ಕನ್ಯಾ: ವಿರೋಧಿಗಳ ವಿಷಯದಲ್ಲಿ ಎಚ್ಚರದಿಂದಿರಿ. ಪ್ರತಿಸ್ಪರ್ಧಿಗಳ ಸವಾಲು ಎದುರಿಸಬೇಕಾದೀತು. ಮನೆಯವರ ಸಹಕಾರದಿಂದಾಗಿ ಎಲ್ಲವೂ ಸುಗಮ.

ತುಲಾ: ವಿದ್ಯಾರ್ಥಿಗಳಿಗೆ ಉತ್ತಮ ಫಲ ದೊರಕಿ ಸಂಭ್ರಮಿಸುವಿರಿ. ವಾಸ್ತು – ವಸ್ತ್ರ ವಿನ್ಯಾಸಕಾರರಿಗೆ ಅಧಿಕ ಮನ್ನಣೆ. ನೇಕಾರರಿಗೆ ಉತ್ತಮ ಲಾಭ. ಆರೋಗ್ಯದಮೇಲೆ ನಿಗಾ ಇರಲಿ.

ವೃಶ್ಚಿಕ: ಭೂ ವ್ಯವಹಾರಕ್ಕೆ ಅಷ್ಟೊಂದು ಪ್ರಶಸ್ಥವಲ್ಲದ ದಿನ. ಅದರಿಂದ ದೂರವಿರುವುದೇ ಒಳ್ಳೆಯದು. ದಿನಾಂತ್ಯದಲ್ಲಿ ಮನೆಯಲ್ಲಿ ಸಂತೋಷಕರ ವಾತಾವರಣ.

ಧನು: ಉದ್ಯೋಗ ಕ್ಷೇತ್ರದಲ್ಲಿ ಲವಲವಿಕೆಯ ದಿನ. ಮೇಲಾಧಿಕಾರಿಗಳಿಂದ ಪ್ರಶಂಸೆ. ವಾಹನಗಳಿಂದ ಸ್ವಲ್ಪ ಮಟ್ಟಿನ ತೊಂದರೆಯ ಸಾಧ್ಯತೆ. ಹೆಚ್ಚಿನ ಅಪಾಯವಿಲ್ಲ.

ಮಕರ: ಈ ದಿನದ ಪ್ರಗತಿ ಅಷ್ಟೊಂದು ಉತ್ತಮ ಅಲ್ಲದಿದ್ದರೂ ಕುಲದೇವತಾ ಆರಾಧನೆಯಿಂದ ವಿಘ್ನಗಳು ದೂರವಾಗಲಿವೆ. ಪತ್ನಿ ಬಂಧುವರ್ಗದವರಿಂದ ಬಂದ ಸಲಹೆಗಳನ್ನು ನಿರಾಕರಿಸದಿರಿ.

ಕುಂಭ: ವಾಹನ ಖರೀದಿ ಯೋಗ ಮತ್ತು ಆರೋಗ್ಯದಲ್ಲಿ ಸುಧಾರಣೆ. ಕೃಷಿ ಕೆಲಸಕಾರ್ಯಗಳಲ್ಲಿ ಪ್ರಗತಿ. ಶಿವನ ಆರಾಧನೆಯು ಹೆಚ್ಚಿನ ಅನುಕೂಲ.

ಮೀನ: ಕುಲದೇವತಾರಾಧನೆಯಿಂದ ಮಾನಸಿಕ ನೆಮ್ಮದಿ. ಸಾಮಾಜಿಕ ಸ್ಥಾನಮಾನಗಳು ದೊರಕುವ ಸಾಧ್ಯತೆ ಕಂಡುಬರುತ್ತಿದೆ. ಕಲಾವಿದರಿಗೆ ಅನುಕೂಲಕರ ದಿನ. ಧಾನ್ಯ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ.

ನಿಮ್ಮ ಜನ್ಮದಿನ 13-ನವೆಂಬರ್ ಈದಿನ ಅತ್ಯಂತ ಶುಭ ದಿನವಾಗಿದೆ. ಚಿನ್ನದ ವ್ಯಾಪಾರಸ್ಥರಿಗೆ ಉತ್ತಮವಾದ ಭವಿಷ್ಯವನ್ನು ತಂದುಕೊಡಲಿದೆ. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು ದೊರಕಲಿದೆ. ರಾಜಕೀಯ ವ್ಯಕ್ತಿಗಳಿಗೆ ವೃಥಾ ಆರೋಪಕ್ಕೆ ಗುರಿಯಾಗುವ ಸಾಧ್ಯತೆ. ಸಮಾಜ ಕೇಡಾಗುವ ಕೆಲಸಗಳಿಂದ ದೂರ ಉಳಿಯುವುದು ಒಳ್ಳೆಯದು.

ವಿಧಾನ ಪರಿಷತ್ ಚುನಾವಣೆ: ಕುಟುಂಬಸ್ಥರಿಗೆ ಟಿಕೆಟ್ ಇಲ್ಲ ಎಂದ ಬಿಜೆಪಿ

ತಮ್ಮನ ಟಿಕೆಟ್‌ಗಾಗಿ ಶೆಟ್ಟರ್ ದೆಹಲಿಗೆ?

ಪ್ರಜಾ ಮತ ಜನತಂತ್ರದ ಹಬ್ಬ 2021

ಪ್ರಜಾವಾಣಿ ವಾರ್ತೆ

ಬೆಂಗಳೂರು/ದೆಹಲಿ: ಬಿಜೆಪಿಯ ಹಿರಿಯ ಶಾಸಕ ಜಗದೀಶ ಶೆಟ್ಟರ್ ಅವರು ಶುಕ್ರವಾರ ದಿಢೀರ್ ದೆಹಲಿಗೆ ಭೇಟಿ ನೀಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ವಿಧಾನಪರಿಷತ್ ಚುನಾವಣೆಯಲ್ಲಿ ಸಚಿವರು, ಶಾಸಕರು ಮತ್ತು ಸಂಸದರ ಕುಟುಂಬದವರಿಗೆ ಟಿಕೆಟ್ ನೀಡುವುದಿಲ್ಲ ಎಂದು ಬಿಜೆಪಿಯ ವರಿಷ್ಠರು ಸೂಚನೆ ನೀಡಿರುವುದರಿಂದ, ತನ್ನ ತಮ್ಮ ವಿಧಾನ ಪರಿಷತ್ ಸದಸ್ಯ ಪ್ರದೀಪ್ ಶೆಟ್ಟರ್ ಅವರಿಗೆ ಟಿಕೆಟ್ ಖಾತರಿಪಡಿಸಲು ಶೆಟ್ಟರ್ ಅವರು ದೆಹಲಿಗೆ ಭೇಟಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರದೀಪ್ ಶೆಟ್ಟರ್ ಅಲ್ಲದೆ, ಶಾಸಕ ಅಪ್ಪಚ್ಚು ರಂಜನ್ ಸಹೋದರ ಸುನೀಲ್ ಸುಬ್ರಮಣಿ ಅವರ ಸದಸ್ಯತ್ವದ ಅವಧಿ ಜನವರಿ 5ಕ್ಕೆ ಕೊನೆಗೊಳ್ಳಲಿದೆ. ಇವರು ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.

ತಮ್ಮ ದೆಹಲಿ ಭೇಟಿಯ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಜಗದೀಶ ಶೆಟ್ಟರ್, 'ವೈಯಕ್ತಿಕ ಕೆಲಸದ ಮೇಲೆ ದೆಹಲಿಗೆ ಬಂದಿದ್ದೇನೆ. ಪಕ್ಷದ ಮುಖಂಡರ ಕರೆ ಮೇರೆಗೆ ಅಥವಾ ಪಕ್ಷದ ಮುಖಂಡರನ್ನು ಭೇಟಿಯಾಗಲು ದೆಹಲಿಗೆ ಬಂದಿಲ್ಲ. ಶನಿವಾರವೇ ಹುಬ್ಬಳ್ಳಿಗೆ ಮರಳುತ್ತೇನೆ' ಎಂದು ಸ್ಪಷ್ಟಪಡಿಸಿದರು.

ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದೆಹಲಿಗೆ ಭೇಟಿ ನೀಡಿ ಬಂದ ಮರುದಿನವೇ ಜಗದೀಶ ಶೆಟ್ಟರ್ ಅವರು ದೆಹಲಿಗೆ ತೆರಳಿರುವುದಕ್ಕೆ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಪ್ರದೀಪ ಶೆಟ್ಟರ್ ಪ್ರತಿನಿಧಿಸುತ್ತಿರುವ ಧಾರವಾಡ, ಹಾವೇರಿ, ಗದಗ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣೆಯಲ್ಲಿ ಮರು ಆಯ್ಕೆ ಬಯಸಿದ್ದಾರೆ. ಟಿಕೆಟ್ ಖಚಿತ ಪಡಿಸಿಕೊಳ್ಳುವ ದೃಷ್ಟಿಯಿಂದಲೂ ದೆಹಲಿಗೆ ಭೇಟಿ ನೀಡಿರಬಹುದು ಎಂದು ಅವರ ಆಪ್ತ ವಲಯ ಹೇಳಿದೆ.



ಶೆಟ್ಟರ್ ಅವರು ಬೇರೆ ಕೆಲಸದ ಮೇಲೆ ದೆಹಲಿಗೆ ಹೋಗಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನು ಬದಲಾಯಿಸುವ ಅಗತ್ಯವಿಲ್ಲ

ಬಿ.ಎಸ್. ಯಡಿಯೂರಪ್ಪ, ಶಾಸಕ

ಕೊಡಗಿನಲ್ಲೂ ಕಗ್ಗಂಟು: ಶಾಸಕ ಅಪ್ಪಚ್ಚು ರಂಜನ್ ಅವರ ತಮ್ಮ ಹಾಗೂ ಪರಿಷತ್‌ನ ಹಾಲಿ ಸದಸ್ಯ ಸುನೀಲ್ ಸುಬ್ರಮಣಿ ಜತೆ ಅವರ ಮತ್ತೊಬ್ಬ ತಮ್ಮ ಸುಜಾ ಕುಶಾಲಪ್ಪ ಕೂಡಾ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಕಳೆದ ಬಾರಿ ವಿಧಾನಪರಿಷತ್ ಚುನಾವಣೆಯಲ್ಲಿ ಆರೋಪಗಳು ಇದ್ದ ಕಾರಣ ಟಿಕೆಟ್ ಸಿಗಲಿಲ್ಲ. ಸುನೀಲ್ ಸುಬ್ರಮಣಿ ಅವರಿಗೆ ಟಿಕೆಟ್ ನೀಡಲಾಯಿತು. ಈ ಬಾರಿ ಇಬ್ಬರೂ ಟಿಕೆಟ್‌ಗೆ ಪೈಪೋಟಿ ನಡೆಸಿದ್ದಾರೆ. ಬಿಜೆಪಿ ವರಿಷ್ಠರ ಸೂಚನೆ ಇಬ್ಬರಲ್ಲೂ ಆತಂಕ ಸೃಷ್ಟಿಸಿದೆ.

ಶಿವಮೊಗ್ಗದಲ್ಲಿ ಡಿ.ಎಚ್. ಶಂಕರಮೂರ್ತಿ ಅವರ ಮಗ, ಆರ್ಯ ವೈಶ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆಗಿರುವ ಡಿ.ಎಸ್.ಅರುಣ್ ಕೂಡಾ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಆದರೆ ಅವರ ತಂದೆ ಈಗ ರಾಜಕೀಯದಿಂದಲೇ ನಿವೃತ್ತಿ ಹೊಂದಿರುವುದರಿಂದ, ಇವರಿಗೆ ಅಷ್ಟೇನೂ ಸಮಸ್ಯೆ ಆಗುವುದಿಲ್ಲ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್ ಟಿಕೆಟ್‌ಗೆ ಬಾಲಕೃಷ್ಣ ಸಹೋದರ ಅಶೋಕ್ ಅರ್ಜಿ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ಗ್ರಾಮಾಂತರ– ರಾಮನಗರ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಎಚ್.ಎನ್. ಅಶೋಕ್ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಆಗಿದ್ದಾರೆ.

ಮಾಗಡಿ ಕ್ಷೇತ್ರದ ಮಾಜಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರ ಸಹೋದರ ಅಶೋಕ್ ಈ ಹಿಂದೆ ರಾಮನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಬಾಲಕೃಷ್ಣ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾದ ಬೆನ್ನಲ್ಲೇ ಅಶೋಕ್ ಕೂಡ ಕಾಂಗ್ರೆಸ್ ಸೇರಿದ್ದರು.

ಈ ಕ್ಷೇತ್ರದ ಹಾಲಿ ಸದಸ್ಯರಾಗಿರುವ ಎಸ್.ರವಿ ಮತ್ತೊಮ್ಮೆ ಸ್ಪರ್ಧೆ ಬಯಸಿದ್ದು, ಅವರೂ ಕಾಂಗ್ರೆಸ್ ಹೈಕಮಾಂಡ್‌ಗೆ ಈಗಾಗಲೇ ಅರ್ಜಿ ಸಲ್ಲಿಸಿದ್ದಾರೆ.

ಭವಾನಿ ರೇವಣ್ಣಗೆ ಟಿಕೆಟ್: ಒತ್ತಾಯ

ಪ್ರಜಾವಾಣಿ ವಾರ್ತೆ

ಹಾಸನ: ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಈ ಬಾರಿ ಜೆಡಿಎಸ್‌ನಿಂದ ಶಾಸಕ ಎಚ್.ಡಿ.ರೇವಣ್ಣ ಅವರ ಪತ್ನಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಭವಾನಿ ರೇವಣ್ಣರನ್ನು ಕಣಕ್ಕಿಳಿಸಬೇಕು ಎಂಬ ಒತ್ತಾಯ ಪಕ್ಷದೊಳಗೆ ಮೂಡಿದೆ. ಮತ್ತೊಂದೆಡೆ, ಅವರ ಹಿರಿಯ ಪುತ್ರ ಎಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೂರಜ್ ರೇವಣ್ಣ ಅವರನ್ನು ಅಭ್ಯರ್ಥಿಯಾಗಿಸಬೇಕು ಎಂಬ ಬಗ್ಗೆಯೂ ಚರ್ಚೆ ನಡೆದಿದೆ.

ಅಭ್ಯರ್ಥಿ ಆಯ್ಕೆ ಕುರಿತು ನಗರದಲ್ಲಿ ಶುಕ್ರವಾರ ಸಂಜೆ ರಾಜ್ಯಸಭೆ ಸದಸ್ಯ ಎಚ್.ಡಿ.ದೇವೇಗೌಡ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಶಾಸಕರಾದ ಕೆ.ಎಸ್.ಲಿಂಗೇಶ್, ಸಿ.ಎನ್. ಬಾಲಕೃಷ್ಣ, ಕೆ.ಎಂ.ಶಿವಲಿಂಗೇಗೌಡ ಅವರು, 'ಭವಾನಿ ಅವರಿಗೇ ಟಿಕೆಟ್ ನೀಡಬೇಕು. ಸೊಸೆ ಎಂಬುದನ್ನು ನೋಡದೆ ಮಹಿಳಾ ಕೋಟಾದಲ್ಲಾದರೂ ಅವರನ್ನು ಕಣಕ್ಕಿಳಿಸಬೇಕು' ಎಂದು ಆಗ್ರಹಿಸಿದರು.

ಸಭೆಯಲ್ಲಿ ಎಚ್.ಡಿ.ದೇವೇಗೌಡ ಮಾತನಾಡಿ ಕಾರ್ಯಕರ್ತರ ಭಾವನೆಗಳಿಗೆ ಬೆಲೆ ನೀಡುವುದಾಗಿ ತಿಳಿಸಿದರು.

ಬೀದರ್: 3 ಪಕ್ಷಗಳಿಂದ ಅಭ್ಯರ್ಥಿಗಳ ಹುಡುಕಾಟ!

ಪ್ರಜಾವಾಣಿ ವಾರ್ತೆ

ಬೀದರ್: ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾವಣೆ ಘೋಷಣೆಯಾದರೂ ರಾಜಕೀಯ ಪಕ್ಷಗಳ ಮುಖಂಡರು ಸ್ಪರ್ಧೆಗೆ ಆಸಕ್ತಿ ತೋರಿಸುತ್ತಿಲ್ಲ. ಈ ಕ್ಷೇತ್ರ ಪ್ರತಿನಿಧಿಸುತ್ತಿರುವ ಕಾಂಗ್ರೆಸ್‌ನ ವಿಜಯಸಿಂಗ್ ಮತ್ತೆ ಸ್ಪರ್ಧಿಸಲಾರೆ ಎಂದು ಹೇಳಿಕೆಕೊಟ್ಟ ನಂತರ ಕಾಂಗ್ರೆಸ್‌ನಲ್ಲಿ ತಳಮಳ ಶುರುವಾಗಿದೆ.

ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳ ಶೋಧದಲ್ಲಿ ತೊಡಗಿವೆ.

'ಬಿ. ನಾರಾಯಣರಾವ್ ನಿಧನದಿಂದಾಗಿ ತೆರವಾಗಿದ್ದ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ವಿಜಯಸಿಂಗ್ ಸ್ಪರ್ಧಿಸಲು ಬಯಸಿದ್ದರು. ಆದರೆ, ಪಕ್ಷ ಅವರಿಗೆ ಟಿಕೆಟ್ ಕೊಡಲಿಲ್ಲ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಸವಕಲ್ಯಾಣ ಕ್ಷೇತ್ರದಿಂದ ಸ್ಪರ್ಧಿಸುವ ಬಯಕೆ ಹೊಂದಿದ್ದಾರೆ. ಹೀಗಾಗಿ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ' ಎನ್ನುವುದು ಆ ಪಕ್ಷದ ಮೂಲಗಳ ಹೇಳಿಕೆ.

'ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣ್‌ದೀಪ್ ಸುರ್ಜೇವಾಲಾ ಇದೇ 14ರಂದು ಬೆಂಗಳೂರಲ್ಲಿ ಪಕ್ಷದ ಮುಖಂಡರ ಸಭೆ ಕರೆದಿದ್ದಾರೆ. ಈ ಸಭೆಯಲ್ಲೇ ವಿಧಾನ ಪರಿಷತ್ ಚುನಾವಣೆಗೆ ಪಕ್ಷದ ಅಭ್ಯರ್ಥಿ ಆಯ್ಕೆ ಮಾಡುವ ಸಾಧ್ಯತೆ ಇದೆ' ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಹೇಳುತ್ತಾರೆ.

'ಜೆಡಿಎಸ್‌ನಿಂದ ವಿಧಾನ ಪರಿಷತ್ತಿಗೆ ಸ್ಪರ್ಧಿಸಲು ಮೂವರು ಆಸಕ್ತಿ ತೋರಿಸಿದ್ದಾರೆ. ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ಪಕ್ಷದ ವರಿಷ್ಠರು ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ' ಎನ್ನುತ್ತಾರೆ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ ಪಾಟೀಲ ಸೋಲಪುರ.

'ಬಿಜೆಪಿ ಮುಖಂಡ, ಉದ್ಯಮಿ ಗುರುನಾಥ ಕೊಳ್ಳೂರ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ತೋರಿಸಿದ್ದಾರೆ. ಅವರ ಬಗ್ಗೆ ಕಾರ್ಯಕರ್ತರಿಗೂ ಹೆಚ್ಚಿನ ಒಲವು ಇದೆ. ಬೇರೆ ಮುಖಂಡರು ಇನ್ನೂ ಆಸಕ್ತಿ ತೋರಿಸಿಲ್ಲ' ಎನ್ನುವುದು ಆ ಪಕ್ಷದ ಮೂಲಗಳ ಮಾಹಿತಿ.

ರಾಯಚೂರು– ಕೊಪ್ಪಳ ಕ್ಷೇತ್ರದಲ್ಲಿ ಪೈಪೋಟಿ

ರಾಯಚೂರು: ಕೊಪ್ಪಳ ಹಾಗೂ ರಾಯಚೂರು ಸ್ಥಳೀಯ ಸಂಸ್ಥೆಗಳ ವಿಧಾನ ಪರಿಷತ್ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಲು ಕಾಂಗ್ರೆಸ್ ಹಾಗೂ ಬಿಜೆಪಿಯಲ್ಲಿ ಪೈಪೋಟಿ ಶುರುವಾಗಿದೆ.

'ಈ ಕ್ಷೇತ್ರ ಪ್ರತಿನಿಧಿಸುತ್ತಿರುವ ಕಾಂಗ್ರೆಸ್‌ನ ಬಸವರಾಜ ಪಾಟೀಲ ಇಟಗಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಬಯಕೆ ಹೊಂದಿದ್ದಾರೆ. ಹೀಗಾಗಿ ಅವರು ವಿಧಾನ ಪರಿಷತ್‌ಗೆ ಮತ್ತೆ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ' ಎನ್ನುವುದು ಆ ಪಕ್ಷದ ಮೂಲಗಳ ಮಾಹಿತಿ.

ಕಾಂಗ್ರೆಸ್ ಶಾಸಕ ಅಮರೇಗೌಡ ಬಯ್ಯಾಪುರ ಅವರ ಸಹೋದರನ ಪುತ್ರ ಶರಣಗೌಡ ಬಯ್ಯಾಪುರ, ಮಸ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ ಹಾಗೂ ಕಾಂಗ್ರೆಸ್ ಮುಖಂಡ ಶರಣಗೌಡ ಮಲ್ಲದಕಲ್ಲ ಹಾಗೂ ಕಾಂಗ್ರೆಸ್ ರಾಯಚೂರು ನಗರ ಘಟಕದ ಅಧ್ಯಕ್ಷ ಬಿ.ಬಸವರಾಜ ರೆಡ್ಡಿ ಅವರು ಟಿಕೆಟ್ ಆಕಾಂಕ್ಷಿಗಳಾಗಿದ್ದು, ಪಕ್ಷದ ಜಿಲ್ಲಾ ಘಟಕಕ್ಕೆ ಪತ್ರ ಸಲ್ಲಿಸಿದ್ದಾರೆ.

ಬಿಜೆಪಿಯಿಂದ ಮಾಜಿ ಶಾಸಕ ಬಸನಗೌಡ ಬ್ಯಾಗವಾಟ ಹಾಗೂ ಈಗಷ್ಟೇ ಪಕ್ಷಕ್ಕೆ ಸೇರ್ಪಡೆಯಾಗಿರುವ ಉದ್ಯಮಿ ಈ.ಆಂಜನೇಯ ಅವರು ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿದ್ದಾರೆ. ಜೆಡಿಎಸ್ ಪಕ್ಷವು ಅಭ್ಯರ್ಥಿಯ ಹುಡುಕಾಟದಲ್ಲಿದೆ.

'ಸುಪ್ರೀಂ' ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣನಿಂದ ಮೂಲಕ ವಶಪಡಿಸಿಕೊಂಡ ಬಿಟ್‌ಕಾಯಿನ್‌ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಹಗರಣದ ಕುರಿತು ಸುಪ್ರೀಂಕೋರ್ಟ್‌ನ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಸರ್ಕಾರ ನಡೆಸುವ ತನಿಖೆಯಿಂದ ಸತ್ಯಾಂಶ ಹೊರಬರುವುದಿಲ್ಲ. ಹಗರಣದಲ್ಲಿ ಪೊಲೀಸರು, ಸರ್ಕಾರದ ಉನ್ನತ ಸ್ಥಾನದಲ್ಲಿರುವವರು ಸೇರಿದಂತೆ ಹಲವರು ಶಾಮೀಲಾಗಿದ್ದಾರೆ. ಪ್ರಕರಣವನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ವಹಿಸಿದಿದ್ದರೆ ಕಾಂಗ್ರೆಸ್ ಪಕ್ಷದಿಂದ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಲಾಗುವುದು ಎಂದರು.

ಮಾಜಿ ಗೃಹ ಸಚಿವರೂ ಆಗಿರುವ ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಎಲ್ಲವೂ ಗೊತ್ತಿದೆ. ಅವರೇ ಜನರ ಎದುರು ಸತ್ಯ ಹೇಳಲಿ ಎಂದು ಒತ್ತಾಯಿಸಿದರು.



ಪ್ರಿಯಾಂಕ್ ಖರ್ಗೆ

ಶ್ರೀಕಿಯನ್ನು ಬಂಧಿಸಿದ ನಂತರ ಪೊಲೀಸರು ಕೈಗೊಂಡ ಕ್ರಮಗಳ ಬಗ್ಗೆ ಹಲವು ಅನುಮಾನಗಳಿವೆ. ₹ 9 ಕೋಟಿ ಮೌಲ್ಯದ ಬಿಟ್‌ಕಾಯಿನ್‌ಗಳನ್ನು ವಶಕ್ಕೆ ಪಡೆದಿರುವುದಾಗಿ ಪ್ರಕಟಿಸಿದ್ದರು. ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ್ ಎಂಬುವವರು ಪಂಚನಾಮೆಗೆ ಸಾಕ್ಷಿಗಳನ್ನಾಗಿ ಬೆಸ್ಕಾಂ ಲೈನ್‌ಮನ್ ಮತ್ತು ವಾಣಿಜ್ಯ ತೆರಿಗೆ ಇಲಾಖೆಯವರನ್ನು ಕರೆಸಿದ್ದರು. ಬಿಟ್‌ಕಾಯಿನ್ ಬಗ್ಗೆ ಲೈನ್‌ಮನ್‌ಗಳಿಗೆ ಏನು ಗೊತ್ತಿರಲು ಸಾಧ್ಯ ಎಂದು ಪ್ರಶ್ನಿಸಿದರು.

ಬಿಟ್‌ಕಾಯಿನ್ ವರ್ಗಾಯಿಸಿಕೊಂಡು ಹವಾಲಾ ಮೂಲಕ ಹಣ ಕೊಡುತ್ತಿದ್ದ ರಾಬಿನ್ ಖಂಡೇಲ್‌ವಾಲಾ ಎಂಬಾತ ಮೌರ್ಯ ಹೋಟೆಲ್‌ನಲ್ಲಿ ಪೊಲೀಸರಿಗೆ ಶರಣಾಗಿದ್ದ. ಆತನ ಬಗ್ಗೆ ಸರಿಯಾದ ತನಿಖೆಯನ್ನೇ ನಡೆಸಿಲ್ಲ. ಶ್ರೀಕಿ ವಾಲೆಟ್‌ನಲ್ಲಿ 31 ಬಿಟ್‌ಕಾಯಿನ್‌ಗಳು ಇದ್ದವು ಎಂದು ಹೇಳಲಾಗಿತ್ತು. ನಂತರ ವಾಲೆಟ್ ತೆರೆದಾಗ ಅಲ್ಲಿ 186 ಬಿಟ್‌ಕಾಯಿನ್‌ಗಳು ಇದ್ದವು. 31 ಬಿಟ್‌ಕಾಯಿನ್‌ಗಳು 186 ಆಗಿದ್ದು ಹೇಗೆ ಎಂದು ಪ್ರಿಯಾಂಕ್ ಕೇಳಿದರು.

ಪೊಲೀಸರ ವಶದಲ್ಲಿದ್ದಾಗ ತನಗೆ ಡ್ರಗ್ಸ್ ನೀಡಲಾಗಿತ್ತು ಎಂಬುದನ್ನು ಶ್ರೀಕಿ ನ್ಯಾಯಾಲಯಕ್ಕೆ ತಿಳಿಸಿದ್ದಾನೆ. ಆ ಬಗ್ಗೆ ಸರಿಯಾದ ವೈದ್ಯಕೀಯ ಪರೀಕ್ಷೆಯೇ ನಡೆದಿಲ್ಲ. ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯಕ್ಕೆ ಮಾಹಿತಿ ನೀಡುವಲ್ಲೂ ಪೊಲೀಸರು ವಿಳಂಬ ಮಾಡಿದ್ದಾರೆ. ಇದೆಲ್ಲವೂ ಅಕ್ರಮ ನಡೆದಿರುವ ಸುಳಿವು ನೀಡುತ್ತವೆ ಎಂದು ಹೇಳಿದರು.

ತನಿಖೆಗೆ ಹಿಂಜರಿಕೆ ಯಾಕೆ: ಸಿದ್ದರಾಮಯ್ಯ ಪ್ರಶ್ನೆ

ಬೆಂಗಳೂರು: 'ಬಿಟ್ ಕಾಯಿನ್ ಹಗರಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗಿಯಾಗಿದ್ದಾರೋ ಇಲ್ಲವೋ ನಮಗೆ ಗೊತ್ತಿಲ್ಲ, ಅವರು ಅಪರಾಧಿಗಳೆಂದು ಯಾರೂ ಹೇಳಿಲ್ಲ. ಹೀಗಿದ್ದರೂ ತನಿಖೆ ನಡೆಸಲು ಹಿಂಜರಿಕೆ ಏಕೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ಆರೋಪ ನಿರ್ಲಕ್ಷಿಸಿ: ಮೋದಿ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಶುಕ್ರವಾರ ಪ್ರಕಟವಾಗಿರುವ ಸುದ್ದಿಯನ್ನು ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿರುವ ಅವರು, 'ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಿ ಎಂದಷ್ಟೇ ನಾನು ಮತ್ತು ನಮ್ಮ ಪಕ್ಷದ ನಾಯಕರು ಹೇಳುತ್ತಿರುವುದು' ಎಂದಿದ್ದಾರೆ.

'ಬಿಟ್ ಕಾಯಿನ್ ಹಗರಣದ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತನಿಖಾ ಸಂಸ್ಥೆಗಳಿಂದಲೇ ತನಿಖೆ ನಡೆಯುತ್ತಿದೆ. ಈಗಿನ ಮುಖ್ಯಮಂತ್ರಿಗಳು ಮಾತ್ರ ಅಲ್ಲ ಹಿಂದಿನ ಗೃಹಮಂತ್ರಿಗಳು ಹೌದು. ಈ ಹಂತದಲ್ಲಿ ಪ್ರಧಾನಿಯವರು ಆರೋಪವನ್ನು ನಿರ್ಲಕ್ಷಿಸಿ ಎಂದರೆ ತನಿಖೆಯನ್ನು ಕೈಬಿಡಿ ಎಂದಾಗುವುದಿಲ್ಲವೇ' ಎಂದವರು ಪ್ರಶ್ನಿಸಿದ್ದಾರೆ.

'ಕಾಂಗ್ರೆಸ್ ನಾಯಕರ ಹೆಸರು ಇದೆ ಎಂದು ಹೇಳಿ ನಮ್ಮ ಬಾಯಿಮುಚ್ಚಿಸಲು ಪ್ರಯತ್ನ ಮಾಡಬೇಡಿ. ಕೇಂದ್ರ ಮತ್ತು ರಾಜ್ಯಗಳಲ್ಲಿ ನಿಮ್ಮದೇ ಸರ್ಕಾರ ಇದೆ. ತನಿಖೆ ನಡೆಸಿ ಅಪರಾಧಿಗಳನ್ನು ಬಯಲಿಗೆಳೆಯಿರಿ. ಅವರೆಲ್ಲ ಯಾವ ಪಕ್ಷದವರು ಎನ್ನುವುದನ್ನು ಆ ಮೇಲೆ ನೋಡಿಕೊಳ್ಳೋಣ' ಎಂದವರು ಪ್ರತಿಪಾದಿಸಿದ್ದಾರೆ.

'ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಿರುವ ಬಸವರಾಜ ಬೊಮ್ಮಾಯಿ'

(ಹುಬ್ಬಳ್ಳಿ ವರದಿ): 'ಸರ್ಕಾರದ 100 ದಿನಗಳ ಆಡಳಿತಕ್ಕೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಬಸವರಾಜ ಬೊಮ್ಮಾಯಿ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಹೀಗೆ ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ' ಎಂದು ಸಿದ್ದರಾಮಯ್ಯ ಟೀಕಿಸಿದರು.

ಜೋರು ಹಾಡು ಹಾಕಿದರೆ ಬಸ್ಸಿನಿಂದ ಕೆಳಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್‌ನಲ್ಲಿ ಪ್ರಯಾಣಿಸುವಾಗ ಮೊಬೈಲ್‌ನಲ್ಲಿ ಜೋರಾಗಿ ಹಾಡು ಅಥವಾ ಸಿನಿಮಾ ಹಾಕುವುದನ್ನು ನಿಷೇಧಿಸಿರುವ ಕೆಎಸ್‌ಆರ್‌ಟಿಸಿ, ನಿಯಮ ಉಲ್ಲಂಘಿಸಿದ ಪ್ರಯಾಣಿಕರನ್ನು ಬಸ್ಸಿನಿಂದ ಕೆಳಗಿಳಿಸುವಂತೆ ಚಾಲನಾ ಸಿಬ್ಬಂದಿಗೆ ಸ್ಪಷ್ಟ ಸೂಚನೆ ನೀಡಿದೆ.

'ಹಾಡು, ಸಿನಿಮಾ, ವಾರ್ತೆ ಇತ್ಯಾದಿಗಳನ್ನು ಬಸ್‌ನಲ್ಲಿ ಎಲ್ಲರಿಗೂ ಕೇಳಿಸುವಂತೆ ಜೋರಾಗಿ ಹಾಕಿ ಶಬ್ದ ಮಾಲಿನ್ಯ ಉಂಟು ಮಾಡುವ ಜೊತೆಗೆ ಸಹ ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುತ್ತಿರುವ ದೂರುಗಳು ಬಂದಿವೆ. ಬಸ್‌ಗಳಲ್ಲಿ ಶಬ್ದ ಮಾಲಿನ್ಯ ನಿಯಂತ್ರಿಸುವಂತೆ ಕೋರಿ ಹೈಕೋರ್ಟ್‌ನಲ್ಲೂ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿದೆ. ಆದ್ದರಿಂದ ಶಬ್ದ ಮಾಲಿನ್ಯ ಉಂಟು ಮಾಡುವುದನ್ನು ನಿಷೇಧಿಸಲಾಗಿದೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಆದೇಶದಲ್ಲಿ ತಿಳಿಸಿದ್ದಾರೆ.

ಬಿಟ್‌ಫಿನೆಕ್ಸ್ ಹ್ಯಾಕ್: ಶ್ರೀಕಿ ನಂಟು?

ಒಂದನೇ ಪುಟದಿಂದ...

ಆರೋಪಿಗಳ ಜತೆ ನಂಟು: ಅಂತರರಾಷ್ಟ್ರೀಯ ಮಟ್ಟದಲ್ಲಿ ಹ್ಯಾಕಿಂಗ್ ನಡೆಸಿರುವುದು, ಬಿಟ್‌ಕಾಯಿನ್‌ಗಳನ್ನು ದೋಚಿ ಹಣವನ್ನು ಅಕ್ರಮವಾಗಿ ವಿದೇಶಗಳಿಗೆ ವರ್ಗಾವಣೆ ಮಾಡಿರುವುದು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೃಹತ್ತಾದ ಹ್ಯಾಕರ್‌ಗಳ ಜಾಲವೊಂದನ್ನು ಕಟ್ಟಿಕೊಂಡಿರುವ ಕುರಿತು ಶ್ರೀಕಿ ಪೊಲೀಸರಿಗೆ ಮಾಹಿತಿ ನೀಡಿದ್ದ. ಆರೋಪಿಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೃಹತ್ ಪ್ರಮಾಣದ ಆರ್ಥಿಕ ಅಪರಾಧಗಳಲ್ಲಿ ಭಾಗಿಯಾಗಿರುವ ಸುಳಿವು ತನಿಖೆಯ ಆರಂಭಿಕ ಹಂತದಲ್ಲೇ ನಗರದ ಪೊಲೀಸರಿಗೆ ದೊರಕಿತ್ತು ಎಂಬ ಅಂಶ ಸಿಸಿಬಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿಯಲ್ಲೇ ಇದೆ.

ಇಸ್ರೇಲ್ ಸೇರಿದಂತೆ ವಿವಿಧ ರಾಷ್ಟ್ರಗಳ ಹ್ಯಾಕರ್‌ಗಳ ತಂಡ ಕಟ್ಟಿಕೊಂಡು ಬಿಟ್‌ಫಿನೆಕ್ಸ್ ಸರ್ವರ್‌ಗೆ ಲಗ್ಗೆ ಹಾಕಿದ್ದಾಗಿ ಶ್ರೀಕಿ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ತಿಳಿಸಿದ್ದ. 2016ರ ಬಿಟ್‌ಫಿನೆಕ್ಸ್ ಸರ್ವರ್ ಹ್ಯಾಕಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇಸ್ರೇಲ್‌ನಲ್ಲಿ ಎಲಿ ಗಿಗಿ ಮತ್ತು ಅಸ್ಸಾಫ್ ಗಿಗಿ ಎಂಬ ಸಹೋದರರನ್ನು 2019ರಲ್ಲಿ ಬಂಧಿಸಲಾಗಿತ್ತು. ಇದೇ ತಂಡವೇ 1.20 ಲಕ್ಷ ಬಿಟ್ ಕಾಯಿನ್‌ಗಳನ್ನು ದೋಚಿ, ರಹಸ್ಯ ವ್ಯಾಲೆಟ್‌ಗಳಿಗೆ ವರ್ಗಾಯಿಸಿಕೊಂಡಿರಬಹುದು ಎಂಬ ಶಂಕೆ ಈಗ ಬಲವಾಗುತ್ತಿದೆ.

ಬಿಟ್‌ಕಾಯಿನ್ ನಿಗೂಢ ಕಣ್ಮರೆ: ಬಿಟ್‌ಫಿನೆಕ್ಸ್ ಸರ್ವರ್‌ನಿಂದ ಹ್ಯಾಕರ್‌ಗಳು 2016ರಲ್ಲಿ ದೋಚಿದ್ದ ಬಿಟ್‌ಕಾಯಿನ್‌ಗಳು 2020ರ ನವೆಂಬರ್ ಮತ್ತು 2021ರ ಏಪ್ರಿಲ್‌ನಲ್ಲಿ ಡಾರ್ಕ್‌ನೆಟ್‌ಗಳ ಮೂಲಕ ಖಾಸಗಿ ವ್ಯಾಲೆಟ್‌ಗಳಿಗೆ ವರ್ಗಾವಣೆ ಆಗಿವೆ. ಅಲ್ಲಿಂದ ಅವುಗಳನ್ನು ಬೇರೆಡೆ ವರ್ಗಾಯಿಸಿಕೊಳ್ಳಲಾಗಿದೆ ಎಂಬ ಸಂಗತಿ 'ಎಲ್ಲಿಪ್ಟಿಕ್' ಎಂಬ ಬ್ಲಾಕ್‌ಚೈನ್ ವಿಶ್ಲೇಷಣಾ ಸಂಸ್ಥೆ ಬಹಿರಂಗಡಿಸಿದ ವರದಿಯಲ್ಲಿದೆ. 'ಅಲ್ಫಾ ಬೇ' ಮತ್ತು 'ಹೈಡ್ರಾ' ಎಂಬ ಡಾರ್ಕ್‌ನೆಟ್‌ಗಳಿಂದ 'ಜಾಯಿನ್ ಮಾರ್ಕೆಟ್' ಮತ್ತು 'ವಸಾಬಿ' ಎಂಬ ರಹಸ್ಯ ವ್ಯಾಲೆಟ್‌ಗಳಿಗೆ ವರ್ಗಾಯಿಸಿರುವುದು ದೃಢಪಟ್ಟಿದೆ.

'ನನ್ನ 'ಕೋಲ್ಡ್ ವ್ಯಾಲೆಟ್'ನಲ್ಲಿ ಬಿಟ್‌ಕಾಯಿನ್‌ಗಳಿದ್ದು, ಅವುಗಳನ್ನು ಯೂರೋಪ್‌ಗೆ ವರ್ಗಾಯಿಸಿ ಭಾರತಕ್ಕೆ ಹಣ ತರಿಸಿಕೊಳ್ಳಲು ಪ್ರಯತ್ನಿಸಿದ್ದೆ' ಎಂದು ಶ್ರೀಕೃಷ್ಣ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ತಿಳಿಸಿರುವುದು ಆರೋಪಪಟ್ಟಿಯಲ್ಲಿ ದಾಖಲಾಗಿದೆ. ಬಿಟ್‌ಫಿನೆಕ್ಸ್‌ನಿಂದ ದೋಚಿದ್ದ ಬಿಟ್‌ಕಾಯಿನ್‌ಗಳ ಕುರಿತೇ ಆತ ಪೊಲೀಸರಿಗೆ ತಿಳಿಸಿರುವ ಸಾಧ್ಯತೆ ಇದೆ. 2020ರ ನವೆಂಬರ್ ಮತ್ತು 2021ರ ಏಪ್ರಿಲ್‌ನಲ್ಲಿ ಡಾರ್ಕ್‌ನೆಟ್ ಮೂಲಕ ನಡೆದಿರುವ ಬಿಟ್‌ಕಾಯಿನ್‌ಗಳ ವರ್ಗಾವಣೆಯಲ್ಲೂ ಆತನ ಕೈವಾಡ ಇರಬಹುದು ಎಂಬ ಅನುಮಾನ ರಾಜ್ಯದ ಪೊಲೀಸ್ ಇಲಾಖೆಯೊಳಗೆ ಕೇಳಿಬರುತ್ತಿದೆ.

40 ಕೋಟಿ ಡಾಲರ್ ಬಹುಮಾನ ಘೋಷಿಸಿದ್ದ ಬಿಟ್‌ಫಿನೆಕ್ಸ್

ಹ್ಯಾಕರ್‌ಗಳು ದೋಚಿದ್ದ 1.20 ಲಕ್ಷ ಬಿಟ್‌ಕಾಯಿನ್‌ಗಳ ಕುರಿತು ನಾಲ್ಕು ವರ್ಷಗಳಾದರೂ ಬಿಟ್‌ಫಿನೆಕ್ಸ್ ಕಂಪನಿಗೆ ಸುಳಿವು ದೊರಕಿರಲಿಲ್ಲ. ಈ ಬಿಟ್‌ಕಾಯಿನ್‌ಗಳ ಕುರಿತು ಖಚಿತ ಸುಳಿವು ನೀಡಿದವರಿಗೆ 40 ಕೋಟಿ ಅಮೆರಿಕನ್ ಡಾಲರ್ ಬಹುಮಾನ ನೀಡುವುದಾಗಿ 2020ರ ಆಗಸ್ಟ್‌ನಲ್ಲಿ ಕಂಪನಿ ಪ್ರಕಟಿಸಿತ್ತು. ಅದಾದ ಮೂರು ತಿಂಗಳಲ್ಲೇ 'ಕೋಲ್ಡ್ ವ್ಯಾಲೆಟ್'ಗಳಲ್ಲಿದ್ದ ಬಿಟ್‌ಕಾಯಿನ್‌ಗಳ ಚಲನೆ ಆರಂಭವಾಗಿತ್ತು.

ಮತಾಂತರ ನಿಷೇಧಕ್ಕೆ ಕಾಯ್ದೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮತಾಂತರ ನಿಷೇಧಕ್ಕೆ ಉತ್ತಮವಾದ ಕಾಯ್ದೆಯನ್ನೇ ಜಾರಿ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ತಮ್ಮನ್ನು ಭೇಟಿ ಮಾಡಿದ ವಿವಿಧ ಸ್ವಾಮೀಜಿಗಳ ನಿಯೋಗಕ್ಕೆ ಅವರು ಈ ಭರವಸೆ ನೀಡಿದರು. 'ನಾವು ತರುವ ಕಾಯ್ದೆ ನ್ಯಾಯಾಲಯದಲ್ಲೂ ನಿಲ್ಲಬೇಕು. ಅದಕ್ಕಾಗಿ ವಿವಿಧ ರಾಜ್ಯಗಳಲ್ಲಿರುವ ಮತಾಂತರ ನಿಷೇಧ ಕಾಯ್ದೆಗಳನ್ನು ಅಧ್ಯಯನ ಮಾಡಲಾಗುತ್ತಿದೆ' ಎಂದು ತಿಳಿಸಿದರು.

'ಆಮಿಷ, ಮೋಸ ಮತ್ತು ಬಲವಂತದಿಂದ ಮತಾಂತರ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಹಿಂದೂ ಧರ್ಮ ಸನಾತನ ಮತ್ತು ಮಾನವೀಯತೆಯುಳ್ಳ ಧರ್ಮವಾಗಿದ್ದು, ಇದರ ಮೇಲೆ ಆಘಾತ ಆಗುತ್ತಿದೆ' ಎಂದು ಅವರು ಹೇಳಿದರು.

ನಿಯೋಗದ ನೇತೃತ್ವವಹಿಸಿದ್ದ ಶ್ರೀರಾಮಸೇನೆಯ ಅಧ್ಯಕ್ಷ ಪ್ರಮೋದ್ ಮುತಾಲಿಕ್, 'ರಾಜ್ಯದಲ್ಲಿ ಆಮಿಷ ಮತ್ತು ಬಲವಂತದಿಂದ ಮತಾಂತರ ನಡೆಯುತ್ತಿದೆ. ಹಿಂದುಳಿದ ವರ್ಗಗಳನ್ನೇ ಗುರಿಯಾಗಿಸಿಕೊಂಡು ಈ ಕೃತ್ಯ ನಡೆಯುತ್ತಿದೆ. ಮತಾಂತರಗೊಂಡವರಿಗೆ ಸರ್ಕಾರಿ ಸೌಲಭ್ಯಗಳನ್ನು ರದ್ದುಪಡಿಸಬೇಕು' ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂತೋಷ್ ಗುರೂಜಿ, ಶ್ರೀರಾಮಸೇನೆಯ ಗೌರವ ಅಧ್ಯಕ್ಷ ಸಿದ್ದಲಿಂಗಸ್ವಾಮಿ, ಪ್ರಣವಾನಂದಸ್ವಾಮಿ, ಹಿಂದೂ ಜನಜಾಗೃತಿ ಸಮಿತಿ ರಾಜ್ಯ ವಕ್ತಾರ ಮೋಹನಗೌಡ ಮತ್ತು ಸ್ವಾಮೀಜಿಗಳು ಇದ್ದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದ ಸ್ವಾಮೀಜಿಗಳು

ನಿಧನ ವಾರ್ತೆ

ಉದ್ಯಮಿ ವಿ. ರವಿಚಂದ್ರನ್



ಮಂಗಳೂರು: ಗ್ಲೋಟೆಕ್ ಟೆಕ್ನಾಲಜೀಸ್ ಮತ್ತು ದಿಯಾ ಸಿಸ್ಟಮ್ಸ್‌ನ ಸಂಸ್ಥಾಪಕ, ನಿರ್ದೇಶಕ ವಿ. ರವಿಚಂದ್ರನ್ (74) ಅಮೆರಿಕದ ಕೆಂಟುಕಿಯಲ್ಲಿ ನಿಧನರಾದರು. ಅವರು ಮೂರು ವರ್ಷಗಳಿಂದ ಮಿದುಳಿನ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು.

ಅವರಿಗೆ ಪತ್ನಿ, ಪುತ್ರಿ ಹಾಗೂ ಪುತ್ರ ಇದ್ದಾರೆ.

1970ರಲ್ಲಿ ಪುತ್ತೂರಿನ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ್ದ ಅವರು 1999ರಲ್ಲಿ ನಿವೃತ್ತರಾಗಿದ್ದರು. ನಂತರ ಉದ್ಯಮ ಆರಂಭಿಸಿದ್ದರು. 2003ರಲ್ಲಿ ಮಂಗಳೂರಿನಲ್ಲಿ 'ದಿಯಾ ಸಿಸ್ಟಮ್ಸ್' ಎಂಬ ಐಟಿ ಕಂಪನಿ ಸ್ಥಾಪಿಸಿ ಸುಮಾರು 2,300 ಜನರಿಗೆ ಉದ್ಯೋಗ ನೀಡಿದ್ದಾರೆ.

2004ರಲ್ಲಿ ಗ್ಲೋಟೆಕ್ ಟೆಕ್ನಾಲಜೀಸ್ ಆರಂಭಿಸುವ ಮೂಲಕ ಅಮೆರಿಕ ಮತ್ತು ಬ್ರಿಟನ್‌ನ ಗ್ರಾಹಕರಿಗೆ ತಂತ್ರಾಂಶ ಅಭಿವೃದ್ಧಿ ಮಾಡುತ್ತಿದ್ದರು.

ಕಂಪನಿಯು ಅಮೆರಿಕ, ಡೊಮಿನಿಕ್ ರಿಪಬ್ಲಿಕ್, ಫಿಲಿಫೀನ್ಸ್, ಬೆಂಗಳೂರು, ಮೈಸೂರು ಹಾಗೂ ಮಂಗಳೂರಿನಲ್ಲಿ ಶಾಖೆಗಳನ್ನು ಹೊಂದಿದೆ.

ಮೀಸಲು ನಿಯಮಕ್ಕೆ ವಿರುದ್ಧ ಬೋಧಕ ಹುದ್ದೆ ನೇಮಕಾತಿ; ಅಧ್ಯಾಪಕರ ಸಂಘ ಆರೋಪ

ಶಿಷ್ಯ ವೇತನ ಮಂಜೂರಿಗೂ ತೆರಬೇಕು ಹಣ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಮುಂಬಡ್ತಿ, ಪಿಂಚಣಿ ಬಿಡುಗಡೆಗೆ ಲಂಚ, ಕಮಿಷನ್ ಕೇಳುತ್ತಿದ್ದಾರೆ ಎಂದು ಹಾಲಿ, ನಿವೃತ್ತ ಸಿಬ್ಬಂದಿಯು ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಡಳಿತದ ವಿರುದ್ಧ ಆರೋಪಿಸಿರುವ ಬೆನ್ನಲ್ಲೇ ಅಲ್ಲಿನ ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರ ಸಂಘ ಅದರ ಬಗ್ಗೆ ಧ್ವನಿ ಎತ್ತಿದೆ. ವಿದ್ಯಾರ್ಥಿಗಳು ಸಹಿ ಸಂಗ್ರಹ ಚಳವಳಿ ಆರಂಭಿಸಿದ್ದಾರೆ.

'ವಿಶ್ವವಿದ್ಯಾಲಯದ ಹಲವು ವಿಭಾಗಗಳಲ್ಲಿ 'ಕೊಲೋಕ್ವಿಯಂ' ನಡೆಸಲು ₹50 ಸಾವಿರದವರೆಗೆ ಹಣ ಕೇಳುತ್ತಿದ್ದಾರೆ. ಶಿಷ್ಯವೇತನ ಮಂಜೂರಾತಿಗೆ ದಾಖಲೆಗಳ ಮೇಲೆ ಸಹಿ ಮಾಡಲು ಹಣ ಕೇಳುತ್ತಿದ್ದಾರೆ. ಇದು ವಿಶ್ವವಿದ್ಯಾಲಯವು ನೈತಿಕವಾಗಿ ದಿವಾಳಿಯಾಗಿರುವುದು ತೋರಿಸುತ್ತದೆ' ಎಂದು ವಿದ್ಯಾರ್ಥಿಗಳು ಕುಲಸಚಿವ ಪ್ರೊ. ಎ. ಸುಬ್ಬಣ್ಣ ರೈ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಸಹಿ ಸಂಗ್ರಹ ಚಳವಳಿಗೆ ಇದುವರೆಗೆ 35 ಸಂಶೋಧನಾ ವಿದ್ಯಾರ್ಥಿಗಳು ಸಹಿ ಹಾಕಿದ್ದಾರೆ. ಈ ಪತ್ರದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ವಿಶ್ವವಿದ್ಯಾಲಯದಲ್ಲಿ ಮುಂಬಡ್ತಿ, ಪಿಂಚಣಿಗೆ ಲಂಚ, ಕಮಿಷನ್ ಕೇಳಲಾಗುತ್ತಿದೆ. ಸೇವಾಪೂರ್ವ ಅವಧಿ ಘೋಷಿಸಲು ಎಂಟು ತಿಂಗಳ ವೇತನವನ್ನು ಲಂಚದ ರೂಪದಲ್ಲಿ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಅನುಕಂಪದ ಆಧಾರದ ಮೇಲೆ ಕೆಲಸ ಪಡೆಯಲು, ತಾತ್ಕಾಲಿಕ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ನೇಮಕಾತಿಗೂ ಲಂಚ ಕೇಳುತ್ತಿದ್ದಾರೆ. ಈಗ ಇಡೀ ವಿಶ್ವವಿದ್ಯಾಲಯದಲ್ಲಿ ಲಂಚದ ಕುರಿತಾಗಿಯೇ ಚರ್ಚೆ ನಡೆಯುತ್ತಿದೆ. ಪ್ರಾಧ್ಯಾಪಕರನ್ನು ಅನುಮಾನದಿಂದ ನೋಡುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿರುವ ನಮ್ಮ ಘನತೆಗೆ ಧಕ್ಕೆಯಾಗಿದೆ' ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ವಿಶೇಷ

'ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ಲೋಪವನ್ನು ಪ್ರಶ್ನಿಸಿದಕ್ಕಾಗಿಯೇ ಸಹ ಪ್ರಾಧ್ಯಾಪಕ ಎಂ. ಮಲ್ಲಿಕಾರ್ಜುನಗೌಡ ಅವರನ್ನು ಕೂಡಲಸಂಗಮದ ಅಂತರರಾಷ್ಟ್ರೀಯ ವಚನ ಸಾಹಿತ್ಯ ಅಧ್ಯಯನ ಕೇಂದ್ರಕ್ಕೆ ವರ್ಗಾಯಿಸಲಾಗಿದೆ. ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಕಾಯಂ ಪ್ರಾಧ್ಯಾಪಕರಿದ್ದರೂ ಅವರನ್ನು ಮುಖ್ಯಸ್ಥರಾಗಿ ನಿಯೋಜಿಸದೆ ಅನ್ಯ ವಿಭಾಗದವರನ್ನು ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ. ಇದು ವಿಶ್ವವಿದ್ಯಾಲಯದ ನಿಯಮದ ವಿರುದ್ಧ. ಇದನ್ನು ವಿರೋಧಿಸಿ, ವಿಶ್ವವಿದ್ಯಾಲಯದ ಪಾವಿತ್ರ್ಯ ಕಾಪಾಡಲು ಪತ್ರ ಚಳವಳಿ ಆರಂಭಿಸಲಾಗಿದೆ' ಎಂದು ಹೇಳಿದ್ದಾರೆ.

ಮೀಸಲಾತಿ ನಿಯಮ ಪಾಲನೆಯಾಗದ ಕಾರಣ ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಕೈಬಿಡಬೇಕೆಂದು ಅಧ್ಯಾಪಕರ ಸಂಘದ ಅಧ್ಯಕ್ಷ ವಾಸುದೇವ ಬಡಿಗೇರ್ ಮತ್ತು ಬೋಧಕೇತರ ನೌಕರರ ಸಂಘದ ಅಧ್ಯಕ್ಷ ಶ್ರೀನಿವಾಸ, ಕುಲಸಚಿವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಅರ್ಹರಿಗೆ ಮುಂಬಡ್ತಿ, ನಿವೃತ್ತರಿಗೆ ಪಿಂಚಣಿ ಸೌಲಭ್ಯ, ಸಹ ಪ್ರಾಧ್ಯಾಪಕ ಎಂ. ಮಲ್ಲಿಕಾರ್ಜುನಗೌಡ ವರ್ಗಾವಣೆ ಆದೇಶ ರದ್ದುಪಡಿಸಬೇಕು. ಅರ್ಹ ಸಿಬ್ಬಂದಿಯ ಸೇವಾಪೂರ್ವ ಅವಧಿ ಘೋಷಿಸಬೇಕು. ಇಲ್ಲವಾದಲ್ಲಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಸಚಿವರ ಅಸಮಾಧಾನ

ಮುಂಬಡ್ತಿ, ಪಿಂಚಣಿ ಬಿಡುಗಡೆಗೆ ಲಂಚ, ಕಮಿಷನ್ ಕೇಳುತ್ತಿರುವ ಆರೋಪದ ಕುರಿತು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಕುಲಪತಿ ಪ್ರೊ. ಸ.ಚಿ. ರಮೇಶ ಅವರಿಗೆ ಕರೆ ಮಾಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ನಿಮ್ಮ ವಿಶ್ವವಿದ್ಯಾಲಯದಲ್ಲಿ ಏನು ನಡೆಯುತ್ತಿದೆ? ನೀವು ಬಂದು ನನ್ನನ್ನು ಕಾಣಬೇಕು' ಎಂದು ಸಚಿವರು ಸೂಚಿಸಿದರು. ಅದಕ್ಕೆ ಕುಲಪತಿ, 'ಸರ್, ಸದ್ಯ ನಾನು ಬೆಂಗಳೂರಿನಲ್ಲಿ ಇರುವೆ. ಮರಳಿದ ನಂತರ ನಿಮ್ಮನ್ನು ಕಾಣುವೆ' ಎಂದು ಹೇಳಿದ್ದಾರೆ.

'ಪಾರದರ್ಶಕ ತನಿಖೆ ನಡೆಯಲಿ'

'ಬಡ್ತಿ ಹಾಗೂ ಪಿಂಚಣಿಗೆ ಸಂಬಂಧಿಸಿ ವಿಶ್ವವಿದ್ಯಾಲಯದ ಹಾಲಿ, ನಿವೃತ್ತ ಸಿಬ್ಬಂದಿ ನನ್ನ ವಿರುದ್ಧ ಮಾಡಿರುವ ಆರೋಪಗಳು ನನ್ನ ತೇಜೋವಧೆಯ ಪ್ರಯತ್ನವೇ ಹೊರತು ಸತ್ಯಕ್ಕೆ ದೂರವಾದುದು. ಇದರ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಪಾರದರ್ಶಕ ತನಿಖೆಗೆ ಒಪ್ಪಿಸುತ್ತೇನೆ. ಅವರೇ ತನಿಖೆ ನಡೆಸಿ, ವರದಿ ಪಡೆಯಲಿ. ನಾನು ಅದರಿಂದ ಹೊರಗಿರುತ್ತೇನೆ' ಎಂದು ಕುಲಪತಿ ಪ್ರೊ. ಸ.ಚಿ. ರಮೇಶ ತಿಳಿಸಿದ್ದಾರೆ.

ಹೈಕೋರ್ಟ್ ಮೊರೆ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ 17 ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಪ್ರಶ್ನಿಸಿ ವೈಶಾಲಿಬಾಯಿ ಬಾಬುರಾವ, ಅಕ್ತರ್ ಖಾನಂ ಎಂಬುವರು ಧಾರವಾಡ ಹೈಕೋರ್ಟ್ ಸಂಚಾರಿ ಪೀಠದ ಮೊರೆ ಹೋಗಿದ್ದು, ಮೀಸಲಾತಿ ನಿಯಮ ಉಲ್ಲಂಘಿಸಿ ನಡೆಸುತ್ತಿರುವ ನೇಮಕ ಪ್ರಕ್ರಿಯೆಯ ಅಧಿಸೂಚನೆ ರದ್ದುಪಡಿಸಲು ಕೋರಿದ್ದಾರೆ.

ಪರೀಕ್ಷೆ ಮುಂದಕ್ಕೆ

'ನವೆಂಬರ್ 15ರಂದು ನಿಗದಿಯಾಗಿದ್ದ ಬೋಧಕ ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ. ಪರಿಷ್ಕೃತ ದಿನಾಂಕ ನಂತರದಲ್ಲಿ ಪ್ರಕಟಿಸಲಾಗುವುದು' ಎಂದು ಕುಲಸಚಿವ ಪ್ರೊ. ಎ. ಸುಬ್ಬಣ್ಣ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೀಸಲಾತಿ ನಿಯಮಕ್ಕೆ ವಿರುದ್ಧವಾಗಿ ನೇಮಕ ಪ್ರಕ್ರಿಯೆ ನಡೆಸುತ್ತಿರುವುದಕ್ಕೆ ವಿರೋಧ ವ್ಯಕ್ತವಾಗಿದ್ದರಿಂದ ಈ ತೀರ್ಮಾನಕ್ಕೆ ಬರಲಾಗಿದೆ ಎಂದು ಗೊತ್ತಾಗಿದೆ.

ರೈತ ವಿದ್ಯಾನಿಧಿ ನೋಂದಣಿ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಯೋಜನೆಯಡಿ ರೈತರ ಮಕ್ಕಳಿಗೆ ಶಿಷ್ಯ ವೇತನ ನೀಡಲು ವಿದ್ಯಾರ್ಥಿಗಳ ನೋಂದಣಿ ಆರಂಭಿಸುವಂತೆ ಸರ್ಕಾರ ಸೂಚಿಸಿದೆ.

ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ ತಕ್ಷಣವೇ ಬಸವರಾಜ ಬೊಮ್ಮಾಯಿ ಈ ಸಂಬಂಧ ಘೋಷಣೆ ಹೊರಡಿಸಿದ್ದರು.

2020–21 ನೇ ಶೈಕ್ಷಣಿಕ ಸಾಲಿಗೆ, ಪಿಯುಸಿ, ಐಟಿಐ,- ಡಿಪ್ಲೊಮಾ ವಿದ್ಯಾರ್ಥಿಗಳಿಗೆ ₹2,500, ವಿದ್ಯಾರ್ಥಿನಿಯರು ಮತ್ತು ತೃತೀಯ ಲಿಂಗಿಗಳಿಗೆ ₹3,000, ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ₹5,000, ವಿದ್ಯಾರ್ಥಿನಿಯರು ಮತ್ತು ತೃತೀಯ ಲಿಂಗಿಗಳಿಗೆ ತಲಾ ₹5,500, ಎಲ್‌ಎಲ್‌ಬಿ, ಪ್ಯಾರಾಮೆಡಿಕಲ್, ಬಿ.ಫಾರ್ಮಾ, ನರ್ಸಿಂಗ್ ಇನ್ನಿತರ ವೃತ್ತಿ ಕೋರ್ಸ್ ವಿದ್ಯಾರ್ಥಿಗಳಿಗೆ ₹ 7500, ವಿದ್ಯಾರ್ಥಿನಿಯರು ಮತ್ತು ತೃತೀಯ ಲಿಂಗಿಗಳಿಗೆ ₹8,000, ಎಂಬಿಬಿಎಸ್, ಬಿಇ, ಬಿಟೆಕ್ ಮತ್ತು ಎಲ್ಲ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ₹10,000, ವಿದ್ಯಾರ್ಥಿನಿಯರು ಮತ್ತು ತೃತೀಯ ಲಿಂಗಿಗಳಿಗೆ ₹11,000 ನೀಡಲಾಗುವುದು.

ವಿದ್ಯಾರ್ಥಿಗಳು 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಕಾರ್ಯಕ್ರಮದ ಶಿಷ್ಯವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ತಮ್ಮ ಹಾಗೂ ತಮ್ಮ ತಂದೆ, ತಾಯಿಯ ಆಧಾರ್ ಸಂಖ್ಯೆಯೊಂದಿಗೆ ನೋಂದಣಿ ಮಾಡಿಕೊಳ್ಳಬೇಕಾಗಿದೆ. ವಿದ್ಯಾರ್ಥಿ ವೇತನ ತಂತ್ರಾಂಶ ವಿದ್ಯಾರ್ಥಿಗಳ ದಾಖಲೆಗಳು ಪರಿಶೀಲನೆಗೊಳಪಟ್ಟ ನಂತರ ಅರ್ಹ ವಿದ್ಯಾರ್ಥಿಗಳಿಗೆ ಡಿಬಿಟಿ ತಂತ್ರಾಂಶದ ಮೂಲಕ ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ನಗದು ವರ್ಗಾವಣೆ ಮಾಡಲಾಗುವುದು.

ಕಾಲೇಜು ಮುಖ್ಯಸ್ಥರು ಯೋಜನೆಯ ಬಗ್ಗೆ ಎಲ್ಲ ವಿದ್ಯಾರ್ಥಿಗಳಿಗೂ ಮಾಹಿತಿ ನೀಡಬೇಕು. ಕಾಲೇಜು ಆವರಣದಲ್ಲಿ ಈ ಕುರಿತು ಭಿತ್ತಿ ಪತ್ರವನ್ನು ಪ್ರದರ್ಶಿಸಬೇಕು. ಕಾಲೇಜಿಗೆ ಪ್ರವೇಶ ಪಡೆಯುವ ಸಮಯದಲ್ಲಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ಖಾತೆ ಸೃಜಿಸಲು ವಿದ್ಯಾರ್ಥಿಗಳಿಗೆ ಸೂಚನೆ ನೀಡಬೇಕು ಎಂದೂ ಸೂಚಿಸಲಾಗಿದೆ.

ಸುಪ್ರೀಂ ಕೋರ್ಟ್‌ನಿಂದ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಎಚ್ಚರಿಕೆ ಬೆನ್ನಲ್ಲೇ ಸೇನೆಯಿಂದ ಒಪ್ಪಿಗೆ

ಮಹಿಳಾ ಅಧಿಕಾರಿಗಳಿಗೆ ಕಾಯಂ ನೇಮಕಾತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅರ್ಹತೆಯಿದ್ದರೂ 12 ಅಧಿಕಾರಿಗಳಿಗೆ ನೇಮಕಾತಿ ನಿರಾಕರಿಸಿದ್ದ ಸೇನೆ
- ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ 11 ಮಹಿಳಾ ಅಧಿಕಾರಿಗಳು
- ಅರ್ಜಿ ಸಲ್ಲಿಸದೇ ಇದ್ದ ಅಧಿಕಾರಿಗಳಿಗೂ ಕಾಯಂ ನೇಮಕಾತಿ



ನವದೆಹಲಿ: ಸೇನೆಯ ಅಲ್ಪಾವಧಿ ಸೇವೆಯಲ್ಲಿರುವ 11 ಮಹಿಳಾ ಅಧಿಕಾರಿಗಳಿಗೆ ಮುಂದಿನ 10 ದಿನಗಳಲ್ಲಿ ಕಾಯಂ ನೇಮಕಾತಿ ನೀಡಿ ಎಂದು ಸುಪ್ರೀಂ ಕೋರ್ಟ್ ಸೇನೆಗೆ ಆದೇಶಿಸಿದೆ. ಈ ಆದೇಶವನ್ನು ತ್ವರಿತವಾಗಿ ಜಾರಿಗೆ ತರುತ್ತೇವೆ ಎಂದು ಸೇನೆಯು ಹೇಳಿದೆ.

ಕಾಯಂ ನೇಮಕಾತಿ ನೀಡುವಂತೆ ನಿರ್ದೇಶನ ನೀಡಿ ಎಂದು ಸೇನೆಯ ಅಲ್ಪಾವಧಿ ಸೇವೆಯಲ್ಲಿದ್ದ 72 ಮಹಿಳಾ ಅಧಿಕಾರಿಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅದನ್ನು ಮಾನ್ಯ ಮಾಡಿದ್ದ ಸುಪ್ರೀಂ ಕೋರ್ಟ್, 'ಅಲ್ಪಾವಧಿ ಸೇವೆಯಲ್ಲಿರುವ ಮತ್ತು ಕಾಯಂ ನೇಮಕಾತಿಯ ಅರ್ಹತೆಗಳನ್ನು ಹೊಂದಿರುವ ಮಹಿಳಾ ಅಧಿಕಾರಿಗಳಿಗೆ ಕಾಯಂ ನೇಮಕಾತಿ ನೀಡಿ' ಎಂದು ಇದೇ ಮಾರ್ಚ್‌ನಲ್ಲಿ ಆದೇಶಿಸಿತ್ತು. ಆದರೆ ಅವರಲ್ಲಿ ಕೆಲವು ಅಧಿಕಾರಿಗಳಿಗಷ್ಟೇ ಸೇನೆಯು ಕಾಯಂ ನೇಮಕಾತಿ ನೀಡಿತ್ತು.

ಅರ್ಹತೆಯಿದ್ದರೂ ಕಾಯಂ ನೇಮಕಾತಿ ದೊರೆಯದೇ ಇರುವವರ ಪೈಕಿ 11 ಅಧಿಕಾರಿಗಳು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ಪೀಠವು ಶುಕ್ರವಾರ ಈ ಅರ್ಜಿಯ ವಿಚಾರಣೆ ನಡೆಸಿತು. ತನ್ನ ಆದೇಶವನ್ನು ಪಾಲಿಸದೇ ಇರುವ ಸೇನೆಯ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸುವ ಎಚ್ಚರಿಕೆಯನ್ನು ಪೀಠ ನೀಡಿತು.

'ಸೇನೆಯು ಅದರ ವ್ಯಾಪ್ತಿಯಲ್ಲಿ ಸರ್ವೋಚ್ಚ ಪ್ರಾಧಿಕಾರವಾಗಿರಬಹುದು. ಆದರೆ ನ್ಯಾಯಾಲಯವು ಸಹ ತನ್ನ ವ್ಯಾಪ್ತಿಯಲ್ಲಿ ಸರ್ವೋಚ್ಚವಾದುದು. ನಮ್ಮ ಆದೇಶವನ್ನು ಯಥಾವತ್ತಾಗಿ ಪಾಲಿಸಲು ನಾವು ಸೇನೆಗೆ ಸಮಯ ನೀಡಿದ್ದೆವು. ಅದನ್ನು ಪಾಲಿಸದೇ ಇರುವ ಸೇನೆಯ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲಾಗುತ್ತದೆ' ಎಂದು ಪೀಠವು ಎಚ್ಚರಿಕೆ ನೀಡಿತು.

ಆಗ ಸೇನೆಯ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಸಂಜಯ್ ಜೈನ್ ಮತ್ತು ವಕೀಲ ಆರ್. ಸುಬ್ರಮಣಿಯನ್ ಅವರು, 'ನಮಗೆ ಮಧ್ಯಾಹ್ನದವರೆಗೆ ಸಮಯ ನೀಡಿ. ಸೇನೆ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಪರಿಶೀಲಿಸುತ್ತೇವೆ' ಎಂದು ಕೋರಿಕೊಂಡರು. ಪೀಠವು ವಿಚಾರಣೆಯನ್ನು ಮಧ್ಯಾಹ್ನ 2ಕ್ಕೆ ಮುಂದೂಡಿತು.

ಮಧ್ಯಾಹ್ನದ ವಿಚಾರಣೆಯಲ್ಲಿ ವಕೀಲ ಬಾಲಸುಬ್ರಮಣಿಯನ್ ಅವರು, 'ಸೇನೆಯು ಅರ್ಹ ಮಹಿಳಾ ಅಧಿಕಾರಿಗಳಿಗೆ ಕಾಯಂ ನೇಮಕಾತಿ ನೀಡಲು ಒಪ್ಪಿಕೊಂಡಿದೆ. 15 ಅಧಿಕಾರಿಗಳು ಈ ಪಟ್ಟಿಯಲ್ಲಿದ್ದು, ಒಬ್ಬರ ನೇಮಕಾತಿಯು ಅಂತಿಮ ಹಂತದಲ್ಲಿದೆ. ಮೂವರು ಅಧಿಕಾರಿಗಳು ದೈಹಿಕವಾಗಿ ಅನರ್ಹರಾಗಿದ್ದಾರೆ. ಉಳಿದ ಅಧಿಕಾರಿಗಳಿಗೆ ಕಾಯಂ ನೇಮಕಾತಿ ನೀಡುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುತ್ತದೆ. ನ್ಯಾಯಾಲಯದ ಮೆಟ್ಟಿಲೇರಿರುವ 11 ಅಧಿಕಾರಿಗಳಿಗೆ ಮತ್ತು ಅರ್ಹತೆ ಇದ್ದು, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸದೇ ಇರುವ ಮಹಿಳಾ ಅಧಿಕಾರಿಗಳಿಗೂ ಕಾಯಂ ನೇಮಕಾತಿ ನೀಡಲಿದೆ' ಎಂದು ಪೀಠಕ್ಕೆ ಮಾಹಿತಿ ನೀಡಿದರು.

ಇದನ್ನು ಪರಿಗಣಿಸಿದ ಪೀಠವು, ತ್ವರಿತವಾಗಿ ನೇಮಕಾತಿಯನ್ನು ಪೂರ್ಣಗೊಳಿಸಿ ಎಂದು ಆದೇಶಿಸಿತು.

> **ಅರ್ಹತೆಗಳನ್ನು ಹೊಂದಿದ್ದರೂ, ಕಾಯಂ ನೇಮಕಾತಿಯಿಂದ ಹೊರಗಿಟ್ಟಿರುವ ಮಹಿಳಾ ಅಧಿಕಾರಿಗಳನ್ನು ತಕ್ಷಣವೇ ನೇಮಕ ಮಾಡಿ**
> **ಸುಪ್ರೀಂ ಕೋರ್ಟ್ ಪೀಠ**

> **ಮಹಿಳಾ ಅಧಿಕಾರಿಗಳ ಸಾಧನೆಯನ್ನು ಸುಪ್ರೀಂ ಗುರುತಿಸಿ, ಕಾಯಂ ನೇಮಕಾತಿಗಾಗಿ ಆದೇಶಿಸಿದೆ. ಆದರೆ ಅದನ್ನು ಮೀರಿ, ನೇಮಿಸದಿರುವುದು ಅವಮಾನ**
> **ಹುರ್ಯೆಫಾ ಅಹ್ಮದಿ,** ಮಹಿಳಾ ಸೇನಾಧಿಕಾರಿಗಳ ಪರ ವಕೀಲ

> **ಈ ವ್ಯಾಜ್ಯವನ್ನು ಮುಂದುವರಿಸಲು ಸೇನೆ ಬಯಸುತ್ತಿಲ್ಲ. ಆದೇಶವನ್ನು ಸೇನೆ ಪಾಲಿಸುತ್ತದೆ. ಸೇನೆಯನ್ನು ನ್ಯಾಯಾಂಗ ನಿಂದನೆಗೆ ಗುರಿ ಮಾಡಬೇಡಿ**
> **ಸಂಜಯ್ ಜೈನ್,** ಹೆಚ್ಚುವರಿ ಸಾಲಿಸಿಟರ್ ಜನರಲ್

'ನ್ಯಾಯಾಲಯದ ಮೆಟ್ಟಿಲೇರಿರುವ 11 ಮಹಿಳಾ ಅಧಿಕಾರಿಗಳಿಗೆ ಮುಂದಿನ 10 ದಿನಗಳಲ್ಲಿ ಕಾಯಂ ನೇಮಕಾತಿ ನೀಡಿ. ಅರ್ಹತೆ ಇದ್ದೂ, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸದೇ ಇರುವ ಅಧಿಕಾರಿಗಳಿಗೆ ಮೂರು ವಾರಗಳ ಒಳಗೆ ಕಾಯಂ ನೇಮಕಾತಿ ನೀಡಿ' ಎಂದು ಪೀಠವು ಆದೇಶಿಸಿತು.

ಶಬರಿಮಲೆ ಅಯ್ಯಪ್ಪ ದೇಗುಲ 16ರಿಂದ ದರ್ಶನಕ್ಕೆ ಮುಕ್ತ



ಪತ್ತನಂತಿಟ್ಟ (ಪಿಟಿಐ): ಶಬರಿಮಲೆಯ ಅಯ್ಯಪ್ಪ ದೇವಸ್ಥಾನದ ಬಾಗಿಲು ಮುಂದಿನ ವಾರ ತೆರೆಯಲಿದ್ದು, ಇದರೊಂದಿಗೆ ಎರಡು ತಿಂಗಳ ವಾರ್ಷಿಕ ಧಾರ್ಮಿಕ ಯಾತ್ರಾ ಅವಧಿಯೂ ಆರಂಭವಾಗಲಿದೆ.

ಈ ವೇಳೆ ನಿತ್ಯ ಸುಮಾರು 30 ಸಾವಿರ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ 16ರಂದು ಧಾರ್ಮಿಕ ಯಾತ್ರಾ ಅವಧಿ ಆರಂಭವಾಗಲಿದೆ. ಇದೇ 15ರಂದು ಸಂಜೆ 5ಕ್ಕೆ ದೇವಸ್ಥಾನದ ಬಾಗಿಲು ತೆರೆಯಲಿದೆ. ಮುಖ್ಯ ಅರ್ಚಕ ಕಂದರಾರು ಮಹೇಶ್ ಮೋಹನರಾರು ಉಪಸ್ಥಿತಿಯಲ್ಲಿ ನಿರ್ಗಮಿತ ಅರ್ಚಕ ವಿ.ಕೆ.ಜಯರಾಜ್ ಪೊಟ್ಟಿ ದೇಗುಲದ ಬಾಗಿಲು ತೆರೆಯುವರು.

ಅಯ್ಯಪ್ಪ ಮತ್ತು ಮಲ್ಲಿಕಪುರಂ ದೇವಸ್ಥಾನಗಳಿಗೆ ನೂತನ ಅರ್ಚಕರ ನೇಮಕ ಕಾರ್ಯಕ್ರಮವೂ ಬೆಟ್ಟದಲ್ಲಿ ಅದೇ ದಿನ ನಡೆಯಲಿದೆ. ಕೋವಿಡ್ ಮಾರ್ಗಸೂಚಿಗಳ ಕಟ್ಟುನಿಟ್ಟಿನ ಪಾಲನೆಯೊಂದಿಗೆ ಈ ಕಾರ್ಯಕ್ರಮಗಳು ನಡೆಯಲಿವೆ. ಎರಡು ಡೋಸ್ ಲಸಿಕೆ ಪಡೆದಿರುವುದು ಅಥವಾ ಆರ್‌ಟಿ-ಪಿಸಿಆರ್ ನೆಗೆಟಿವ್ ಪ್ರಮಾಣಪತ್ರ ಹೊಂದಿರುವುದು ಕಡ್ಡಾಯವಾಗಿದೆ. ಭಕ್ತರು ಆಧಾರ್‌ನ ಮೂಲಪತ್ರವನ್ನು ಹಾಜರುಪಡಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಂಪ ನದಿಯಲ್ಲಿ ಸ್ನಾನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಆದರೆ, ಆ ಸ್ಥಳದಲ್ಲಿ ವಾಹನ ನಿಲುಗಡೆಗೆ ಹಾಗೂ ಪಂಪ ಮತ್ತು ಸನ್ನಿಧಾನಂನಲ್ಲಿ ಭಕ್ತರು ನೆಲೆಯೂರಲು ಅವಕಾಶ ಇರುವುದಿಲ್ಲ. ದರ್ಶನದ ನಂತರ ಸ್ಥಳದಿಂದ ನಿರ್ಗಮಿಸುವುದು ಕಡ್ಡಾಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಕ್ಷಣಾ ಕಾರ್ಯ ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಭಾರಿ ಮಳೆಯಿಂದ ಉಂಟಾದ ಪ್ರವಾಹದಲ್ಲಿ ಸಿಲುಕಿದವರನ್ನು ಶುಕ್ರವಾರ ಅಗ್ನಿಶಾಮಕ ಸಿಬ್ಬಂದಿ ರಕ್ಷಿಸಿದರು– ಪಿಟಿಐ ಚಿತ್ರ

ನೀಟ್: ಇಬ್ಬರು ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ಅಸಾಧ್ಯ– 'ಸುಪ್ರೀಂ'

ನವದೆಹಲಿ (ಪಿಟಿಐ): ಇಬ್ಬರು ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ನಡೆಸುವಂತೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ (ಎನ್‌ಟಿಎ) ನಿರ್ದೇಶಿಸಿ ಬಾಂಬೆ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂಕೋರ್ಟ್ ಶುಕ್ರವಾರ ರದ್ದುಪಡಿಸಿತು.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್ ಹಾಗೂ ಬಿ.ಆರ್. ಗವಾಯಿ ಅವರಿರುವ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು. 'ಆ ಇಬ್ಬರು ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆ ಬಗ್ಗೆ ಅನುಕಂಪ ಇದೆ. ಆದರೆ, ಅವರಿಬ್ಬರಿಗಾಗಿಯೇ ಮರು ಪರೀಕ್ಷೆ ನಡೆಸುವಂತೆ ಎನ್‌ಟಿಎಗೆ ನಿರ್ದೇಶನ ನೀಡಿ ಆದೇಶಿಸಲಾಗದು' ಎಂದು ಸ್ಪಷ್ಟಪಡಿಸಿತು.

ವೈಷ್ಣವಿ ಭೋಪಾಲೆ ಹಾಗೂ ಅಭಿಷೇಕ್ ಶಿವಾಜಿ ಎಂಬ ವಿದ್ಯಾರ್ಥಿಗಳು ಮಹಾರಾಷ್ಟ್ರದ ಪರೀಕ್ಷಾ ಕೇಂದ್ರವೊಂದರಲ್ಲಿ ನೀಟ್ ಬರೆದಿದ್ದರು. ಅವರ ಪ್ರಶ್ನೆಪತ್ರಿಕೆಗಳು ಹಾಗೂ ಒಎಂಆರ್ ಪ್ರತಿಗಳು ಪರೀಕ್ಷೆ ಆರಂಭಕ್ಕೂ ಮೊದಲೇ ಬೆರೆತುಹೋಗಿದ್ದವು.

ತಮಗೆ ಮತ್ತೊಮ್ಮೆ ನೀಟ್ ಬರೆಯಲು ಅವಕಾಶ ಕಲ್ಪಿಸುವಂತೆ ಕೋರಿ ಈ ಇಬ್ಬರು ವಿದ್ಯಾರ್ಥಿಗಳು ಬಾಂಬೆ ಹೈಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಈ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಸುವಂತೆ ಎನ್‌ಟಿಎ ನಿರ್ದೇಶಿಸಿ ಅಕ್ಟೋಬರ್ 20ರಂದು ಆದೇಶಿಸಿತ್ತು.

ದ್ವೇಷಭಾಷಣ ತಡೆಗೆ ಕ್ರಮ ಕೋರಿದ್ದ ಅರ್ಜಿ ವಿಚಾರಣೆಗೆ

ಮುಖ್ಯಾಂಶಗಳು

- ಹಿರಿಯ ವಕೀಲ ವಿಕಾಸ್ ಸಿಂಗ್ ಅವರಿಂದ ಸುಪ್ರೀಂ ಕೋರ್ಟ್‌ಗೆ ಅರ್ಜಿ
- ಕಠಿಣ ಕಾನೂನು ರಚಿಸಲು ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಮನವಿ
- ನವೆಂಬರ್ 22ರಂದು ವಿಚಾರಣೆ ಕೈಗೆತ್ತಿಕೊಳ್ಳಲಿರುವ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): 'ದೇಶದಲ್ಲಿ ದ್ವೇಷಭಾಷಣ ಮತ್ತು ವದಂತಿ ಹಬ್ಬಿಸುವುದನ್ನು ತಡೆಯುವ ಉದ್ದೇಶದಿಂದ ಅಂತರರಾಷ್ಟ್ರೀಯ ಕಾನೂನುಗಳನ್ನು ಪರಿಶೀಲಿಸಿ, ಪರಿಣಾಮಕಾರಿ ಮತ್ತು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿ' ಎಂದು ಹಿರಿಯ ವಕೀಲ ವಿಕಾಸ್ ಸಿಂಗ್ ಅವರ ಅರ್ಜಿಯನ್ನು ನವೆಂಬರ್ 22ರಂದು ವಿಚಾರಣೆಗೆ ಎತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಒಪ್ಪಿಗೆ ಸೂಚಿಸಿದೆ.

ದ್ವೇಷಭಾಷಣವನ್ನು ತಡೆಗಟ್ಟಲು ಕಾನೂನು ಆಯೋಗವು ಮಾಡಿರುವ ಶಿಫಾರಸುಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿ ಎಂದು ಬಿಜೆಪಿ ನಾಯಕ ಅಶ್ವಿನಿ ಉಪಾಧ್ಯಾಯ ಅವರು ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಎ.ಎಂ.ಖಾನ್‌ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರ ಪೀಠವು ಈ ಅರ್ಜಿಯ ವಿಚಾರಣೆ ನಡೆಸುತ್ತಿದ್ದಾಗಲೇ ವಿಕಾಸ್ ಸಿಂಗ್ ಅವರ ಅರ್ಜಿಯೂ ವಿಚಾರಣೆಗೆ ಬಂದಿತು.

ಆ ಅರ್ಜಿಯ ಪರವಾಗಿ, ಅಶ್ವಿನಿ ಉಪಾಧ್ಯಾಯ ಅವರ ವಕೀಲ ಅಶ್ವಾನಿ ದುಬೆ ಅವರು ವಕಲಾತ್ತು ನಡೆಸಿದರು.

'ದೇಶದ ನಾಗರಿಕರ ಅಭಿವ್ಯಕ್ತಿ ಸ್ವಾತಂತ್ರ್ಯ, ಜೀವಿಸುವ ಹಕ್ಕು, ಸ್ವಾತಂತ್ರ್ಯ ಮತ್ತು ಘನತೆಯ ಹಕ್ಕುಗಳ ರಕ್ಷಣೆಯ ಉದ್ದೇಶದಿಂದ ದ್ವೇಷಭಾಷಣ ಮತ್ತು ವದಂತಿ ಹಬ್ಬಿಸುವುದನ್ನು ತಡೆಯಲು ಕೇಂದ್ರ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕಿದೆ. ಇದಕ್ಕಾಗಿ ಅಂತರರಾಷ್ಟ್ರೀಯ ಕಾನೂನುಗಳನ್ನು ಪರಿಶೀಲಿಸಬೇಕು ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿ ಎಂದು ಈ ಅರ್ಜಿದಾರರು ಕೋರಿದ್ದಾರೆ' ಎಂದು ದುಬೆ ಅವರು ಪ್ರಸ್ತಾಪಿಸಿದರು.

'ದ್ವೇಷ ಭಾಷಣ ಮತ್ತು ವದಂತಿಗಳು ಭಯೋತ್ಪಾದನೆ, ಹತ್ಯಾಕಾಂಡಗಳು ಮತ್ತು ಯಾವುದೋ ಒಂದು ಸಮುದಾಯದ ವಿರುದ್ಧ ತಿರುಗಿಬೀಳಲು ಪ್ರಚೋದಿಸುತ್ತವೆ. ಇವುಗಳಿಂದ ದೇಶದ ನಾಗರಿಕರಿಗೆ ಆಗುವ ಹಾನಿಯು ಬಹಳ ದೊಡ್ಡದು. ಇದರಿಂದ ಜನರ ಜೀವ ಮತ್ತು ಆರೋಗ್ಯಕ್ಕೂ ತೊಂದರೆ ಇದೆ. ಇದು ಸಮಾಜದ ಪ್ರಗತಿಗೂ ಧಕ್ಕೆ ತರುತ್ತದೆ. ಇದನ್ನು ತಡೆಯದೇ ಇದ್ದರೆ, ದೇಶದ ನಾಗರಿಕರ ಸ್ವಾತಂತ್ರ್ಯ, ಜೀವಿಸುವ ಹಕ್ಕು ಮತ್ತು ಘನತೆಯ ಹಕ್ಕನ್ನು ಧ್ವಂಸಮಾಡುತ್ತದೆ' ಎಂದು ಅವರು ವಾದಿಸಿದರು.

ವಕೀಲ ವಿಕಾಸ್ ಸಿಂಗ್ ಅವರ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲು ಪೀಠವು ಒಪ್ಪಿಗೆ ಸೂಚಿಸಿತು.

ಎಲ್ಲರಿಗೂ ಕೋವಿಡ್ ಲಸಿಕೆ ಹಾಕಿಸಲು ಮತ್ತೊಂದು ಪ್ರಯತ್ನ

ದೆಹಲಿಯಲ್ಲಿ 'ಹರ್ ಘರ್ ದಸ್ತಕ್' ಅಭಿಯಾನ

ನವದೆಹಲಿ (ಪಿಟಿಐ): ಇನ್ನೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳದ ಮತ್ತು ಎರಡನೇ ಡೋಸ್ ತೆಗೆದುಕೊಳ್ಳಬೇಕಾದ ಅವಧಿ ಮೀರಿರುವ ಜನರಿಗೆ ಮನೆ ಮನೆಗೆ ಹುಡುಕಿಕೊಂಡು ಹೋಗಿ ಲಸಿಕೆ ಹಾಕುವ 'ಹರ್ ಘರ್ ದಸ್ತಕ್' ಅಭಿಯಾನಕ್ಕೆ ಶುಕ್ರವಾರ ರಾಷ್ಟ್ರ ರಾಜಧಾನಿಯಲ್ಲಿ ಚಾಲನೆ ದೊರೆತಿದೆ.

ಲಸಿಕೆ ಹಾಕಿಸಿಕೊಳ್ಳುವುದರಿಂದ ಯಾರೊಬ್ಬರೂ ಹೊರಗುಳಿಯದಂತೆ ನೋಡಿಕೊಳ್ಳಲು ಕೇಂದ್ರ ಇತ್ತೀಚೆಗೆ ಒಂದು ತಿಂಗಳ ಅವಧಿಯ 'ಹರ್ ಘರ್ ದಸ್ತಕ್' ಅಭಿಯಾನ ಪ್ರಾರಂಭಿಸಿದೆ.

ದೆಹಲಿ ಸರ್ಕಾರ ಹೊರಡಿಸಿರುವ ಪ್ರಕಟಣೆಯ ಪ್ರಕಾರ, ನವೆಂಬರ್ 12ರಿಂದ 27ರವರೆಗೆ ಈ ಅಭಿಯಾನ ನಡೆಯಲಿದೆ. ಮೊದಲ ಅಥವಾ 2ನೇ ಡೋಸ್ ಲಸಿಕೆ ಪಡೆಯುವವರಿಗೆ 'ವಾಕ್-ಇನ್ ವ್ಯಾಕ್ಸಿನೇಷನ್' ಸೌಲಭ್ಯವು ಎಲ್ಲಾ ಕೇಂದ್ರಗಳಲ್ಲಿ ಲಭ್ಯವಿರಲಿದೆ.

ಆರೋಗ್ಯ ಇಲಾಖೆಯ ಮಾಹಿತಿಯ ಪ್ರಕಾರ, ದೆಹಲಿಯಲ್ಲಿ ಈವರೆಗೆ ಎರಡು ಕೋಟಿಗೂ ಹೆಚ್ಚು ಡೋಸ್ ಲಸಿಕೆ ನೀಡಲಾಗಿದೆ. ಇದರಲ್ಲಿ 77 ಲಕ್ಷಕ್ಕೂ ಹೆಚ್ಚು ಜನರು ಎರಡು ಡೋಸ್ ಲಸಿಕೆಗಳನ್ನು ಪಡೆದುಕೊಂಡಿದ್ದಾರೆ.

ಹೆಚ್ಚಿನ ಜನರು ಈಗಾಗಲೇ ಕೋವಿಡ್ ಸೋಂಕಿಗೆ ಒಳಗಾಗಿರುವುದರಿಂದ ಮತ್ತು ಲಸಿಕೆ ವೇಗದಲ್ಲಿ ಸ್ಥಿರತೆ ಇರುವುದರಿಂದ ದೆಹಲಿಯಲ್ಲಿ ಸುಮಾರು ಮೂರೂವರೆ ತಿಂಗಳಿನಿಂದ ದೈನಂದಿನ ಪ್ರಕರಣಗಳು 100ರ ಗಡಿ ದಾಟಿಲ್ಲ ಎಂದು ತಜ್ಞರು ಹೇಳಿದ್ದಾರೆ.

2 ಡೋಸ್‌ಗಳ ನಡುವಿನ ನಿಗದಿತ ಮಧ್ಯಂತರದ ಅವಧಿ ಮುಗಿದ ನಂತರ ಲಸಿಕೆ ಪಡೆದಿರದ ಫಲಾನುಭವಿಗಳಿಗೆ 2ನೇ ಡೋಸ್ ಅನ್ನು ಆದ್ಯತೆ ಮೇಲೆ ನೀಡುವಂತೆ ಕೇಂದ್ರ ಆರೋಗ್ಯ ಸಚಿವಾಲಯವು ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದೆ ಎಂದು ಮೂಲಗಳು ತಿಳಿಸಿವೆ.

ಜರ್ಮನಿ: ದೊಡ್ಡ ಸಮಾರಂಭ ರದ್ದತಿಗೆ ಕರೆ

ಬರ್ಲಿನ್ (ಎಪಿ): ದೇಶದಲ್ಲಿ ದಿನೇದಿನೇ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಜನರು ದೊಡ್ಡ ದೊಡ್ಡ ಕಾರ್ಯಕ್ರಮ ಅಥವಾ ಬೃಹತ್ ಪ್ರಮಾಣದಲ್ಲಿ ಜನರು ಒಗ್ಗೂಡುವಂಥ ಸಮಾರಂಭಗಳನ್ನು ರದ್ದುಪಡಿಸಬೇಕೆಂದು ಜರ್ಮನಿಯ ರೋಗ ನಿಯಂತ್ರಣ ಕೇಂದ್ರವು ಕರೆ ನೀಡಿದೆ.

ದೇಶದಲ್ಲಿ ಇದೇ ಮೊದಲ ಬಾರಿಗೆ ಗುರುವಾರ ದಾಖಲೆಯ ಮಟ್ಟದಲ್ಲಿ ಅಂದರೆ ದೈನಂದಿನ ಪ್ರಕರಣಗಳ ಸಂಖ್ಯೆ 50 ಸಾವಿರಕ್ಕೆ ತಲುಪಿದ್ದು, ಹೊಸದಾಗಿ 48,640 ಪ್ರಕರಣಗಳು ವರದಿಯಾಗಿವೆ. ಅಲ್ಲದೇ, ಪ್ರತಿ ಲಕ್ಷ ಜನಸಂಖ್ಯೆಗೆ ಸೋಂಕಿನ ಪ್ರಮಾಣವು 249.1ರಿಂದ 263.7ಕ್ಕೆ ಏರಿದೆ ಎಂದು ಅಲ್ಲಿನ ರಾಬರ್ಟ್ ಕೋಚ್ ಇನ್‌ಸ್ಟಿಟ್ಯೂಟ್ ಶುಕ್ರವಾರ ತಿಳಿಸಿದೆ.

'ಸಾಧ್ಯವಾದರೆ ದೊಡ್ಡ ಸಮಾರಂಭಗಳನ್ನು ರದ್ದುಗೊಳಿಸಬೇಕು. ಅಂತೆಯೇ ಅಗತ್ಯವಿಲ್ಲದ ಕಡೆ ಜನರು ದೈಹಿಕ ಅಂತರ ಕಾಪಾಡಿಕೊಳ್ಳುವುದು ಅತ್ಯಗತ್ಯ' ಎಂದು ಇನ್‌ಸ್ಟಿಟ್ಯೂಟ್ ತುರ್ತು ಕರೆ ನೀಡಿದೆ.

ಡೆನ್ಮಾರ್ಕ್: ಡಿಜಿಟಲ್ ಪಾಸ್‌ಗೆ ಮತ್ತೆ ಚಾಲನೆ

ಕೋಪನ್‌ಹೇಗನ್ (ಎಪಿ): ಡೆನ್ಮಾರ್ಕ್‌ನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದ್ದು, ಅಲ್ಲಿನ ಸರ್ಕಾರ ಈ ಹಿಂದೆ ಜಾರಿಗೆ ತಂದಿದ್ದ ಡಿಜಿಟಲ್ ಪಾಸ್ ವ್ಯವಸ್ಥೆಗೆ ಶುಕ್ರವಾರ ಪುನರ್ ಚಾಲನೆ ನೀಡಿದೆ.

ಕೋವಿಡ್ ಅನ್ನು 'ಸಾಮಾಜಿಕ ನಿರ್ಣಾಯಕ ಕಾಯಿಲೆ' ಎಂದು ಘೋಷಿಸಿರುವ ಅಲ್ಲಿನ ಸರ್ಕಾರವು, ಡಿಜಿಟಲ್ ಪಾಸ್ ಅನ್ನು ನೈಟ್ ಕ್ಲಬ್ಸ್, ಕೆಫೆಗಳು, ಪಾರ್ಟಿ ಬಸ್‌ಗಳು ಮತ್ತು ರೆಸ್ಟೋರೆಂಟ್‌ಗಳ ಒಳಗೆ ಕುಳಿತುಕೊಳ್ಳುವ ಸಲುವಾಗಿ ತಿಂಗಳ ಕಾಲ ಬಳಸುವಂತೆ ಸೂಚನೆ ನೀಡಿದೆ.

ಜುಲೈ 1ರಂದು ಮೊದಲ ಬಾರಿಗೆ ಡಿಜಿಟಲ್ ಪಾಸ್ ವ್ಯವಸ್ಥೆಯನ್ನು ಪರಿಚಯಿಸಲಾಗಿತ್ತು. ಲಸಿಕಾ ಅಭಿಯಾನವು ಹೆಚ್ಚಿನ ಪ್ರಮಾಣದಲ್ಲಿ ನಡೆದಿದ್ದರಿಂದ ಸೆ. 10ರಂದು ಇದನ್ನು ವಾಪಸ್ ಪಡೆಯಲಾಗಿತ್ತು.

ಡೆನ್ಮಾರ್ಕ್‌ನಲ್ಲಿ ಇತ್ತೀಚೆಗೆ ಕೋವಿಡ್ ಪ್ರಕರಣಗಳಲ್ಲಿ ಏರಿಕೆ ಕಂಡಿದ್ದು, ಆಸ್ಪತ್ರೆಗೆ ದಾಖಲಾದವರ ಸಂಖ್ಯೆ ನಿರೀಕ್ಷೆಗಿಂತ ವೇಗವಾಗಿ ಏರಿದೆ ಎಂದು ಅಲ್ಲಿನ ಆರೋಗ್ಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಾರ್ವೆ: ಕೋವಿಡ್ ಮಾರ್ಗಸೂಚಿ ಮರು ಜಾರಿ

ಓಸ್ಲೊ (ಎಎಫ್‌ಪಿ): ನಾರ್ವೆಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದ್ದು, ಅಲ್ಲಿನ ಸರ್ಕಾರವು ಪಟ್ಟಣಗಳಲ್ಲಿ ಆರೋಗ್ಯ ಪಾಸ್‌ಗಳನ್ನು ಬಳಸುವುದು ಸೇರಿದಂತೆ ಕೋವಿಡ್ ಮಾರ್ಗಸೂಚಿಗಳ ಪಾಲನೆಯನ್ನು ಪುನರ್ ಜಾರಿಗೆ ತರುವುದಾಗಿ ಶುಕ್ರವಾರ ಘೋಷಿಸಿದೆ. ಸೆಪ್ಟೆಂಬರ್ ತಿಂಗಳಲ್ಲಿ ಅಲ್ಲಿನ ಸರ್ಕಾರವು ಕೋವಿಡ್ ಮಾರ್ಗಸೂಚಿಗಳ ಪಾಲನೆಯನ್ನು ವಾಪಸ್ ಪಡೆದಿತ್ತು.

'ಕೋವಿಡ್ ಸಂಖ್ಯೆ ಹೆಚ್ಚಳವಾಗುತ್ತಿರುವ ಬೆನ್ನಲ್ಲೆ 18 ವರ್ಷ ಮೇಲ್ಪಟ್ಟವರಿಗೆ ಮೂರನೇ ಡೋಸ್ ನೀಡುವ ಕುರಿತೂ ಯೋಚಿಸಲಾಗುತ್ತಿದೆ. ಆದರೆ, ಹೊಸದಾಗಿ ಲಾಕ್‌ಡೌನ್ ಮಾಡುವುದಿಲ್ಲ'ಎಂದು ನಾರ್ವೆಯ ಪ್ರಧಾನಿ ಜೋನಸ್ ಘರ್ ಸ್ಟೋರ್ ಅವರು ತಿಳಿಸಿದ್ದಾರೆ.

ನೆದರ್ಲೆಂಡ್ಸ್: ಶೀಘ್ರದಲ್ಲೇ ಲಾಕ್‌ಡೌನ್?

ದಿ ಹೇಗ್ (ಎಪಿ): ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಬೆನ್ನಲ್ಲೇ ನೆದರ್ಲೆಂಡ್ಸ್ ಸರ್ಕಾರವು ಶೀಘ್ರದಲ್ಲೇ ಭಾಗಶಃ ಲಾಕ್‌ಡೌನ್ ಘೋಷಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚಿನ ವಾರಗಳಲ್ಲಿ ಯುರೋಪಿನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಉಲ್ಬಣವಾಗಿದ್ದು, ಅಲ್ಲಿನ ಕೆಲ ದೇಶಗಳಲ್ಲಿ ಬಾರ್ ಅಂಡ್ ರೆಸ್ಟೋರೆಂಟ್, ಕ್ರೀಡಾ ಕೂಟಗಳನ್ನು ನಿರ್ಬಂಧಿಸುವ ಬಗ್ಗೆ ಚರ್ಚೆಯಾಗುತ್ತಿದೆ.

ನೆದರ್ಲೆಂಡ್ಸ್ ಸರ್ಕಾರವು ಮೂರು ವಾರಗಳ ಕಾಲ ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಅಗತ್ಯವಲ್ಲದ ಸಾಮಾಗ್ರಿಗಳ ಅಂಗಡಿಗಳು ಸೇರಿದಂತೆ ಕ್ರೀಡಾಕೂಟಗಳಿಗೆ ನಿರ್ಬಂಧ ವಿಧಿಸುವ ಕುರಿತು ಚಿಂತನೆ ನಡೆಸಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಲಖನೌದಲ್ಲಿ ಝಿಕಾ ವೈರಸ್ ಪ್ರಕರಣ ಪತ್ತೆ

ಲಖನೌ (ಪಿಟಿಐ): ಉತ್ತರ ಪ್ರದೇಶದ ಲಖನೌದಲ್ಲಿ ಝಿಕಾ ವೈರಸ್‌ನ ಎರಡು ಪ್ರಕರಣ ಪತ್ತೆಯಾಗಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ಹೇಳಿದ್ದಾರೆ. ಕಾನ್ಪುರ ಮತ್ತು ಕನೌಜ್ ನಂತರ ಈ ವೈರಸ್ ಪತ್ತೆಯಾಗುತ್ತಿರುವ ಮೂರನೇ ಜಿಲ್ಲೆ ಲಖನೌ ಆಗಿದೆ.

ರಾಜ್ಯಸಭೆ ಪ್ರಧಾನ ಕಾರ್ಯದರ್ಶಿ ಹಠಾತ್ ಎತ್ತಂಗಡಿ

ನವದೆಹಲಿ: ಅಚ್ಚರಿದಾಯಕ ಬೆಳವಣಿಗೆಯೊಂದರಲ್ಲಿ, ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಡಾ.ಪಿ.ಪಿ.ಕೆ ರಾಮಾಚಾರ್ಯುಲು ಅವರನ್ನು ಶುಕ್ರವಾರ ತೆಗೆದು ಹಾಕಲಾಗಿದೆ.

ಕೇಂದ್ರೀಯ ನೇರ ತೆರಿಗೆ ಮಂಡಳಿಯ (ಸಿಬಿಡಿಟಿ) ಮಾಜಿ ಚೇರಮನ್ ಪ್ರಮೋದಚಂದ್ರ ಮೋದಿ ಅವರನ್ನು ರಾಜ್ಯಸಭೆಯ ನೂತನ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ. ಡಾ.ರಾಮಾಚಾರ್ಯುಲು ಅವರನ್ನು ಕಳೆದ ಸೆಪ್ಟೆಂಬರ್ 1ರಂದು ರಾಜ್ಯಸಭೆ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿತ್ತು. ಈ ಹುದ್ದೆಯಿಂದ ಅವರನ್ನು ತೆಗೆದು ಹಾಕಿರುವುದಕ್ಕೆ ಯಾವುದೇ ನಿರ್ದಿಷ್ಟ ಕಾರಣ ನೀಡಲಾಗಿಲ್ಲ.

ಕಂಗನಾ 'ದ್ವೇಷದ ಪ್ರತಿನಿಧಿ': ತುಷಾರ್ ಗಾಂಧಿ

ಪ್ರಜಾವಾಣಿ ವಾರ್ತೆ

ಮುಂಬೈ: ಬಾಲಿವುಡ್ ನಟಿ ಕಂಗನಾ ರನೌತ್‌ರನ್ನು 'ದ್ವೇಷದ ಪ್ರತಿನಿಧಿ' ಎಂದು ಮಹಾತ್ಮ ಗಾಂಧಿ ಅವರ ಮರಿ ಮೊಮ್ಮಗ ತುಷಾರ್ ಗಾಂಧಿ ಕರೆದಿದ್ದಾರೆ. ಪ್ರಧಾನಿ ಕಚೇರಿಯನ್ನು ಕೂಡ ಅವರು ಈ ವೇಳೆ ಟೀಕಿಸಿದ್ದಾರೆ.

'ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದ್ದು 2014ರಲ್ಲಿ. 1947ರಲ್ಲಿ ನಮಗೆ ಸಿಕ್ಕಿದ್ದು ಕೇವಲ ಭಿಕ್ಷೆ' ಎಂದು ಕಂಗನಾ ಹೇಳಿಕೆ ನೀಡಿದ್ದರು. ಇದಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಈ ಹೇಳಿಕೆ ವಿರೋಧಿಸಿ ತುಷಾರ್ ಗಾಂಧಿ ಟ್ವೀಟ್ ಮಾಡಿದ್ದಾರೆ. 'ಪದ್ಮಶ್ರೀ ಕಂಗನಾ ರನೌತ್ ದ್ವೇಷ, ಅಸಹಿಷ್ಣುತೆ ಮತ್ತು ಉನ್ಮಾದದ ಪ್ರತಿನಿಧಿ. ಭಾರತಕ್ಕೆ 2014ರಲ್ಲಿ ಸ್ವಾತಂತ್ರ್ಯ ದೊರಕಿದೆ ಎಂದು ಅವರು ಭಾವಿಸಿರುವುದರಲ್ಲಿ ಯಾವುದೇ ಆಶ್ಚರ್ಯ ಇಲ್ಲ. ದ್ವೇಷ, ಅಸಹಿಷ್ಣುತೆ, ಹುಸಿ ದೇಶಪ್ರೇಮ ಮತ್ತು ದಬ್ಬಾಳಿಕೆಗಳಿಗೆ ಈ ದೇಶದಲ್ಲಿ ಮುಕ್ತ ಸ್ವಾತಂತ್ರ್ಯ ಸಿಕ್ಕಿದ್ದು 2014ರಲ್ಲಿಯೇ' ಎಂದಿದ್ದಾರೆ.

ಡ್ರಗ್ಸ್ ಸೇವಿಸಿ ಹೇಳಿಕೆ: ಮಲಿಕ್

'ಮಲಾನ ಕ್ರೀಮ್ ಡ್ರಗ್ಸ್ ಸೇವಿಸಿ ಕಂಗನಾ ಈ ಹೇಳಿಕೆ ನೀಡಿರುವಂತೆ ಕಾಣುತ್ತದೆ. ಅವರು ನಮ್ಮ ಸ್ವಾತಂತ್ರ್ಯ ಹೋರಾಟಗಾರರನ್ನು ಅವಮಾನಿಸಿದ್ದಾರೆ. ಕೂಡಲೇ ಅವರನ್ನು ಬಂಧಿಸಬೇಕು' ಎಂದು ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಪ್ರತಿಕ್ರಿಯೆ ನೀಡಿದ್ದಾರೆ.

ಮಹಾರಾಷ್ಟ್ರದ ಮಹಾವಿಕಾಸ ಅಘಾಡಿ ಸರ್ಕಾರದ ಹಲವಾರು ನಾಯಕರು ಕಂಗನಾ ಹೇಳಿಕೆಯನ್ನು ಖಂಡಿಸಿದ್ದಾರೆ ಮತ್ತು ಅವರಿಗೆ ನೀಡಲಾಗಿರುವ ಪದ್ಮಶ್ರೀ ಪ್ರಶಸ್ತಿಯನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

> **ಮೋದಿ ಅವರು ಕಳೆದ 7 ವರ್ಷಗಳಲ್ಲಿ ಮಾಡಿದ ಕೆಲಸವನ್ನು ಕಂಗನಾ ಅವರು ಶ್ಲಾಘಿಸಬಹುದು. ಆದರೆ, ಸ್ವಾತಂತ್ರ್ಯ ಸಮರವನ್ನು ಟೀಕಿಸುವ ಹಕ್ಕು ಇಲ್ಲ**
> **ಚಂದ್ರಕಾಂತ ಪಾಟೀಲ್,** ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ

'ವಿಷಕಾರಿ ಸಿದ್ಧಾಂತಕ್ಕೆ ಅಧಿಕೃತ ಸ್ಥಾನವೇ ದೊರೆತುಬಿಟ್ಟರೆ ಹೀಗೆ ಆಗುತ್ತದೆ. ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಬಲಿದಾನದ ಮಹತ್ವವನ್ನು ದ್ವೇಷದ ವಂತಿಗೆ ಪಡೆದವರು ತಿಳಿಯದೇ ಇರುವುದರಲ್ಲಿ ಯಾವುದೇ ಆಶ್ಚರ್ಯ ಇಲ್ಲ' ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಈ ವೇಳೆ ತುಷಾರ್ ಟೀಕಿಸಿದ್ದಾರೆ. ಪ್ರಧಾನಿ ಹಾಜರಿದ್ದ ಕಾರ್ಯಕ್ರಮದಲ್ಲಿ ಇಂಥ ಹೇಳಿಕೆಗಳು ಕೇಳಿ ಬಂದಿರುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಪ್ರಧಾನಿ ಕಾರ್ಯಾಲಯವೇ ದ್ವೇಷದ ಕಾರಂಜಿಯಾಗಿದೆ. ಅದು ದೇಶದ ತುಂಬಾ ಹರಿಯುತ್ತಿದೆ ಎಂದಿದ್ದಾರೆ.

ಎಚ್–1ಬಿ ವೀಸಾ: ಸಂಗಾತಿಗೂ ಉದ್ಯೋಗ ಅವಕಾಶ

ವಾಷಿಂಗ್ಟನ್: ಎಚ್–1ಬಿ ವೀಸಾ ಹೊಂದಿರುವವರ ಸಂಗಾತಿಗೆ ಕೈಗೊಳ್ಳುವ ಉದ್ಯೋಗಕ್ಕೆ ಸ್ವಯಂಚಾಲಿತ ದೃಢೀಕರಣ ನೀಡಲು ಅಮೆರಿಕ ಸರ್ಕಾರ ಒಪ್ಪಿಗೆ ನೀಡಿದೆ.

ಅಧ್ಯಕ್ಷ ಜೋ ಬೈಡನ್ ನೇತೃತ್ವದ ಸರ್ಕಾರ ಕೈಗೊಂಡಿರುವ ಈ ವಲಸೆಸ್ನೇಹಿ ಕ್ರಮ ಭಾರತೀಯ ಅಮೆರಿಕನ್ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಲಿದೆ.

ಅಮೆರಿಕದಲ್ಲಿರುವ ಭಾರತ ಮೂಲದ ಉದ್ಯೋಗಿಗಳ ಪೈಕಿ ಐಟಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರ ಸಂಖ್ಯೆಯೇ ಅಧಿಕ. ಅಮೆರಿಕದ ಕಂಪನಿಗಳು ಕೌಶಲ ಅಥವಾ ತಾಂತ್ರಿಕ ಪರಿಣತಿ ಅಗತ್ಯವಿರುವ ಹುದ್ದೆಗಳಿಗೆ ವಿದೇಶಿಯರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಇದೆ. ಇಂಥ ಉದ್ಯೋಗಿಗಳಿಗೆ ಎಚ್–1ಬಿ ವೀಸಾ ನೀಡಲಾಗುತ್ತದೆ.

ಎಚ್–1ಬಿ ವೀಸಾ ಹೊಂದಿರುವವರ ಕುಟುಂಬ ಸದಸ್ಯರಿಗೆ (ಪತಿ ಅಥವಾ ಪತ್ನಿ ಹಾಗೂ 21 ವರ್ಷದ ಒಳಗಿನ ಮಕ್ಕಳಿಗೆ) ಎಚ್–4 ವೀಸಾ ನೀಡಲಾಗುತ್ತದೆ. ಉದ್ಯೋಗ ಆಧಾರಿತ ಕಾನೂನುಬದ್ಧ ಕಾಯಂ ನಿವಾಸಿ ಸ್ಥಾನಮಾನ ಪಡೆಯುವ ಪ್ರಕ್ರಿಯೆ ಆರಂಭಿಸಿದವರಿಗೆ ಸಾಮಾನ್ಯವಾಗಿ ಈ ವೀಸಾ ನೀಡಲಾಗುತ್ತದೆ.

ಉದ್ಯೋಗ ದೃಢೀಕರಣ ಸೌಲಭ್ಯ ವಿಸ್ತರಿಸಲು ಅಗತ್ಯವಿರುವ ಮಾನದಂಡಗಳನ್ನು ಎಚ್–4 ವೀಸಾ ಹೊಂದಿರುವವರು ಪೂರೈಸಿರುತ್ತಾರೆ. ಆದರೆ, ಇವರಿಗೆ ಉದ್ಯೋಗ ದೃಢೀಕರಣದ ಲಾಭವನ್ನು ಸಂಬಂಧಿಸಿದ ಇಲಾಖೆ ನೀಡುತ್ತಿರಲಿಲ್ಲ. ಇದನ್ನು ಪ್ರಶ್ನಿಸಿ ಅಮೆರಿಕನ್ ವಲಸೆ ವಕೀಲರ ಸಂಘ (ಎಐಎಲ್‌ಎ) ಅರ್ಜಿ ಸಲ್ಲಿಸಿತ್ತು. ಎಚ್–1ಬಿ ವೀಸಾ ಹೊಂದಿರುವವರ ಪತಿ ಅಥವಾ ಪತ್ನಿ ಉದ್ಯೋಗ ಕೈಗೊಳ್ಳಲು ಸ್ವಯಂಚಾಲಿತ ದೃಢೀಕರಣ ನೀಡಲು ಆಂತರಿಕ ಭದ್ರತಾ ಇಲಾಖೆ ಒಪ್ಪಿಗೆ ಸೂಚಿಸಿತು.

ಉರುಳಿಬಿದ್ದ ಬಂಡೆಗಳು • ಪ್ರಯಾಣಿಕರು ಪಾರು

ಹಳಿ ತಪ್ಪಿದ ಕಣ್ಣೂರು– ಬೆಂಗಳೂರು ರೈಲು

ಧರ್ಮಪುರಿ (ಪಿಟಿಐ): ಬೆಂಗಳೂರಿಗೆ ತೆರಳುತ್ತಿದ್ದ ಕಣ್ಣೂರು– ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನ ಮೇಲೆ ತಮಿಳುನಾಡಿನ ಧರ್ಮಪುರಿ ಬಳಿ ಶುಕ್ರವಾರ ಬಂಡೆಗಳು ಉರುಳಿಬಿದ್ದ ಪರಿಣಾಮ ಏಳು ಬೋಗಿಗಳು ಹಳಿತಪ್ಪಿವೆ. ರೈಲಿನಲ್ಲಿ 2,348 ಪ್ರಯಾಣಿಕರಿದ್ದರು, ಯಾರಿಗೂ ಯಾವುದೇ ತೊಂದರೆ ಉಂಟಾಗಿಲ್ಲ ಎಂದು ದಕ್ಷಿಣ ರೈಲ್ವೆ ತಿಳಿಸಿದೆ.

ಕಣ್ಣೂರು-ಬೆಂಗಳೂರು ಎಕ್ಸ್‌ಪ್ರೆಸ್ ಗುರುವಾರ ಸಂಜೆ 6.05ಕ್ಕೆ ಕಣ್ಣೂರಿನಿಂದ ಹೊರಟಿತ್ತು. ಶುಕ್ರವಾರ ಮುಂಜಾನೆ 3.50ರ ಸುಮಾರಿಗೆ ಚಲಿಸುತ್ತಿದ್ದ ರೈಲಿನ ಮೇಲೆ ಇದ್ದಕ್ಕಿದ್ದಂತೆ ಬಂಡೆಗಲ್ಲುಗಳು ಉರುಳಿಬಿದ್ದು, ರೈಲು ಬೋಗಿಗಳು ತೊಪ್ಪೂರು– ಶಿವಡಿ ನಡುವೆ (ಬೆಂಗಳೂರು –ಸೇಲಂ ವಿಭಾಗ) ಹಳಿ ತಪ್ಪಿವೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಡಿಆರ್‌ಎಂ) ಶ್ಯಾಮ್ ಸಿಂಗ್ ಸೇರಿದಂತೆ ಅಧಿಕಾರಿಗಳ ತಂಡವು ವೈದ್ಯರೊಂದಿಗೆ ಅಪಘಾತ ಪರಿಹಾರ ರೈಲು (ಎಆರ್‌ಟಿ) ಮತ್ತು ವೈದ್ಯಕೀಯ ಸಲಕರಣೆ ವಾಹನದೊಂದಿಗೆ ತಕ್ಷಣ ಸ್ಥಳಕ್ಕೆ ಧಾವಿಸಿತು.ಈರೋಡ್‌ನಿಂದ ಸಹ ತಂಡ ಸ್ಥಳಕ್ಕೆ ಬಂದಿತು.

ಹಾನಿಯಾಗದ ಬೋಗಿಗಳನ್ನು ಪ್ರಯಾಣಿಕರ ಸಮೇತ ತೊಪ್ಪೂರು ಕಡೆಗೆ ಮತ್ತು ಸೇಲಂ ಕಡೆಗೆ ಕಳುಹಿಸಿಕೊಡಲಾಯಿತು.

ಸಹಾಯ ವಾಣಿ: ರೈಲ್ವೆಯು ಹೊಸೂರು 04344-222603, ಬೆಂಗಳೂರು 080-22156554 ಮತ್ತು ಧರ್ಮಪುರಿ 04342-232111 ಸಹಾಯ ಕೇಂದ್ರ ತೆರೆದಿದೆ ಎಂದು ನೈಋತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಅನೀಶ್ ಹೆಗ್ಡೆ ಹೇಳಿದರು.

ಬೆಂಗಳೂರಿಗೆ ಪ್ರಯಾಣಿಕರನ್ನು ಕರೆದೊಯ್ಯಲು ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಬೆಂಗಳೂರು-ಎರ್ನಾಕುಲಂ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ನಾಗರ್‌ಕೋಯಿಲ್-ಬೆಂಗಳೂರು ಹಬ್ಬದ ವಿಶೇಷ ಮತ್ತು ಸೇಲಂ-ಯಶವಂತಪುರ ಎಕ್ಸ್‌ಪ್ರೆಸ್ ವಿಶೇಷ ರೈಲುಗಳ ಮಾರ್ಗ ಬದಲಾಯಿಸಲಾಯಿತು.



ತಮಿಳುನಾಡಿನ ಧರ್ಮಪುರಿ ಬಳಿ ರೈಲಿನ ಮೇಲೆ ಬಂಡೆಗಳು ಉರುಳಿಬಿದ್ದಿರುವುದು



ಬಂಡೆಗಳು ಉರುಳಿಬಿದ್ದಿರುವುದರಿಂದ ಹಳಿತಪ್ಪಿದ ರೈಲು

ಜನರನ್ನು ಹಿಂಸಿಸುವುದು ಹಿಂದೂ ಧರ್ಮವಲ್ಲ: ರಾಹುಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಆರ್‌ಎಸ್‌ಎಸ್ ಮತ್ತು ಬಿಜೆಪಿ ಸಿದ್ಧಾಂತಗಳ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹರಿಹಾಯ್ದಿದ್ದಾರೆ. ಮುಗ್ಧ ಜನರ ಮೇಲೆ ಹಿಂಸಾಚಾರ ನಡೆಸುವುದು ಹಿಂದೂ ಧರ್ಮ ಅಲ್ಲ. ಆದರೆ ಹಿಂದುತ್ವ ಆ ಕೆಲಸವನ್ನು ಮಾಡುತ್ತದೆ ಎಂದು ಶುಕ್ರವಾರ ಹೇಳಿದ್ದಾರೆ.

ಮಹಾರಾಷ್ಟ್ರದ ವಾರ್ಧಾದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಅವರು ಹೀಗೆ ಹೇಳಿದ್ದಾರೆ. ಕಾಂಗ್ರೆಸ್ ಮುಖಂಡ ಸಲ್ಮಾನ್ ಖುರ್ಷಿದ್ ಅವರು ಹಿಂದುತ್ವ ಬೆಂಬಲಿಗರನ್ನು ಜಿಹಾದಿ ಮೂಲಭೂತವಾದಿಗಳ ಜೊತೆ ಹೋಲಿಸಿರುವುದು ಟೀಕೆಗೆ ಒಳಗಾಗಿರುವ ಬೆನ್ನಲ್ಲೇ ರಾಹುಲ್ ಈ ಹೇಳಿಕೆ ನೀಡಿದ್ದಾರೆ.

'ಕಾಂಗ್ರೆಸ್ ಸಿದ್ಧಾಂತವು ಆರ್‌ಎಸ್‌ಎಸ್ ಸಿದ್ಧಾಂತಕ್ಕಿಂತ ಹೇಗೆ ಭಿನ್ನ ಎಂದು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ತಿಳಿಯಲೇಬೇಕು. ನಮ್ಮ ಸಿದ್ಧಾಂತ ಜೀವಂತವಾಗಿದೆ, ಆದರೆ ಅದನ್ನು ಮರೆಮಾಚಲಾಗಿದೆ. ಕಾಂಗ್ರೆಸ್ಸಿಗನಾಗಿರುವುದು ಎಂದರೆ ಏನು ಎಂದು ನಮ್ಮ ನಾಯಕರು ಮತ್ತು ಕಾರ್ಯಕರ್ತರು ತಿಳಿಯಬೇಕು. ಅದಕ್ಕಾಗಿ ತರಬೇತಿ ನೀಡುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಪ್ರೀತಿ, ವಿಶ್ವಾಸ, ರಾಷ್ಟ್ರೀಯತಾವಾದವನ್ನು ಒಳಗೊಂಡಿರುವ ಕಾಂಗ್ರೆಸ್‌ನ ಸಿದ್ಧಾಂತವನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ದ್ವೇಷಪೂರ್ಣ, ವಿಭಜಕ ಸಿದ್ಧಾಂತವು ಮರೆಮಾಚಿದೆ. ಕಾಂಗ್ರೆಸ್ ಈ ದೇಶದ ಸಿದ್ಧಾಂತವನ್ನು ಪಾಲಿಸುತ್ತದೆ. ಕಾಂಗ್ರೆಸ್ ತನ್ನ ಸಿದ್ಧಾಂತವನ್ನು ಸಮರ್ಪಕವಾಗಿ ಪ್ರಚುರಪಡಿಸದೇ ಇದ್ದದ್ದು ಮತ್ತು ಹಿಂದುತ್ವ ಪಾಲಿಸುವವರು ದೇಶದ ಮಾಧ್ಯಮವನ್ನು ಮತ್ತು ದೇಶವನ್ನು ಸಂಪೂರ್ಣವಾಗಿ ಹಿಡಿತಕ್ಕೆ ತೆಗೆದುಕೊಂಡಿರುವುದು ಇದಕ್ಕೆ ಕಾರಣವಿರಬಹುದು ಎಂದರು.

'ಗುರುನಾನಕ್ ಅಥವಾ ಕಬೀರ್ ಹೇಳಿರುವ ಹಿಂದೂ ಧರ್ಮ ಮತ್ತು ಹಿಂದುತ್ವ ಸಿದ್ಧಾಂತದ ನಡುವೆ ಏನಾದರೂ ಹೋಲಿಕೆ ಇದೆಯೇ? ನಮಗೆ ಗೊತ್ತಿರುವ ಹಿಂದೂ ಧರ್ಮ ಮತ್ತು ಹಿಂದುತ್ವ ಎರಡೂ ಒಂದೇ ಆಗಲು ಸಾಧ್ಯವಿದೆಯೇ? ಬಲಪಂಥೀಯರು ಹೇಳುವಂತೆ ಹಿಂದುತ್ವ ಮತ್ತು ಹಿಂದೂ ಧರ್ಮ ಎರಡೂ ಒಂದೇ ಆಗಿದ್ದರೆ ಏಕೆ ಪ್ರತ್ಯೇಕ ಹೆಸರುಗಳನ್ನು ನೀಡಲಾಗುತ್ತಿತ್ತು' ಎಂದು ಪ್ರಶ್ನಿಸಿದ್ದಾರೆ.

'ಹಿಂದೂ ಧರ್ಮವನ್ನು ದ್ವೇಷಿಸುವ ರೋಗ'

'ಹಿಂದೂ ಧರ್ಮವನ್ನು ದ್ವೇಷಿಸುವ ರೋಗದಿಂದ ಕಾಂಗ್ರೆಸ್ ಬಳಲುತ್ತಿದೆ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಅವರು ರಾಹುಲ್ ಗಾಂಧಿ ಅವರಿಗೆ ತಿರುಗೇಟು ನೀಡಿದ್ದಾರೆ.

'ಹಿಂದೂ ಧರ್ಮ ಮತ್ತು ಅದರ ಸಂಸ್ಕೃತಿಯನ್ನು ಟೀಕಿಸುವ ಚಾಳಿ ಕಾಂಗ್ರೆಸ್‌ನ ಗಾಂಧಿಗಳಿಗೆ ಇದೆ. ಹೀಗಾಗಿ ಅವಕಾಶ ಸಿಕ್ಕಾಗಲೆಲ್ಲಾ ಕಾಂಗ್ರೆಸ್ ಮತ್ತು ಗಾಂಧಿ ಕುಟುಂಬವು ಹಿಂದೂ ಧರ್ಮವನ್ನು ಟೀಕಿಸುತ್ತದೆ' ಎಂದು ಅವರು ಆರೋಪಿಸಿದ್ದಾರೆ.

'ಕಾಂಗ್ರೆಸ್ ಪಕ್ಷವು ಹಿಂದೂ ಪಾಕಿಸ್ತಾನ, ಹಿಂದೂ ತಾಲಿಬಾನ್ ಮತ್ತು ಹಿಂದೂ ಭಯೋತ್ಪಾದನೆ ಎಂಬ ಪದಗಳನ್ನು ಬಳಸಿದೆ. ಪಕ್ಷದ ಶಶಿ ತರೂರ್, ಚಿದಂಬರಂ ಅವರು ಈ ಪದಗಳನ್ನು ಬಳಸಿದ್ದಾರೆ. ರಾಹುಲ್ ಗಾಂಧಿ ಅವರಿಗೆ ಗೊತ್ತಿದ್ದೇ ಅವರೆಲ್ಲಾ ಹೀಗೆ ಹೇಳುತ್ತಿದ್ದಾರೆ. ಇದು ಕಾಕತಾಳೀಯವಲ್ಲ, ಬದಲಿಗೆ ಅವರ ಪ್ರಯೋಗ. ಈ ಪ್ರಯೋಗಾಲಯದ ಮುಖ್ಯಶಿಕ್ಷಕ ರಾಹುಲ್ ಗಾಂಧಿ. ಹಿಂದೂ ಧರ್ಮವನ್ನು ಟೀಕಿಸುವ ಚಾಳಿಯನ್ನು ಇವರೆಲ್ಲಾ ಗಾಂಧಿ ಕುಟುಂಬದಿಂದಲೇ ಎರವಲು ಪಡೆದಿದ್ದಾರೆ' ಎಂದು ಪಾತ್ರಾ ಹರಿಹಾಯ್ದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	600- 650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	500

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-42500

ಹೊಸನಗರ

ಚಾಲಿ	41509-44599
ಕೆಂಪುಗೋಟು	30399-37899
ರಾಶಿ	42569-47010

ಕಾರ್ಕಳ

ಹೊಸತು	35000-42500
ಹಳತು	46000-51000

ಕುಮಟಾ

ಚಿಪ್ಪು	25509-39969
ಕೋಕ	18089-35019
ಫ್ಯಾಕ್ಟರಿ	14019-19299
ಹಳೆಚಾಲಿ	44089-46699
ಹೊಸಚಾಲಿ	36199-40069

ಕುಂದಾಪುರ

ಹಳೆಚಾಲಿ	46000-49500

ಶಿವಮೊಗ್ಗ

ಬೆಟ್ಟೆ	49069-51869
ಗೊರಬಲು	17259-39289
ರಾಶಿ	41069-46899
ಸರಕು	49199-73251

ಸಿದ್ದಾಪುರ

ಬಿಳಿಗೋಟು	31509-40508
ಚಾಲಿ	43099-47599
ಕೋಕ	24999-38199
ಹೊಸಚಾಲಿ	28099-36299
ಕೆಂಪುಗೋಟು	20699-28699
ರಾಶಿ	42989-46899
ತಟ್ಟಿಬೆಟ್ಟೆ	32899-43699

ಶಿರಸಿ

ಬೆಟ್ಟೆ	38523-42899
ಬಿಳಿಗೋಟು	28139-42999
ಚಾಲಿ	45119-47699
ರಾಶಿ	45700-48999

ಯಲ್ಲಾಪುರ

ಬಿಳಿಗೋಟು	32181-41309
ಚಾಲಿ	43389-47789
ಕೋಕ	22899-31899
ಕೆಂಪುಗೋಟು	28471-36690
ರಾಶಿ	45806-52399
ತಟ್ಟಿಬೆಟ್ಟೆ	36899-44369

ರೇಷ್ಮೆಗೂಡು ಮಾರುಕಟ್ಟೆ
ರಾಮನಗರ


ಮಿಶ್ರ ತಳಿ:	216-531
ದ್ವಿತಳಿ:	260-654

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	13,000	-	201.90ಸೆಂಟ್ಸ್
ಎಸಿ	5900	-	-	
ಆರ್‌ಪಿ	6150	-	6,300	ಲಂಡನ್
ಆರ್‌ಸಿ	3640	3,250	3,700	2292ಡಾಲರ್ಸ್

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ
ಪೌಷ್ಟಿಕ ಆಹಾರ ಸೇವಿಸಿ
ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,873
ಇಂದಿನ ಅಂತ್ಯ	18,102
▲	229
ದಿನದ ಗರಿಷ್ಠ	18,123

ವಿನಿಮಯ ದರ

$ ಡಾಲರ್	74.45
£ ಪೌಂಡ್	--
€ ಯೂರೊ	--
¥ ಯೆನ್ (100ಕ್ಕೆ)	65.34

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹460
12 ಮೊಟ್ಟೆಗೆ ₹62
ಮೈಸೂರು
100 ಮೊಟ್ಟೆಗೆ ₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1370 (-)
ಸೋಯಾ (ರಿಫೈನ್ಡ್)	₹1242(-)
ಸೂರ್ಯಕಾಂತಿ (ರಿಫೈನ್ಡ್)	₹1280 (-)
ಪಾಮೋಲಿನ್	₹1180 (-)

ಮುಂಬೈ ಧಾರಣೆ

ಶೇಂಗಾ
12-11-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಸೋಯಾ ಕಚ್ಚಾ	1182 (1180)
ಪಾಮ್ ವಾರದ ಡೆಲಿವರಿ	1178(1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
48,850 (49200)
ಬೆಳ್ಳಿ ಕೆ.ಜಿ
66,250 (66,600)
ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಡಬ್ಲ್ಯುಟಿಒ ಪ್ರಸ್ತಾವನೆಯು ಶ್ರೀಮಂತ ದೇಶಗಳ ಪರ'

ಮೀನುಗಾರಿಕೆಗೆ ಸಬ್ಸಿಡಿ ರದ್ದತಿ ಪ್ರಸ್ತಾವಕ್ಕೆ ಭಾರತ ಆಕ್ಷೇಪ


ಸಾಂದರ್ಭಿಕ ಚಿತ್ರ

ನವದೆಹಲಿ (ಎಎಫ್‌ಪಿ/ಪಿಟಿಐ): ಮೀನುಗಾರಿಕೆಗೆ ನೀಡುತ್ತಿರುವ ಸಬ್ಸಿಡಿಗಳನ್ನು ರದ್ದುಗೊಳಿಸಲು ವಿಶ್ವ ವ್ಯಾಪಾರ ಸಂಘಟನೆಯು (ಡಬ್ಲ್ಯುಟಿಒ) ಮಾಡಿರುವ ಪ್ರಸ್ತಾವನೆಯು ನ್ಯಾಯಸಮ್ಮತವಾಗಿ ಇಲ್ಲ ಎಂದು ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ಹೇಳಿದ್ದಾರೆ. ಅಲ್ಲದೆ, ಈ ಪ್ರಸ್ತಾವಗಳು ಶ್ರೀಮಂತ ದೇಶಗಳ ಪರವಾಗಿ ಇವೆ ಎಂದೂ ಅವರು ಹೇಳಿದ್ದಾರೆ.

ದೇಶದ ಕೋಟ್ಯಂತರ ಜನರಿಗೆ ಜೀವನೋಪಾಯ ಕಲ್ಪಿಸಿರುವ ಮೀನುಗಾರಿಕೆ ಉದ್ಯಮಕ್ಕಾಗಿ ಸರ್ಕಾರಗಳು ಕೋಟ್ಯಂತರ ರೂಪಾಯಿ ಸಬ್ಸಿಡಿ ನೀಡುತ್ತಿವೆ. ಆದರೆ, ಈ ಸಬ್ಸಿಡಿಗಳ ಕಾರಣದಿಂದಾಗಿ ಮೀನುಗಾರಿಕೆ ಚಟುವಟಿಕೆಗಳು ಅತಿಯಾಗುತ್ತಿವೆ. ಇದರಿಂದಾಗಿ ವಿಶ್ವದ ಜಲಚರಗಳಿಗೆ ಕುತ್ತು ಬಂದಿದೆ ಎಂಬ ಆತಂಕವನ್ನು ಕೆಲವರು ವ್ಯಕ್ತಪಡಿಸಿದ್ದಾರೆ.

ಅಕ್ರಮ ಹಾಗೂ ಅನಿಯಂತ್ರಿತ ಮೀನುಗಾರಿಕೆಗೆ ಸಬ್ಸಿಡಿ ನೀಡುವುದನ್ನು ಕೊನೆಗೊಳಿಸುವ ಪ್ರಸ್ತಾವದ ಬಗ್ಗೆ ಡಬ್ಲ್ಯುಟಿಒ ಸಂಘಟನೆಯು ಜಿನಿವಾದಲ್ಲಿ ಈ ತಿಂಗಳ ಅಂತ್ಯದಲ್ಲಿ ನಡೆಸುವ ಸಭೆಯಲ್ಲಿ ಚರ್ಚಿಸಲಿದೆ. ಆದರೆ, ಈ ವಿಚಾರವಾಗಿ ಈಗ ನಡೆದಿರುವ ಚರ್ಚೆಗಳು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕಳವಳಗಳಿಗೆ ಸ್ಪಂದಿಸಿಲ್ಲ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಖ್ಯಾಂಶಗಳು
- ಜಿನಿವಾದಲ್ಲಿ ನಡೆಯಲಿರುವ ಸಭೆಯಲ್ಲಿ ಪ್ರಸ್ತಾವದ ಬಗ್ಗೆ ಚರ್ಚೆ ಸಾಧ್ಯತೆ
- ಶ್ರೀಮಂತ ದೇಶಗಳಲ್ಲಿ ಮೀನುಗಾರರಿಗೆ ಭಾರಿ ಪ್ರಮಾಣದ ಸಬ್ಸಿಡಿ ಇದೆ

'ದೊಡ್ಡ ಮಟ್ಟದಲ್ಲಿ ಮೀನುಗಾರಿಕೆ ನಡೆಸುವ ದೇಶಗಳ ಪಾಲಿಗೆ ಈ ಪ್ರಸ್ತಾವದಿಂದ ಯಾವ ಬದಲಾವಣೆಯೂ ಆಗದು. ಇದು ಮೀನುಗಾರಿಕೆ ವಿಚಾರದಲ್ಲಿ ಮುಂದುವರಿದಿರುವ ದೇಶಗಳ ಪರವಾಗಿ ಇದೆ' ಎಂದು ಈ ಅಧಿಕಾರಿ ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ಹೇಳಿದರು.

ಭಾರಿ ಪ್ರಮಾಣದಲ್ಲಿ ಸಬ್ಸಿಡಿ ನೀಡುತ್ತಿರುವ ಅಮೆರಿಕ, ಜಪಾನ್, ದಕ್ಷಿಣ ಕೊರಿಯಾ, ಚೀನಾ ಮತ್ತು ಐರೋಪ್ಯ ಒಕ್ಕೂಟವು ಸಬ್ಸಿಡಿ ಮೊತ್ತ ತಗ್ಗಿಸುವಲ್ಲಿ ಹಾಗೂ ಮೀನುಗಾರಿಕೆ ಸಾಮರ್ಥ್ಯ ಕಡಿಮೆ ಮಾಡುವಲ್ಲಿ ಹೆಚ್ಚಿನ ಪಾಲು ತೆಗೆದುಕೊಳ್ಳಬೇಕು ಎಂದು ಭಾರತವು ಈ ಹಿಂದೆ ಒತ್ತಾಯಿಸಿದೆ.

ಶ್ರೀಮಂತ ದೇಶಗಳು ತಮ್ಮ ಮೀನುಗಾರರಿಗೆ ಭಾರಿ ಮೊತ್ತದ ಸಬ್ಸಿಡಿ ನೀಡುತ್ತಿವೆ. ಆದರೆ, ಭಾರತವು ನೀಡುತ್ತಿರುವ ಸಬ್ಸಿಡಿಯು ₹ 1,000 ಕೋಟಿ ಆಸುಪಾಸಿನಲ್ಲಿ ಇದೆ ಎಂದು ಮೂಲಗಳು ತಿಳಿಸಿವೆ.

ಐಸಿಎಫ್‌ಎಐ–ಮಾಸ್‌ಮ್ಯೂಚುವಲ್ ಒಪ್ಪಂದ

ಹೈದರಾಬಾದ್: ಹೈದರಾಬಾದ್‌ನ ಐಸಿಎಫ್‌ಎಐ ಉನ್ನತ ಶಿಕ್ಷಣ ಪ್ರತಿಷ್ಠಾನವು ತನ್ನ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ, ಇಂಟರ್ನ್‌ಶಿಪ್ ಮತ್ತು ನೇಮಕಾತಿ ಕಾರ್ಯಕ್ರಮಕ್ಕಾಗಿ ಬ್ಯಾಂಕೇತರ ಹಣಕಾಸು ಸಂಸ್ಥೆ ಮಾಸ್‌ಮ್ಯೂಚುವಲ್ ಇಂಡಿಯಾ ಕಂಪನಿಯ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಒಪ್ಪಂದದ ಪ್ರಕಾರ ಮಾಸ್‌ಮ್ಯೂಚುವಲ್ ಕಂಪನಿಯು, ಈ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಉನ್ನತ ಶಿಕ್ಷಣ, ಸಂಶೋಧನೆ, ಇಂಟರ್ನ್‌ಶಿಪ್‌ಗೆ ನೆರವು ನೀಡಲಿದೆ. ಪದವಿ ಕೋರ್ಸ್‌ಗಳು ಮುಗಿಯುವ ಮುನ್ನವೇ ಈ ತರಬೇತಿ ಪೂರ್ಣವಾಗಲಿದ್ದು, ಔದ್ಯೋಗಿಕ ಜಗತ್ತನ್ನು ಪ್ರವೇಶಿಸಲು ವಿದ್ಯಾರ್ಥಿಗಳನ್ನು ಸಿದ್ಧವಾಗಿಸಲಿದೆ. ಈ ಮೂಲಕ ವಿದ್ಯಾರ್ಥಿಗಳನ್ನು ಬೇರೆ ವಿದ್ಯಾರ್ಥಿಗಳಿಗಿಂತ ಹೆಚ್ಚು ಅರ್ಹರನ್ನಾಗಿಸಲಿದೆ ಎಂದು ಐಸಿಎಫ್‌ಎಐ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಮಾಸ್ ಮ್ಯೂಚುವಲ್ ಮೂಲಕ ಇಂಟರ್ನ್‌ಶಿಪ್ ಮಾಡುವ ವಿದ್ಯಾರ್ಥಿಗಳ ಕ್ಷಮತೆಯನ್ನು ಆಧರಿಸಿ ಅವರ ನೇಮಕಾತಿ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಸುದ್ದಿ 2 ನಿಮಿಷ

ಎರಡು ವಾರಗಳ ಗರಿಷ್ಠ ಮಟ್ಟಕ್ಕೆ ಸೆನ್ಸೆಕ್ಸ್, ನಿಫ್ಟಿ



ಮುಂಬೈ (ಪಿಟಿಐ): ಇನ್ಫೊಸಿಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಷೇರುಗಳ ಖರೀದಿ ಜೋರಾಗಿ ನಡೆದ ಪರಿಣಾಮವಾಗಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು ಶುಕ್ರವಾರದ ವಹಿವಾಟಿನಲ್ಲಿ 767 ಅಂಶ ಏರಿಕೆ ಕಂಡು, ಎರಡು ವಾರಗಳ ಗರಿಷ್ಠ ಮಟ್ಟ ತಲುಪಿತು. ದಿನದ ಅಂತ್ಯಕ್ಕೆ 60,686 ಅಂಶಗಳಿಗೆ ತಲುಪಿದ ಸೆನ್ಸೆಕ್ಸ್, ಮೂರು ದಿನಗಳ ಸತತ ಇಳಿಕೆಯಿಂದ ಹೊರಬಂತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 229 ಅಂಶ ಏರಿಕೆ ಕಂಡು 18,102 ಅಂಶಗಳಿಗೆ ತಲುಪಿತು. ಮಾಹಿತಿ ತಂತ್ರಜ್ಞಾನ, ರಿಯಾಲ್ಟಿ ಮತ್ತು ಇಂಧನ ವಲಯದ ಷೇರುಗಳ ಬೆಲೆಯಲ್ಲಿ ಏರಿಕೆ ಆಗಿದ್ದು ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು.

'ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು ಚೆನ್ನಾಗಿ ಇರುವ ಕಾರಣ ಹೂಡಿಕೆದಾರರು ಅವುಗಳ ಕಡೆ ಹೆಚ್ಚು ಗಮನ ನೀಡುತ್ತಿದ್ದಾರೆ. ಅಲ್ಲದೆ, ಹಣದುಬ್ಬರದ ಚಿಂತೆ ತಗ್ಗಿತ್ತಿದೆ. ಹೀಗಾಗಿ ಮಾರುಕಟ್ಟೆಯಲ್ಲಿ ಏರಿಕೆ ಕಂಡುಬಂದಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 0.57ರವರೆಗೆ ಏರಿಕೆ ಕಂಡಿವೆ.

ರಾಜ್ಯದ ಆದ್ಯತಾ ವಲಯಕ್ಕೆ ₹2.92 ಲಕ್ಷ ಕೋಟಿ ಮುಂಗಡ ನಿಗದಿ

ಬೆಂಗಳೂರು: 2021–22 ನೇ ಸಾಲಿನ ಆದ್ಯತಾ ವಲಯಗಳ ಮುಂಗಡ ₹2,92,392 ಕೋಟಿ ನಿಗದಿಯಾಗಿದ್ದು, ಸೆಪ್ಟೆಂಬರ್‌ವರೆಗಿನ ತ್ರೈಮಾಸಿಕದಲ್ಲಿ ₹93,438 ಕೋಟಿ ಮುಂಗಡ ಸಾಲ ನೀಡುವ ಮೂಲಕ ಶೇ 31.98 ಪ್ರಗತಿ ಸಾಧಿಸಲಾಗಿದೆ ಎಂದು ಕೆನರಾ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಬ್ರಿಜ್ ಮೋಹನ್ ಶರ್ಮಾ ಅವರು ಹೇಳಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ನಡೆದ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಕೃಷಿ ವಲಯದ ಮುಂಗಡ ನೀಡಿಕೆಯಲ್ಲಿ ₹51,266 ಕೋಟಿ (ಶೇ 40.69), ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ವಲಯಕ್ಕೆ ₹34,447 ಕೋಟಿ(ಶೇ 30.80) ಗುರಿ ಸಾಧಿಸಲಾಗಿದೆ ಎಂದರು.

ರಾಯಚೂರು ಜಿಲ್ಲೆಯಲ್ಲಿ ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಯಲ್ಲಿ ಶೇ 100 ರಷ್ಟು ಡಿಜಿಟಲೀಕರಣದ ಪ್ರಗತಿಯನ್ನು ಸಾಧಿಸಿರುವುದು ಶ್ಲಾಘನೀಯ ವಿಚಾರ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ಈ ಸಂದರ್ಭದಲ್ಲಿ ವಿವಿಧ ವಲಯಗಳಿಗೆ ಸಾಲ ನೀಡಿಕೆಯ ಕಾರ್ಯಕ್ರಮ 27 ಜಿಲ್ಲೆಗಳಲ್ಲಿ ಪರಿಣಾಮಕಾರಿಯಾಗಿ ನಡೆದಿದೆ. ಈ ಯೋಜನೆಯಡಿ ವಿವಿಧ ಬಗೆಯ ಸಾಲಗಳನ್ನು ನೀಡಲಾಗುತ್ತಿದೆ. ಕೃಷಿ, ಸಣ್ಣ ಉದ್ಯಮ, ಶಿಕ್ಷಣ, ಮನೆ ನಿರ್ಮಾಣ, ವಾಹನ, ಖಾಸಗಿ ಸಾಲಗಳನ್ನು ನೀಡಲಾಗುತ್ತಿದೆ. ಇದರ ಜತೆಗೆ ಪ್ರಧಾನಮಂತ್ರಿ ಜನ ಸುರಕ್ಷಾ ಯೋಜನೆಗಳನ್ನೂ ಜನಪ್ರಿಯಗೊಳಿಸಲಾಗುತ್ತಿದೆ ಎಂದು ಮೋಹನ್ ಶರ್ಮಾ ಹೇಳಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್, ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮಾ,ಬಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ನಿರ್ದೇಶಕ ಆರ್.ಗುರುಮೂರ್ತಿ ಇದ್ದರು.

ಶುಲ್ಕ ರಹಿತವಾಗಿ ಸಾಲಪತ್ರ ಖರೀದಿಗೆ ಅವಕಾಶ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿರುವ ಆರ್‌ಬಿಐ ರಿಟೇಲ್ ಡೈರೆಕ್ಟ್ ಸೌಲಭ್ಯವು, ವ್ಯಕ್ತಿಗಳಿಗೆ ಆನ್‌ಲೈನ್ ಮೂಲಕ ರಿಟೇಲ್ ಡೈರೆಕ್ಟ್ ಗಿಲ್ಟ್ ಖಾತೆಯನ್ನು (ಆರ್‌ಡಿಜಿ ಖಾತೆ) ತೆರೆಯುವ ಅವಕಾಶ ನೀಡುತ್ತದೆ. ಈ ಖಾತೆಯನ್ನು ವ್ಯಕ್ತಿಗಳು ತಮ್ಮ ಉಳಿತಾಯ ಖಾತೆಗಳ ಜೊತೆ ಜೋಡಿಸಿಕೊಳ್ಳಬಹುದು.


ಪ್ರಧಾನಿ ಮೋದಿ

ಆರ್‌ಡಿಜಿ ಖಾತೆಯನ್ನು ಬಳಸಿ ವ್ಯಕ್ತಿಗಳು ಸರ್ಕಾರದ ಸಾಲಪತ್ರಗಳನ್ನು ಖರೀದಿಸಬಹುದು. ಸರ್ಕಾರಿ ಸಾಲಪತ್ರಗಳನ್ನು ಖರೀದಿಸಿದವರು ಅವುಗಳನ್ನು ಇನ್ನೊಬ್ಬರಿಗೆ ಆನ್‌ಲೈನ್ ಮೂಲಕವೇ ಉಡುಗೊರೆ ರೂಪದಲ್ಲಿ ನೀಡುವ ಅವಕಾಶ ಕೂಡ ಇದೆ.

ಏಕೀಕೃತ ಒಂಬುಡ್ಸ್‌ಮನ್
ಪ್ರಧಾನಿಯವರು ಶುಕ್ರವಾರ ಉದ್ಘಾಟಿಸಿದ ಏಕೀಕೃತ ಒಂಬುಡ್ಸ್‌ಮನ್ ವ್ಯವಸ್ಥೆಯು, ಈವರೆಗೆ ಅಸ್ತಿತ್ವದಲ್ಲಿ ಇದ್ದ ಮೂರು ಒಂಬುಡ್ಸ್‌ಮನ್ ವ್ಯವಸ್ಥೆಗಳನ್ನು ವಿಲೀನಗೊಳಿಸಿದೆ. ಬ್ಯಾಂಕಿಂಗ್ ಒಂಬುಡ್ಸ್‌ಮನ್ ವ್ಯವಸ್ಥೆ, ಬ್ಯಾಂಕೇತರ ಹಣಕಾಸು ಕಂಪನಿಗಳಿಗಾಗಿನ ಒಂಬುಡ್ಸ್‌ಮನ್ ವ್ಯವಸ್ಥೆ ಹಾಗೂ ಡಿಜಿಟಲ್ ವಹಿವಾಟುಗಳಿಗೆ ಇದ್ದ ಒಂಬುಡ್ಸ್‌ಮನ್ ವ್ಯವಸ್ಥೆಯನ್ನು ಒಂದೆಡೆ ತಂದಿದೆ.

ಮುಖ್ಯಾಂಶಗಳು
- ಸಾಲಪತ್ರಗಳನ್ನು ಉಡುಗೊರೆ ರೂಪದಲ್ಲಿ ಹಸ್ತಾಂತರಿಸಲು ಸಾಧ್ಯ
- ಸಾಲಪತ್ರದ ಮೊತ್ತವನ್ನು ಯುಪಿಐ ಮೂಲಕ ಪಾವತಿಸಲು ಅವಕಾಶ

ಸಾಲಪತ್ರ ಖರೀದಿಗೆ ಹಣ ಪಾವತಿಯನ್ನು ಆನ್‌ಲೈನ್ ಬ್ಯಾಂಕಿಂಗ್ ಅಥವಾ ಯುಪಿಐ ವ್ಯವಸ್ಥೆ ಮೂಲಕ ಮಾಡಬಹುದು. ಪೋರ್ಟಲ್‌ಗೆ ಸಂಬಂಧಿಸಿದಂತೆ 1800-267-7955 ಸಹಾಯವಾಣಿಗೆ ಕರೆ ಮಾಡಿ, ನೆರವು ಪಡೆಯಬಹುದು. ಈ ಯೋಜನೆಯ ಅಡಿಯಲ್ಲಿ ನೀಡಿರುವ ಯಾವ ಸೌಲಭ್ಯಕ್ಕೂ ಶುಲ್ಕ ಪಾವತಿಸಬೇಕಾಗಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿದೆ.

ಆರ್‌ಡಿಜಿ ಖಾತೆ ತೆರೆಯಬೇಕು ಎಂದಾದಲ್ಲಿ ಸಣ್ಣ ಹೂಡಿಕೆದಾರರು ಭಾರತದಲ್ಲಿ ಉಳಿತಾಯ ಖಾತೆ ಹೊಂದಿರಬೇಕು, ಪ್ಯಾನ್ ಸಂಖ್ಯೆ, ಕೆವೈಸಿಗೆ ಅಗತ್ಯವಿರುವ ದಾಖಲೆಗಳನ್ನು ಹೊಂದಿರಬೇಕು. ಇ–ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆ ಕೂಡ ಹೊಂದಿರಬೇಕು.

'ಹೊಸ ಯೋಜನೆಯು ದೇಶದಲ್ಲಿ ಹೂಡಿಕೆ ಅವಕಾಶಗಳನ್ನು ಹೆಚ್ಚಿಸಲಿದೆ. ದೇಶದ ಬಂಡವಾಳ ಮಾರುಕಟ್ಟೆಗಳು ಸರಳವಾಗಿ, ಸುರಕ್ಷಿತ ವ್ಯವಸ್ಥೆಯ ಮೂಲಕ ಲಭ್ಯವಾಗುವಂತೆ ಮಾಡುತ್ತದೆ' ಎಂದು ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಪ್ರಧಾನಿ ಹೇಳಿದರು.

ಆರರಿಂದ ಏಳು ವರ್ಷಗಳ ಹಿಂದೆ ಬ್ಯಾಂಕಿಂಗ್, ಪಿಂಚಣಿ ಮತ್ತು ವಿಮಾ ವಲಯಗಳು ಕೆಲವರಿಗೆ ಮಾತ್ರ ಸೀಮಿತವಾಗಿದ್ದವು. ಇವು ದೇಶದ ಸಾಮಾನ್ಯ ಪ್ರಜೆಗಳಿಗೆ ಲಭ್ಯವಾಗುತ್ತಿರಲಿಲ್ಲ ಎಂದು ಅವರು ಹೇಳಿದರು. 'ಈ ಸೌಲಭ್ಯಗಳೆಲ್ಲ ಬಡವರಿಗೂ ಸಿಗುವಂತೆ ಮಾಡಬೇಕಾದ ಜವಾಬ್ದಾರಿ ಹೊತ್ತಿದ್ದ ವ್ಯಕ್ತಿಗಳು ಆ ನಿಟ್ಟಿನಲ್ಲಿ ಗಮನವನ್ನೇ ಹರಿಸಲಿಲ್ಲ' ಎಂದು ದೂರಿದರು.

ಎನ್‌ಎಸ್‌ಒ ಗ್ರೂಪ್ ನಿಯೋಜಿತ ಸಿಇಒ ರಾಜೀನಾಮೆ

ಜೆರುಸಲೇಮ್ (ಪಿಟಿಐ): ಗೂಢಚಾರಿಕೆ ತಂತ್ರಾಂಶ ಅಭಿವೃದ್ಧಿಪಡಿಸಿರುವ ಕಂಪನಿ, ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್‌ನ ನಿಯೋಜಿತ ಸಿಇಒ ಐಸಾಕ್ ಬೆನ್‌ಬೆನಿಸ್ಟಿ ಅವರು ಅಧಿಕಾರ ಸ್ವೀಕರಿಸುವ ಮುನ್ನವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಎನ್‌ಎಸ್‌ಒ ಗ್ರೂಪ್ ಅನ್ನು ಅಮೆರಿಕ ಕಪ್ಪುಪಟ್ಟಿಗೆ ಸೇರಿಸಿದ ಕೆಲವೇ ದಿನಗಳ ನಂತರ ಈ ಬೆಳವಣಿಗೆ ನಡೆದಿದೆ. ತನ್ನ ವಿದೇಶಾಂಗ ನೀತಿ ಹಾಗೂ ರಾಷ್ಟ್ರೀಯ ಭದ್ರತೆ ಹಿತಾಸಕ್ತಿಗಳ ವಿರುದ್ಧವಾಗಿ ಕಂಪನಿ ನಡೆದುಕೊಂಡಿದ್ದಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಮೆರಿಕ ಸರ್ಕಾರ ಹೇಳಿದೆ.



ಪ್ರಾತಿನಿಧಿಕ ಚಿತ್ರ

ಐಸಾಕ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕುರಿತು ಸ್ಥಳೀಯ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿದ್ದು, ಕಂಪನಿಯ ವಕ್ತಾರರೊಬ್ಬರು ಸಹ ಇದನ್ನು ಖಚಿತಪಡಿಸಿದ್ದಾರೆ.

ಐಸಾಕ್ ಅವರು ಕಳೆದ ಆಗಸ್ಟ್‌ನಲ್ಲಿ ಕಂಪನಿ ಸೇರಿದ್ದರು. ಅಕ್ಟೋಬರ್ 31ರಂದು ಅವರನ್ನು ಸಿಇಒ ಆಗಿ ನೇಮಕ ಮಾಡಿರುವುದಾಗಿ ಕಂಪನಿ ತಿಳಿಸಿತ್ತು.

ಎನ್‌ಎಸ್‌ಒ ಗ್ರೂಪ್ 'ಪೆಗಾಸಸ್' ಎಂಬ ಗೂಢಚಾರಿಕೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಇದರ ದುರ್ಬಳಕೆಯಾಗಿದೆ ಎಂಬ ಆರೋಪಗಳು ಕೇಳಿಬಂದಿದ್ದು, ವಿವಾದಕ್ಕೆ ಕಾರಣವಾಗಿದೆ.

ಕಂಪನಿಯನ್ನು ಅಮೆರಿಕ ಕಪ್ಪುಪಟ್ಟಿಗೆ ಸೇರಿಸಿರುವ ವಿಷಯಕ್ಕೆ ಸಂಬಂಧಿಸಿ ಇಸ್ರೇಲ್ ಸರ್ಕಾರ ಅಂತರ ಕಾಯ್ದುಕೊಂಡಿದೆ. 'ಎನ್‌ಎಸ್‌ಒ ಗ್ರೂಪ್ ಖಾಸಗಿ ಕಂಪನಿಯಾಗಿದ್ದು, ಸರ್ಕಾರದ ವಿದೇಶಾಂಗ ನೀತಿಗಳಿಗೂ, ಕಂಪನಿಗೆ ಸಂಬಂಧಿಸಿದ ಬೆಳವಣಿಗೆಗಳಿಗೂ ಸಂಬಂಧ ಇಲ್ಲ' ಎಂದು ವಿದೇಶಾಂಗ ಸಚಿವ ಯೈರ್ ಲೇಪಿಡ್ ಹೇಳಿದ್ದಾರೆ.

ಬಂಧನದಲ್ಲಿದ್ದ ಅಮೆರಿಕದ ಪತ್ರಕರ್ತನಿಗೆ 11 ವರ್ಷ ಜೈಲು ಶಿಕ್ಷೆ

ಬ್ಯಾಂಕಾಕ್ (ಎಪಿ): ಸೇನಾ ಆಡಳಿತವಿರುವ ಮ್ಯಾನ್ಮಾರ್‌ನ ಸರ್ಕಾರ ಬಂಧಿಸಿದ್ದ ಅಮೆರಿಕದ ಪತ್ರಕರ್ತ ಡ್ಯಾನಿ ಫೆನ್‌ಸ್ಟರ್ ಅವರಿಗೆ ಇಲ್ಲಿನ ನ್ಯಾಯಾಲಯವು ಶುಕ್ರವಾರ 11 ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ.



ಸುಳ್ಳು ಮತ್ತು ಪ್ರಚೋದಕನಕಾರಿ ಮಾಹಿತಿ ಹಂಚಿಕೆ ಸೇರಿದಂತೆ ಅವರ ವಿರುದ್ಧ ಹೊರಿಸಲಾಗಿದ್ದ ವಿವಿಧ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ, ನ್ಯಾಯಾಲಯ ಫೆನ್‌ಸ್ಟರ್ ಅವರನ್ನು ಅಪರಾಧಿ ಎಂದು ಘೋಷಿಸಿತು.

ಇವರು ಫ್ರಂಟಿಯರ್ ಮ್ಯಾನ್ಮಾರ್ ಆನ್‌ಲೈನ್ ನಿಯತಕಾಲಿಕದ ವ್ಯವಸ್ಥಾಪಕ ಸಂಪಾದಕ. 'ವೀಸಾ ನಿಯಮಗಳ ಉಲ್ಲಂಘನೆ, ಕಾನೂನುಬಾಹಿರ ಸಂಘಟನೆಗಳ ಜೊತೆಗೆ ಸಂಪರ್ಕ ಆರೋಪಗಳು ದೃಢಪಟ್ಟಿವೆ' ಎಂದು ವಕೀಲ ಥಾನ್ ಜಾವ್ ಆಂಗ್ ತಿಳಿಸಿದರು.

ಮ್ಯಾನ್ಮಾರ್ ಸರ್ಕಾರ ಮೇ ತಿಂಗಳಲ್ಲಿ ಅವರನ್ನು ಬಂಧಿಸಿತ್ತು. ಅವರ ವಿರುದ್ಧ ದೇಶದ್ರೋಹ ಮತ್ತು ಭಯೋತ್ಪಾದನೆ ಕೃತ್ಯ ನಡೆಸಿದ ಇನ್ನೂ ಎರಡು ಆರೋಪಗಳು ಇದ್ದು, ವಿಚಾರಣೆ ನಡೆದಿದೆ.

ಕುಟುಂಬ ಸದಸ್ಯರ ಭೇಟಿಗೆ ಮೇ 24ರಂದು ಅಮೆರಿಕದ ಡೆಟ್ರಾಯಿಟ್‌ಗೆ ತೆರಳಲು ಸಜ್ಜಾಗುತ್ತಿದ್ದಾಗ ಯಾಂಗೂನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪೊಲೀಸರು ಅವರನ್ನು ಬಂಧಿಸಿದ್ದರು. ಸೇನೆಯು ಕಳೆದ ಫೆಬ್ರುವರಿಯಲ್ಲಿ ದೇಶದ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡ ಬಳಿಕ ಗಂಭೀರ ಆರೋಪದಡಿ ಶಿಕ್ಷೆಗೆ ಗುರಿಯಾಗಿರುವ ಏಕೈಕ ವಿದೇಶಿ ಪತ್ರಕರ್ತ ಇವರಾಗಿದ್ದಾರೆ.

ಶಾರ್ಜಾ ಪುಸ್ತಕ ಮೇಳ: '100 ಗ್ರೇಟ್ ಇಂಡಿಯನ್ ಪೊಯಮ್ಸ್' ಬಿಡುಗಡೆ

ದುಬೈ (ಪಿಟಿಐ): ಭಾರತೀಯ ರಾಜತಾಂತ್ರಿಕ ಮತ್ತು ಖ್ಯಾತ ಸಾಹಿತಿ ಅಭಯ್ ಕೆ. ಅವರು ಸಂಪಾದಿಸಿರುವ ಆಯ್ದ '100 ಗ್ರೇಟ್ ಇಂಡಿಯನ್ ಪೊಯಮ್ಸ್' ಅರೇಬಿಕ್ ಆವೃತ್ತಿಯ ಕೃತಿಯನ್ನು ಶಾರ್ಜಾ ಅಂತರರಾಷ್ಟ್ರೀಯ ಪುಸ್ತಕ ಮೇಳದಲ್ಲಿ ಬುಧವಾರ ಬಿಡುಗಡೆ ಮಾಡಲಾಯಿತು.

ಅರೇಬಿಕ್ ಭಾಷೆಯಲ್ಲಿರುವ '100 ಕಸೀದತ್ ಹಿಂದಿಯಾ ರೈಯೆಹ್' ಪುಸ್ತಕವು 3,000 ವರ್ಷಗಳ ಭಾರತೀಯ ಕಾವ್ಯ ಇತಿಹಾಸ ಸಾರುವ, 28 ಭಾರತೀಯ ಭಾಷೆಗಳ ಕವಿತೆಗಳನ್ನು ಒಳಗೊಂಡಿದೆ.

'100 ಗ್ರೇಟ್ ಇಂಡಿಯನ್ ಪೊಯಮ್ಸ್' ಈಗಾಗಲೇ ಯುರೋಪ್ ಮತ್ತು ಆಫ್ರಿಕಾದ ಐದು ಭಾಷೆಗಳಿಗೆ ಅನುವಾದಗೊಂಡಿದೆ. ಶಾರ್ಜಾ ಇನ್‌ಸ್ಟಿಟ್ಯೂಟ್ ಫಾರ್ ಹೆರಿಟೇಜ್ ಈ ಪುಸ್ತಕವನ್ನು ಅರೇಬಿಕ್‌ಗೆ ಅನುವಾದಿಸಿ ಪ್ರಕಟಿಸಿದೆ.

ಅಭಯ್ ಅವರು 'ದಿ ಮ್ಯಾಜಿಕ್ ಆಫ್ ಮಡಗಾಸ್ಕರ್' (ಎಲ್' ಹರ್ಮಟ್ಟನ್ ಪ್ಯಾರಿಸ್, 2021), 'ದಿ ಆಲ್ಫಾಬೆಟ್ಸ್ ಆಫ್ ಲ್ಯಾಟಿನ್ ಅಮೇರಿಕಾ'(ಬ್ಲೂಮ್ಸ್‌ಬರಿ ಇಂಡಿಯಾ, 2020), ಮತ್ತು 'ದಿ ಬುಕ್ ಆಫ್ ಬಿಹಾರಿ ಲಿಟರೇಚರ್', (ಹಾರ್ಪರ್ ಕಾಲಿನ್ಸ್, 2022) ನ ಸಂಪಾದಕರಾಗಿರುವುದು ಸೇರಿ ಒಂಬತ್ತು ಕವನ ಸಂಕಲನಗಳ ಲೇಖಕರಾಗಿದ್ದಾರೆ. ಅವರ 'ಭೂಮಿಯ ಗೀತೆ' 120ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿದೆ.

ನ.3ರಿಂದ ಆರಂಭವಾಗಿರುವ ಪುಸ್ತಕ ಮೇಳ ಇದೇ 13ರವರೆಗೆ ನಡೆಯಲಿದೆ.

'ಶಾಹೀನ್ 19ನೇ ಓವರ್ ಚೆನ್ನಾಗಿ ಮಾಡಬಹುದಿತ್ತು'


ಶಾಹೀನ್ ಅಫ್ರಿದಿ

ಕರಾಚಿ (ಪಿಟಿಐ): ಆಸ್ಟ್ರೇಲಿಯಾ ಎದುರಿನ ಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದ 19ನೇ ಓವರ್‌ನಲ್ಲಿ ಬೆನ್ನು ಬೆನ್ನಿಗೆ ಮೂರು ಸಿಕ್ಸರ್ ಹೊಡೆಸಿಕೊಂಡಿದ್ದಕ್ಕೆ ಶಾಹೀನ್ ಅಫ್ರಿದಿ ಅವರನ್ನು ಪಾಕಿಸ್ತಾನ ತಂಡದ ಮಾಜಿ ನಾಯಕ ಶಹೀದ್ ಅಫ್ರಿದಿ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ.

ಗುರುವಾರ ರಾತ್ರಿ ದುಬೈನಲ್ಲಿ ನಡೆದ ಪಂದ್ಯದಲ್ಲಿ ಶಾಹೀನ್ ಆ ಓವರ್‌ನಲ್ಲಿ ಬೌಲ್ ಮಾಡಿದ ರೀತಿ ತಮಗೆ ಸಮಾಧಾನ ತಂದಿಲ್ಲ ಎಂದಿದ್ದಾರೆ. ಅತ್ಯಮೋಘವಾಗಿ ಆಡಿದ್ದ ಮ್ಯಾಥ್ಯೂ ವೇಡ್ ಆ ಮೂರು ಸಿಕ್ಸರ್‌ಗಳೊಂದಿಗೆ ಬಿರುಸಿನ ಆಟವಾಡಿ ಆಸ್ಟ್ರೇಲಿಯಾ ತಂಡ ಐದು ವಿಕೆಟ್‌ಗಳಿಂದ ಗೆಲ್ಲಲು ಕಾರಣೀಭೂತರಾಗಿದ್ದರು.

'ಹಸನ್ ಅಲಿ ಒಂದು ಕ್ಯಾಚ್ ಬಿಟ್ಟಿರಬಹುದು. ಹಾಗೆಂದ ಮಾತ್ರಕ್ಕೆ ಕೆಟ್ಟದಾಗಿ ಬೌಲ್ ಮಾಡಿ ಮೂರು ಸಿಕ್ಸರ್ ಹೊಡೆಸಿಕೊಳ್ಳಬೇಕೆಂದೇನಲ್ಲ' ಎಂದು ಶಹೀದ್ ಅಫ್ರಿದಿ ಸಮಾ ಟಿವಿ ಚಾನೆಲ್‌ಗೆ ತಿಳಿಸಿದ್ದಾರೆ. 'ಶಾಹೀನ್‌ಗೆ ಒಳ್ಳೆಯ ವೇಗ ಇದೆ. ಅದನ್ನು ಅವರು ವಿವೇಚನೆಯಿಂದ ಬಳಸಬಹುದಿತ್ತು. ಆ ಓವರ್‌ನಲ್ಲಿ ಒಂದು ಕ್ಯಾಚ್ ಕೈಚೆಲ್ಲಿ ಹೋದರೂ, ಆಫ್‌ಸ್ಟಂಪ್ ಆಚೆ ವೇಗದ ಯಾರ್ಕರ್ ಪ್ರಯೋಗಿಸುವ ಮೂಲಕ ತಲೆ ಉಪಯೋಗಿಸಬೇಕಿತ್ತು' ಎಂದರು.

'ಶಾಹೀನ್ ಟೂರ್ನಿಯಲ್ಲಿ ಅಮೋಘವಾಗಿ ಬೌಲಿಂಗ್ ಮಾಡಿದರು. ಈ ಹಿಂದೆ ವಾಸಿಂ ಭಾಯಿ (ಅಕ್ರಂ) ಮತ್ತು ಮುಹಮ್ಮದ್ ಆಮೀರ್ ಮಾತ್ರ ಆ ರೀತಿ ಹೊಸ ಚೆಂಡಿನಲ್ಲಿ ಬೌಲಿಂಗ್ ಮಾಡಿದ್ದನ್ನು ನೋಡಿದ್ದೇನೆ' ಎಂದು ಶಹೀದ್ ಅಫ್ರಿದಿ ಹೇಳಿದರು.

ಎದೆಯಲ್ಲಿ ಸೋಂಕು ಕಾಣಿಸಿಕೊಂಡು ಚಿಕಿತ್ಸೆ ಪಡೆದುಕೊಂಡಿದ್ದ ಬ್ಯಾಟರ್
ಅನಾರೋಗ್ಯ ಲೆಕ್ಕಿಸದೆ ಕಣಕ್ಕೆ ರಿಜ್ವಾನ್

ದುಬೈ (ಪಿಟಿಐ): ಎರಡು ದಿನ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿದ್ದರೂ ಚೇತರಿಸಿಕೊಂಡು ಸೆಮಿಫೈನಲ್ ಪಂದ್ಯದಲ್ಲಿ ಆಡಿದ ಆರಂಭಿಕ ಬ್ಯಾಟರ್ ಮೊಹಮ್ಮದ್ ರಿಜ್ವಾನ್ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿದೆ.

ಎದೆಯಲ್ಲಿ ಸೋಂಕು ಕಾಣಿಸಿಕೊಂಡಿದ್ದ ಕಾರಣ ರಿಜ್ವಾನ್ ಅವರನ್ನು ಇಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎರಡು ದಿನ ಅವರು ಐಸಿಯುನಲ್ಲಿದ್ದರು. ಆದರೆ ಆಸ್ಟ್ರೇಲಿಯಾ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ ಕಣಕ್ಕೆ ಇಳಿದೇ ಇಳಿಯುವೆ ಎಂದು ಹೇಳಿದ್ದಾಗಿ ಪಾಕಿಸ್ತಾನ ಕ್ರಿಕೆಟ್ ತಂಡದ ವೈದ್ಯ ನಜೀಬ್ ಸಮ್ರೂ ತಿಳಿಸಿದ್ದಾರೆ.

ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಪಾಕಿಸ್ತಾನವನ್ನು ಐದು ವಿಕೆಟ್‌ಗಳಿಂದ ಮಣಿಸಿದ ಆಸ್ಟ್ರೇಲಿಯಾ ಸೆಮಿಫೈನಲ್ ಪ್ರವೇಶಿಸಿತ್ತು. ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ತಂಡ ರಿಜ್ವಾನ್ ಅವರ ಅಮೋಘ ಅರ್ಧಶತಕದ (67; 52 ಎಸೆತ, 3 ಬೌಂಡರಿ, 4 ಸಿಕ್ಸರ್) ನೆರವಿನಿಂದ 176 ರನ್ ಕಲೆ ಹಾಕಿತ್ತು.

ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ತಂಡ ಮ್ಯಾಥ್ಯೂ ವೇಡ್ (41; 17 ಎ, 2 ಬೌಂ, 4 ಸಿ) ಮತ್ತು ಮಾರ್ಕಸ್ ಸ್ಟೋಯಿನಿಸ್ (40; 31 ಎ, 2 ಬೌಂ, 2 ಸಿ) ಅವರ ಅಜೇಯ ಜೊತೆಯಾಟದ ಬಲದಿಂದ ರೋಚಕ ಜಯ ಸಾಧಿಸಿತ್ತು. ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಆ್ಯರನ್ ಫಿಂಚ್ ಬಳಗ ನ್ಯೂಜಿಲೆಂಡ್ ವಿರುದ್ಧ ಸೆಣಸಲಿದೆ.

ಪಾಕಿಸ್ತಾನದ ಪರ ರಿಜ್ವಾನ್ ಮತ್ತು ನಾಯಕ ಬಾಬರ್ ಆಜಂ ಮೊದಲ ವಿಕೆಟ್‌ಗೆ 60 ಎಸೆತಗಳಲ್ಲಿ 71 ರನ್ ಸೇರಿಸಿದ್ದರು. ನಂತರ ಫಕ್ರ್ ಜಮಾನ್ (55; 32 ಎ, 3 ಬೌಂ, 4 ಸಿ) ಮಿಂಚಿದ್ದರು.

ಆಸ್ಟ್ರೇಲಿಯಾ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ ಸ್ವಲ್ಪ ಮುನ್ನ ಪಾಕಿಸ್ತಾನದ ಬ್ಯಾಟಿಂಗ್ ಸಲಹೆಗಾರ ಮ್ಯಾಥ್ಯೂ ಹೇಡನ್ ಅವರು ವಿಕೆಟ್ ಕೀಪರ್ ಬ್ಯಾಟರ್ ರಿಜ್ವಾನ್ ಆಸ್ಪತ್ರೆಗೆ ದಾಖಲಾಗಿರುವುದರ ಬಗ್ಗೆ ತಿಳಿಸಿದ್ದರು. ಆದರೆ ಐಸಿಯುನಲ್ಲಿದ್ದಾರೆ ಎಂದು ತಿಳಿಸಿರಲಿಲ್ಲ.

'ಎದೆಯಲ್ಲಿ ಸೋಂಕು ಕಾಣಿಸಿಕೊಂಡಿದ್ದ ಕಾರಣ ನವೆಂಬರ್ 9ರಂದು ರಿಜ್ವಾನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಚಿಕಿತ್ಸೆಗೆ ಬೇಗ ಸ್ಪಂದಿಸಿದ್ದರು. ಹೀಗಾಗಿ ಪಂದ್ಯಕ್ಕೆ ಮೊದಲು ಅವರನ್ನು ಫಿಟ್ ಎಂದು ಘೋಷಿಸಲಾಗಿತ್ತು. ದೇಶಕ್ಕಾಗಿ ಆಡಲು ಅವರು ತೋರಿಸಿದ ಉತ್ಸಾಹವನ್ನು ಎಂದಿಗೂ ಮರೆಯಲಾಗದು. ಪಂದ್ಯದಲ್ಲಿ ಅವರು ಬ್ಯಾಟಿಂಗ್ ಮಾಡಿದ ವಿಧಾನವೂ ಶ್ಲಾಘನೀಯ' ಎಂದು ನಜೀಬ್ ಸಮ್ರೂ ಅಭಿಪ್ರಾಯಪಟ್ಟಿದ್ದಾರೆ.

'ರಿಜ್ವಾನ್ ಅವರ ಕ್ರೀಡಾಸ್ಫೂರ್ತಿ ಮೆಚ್ಚಲೇಬೇಕು. ನಾನು ಅವರನ್ನು ನೋಡಿದಾಗ ಸ್ವಲ್ಪ ಸಪ್ಪೆಯಾಗಿದ್ದರು. ಆದ್ದರಿಂದ ಆಡಲು ಸಾಧ್ಯವೇ ಎಂದು ವಿಚಾರಿಸಿದೆ. ಅವರು ಆಡಿಯೇ ತೀರುವೆ ಎಂದು ಹೇಳಿದ್ದರು' ಎಂದು ಬಾಬರ್ ಆಜಂ ತಿಳಿಸಿದ್ದಾರೆ. ರಿಜ್ವಾನ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು ಮತ್ತು ಐಸಿಯುನಲ್ಲಿ ಚಿಕಿತ್ಸೆ ನೀಡಿದ್ದ ವಿಷಯವನ್ನು ತಂಡದ ಆಡಳಿತ ಗುಟ್ಟಾಗಿ ಇರಿಸಿಕೊಂಡಿತ್ತು ಎಂದು ಸಮ್ರೂ ತಿಳಿಸಿದ್ದಾರೆ.


ಆಸ್ಪತ್ರೆಯಲ್ಲಿ ಮೊಹಮ್ಮದ್ ರಿಜ್ವಾನ್ ಟ್ವಿಟರ್ ಚಿತ್ರ

ಚಿಕಿತ್ಸೆ ನೀಡಿದ್ದ ಭಾರತದ ವೈದ್ಯ

ಮೊಹಮ್ಮದ್ ರಿಜ್ವಾನ್ ಅವರಿಗೆ ಚಿಕಿತ್ಸೆ ನೀಡಿದ್ದ ಭಾರತ ಮೂಲದ ವೈದ್ಯ ಸಾಹೀರ್ ಸೈನಾಲಬ್ದೀನ್, ಪಾಕಿಸ್ತಾನ ವಿಕೆಟ್ ಕೀಪರ್‌ನ ಆಟದ ಬಗೆಗಿರುವ ಮನೋಭಾವ ಮತ್ತು ಧೈರ್ಯವನ್ನು ಶ್ಲಾಘಿಸಿದ್ದಾರೆ.

' ಐಸಿಯುನಲ್ಲಿದ್ದಾಗಲೂ ನಾನು ಆಡಬೇಕು. ತಂಡದೊಂದಿಗೆ ಇರಬೇಕು ಎಂದಿದ್ದರು' ಎಂದು ದುಬೈನ ಮೆಡಿಯೊರ್ ಆಸ್ಪತ್ರೆಯಲ್ಲಿ ಶ್ವಾಸಕೋಶ ತಜ್ಞರಾಗಿರುವ ಸಾಹೀರ್ ತಿಳಿಸಿದರು.

ಪ್ರಶಸ್ತಿ ಗೆದ್ದೇ ಗೆಲ್ಲುವೆವು: ಲ್ಯಾಂಗರ್

ಮೊದಲು ಬ್ಯಾಟಿಂಗ್ ಅಥವಾ ಬೌಲಿಂಗ್ ಮಾಡಿದರೂ ಪಂದ್ಯ ಗೆದ್ದು ವಿಶ್ವಕಪ್ ಎತ್ತಿಹಿಡಿದೇ ತೀರುವೆವು ಎಂದು ಆಸ್ಟ್ರೇಲಿಯಾ ತಂಡದ ಕೋಚ್ ಜಸ್ಟಿನ್ ಲ್ಯಾಂಗರ್ ವಿಶ್ವಾಸದಿಂದ ನುಡಿದರು.

ಪಂದ್ಯದ ನಂತರ ಮಾತನಾಡಿದ ಅವರು 'ಯಾವುದೇ ಪರಿಸ್ಥಿತಿಯಲ್ಲಿ ಪಂದ್ಯ ಗೆಲ್ಲುವ ಛಲದೊಂದಿಗೆ ತಂಡ ಕಣಕ್ಕೆ ಇಳಿಯಲಿದೆ' ಎಂದು ತಿಳಿಸಿದರು.

ಯುಎಇಯಲ್ಲಿ ನಡೆಯುತ್ತಿರುವ ಟೂರ್ನಿಯ ಬಹುತೇಕ ಎಲ್ಲ ಪಂದ್ಯಗಳಲ್ಲೂ ಟಾಸ್ ಪ್ರಮುಖ ಪಾತ್ರ ವಹಿಸಿದೆ. ದುಬೈಯಲ್ಲಿ ನಡೆದ 12 ಪಂದ್ಯಗಳ ಪೈಕಿ 11 ಪಂದ್ಯಗಳಲ್ಲಿ ಗುರಿ ಬೆನ್ನತ್ತಿದ ತಂಡಗಳು ಗೆದ್ದಿವೆ. ಪಾಕಿಸ್ತಾನ ಎದುರಿನ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಕೂಡ ಗುರಿ ಬೆನ್ನತ್ತಿ ಜಯ ಸಾಧಿಸಿದೆ. ಫೈನಲ್ ಇಲ್ಲೇ ನಡೆಯಲಿರುವುದರಿಂದ ಟಾಸ್ ಮಹತ್ವ ಪಡೆದುಕೊಂಡಿದೆ.

ವಿಶ್ವಕಪ್ ಫೈನಲ್‌ಗೆ ಎರಾಸ್ಮಸ್, ಕೆಟಲ್‌ಬರೊ ಅಂಪೈರ್‌ಗಳು
ಭಾರತದ ನಿತಿನ್ ಮೆನನ್ ಮೂರನೇ ಅಂಪೈರ್


ನಿತಿನ್ ಮೆನನ್– ಎಎಫ್‌ಪಿ ಚಿತ್ರ

ದುಬೈ (ಪಿಟಿಐ): ದಕ್ಷಿಣ ಆಫ್ರಿಕಾದ ಮರಾಯಸ್ ಎರಾಸ್ಮಸ್ ಮತ್ತು ಇಂಗ್ಲೆಂಡ್‌ನ ರಿಚರ್ಡ್ ಕೆಟಲ್‌ಬರೊ ಅವರು ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಅಂಪೈರಿಂಗ್ ಮಾಡಲಿದ್ದಾರೆ. ಭಾರತದ ನಿತಿನ್ ಮೆನನ್ ಮೂರನೇ ಅಂಪೈರ್ ಆಗಿ ಕಾರ್ಯನಿರ್ವಹಿಸಲಿದ್ದು ರಂಜನ್ ಮದುಗಲೆ ಪಂದ್ಯದ ರೆಫರಿ ಆಗಿರುವರು.

ದುಬೈ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಫೈನಲ್ ಹಣಾಹಣಿಯಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. ಅಂಪೈರ್‌ಗಳ ವಿವರಗಳನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಶುಕ್ರವಾರ ಬಿಡುಗಡೆ ಮಾಡಿದೆ.

ಶ್ರೀಲಂಕಾದ ಮಾಜಿ ಆಫ್‌ಸ್ಪಿನ್ನರ್ ಕುಮಾರ ಧರ್ಮಸೇನ ನಾಲ್ಕನೇ ಅಂಪೈರ್ ಆಗಿರುವರು ಎಂದು ಕೂಡ ಐಸಿಸಿ ತಿಳಿಸಿದೆ. ನಿತಿನ್ ಮೆನನ್ ಇದೇ ಮೊದಲ ಬಾರಿ ಪುರುಷರ ವಿಶ್ವಕಪ್ ಟೂರ್ನಿಯೊಂದರಲ್ಲಿ ಅಂಪೈರಿಂಗ್ ಮಾಡುತ್ತಿದ್ದಾರೆ.


ರಿಚರ್ಡ್ ಕೆಟಲ್‌ಬರೊ –ಟ್ವಿಟರ್ ಚಿತ್ರ


ಮರಾಯಸ್ ಎರಾಸ್ಮಸ್ –ಟ್ವಿಟರ್ ಚಿತ್ರ

ಹನುಮ ವಿಹಾರಿಗಿಲ್ಲ ಸ್ಥಾನ
ಟೆಸ್ಟ್ ಸರಣಿ: ಪ್ರಸಿದ್ಧ, ರಾಹುಲ್, ಮಯಂಕ್‌ಗೆ ಅವಕಾಶ

ನವದೆಹಲಿ (ಎಎಫ್‌ಪಿ): ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿಗೆ ಪ್ರಕಟಿಸಿದ ಭಾರತ ತಂಡದಲ್ಲಿ ಹನುಮ ವಿಹಾರಿ ಅವರಿಗೆ ಸ್ಥಾನ ಸಿಗಲಿಲ್ಲ. ವೇಗಿ ಪ್ರಸಿದ್ಧ ಕೃಷ್ಣ ಸೇರಿದಂತೆ ಕರ್ನಾಟಕದ ಮೂವರು ತಂಡದಲ್ಲಿದ್ದಾರೆ.

ಕಾನ್ಪುರದಲ್ಲಿ ನಡೆಯಲಿರುವ ಮೊದಲ ಟೆಸ್ಟ್‌ನಲ್ಲಿ ಅಜಿಂಕ್ಯ ರಹಾನೆ ತಂಡವನ್ನು ಮುನ್ನಡೆಸಲಿದ್ದು ಮುಂಬೈಯಲ್ಲಿ ನಡೆಯಲಿರುವ ಎರಡನೇ ಪಂದ್ಯಕ್ಕೆ ವಿರಾಟ್ ಕೊಹ್ಲಿ ಲಭ್ಯವಾಗಲಿದ್ದಾರೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಶುಕ್ರವಾರ ತಿಳಿಸಿದೆ.

ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ರೋಹಿತ್ ಶರ್ಮಾ ಮತ್ತು ರಿಷಭ್ ಪಂತ್ ಅವರಿಗೆ ಕೂಡ ವಿಶ್ರಾಂತಿ ನೀಡಲು ಮಂಡಳಿ ನಿರ್ಧರಿಸಿದ್ದು ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್, ವೇಗಿ ಮೊಹಮ್ಮದ್ ಸಿರಾಜ್ ಬೌಲಿಂಗ್ ವಿಭಾಗಕ್ಕೆ ಬಲ ತುಂಬಲಿದ್ದಾರೆ.


ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಸೆಣಸಿದ ನಂತರ ನ್ಯೂಜಿಲೆಂಡ್ ತಂಡ ನೇರವಾಗಿ ಭಾರತಕ್ಕೆ ಬರಲಿದೆ. ಉಭಯ ತಂಡಗಳು ಜೂನ್‌ನಲ್ಲಿ ಸೌತಾಂಪ್ಟನ್‌ನಲ್ಲಿ ನಡೆದಿದ್ದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಕೊನೆಯದಾಗಿ ಸೆಣಸಿದ್ದವು. ಆಗ ವಿರಾಟ್ ಕೊಹ್ಲಿ ನಾಯಕರಾಗಿದ್ದರು.

ನವೆಂಬರ್ 25ರಂದು ಟೆಸ್ಟ್ ಸರಣಿ ಆರಂಭವಾಗಲಿದೆ. ಅದಕ್ಕೂ ಮೊದಲು ಮೂರು ಟ್ವೆಂಟಿ–20 ಪಂದ್ಯಗಳಲ್ಲಿ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯಗಳು ನವೆಂಬರ್ 17, 19 ಮತ್ತು 21ರಂದು ನಡೆಯಲಿವೆ.

ಮೊದಲ ಟೆಸ್ಟ್‌ಗೆ ತಂಡ ಇಂತಿದೆ: ಅಜಿಂಕ್ಯ ರಹಾನೆ (ನಾಯಕ), ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಚೇತೇಶ್ವರ್ ಪೂಜಾರ (ಉಪನಾಯಕ), ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್), ಕೆ.ಎಸ್.ಭರತ್ (ವಿಕೆಟ್ ಕೀಪರ್), ರವೀಂದ್ರ ಜಡೇಜ, ರವಿಚಂದ್ರನ್ ಅಶ್ವಿನ್, ಅಕ್ಷರ್ ಪಟೇಲ್, ಜಯಂತ್ ಯಾದವ್, ಇಶಾಂತ್ ಶರ್ಮಾ, ಉಮೇಶ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ.


ಹನುಮ ವಿಹಾರಿ –ಎಎಫ್‌ಪಿ ಚಿತ್ರ


ಪ್ರಸಿದ್ಧ ಕೃಷ್ಣ –ರಾಯಿಟರ್ಸ್ ಚಿತ್ರ



ಬ್ಯಾಟಿಂಗ್ ಮೇಲೆ ಗಮನ ಕೇಂದ್ರೀಕರಿಸುವ ಸಲುವಾಗಿ ಏಕದಿನ ತಂಡದ ನಾಯಕತ್ವದಿಂದಲೂ ವಿರಾಟ್ ಕೊಹ್ಲಿ ವಿಶ್ರಾಂತಿ ಪಡೆದುಕೊಳ್ಳುವುದು ಉತ್ತಮ

ರವಿಶಾಸ್ತ್ರಿ ಭಾರತ ತಂಡದ ಮಾಜಿ ಕೋಚ್

ಕ್ರಿಕೆಟ್: ಮನೀಷ್ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಮ ಕ್ರಮಾಂಕದ ಬ್ಯಾಟರ್ ಮನೀಷ್ ಪಾಂಡೆ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯ ನಾಕೌಟ್ ಹಂತದಲ್ಲಿ ಕರ್ನಾಟಕ ತಂಡದ ನಾಯಕನಾಗಿ ಮುಂದುವರಿಯಲಿದ್ದಾರೆ.

ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯಗಳು ಇದೇ 16ರಂದು ನಡೆಯಲಿದ್ದು ದೆಹಲಿಯಲ್ಲಿ ಕರ್ನಾಟಕ ಮತ್ತು ಸೌರಾಷ್ಟ್ರ ತಂಡಗಳು ಮುಖಾಮುಖಿಯಾಗಲಿವೆ.

ಮನೀಷ್ ಪಾಂಡೆ ನೇತೃತ್ವದಲ್ಲಿ ತಂಡ 'ಬಿ' ಗುಂಪಿನಲ್ಲಿ ಆಡಿರುವ ಐದು ಪಂದ್ಯಗಳ ಪೈಕಿ ನಾಲ್ಕರಲ್ಲಿ ಜಯ ಗಳಿಸಿತ್ತು. ಮುಂಬೈ, ಬರೋಡ, ಛತ್ತೀಸ್‌ಗಡ ಹಾಗೂ ಸರ್ವಿಸಸ್ ಎದುರು ಜಯ ಗಳಿಸಿದ್ದ ತಂಡ ಕೊನೆಯ ಪಂದ್ಯದಲ್ಲಿ ಬಂಗಾಳಕ್ಕೆ ಏಳು ವಿಕೆಟ್‌ಗಳಿಂದ ಮಣಿದಿತ್ತು. ಆದರೆ ನಾಕೌಟ್ ಹಂತ ಪ್ರವೇಶಿಸುವ ತಂಡದ ಹಾದಿಗೆ ಇದು ಅಡ್ಡಿಯಾಗಿರಲಿಲ್ಲ.


ಕರ್ನಾಟಕ ತಂಡದ ಕೋಚ್ ಯರೇಗೌಡ (ಮಧ್ಯ) ಮತ್ತು ಬೌಲಿಂಗ್ ಕೋಚ್ ಎಸ್‌ಅರವಿಂದ ಅವರ ಜೊತೆ ನಾಯಕ ಮನೀಷ್ ಪಾಂಡೆ (ಬಲ) ಚರ್ಚೆಯಲ್ಲಿ ತೊಡಗಿರುವುದು –ಪ್ರಜಾವಾಣಿ ಚಿತ್ರ

ತಂಡ: ಮನೀಷ್ ಪಾಂಡೆ (ನಾಯಕ), ಆರ್.ಸಮರ್ಥ್, ಕೆ.ವಿ.ಸಿದ್ಧಾರ್ಥ್, ರೋಹನ್ ಕದಂ, ಅನಿರುದ್ಧ ಜೋಶಿ, ಅಭಿನವ್ ಮನೋಹರ್, ಕರುಣ್ ನಾಯರ್, ಬಿ.ಆರ್.ಶರತ್ (ವಿಕೆಟ್ ಕೀಪರ್), ಶ್ರೇಯಸ್ ಗೋಪಾಲ್, ಜೆ.ಸುಚಿತ್, ಪ್ರವೀಣ್ ದುಬೆ, ಕೆ.ಸಿ. ಕಾರ್ಯಪ್ಪ, ನಿಹಾಲ್ ಉಳ್ಳಾಲ್ (ವಿಕೆಟ್ ಕೀಪರ್), ಕೌಶಿಕ್ ವಿ, ಪ್ರತೀಕ್ ಜೈನ್, ವೈಶಾಖ್ ವಿ, ದರ್ಶನ್ ಎಂ.ಬಿ, ಆದಿತ್ಯ ಸೋಮಣ್ಣ, ರಿತೇಶ್ ಭಟ್ಕಳ, ವಿದ್ಯಾಧರ ಪಾಟೀಲ. ಕೋಚ್: ಯರೇಗೌಡ, ಬೌಲಿಂಗ್ ಕೋಚ್: ಎಸ್.ಅರವಿಂದ್, ಫೀಲ್ಡಿಂಗ್ ಕೋಚ್: ದೀಪಕ್ ಚೌಗುಲೆ.

ಫುಟ್‌ಬಾಲ್: ಕೊಡಗು, ಎಫ್‌ಸಿಬಿಯು ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ಕೊಡಗು ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ 3–0ಯಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಮಣಿಸಿತು.

ವಿಜೇತ ತಂಡದ ಪರ ಶಶಿಕುಮಾರ್ 38ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶದಲ್ಲಿ ಗೋಲಿನ ಖಾತೆ ತೆರೆದರು. ಸಂಗಯ್ ದುಂಡಲ್ ಭುಟಿಯಾ 40ನೇ ನಿಮಿಷದಲ್ಲಿ ಯಶಸ್ಸು ಸಾಧಿಸುವ ಮೂಲಕ ಮುನ್ನಡೆಯನ್ನು 2–0ಕ್ಕೆ ಹೆಚ್ಚಿಸಿದರು. 49ನೇ ನಿಮಿಷದಲ್ಲಿ ಗೋಲು ದಾಖಲಿಸಿದ ಸಂದೀಪ್ ಎ. ತಂಡದ ಗೆಲುವನ್ನು ಬಹುತೇಕ ಖಚಿತಪಡಿಸಿದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 1–0ಯಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ವಿರುದ್ಧ ಗೆದ್ದಿತು. ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದ ಕಿನ್ಸಾಯ್‌ಲಾಂಗ್ ಖೊಂಗ್‌ಸಿಟ್ 45ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು 3–0ಯಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಮೊಹಮ್ಮದ್ ರಜಾಕ್ (48ನೇ ನಿಮಿಷ), ಸರೋಜ್ ರಾಯ್ (73ನೇ ನಿಮಿಷ) ಹಾಗೂ ಚನಂಬಮ್ ಜೊತಿನ್ ಸಿಂಗ್ (77ನೇ ನಿಮಿಷ) ವರು ಎಎಸ್‌ಸಿ ತಂಡದ ಪರ ಕಾಲ್ಚಳಕ ತೋರಿದರು.


ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡದ ವಿ.ರಾಮಜಯಮ್ (ಎಡ) ಹಾಗೂ ಕೊಡಗು ಎಫ್‌ಸಿಯ ಸಂಗಯ್ ದುಂಡಲ್ ಭುಟಿಯಾ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಮಹಿಳಾ ಕ್ರಿಕೆಟ್
ಭಾರತಕ್ಕೆ ಆಸ್ಟ್ರೇಲಿಯಾ ಮೊದಲ ಎದುರಾಳಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮುಂದಿನ ವರ್ಷ ಇಲ್ಲಿ ನಿಗದಿಯಾಗಿರುವ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಮೊದಲ ಬಾರಿ ಮಹಿಳಾ ಕ್ರಿಕೆಟ್‌ಅನ್ನು ಆಡಿಸಲಾಗುತ್ತಿದ್ದು, ಭಾರತ ತಂಡಕ್ಕೆ ಆರಂಭಿಕ ಪಂದ್ಯದಲ್ಲಿ ಆಸ್ಟ್ರೇಲಿಯಾ ಸವಾಲು ಎದುರಾಗಿದೆ.

ಉಭಯ ತಂಡಗಳ ನಡುವೆ ಜುಲೈ 29ರಂದು ಈ ಪಂದ್ಯ ನಡೆಯಲಿದ್ದು, ಆಗಸ್ಟ್ ಏಳರಂದು ಫೈನಲ್ ಹಣಾಹಣಿ ನಿಗದಿಯಾಗಿದೆ ಎಂದು ಟೂರ್ನಿಯ ಆಯೋಜಕರು ಶುಕ್ರವಾರ ತಿಳಿಸಿದ್ದಾರೆ.

ಟಿ20 ಮಾದರಿಯೊಂದಿಗೆ ಮಹಿಳಾ ಕ್ರಿಕೆಟ್ ಕಾಮನ್‌ವೆಲ್ತ್ ಗೇಮ್ಸ್‌ಗೆ ಪದಾರ್ಪಣೆ ಮಾಡುತ್ತಿದೆ. ಕ್ವಾಲಾಲಂಪುರದಲ್ಲಿ ನಡೆದ 1998ರ ಆವೃತ್ತಿಯಲ್ಲಿ ಕೊನೆಯ ಬಾರಿ ಪುರುಷರ ಕ್ರಿಕೆಟ್‌ಅನ್ನು ಆಡಿಸಲಾಗಿತ್ತು.

'2022ರ ಜುಲೈ 2ರಿಂದ ಎಡ್ಜ್‌ಬಾಸ್ಟನ್ ಮಹಿಳಾ ಟಿ20 ಪಂದ್ಯಗಳು ನಡೆಯಲಿದ್ದು, ಆಗಸ್ಟ್ 7ರಂದು ಕಂಚು ಮತ್ತು ಚಿನ್ನದ ಪದಕದ ಸುತ್ತಿನ ಪಂದ್ಯಗಳು ನಿಗದಿಯಾಗಿವೆ' ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ತಿಳಿಸಿದೆ.

ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಭಾರತ ಎದುರಿಸಲಿದೆ. ಇದೇ ದಿನಾಂಕದಂದು ಪಾಕಿಸ್ತಾನವು ವೆಸ್ಟ್ ಇಂಡೀಸ್‌ನ ಬಾರ್ಬಡಾಸ್ ವಿರುದ್ಧ ಆಡಲಿದೆ. ಜುಲೈ 31ರಂದು ಪಾಕಿಸ್ತಾನ ವಿರುದ್ಧ ಭಾರತ ಸೆಣಸಲಿದ್ದು, ಆಗಸ್ಟ್ 3ರಂದು ಪಾಕಿಸ್ತಾನ–ಆಸ್ಟ್ರೇಲಿಯಾ ಪಂದ್ಯ ನಡೆಯಲಿದೆ.


ಭಾರತ ಮಹಿಳಾ ಕ್ರಿಕೆಟ್ ತಂಡ– ಪಿಟಿಐ ಚಿತ್ರ

ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕೆ
ಫೆಡರರ್ ದಾಖಲೆಯತ್ತ ಜೊಕೊವಿಚ್ ಹೆಜ್ಜೆ

ರೋಮ್ (ಎಎಫ್‌ಪಿ): ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ದಾಖಲೆ ಮುರಿಯುವತ್ತ ಚಿತ್ತ ನೆಟ್ಟಿರುವ ಸರ್ಬಿಯಾದ ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಅವರು ಮುಂದಿನ ವಾರ ಆರಂಭವಾಗಲಿರುವ ಎಟಿಪಿ ಟೂರ್ನಿಯಲ್ಲಿ ಕಣಕ್ಕೆ ಇಳಿಯಲು ಸಜ್ಜಾಗಿದ್ದಾರೆ.

ವರ್ಷದ ಎಲ್ಲ ನಾಲ್ಕು ಗ್ರ್ಯಾಂಡ್‌ಸ್ಲಾಂ ಟೂರ್ನಿಗಳ ಚಾಂಪಿಯನ್ ಆಗುವತ್ತ ಹೆಜ್ಜೆ ಇರಿಸಿದ್ದ ಜೊಕೊವಿಚ್ ಕೊನೆಗೆ ವೈಫಲ್ಯ ಕಂಡಿದ್ದರು. ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ಕನಸು ಕೂಡ ನನಸು ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ವಿಶ್ವ ಕ್ರಮಾಂಕದಲ್ಲಿ ಅಗ್ರ ಸ್ಥಾನವನ್ನು ಉಳಿಸಿಕೊಂಡಿರುವ ಅವರು ಸತತ ಏಳನೇ ಬಾರಿ ಮೊದಲ ಸ್ಥಾನದಲ್ಲಿ ಮುಂದುವರಿದು ದಾಖಲೆ ನಿರ್ಮಿಸಿದ್ದರು.

ಆಸ್ಟ್ರೇಲಿಯನ್ ಓಪನ್, ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಜೊಕೊವಿಚ್ ಅಮೆರಿಕ ಓಪನ್‌ನಲ್ಲಿ ಮುಗ್ಗರಿಸಿದ್ದರು. ಫೈನಲ್‌ನಲ್ಲಿ ಅವರನ್ನು ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಮಣಿಸಿದ್ದರು. ಆದರೆ ರೋಜರ್ ಫೆಡರರ್ ಮತ್ತು ರಫೆಲ್ ನಡಾಲ್ ಅವರ ದಾಖಲೆ ಸಮಗಟ್ಟಲು ಅವರಿಗೆ ಸಾಧ್ಯವಾಗಿತ್ತು. ಮೂವರು ಕೂಡ 20 ಗ್ರ್ಯಾಂಡ್‌ಸ್ಲಾಂ ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾರೆ. ಅಮೆರಿಕ ಓಪನ್‌ನಲ್ಲಿ ಜಯಿಸಿದ್ದರೆ 21 ಪ್ರಶಸ್ತಿ ಗೆದ್ದ ದಾಖಲೆ ಅವರದಾಗುತ್ತಿತ್ತು.

ಈಗ ಫೆಡರರ್ ಅವರ ಮತ್ತೊಂದು ದಾಖಲೆಯನ್ನು ಸಮಗಟ್ಟುವ ಕನಸು ಹೊತ್ತುಕೊಂಡು ಜೊಕೊವಿಚ್ ಕಣಕ್ಕೆ ಇಳಿಯಲಿದ್ದಾರೆ. ಎಟಿಪಿ ಫೈನಲ್ಸ್‌ನ ಆರು ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಫೆಡರರ್ ದಾಖಲೆ ಹೊಂದಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಡ್ಯಾನಿಯಲ್ ಮೆಡ್ವೆಡೆವ್ ಅವರನ್ನು ಕಳೆದ ವಾರ ನಡೆದ ಪ್ಯಾರಿಸ್ ಮಾಸ್ಟರ್ಸ್ ಫೈನಲ್‌ನಲ್ಲಿ ಸೋಲಿಸಿರುವ ಜೊಕೊವಿಚ್ ಈಗ ಭರವಸೆಯ ಅಲೆಯಲ್ಲಿದ್ದಾರೆ.

ಸ್ಟೆಫನೊಸ್ ಸಿಟ್ಸಿಪಾಸ್, ಆ್ಯಂಡ್ರೆ ರುಬ್ಲೆವ್ ಮತ್ತು ಕಾಸ್ಪರ್ ರೂಡ್ ಅವರೊಂದಿಗೆ ಹಸಿರು ಗುಂಪಿನಲ್ಲಿ ಜೊಕೊವಿಚ್ ಸ್ಥಾನ ಗಳಿಸಿದ್ದಾರೆ. ವಿಶ್ವದ ಅಗ್ರ ಕ್ರಮಾಂಕದ ಎಂಟು ಮಂದಿಯನ್ನು ತಲಾ ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿದ್ದು ಪ್ರತಿ ಗುಂಪಿನಿಂದ ಇಬ್ಬರು ಸೆಮಿಫೈನಲ್‌ಗೆ ಅರ್ಹತೆ ಗಳಿಸಲಿದ್ದಾರೆ.

2015ರಿಂದ ಈ ವರೆಗೆ ಜೊಕೊವಿಚ್ ಎಟಿಪಿ ಫೈನಲ್ಸ್‌ನಲ್ಲಿ ಪ್ರಶಸ್ತಿ ಗಳಿಸಿಲ್ಲ. ಈ ಬಾರಿ ಫೆಡರರ್, ನಡಾಲ್ ಟೂರ್ನಿಯಲ್ಲಿ ಆಡುತ್ತಿಲ್ಲ. ಆದ್ದರಿಂದ ಅವರ ಹಾದಿ ಸುಗಮವಾಗಿದೆ. ಪ್ರಶಸ್ತಿ ಗೆದ್ದು ವರ್ಷದ ಕೊನೆಯ ಟೂರ್ನಿಯನ್ನು ಸ್ಮರಣೀಯವಾಗಿಸಿಕೊಳ್ಳಲು ಅವರು ಪ್ರಯತ್ನಿಸಲಿದ್ದಾರೆ.


ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಜಗರೂಪ್ ಮನವಿಗೆ ಸ್ಪಂದಿಸಿ: ಹೈಕೋರ್ಟ್

ನವದೆಹಲಿ: ದ್ರೋಣಾಚಾರ್ಯ ಪ್ರಶಸ್ತಿಗೆ ತಮ್ಮನ್ನು ಆಯ್ಕೆ ಮಾಡದೇ ಇರುವುದನ್ನು ಪ್ರಶ್ನಿಸಿರುವ ಕುಸ್ತಿ ಕೋಚ್ ಜಗರೂಪ್ ಸಿಂಗ್ ರಾಠಿ ಅವರ ಮನವಿಗೆ ಸ್ಪಂದಿಸುವಂತೆ ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಶುಕ್ರವಾರ ಸೂಚಿಸಿದೆ.

ಜೀವಮಾನ ಸಾಧಕರಿಗೆ ನೀಡುವ ಪ್ರಶಸ್ತಿ ಪಟ್ಟಿಯಿಂದ ತಮ್ಮ ಹೆಸರು ಕೈಬಿಟ್ಟದ್ದನ್ನು ಪ್ರಶ್ನಿಸಿ 79 ವರ್ಷ ವಯಸ್ಸಿನ ಜಗರೂಪ್ ಅವರು ಕೇಂದ್ರ ಕ್ರೀಡಾ ಇಲಾಖೆಗೆ ಸವಾಲು ಹಾಕಿದ್ದರು. ನ್ಯಾಯಾ ಲಯಕ್ಕೂ ಮೊರೆ ಹೋಗಿದ್ದರು. ಇದಕ್ಕೆ ಸ್ಪಂದಿಸಿರುವ ನ್ಯಾ ಯಮೂರ್ತಿ ರೇಖಾ ಪಲ್ಲಿ ಅವರು ಮೂರು ವಾರಗಳ ಒಳಗೆ ಉತ್ತರ ನೀಡುವಂತೆ ಸೂಚಿಸಿ ಇಲಾಖೆಗೆ ನೋಟಿಸ್ ಜಾರಿ ಮಾಡಿದ್ದಾರೆ. ನ್ಯಾಯಾಲಯ ಜನವರಿ 27ರಂದು ಪ್ರಕರಣದ ಮುಂದಿನ ವಿಚಾರಣೆ ನಡೆಸಲಿದೆ. ದ್ರೋಣಾಚಾರ್ಯ ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ನವೆಂಬರ್ 2ರಂದು ಕ್ರೀಡಾ ಇಲಾಖೆ ಬಿಡುಗಡೆ ಮಾಡಿತ್ತು. ಇದರಲ್ಲಿ ಜಗ ರೂಪ್ ಅವರ ಹೆಸರು ಇರಲಿಲ್ಲ. ಆಯ್ಕೆ ಸಮಿತಿಯ ಕಣ್ಣಿಗೆ ಬಿದ್ದರೂ ಸರ್ಕಾರ ಪಟ್ಟಿಯಿಂದ ಹೆಸರು ಕೈಬಿಟ್ಟಿದೆ ಎಂದು ಜಗರೂಪ್ ದೂರಿದ್ದರು.

ರಾಠಿ 1984ರ ಒಲಿಂಪಿಕ್ಸ್‌ನಲ್ಲಿ ಭಾರತ ತಂಡದ ತರಬೇತುದಾರರಾಗಿದ್ದರು.

ಟೆನಿಸ್: ಪಾಲ್‌ಗೆ ಮಣಿದ ಆ್ಯಂಡಿ

ಸ್ಟಾಕ್‌ಹೋಮ್ (ಎಪಿ): ಬ್ರಿಟನ್ ಆಟಗಾರ ಆ್ಯಂಡಿ ಮರ್ರೆಗೆ ಸೋಲುಣಿಸಿದ ಅಮೆರಿಕದ ಟಾಮಿ ಪಾಲ್ ಅವರು ಸ್ಟಾಕ್‌ಹೋಮ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ತಲುಪಿದರು.

ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಟಾಮಿ 6-2, 3-6, 6-3ರಿಂದ ವಿಶ್ವ ಕ್ರಮಾಂಕದಲ್ಲಿ ಈ ಹಿಂದೆ ಅಗ್ರಸ್ಥಾನದಲ್ಲಿದ್ದ ಮರ್ರೆ ಎದುರು ಜಯಿಸಿದರು. ಎರಡು ಬಾರಿ ವಿಂಬಲ್ಡನ್ ಚಾಂಪಿಯನ್ ಆಗಿರುವ ಬ್ರಿಟನ್ ಆಟಗಾರನಿಗೆ 2019ರ ಬಳಿಕ ಟೂರ್ನಿಯೊಂದರ ನಾಲ್ಕರ ಘಟ್ಟ ತಲುಪುವ ಅವಕಾಶ ಕೈ ತಪ್ಪಿತು.

ಸೆಮಿಫೈನಲ್‌ನಲ್ಲಿ ಪಾಲ್ ಅವರು ತಮ್ಮದೇ ದೇಶದ ಫ್ರಾನ್ಸಿಸ್ ಟೈಫೊಯ್ ಎದುರು ಸೆಣಸಲಿದ್ದಾರೆ.

ವಿಶ್ವಕಪ್ ಫುಟ್‌ಬಾಲ್ ಅರ್ಹತೆಯ ಸನಿಹ ಪೋರ್ಚುಗಲ್, ಸ್ಪೇನ್

ಡಬ್ಲಿನ್ (ರಾಯಿಟರ್ಸ್): ಐರ್ಲೆಂಡ್ ಎದುರು ಗೋಲುರಹಿತ ಡ್ರಾ ಸಾಧಿಸಿದರೂ ಪೋರ್ಚುಗಲ್ ತಂಡವು ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆಯುವಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಿತು.

ಅರ್ಹತಾ ಟೂರ್ನಿಯ 'ಎ' ಗುಂಪಿನ ಅಂತಿಮ ಪಂದ್ಯದಲ್ಲಿ ಸರ್ಬಿಯಾ ಎದುರು ಕಣಕ್ಕಿಳಿಯಲಿರುವ ಪೋರ್ಚುಗಲ್, ಕನಿಷ್ಠ ಒಂದು ಪಾಯಿಂಟ್ ಗಳಿಸಿದರೂ ವಿಶ್ವಕಪ್ ಟಿಕೆಟ್ ಗಿಟ್ಟಸಲಿದೆ. 'ಬಿ' ಗುಂಪಿನ ಪಂದ್ಯದಲ್ಲಿ ಗ್ರೀಸ್ ಎದುರು ಗೆದ್ದ ಸ್ಪೇನ್ ಕೂಡ ಅರ್ಹತೆಗೆ ಸಮೀಪಿಸಿತು. ಸ್ಪೇನ್ ತಂಡದ ಪ್ಯಾಬ್ಲೊ ಸರಾಬಿಯಾ 26ನೇ ನಿಮಿಷದಲ್ಲಿ ಪೆನಾಲ್ಟಿಯಲ್ಲಿ ದೊರೆತ ಅವಕಾಶವನ್ನು ಗೋಲಾಗಿಸಿದರು.


ಪ್ಯಾಬ್ಲೊ ಸರಾಬಿಯಾ– ಎಎಫ್‌ಪಿ ಚಿತ್ರ

ಇದೇ ಗುಂಪಿನಲ್ಲಿ ಜಾರ್ಜಿಯಾ ಎದುರು 0–2ರಿಂದ ಸೋಲಭವಿಸಿದಸ್ವೀಡನ್ ತಂಡದ ವಿಶ್ವಕಪ್ ಪ್ರವೇಶದ ಅರ್ಹತೆಗೆ ಬಹುದೊಡ್ಡ ಹೊಡೆತ ನೀಡಿತು. ಜಾರ್ಜಿಯಾದ ಕ್ವಾರಾತ್ಸ್‌ಕೆಲಿಯಾ 61 ಮತ್ತು 77ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು.

ಪುಣೆ ರೇಸ್
ನಾರ್ತ್ ಸ್ಟಾರ್ ಗೆಲ್ಲುವ ನಿರೀಕ್ಷೆ

ಮೈಸೂರು ರೇಸ್ ಕ್ಲಬ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾರ್ತ್ ಸ್ಟಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ;

1ನೇ ರೇಸ್: ವೇಇನ್ 3, ಎಕ್ಸಾಟಿಕ್ 2, ಸೀಸನ್ಸ್ ಗ್ರೀಟಿಂಗ್ಸ್ 1
2ನೇ ರೇಸ್: ನಾರ್ತ್ ಸ್ಟಾರ್ 3, ಟ್ರೂ ಎಪಿಕ್ 2
3ನೇ ರೇಸ್: ಟೈಮ್‌ಲೆಸ್ ಡೀಡ್ಸ್ 1, ವಿಸ್ಪರಿಂಗ್ ಕ್ವೀನ್ 7, ಹಾನರಬಲ್ ಐಸ್ 4
4ನೇ ರೇಸ್: ಫ್ಲೆಮಿಂಗ್ ಲಂಬಾರ್ಗಿನಿ 1, ರೆವೊಲ್ಯೂಷನ್ 4
5ನೇ ರೇಸ್: ಎಂಪವರ್ 1, ಲೆಟೊ 6, ಗ್ಯಾಲಪಿಂಗ್ ಗ್ಲೋರಿ 4
6ನೇ ರೇಸ್: ಬೆಲೆನಸ್ 1, ಪ್ರೈಡ್ಸ್ ಏಂಜೆಲ್ 4, ಜೆಟ್ ಫೈರ್ 3
7ನೇ ರೇಸ್: ಅಗಾಸ್ಟಿನಿ ಕಾರಾಷಿ 1, ಲಾರ್ಡ್ ಅಂಡ್ ಮಾಸ್ಟರ್ 3, ಮೈ ಟ್ರೆಷರ್ 9
8ನೇ ರೇಸ್: ಆನ್ ವಾ ಡ್ಯಾನ್ಸರ್ 2, ಸಂದ್ರಾಸ್ ಸೀಕ್ರೆಟ್ 7, ಬ್ಲ್ಯಾಕ್ ಚೆರಿ 1

ಉತ್ತಮ ಬೆಟ್: ಟೈಮ್‌ಲೆಸ್ ಡೀಡ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7

ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್: ಸಂಗೀತಾಗೆ ಚಿನ್ನ

ಗೀತಾ ಸವಾಲು ಮೀರಿದ ಸರಿತಾ

ಗೊಂಡಾ, ಉತ್ತರಪ್ರದೇಶ (ಪಿಟಿಐ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೀತಾ ಪೋಗಟ್ ಅವರನ್ನು ಚಿತ್ ಮಾಡಿದ ಸರಿತಾ ಮೋರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಶುಕ್ರವಾರ ನಡೆದ 59 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ರೈಲ್ವೇಸ್‌ನ ಸರಿತಾ ಅವರಿಗೆ 8–0ಯಿಂದ ಹರಿಯಾಣದ ಗೀತಾ ಎದುರು ಗೆಲುವು ಒಲಿಯಿತು. ಪ್ರಮುಖ ಸ್ಪರ್ಧಿಗಳು ಎನಿಸಿಕೊಂಡಿದ್ದ ದಿವ್ಯಾ ಕಾಕ್ರನ್ ಹಾಗೂ ಸಾಕ್ಷಿ ಮಲಿಕ್ ಚಿನ್ನದ ಪದಕದಿಂದ ವಂಚಿತರಾದರೆ, ಸಂಗೀತಾ ಪೋಗಟ್ ಹಾಗೂ ಪಿಂಕಿ ವಿಜೇತರಾದರು.


ಸರಿತಾ ಮೊರ್ –ಟ್ವಿಟರ್ ಚಿತ್ರ

ಮೂರು ಮಂದಿ ವಿಶ್ವಚಾಂಪಿಯನ್‌ಷಿಪ್ ಪದಕ ವಿಜೇತರು ಇದ್ದ 59 ಕೆಜಿ ವಿಭಾಗದ ಅತ್ಯಂತ ಸವಾಲಿನ ವಿಭಾಗಗಳಲ್ಲಿ ಒಂದಾಗಿತ್ತು. 2018ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಪೂಜಾ ದಂಡಾ ಈ ವಿಭಾಗದಲ್ಲೇ ಇದ್ದರು. ಗೀತಾ 2012ರ ಆವೃತ್ತಿಯಲ್ಲಿ ಕಂಚು ಗೆದ್ದಿದ್ದರು.

ತಾಯ್ತನದ ವಿರಾಮ ತೆಗೆದುಕೊಂಡಿದ್ದ ಗೀತಾ ಮೂರು ವರ್ಷಗಳ ಬಳಿಕ ಕಣಕ್ಕಿಳಿದಿದ್ದರು. ಉತ್ತಮ ಸಾಮರ್ಥ್ಯ ತೋರಿದರೂ ಫೈನಲ್‌ನಲ್ಲಿ ಎಡವಿದರು. ಸರಿತಾ ತಾನು ಆಡಿದ ಮೂರೂ ಬೌಟ್‌ಗಳಲ್ಲಿ ಪಾರಮ್ಯ ಮೆರೆದರು. ಪೂಜಾ ಮಾತ್ರ ಅವರಿಗೆ ಸ್ವಲ್ಪ ಪ್ರತಿರೋಧ ತೋರಿದರು.

2012ರ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತೆ ಗೀತಾ ಎದುರು, ಚಿನ್ನದ ಪದಕದ ಸುತ್ತಿನಲ್ಲಿ ಸರಿತಾ ಚುರುಕಿನ ನಡೆಗಳ ಮೂಲಕ ಹೆಚ್ಚು ಆಕ್ರಮಣಕಾರಿಯಾದರು. ಈ ಹಂತದಲ್ಲಿ ಗೀತಾ


ಸಂಗೀತಾ ಪೋಗಟ್

ರಕ್ಷಣಾ ತಂತ್ರಗಳಿಗೆ ಮೊರೆ ಹೋಗಿದ್ದು ಮುಳುವಾಯಿತು. ಬೌಟ್ ಮೇಲಿನ ಹಿಡಿತವನ್ನು ಬಿಗಿಗೊಳಿಸುತ್ತಲೇ ಸಾಗಿದ ಸರಿತಾ ಪಾಯಿಂಟ್ಸ್ ಹೆಚ್ಚಿಸಿಕೊಂಡರು.

2017ರಲ್ಲಿ ಕೊನೆಯ ಬಾರಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದ ಗೀತಾ ಅವರು ಸರಿತಾ ಎದುರು ಗೆದ್ದು ಚಿನ್ನ ತಮ್ಮದಾಗಿಸಿಕೊಂಡಿದ್ದರು.

ಗೀತಾ ಅವರ ಕಿರಿಯ ಸಹೋದರಿ ಸಂಗೀತಾ 62 ಕೆಜಿ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಇದೇ ವಿಭಾಗದಲ್ಲಿ ಸಾಕ್ಷಿ ಮಲಿಕ್ 1–6ರಿಂದ ಮನೀಷಾ ಎದುರು ಮಣಿದರು. 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತೆ ದಿವ್ಯಾ ಕಾಕ್ರನ್ ಅವರು 72 ಕೆಜಿ ವಿಭಾಗದಲ್ಲಿ ಪಿಂಕಿ ಅವರಿಂದ ಸೋತರು. ಈ ವಿಭಾಗದ ಚಿನ್ನದ ಪದಕವು ಪಿಂಕಿ ಅವರ ಪಾಲಾಯಿತು. ಕುಲ್ವಿಂದರ್ ಬೆಳ್ಳಿ ಪದಕ ಗೆದ್ದುಕೊಂಡರು.

50 ಕೆಜಿ ವಿಭಾಗದಲ್ಲಿ ಶಿವಾನಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಜಿಮ್ನಾಸ್ಟಿಕ್ಸ್: ರಾಜ್ಯ ತಂಡದಲ್ಲಿ ಅಭಿಷೇಕ್, ದಾನೇಶ್ವರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ಜಿಲ್ಲೆಯ ಅಭಿಷೇಕ್ ಟಿ.ಎ ಮತ್ತು ಧಾರವಾಡದ ದಾನೇಶ್ವರಿ ಅವರು ಜಮ್ಮುವಿನಲ್ಲಿ ಇದೇ 22ರಿಂದ ನಡೆಯಲಿರುವ ರಾಷ್ಟ್ರೀಯ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ ರಾಜ್ಯ ತಂಡಗಳನ್ನು ಪ್ರತಿನಿಧಿಸಲಿದ್ದಾರೆ.

ಜಿಮ್ನಾಸ್ಟಿಕ್ಸ್ ಸಂಸ್ಥೆ ಆಶ್ರಯದಲ್ಲಿ ನಗರದಲ್ಲಿ ನಡೆದ ಆಯ್ಕೆ ಟ್ರಯಲ್ಸ್‌ನಲ್ಲಿ 17 ವರ್ಷದೊಳಗಿನವರ ವಿಭಾಗದಲ್ಲಿ ಅಭಿಷೇಕ್ 55.625 ಪಾಯಿಂಟ್ ಕಲೆಹಾಕಿ ಮೊದಲಿಗರಾದರು. 15 ವರ್ಷದೊಳಗಿನವರ ವಿಭಾಗದಲ್ಲಿ ದಾನೇಶ್ವರಿ 40.425 ಪಾಯಿಂಟ್ ಗಳಿಸಿದರು.

ತಂಡಗಳು: 17 ವರ್ಷದೊಳಗಿನವರು: ಅಭಿಷೇಕ್ (ತುಮಕೂರು), ಆದರ್ಶ್ ಕೆ.ಎನ್ (ಕೊಡಗು), ಇಕ್ಬಾಲ್ ಮರಡಗಿ (ಧಾರವಾಡ), ತ್ರಿಶೂಲ್ ಗೌಡ (ಬೆಂಗಳೂರು), ದರ್ಶನ್ ಡಿ.ಎಂ (ಕೊಡಗು); **15 ವರ್ಷದೊಳಗಿನವರು:**

ಮುಖ್ಯಾಂಶಗಳು
- ಬೆಂಗಳೂರಿನಲ್ಲಿ ನಡೆದ ಆಯ್ಕೆ ಟ್ರಯಲ್ಸ್
- ಖೇಲೊ ಇಂಡಿಯಾಗೂ ಆಟಗಾರರ ಆಯ್ಕೆ

ದಾನೇಶ್ವರಿ (ಧಾರವಾಡ), ಅಭಿಮಯ ಮಾನೆ (ಧಾರವಾಡ), ಆಹನ ಶರ್ಮಾ (ಬೆಂಗಳೂರು), ಅಂಜಲಿ ರಾಘವನ್ (ಬೆಂಗಳೂರು), ಸೋನಿಕಾ ಗೌಡ (ಬೆಂಗಳೂರು).

15 ವರ್ಷದೊಳಗಿನವರ ರಿಥಮಿಕ್ ಜಿಮ್ನಾಸ್ಟಿಕ್ಸ್: ಶ್ರೇಯಾ ಬಿ, ರೇವತಿ, ವಾರುಣಿ (ಎಲ್ಲರೂ ಬೆಂಗಳೂರು).

ಖೇಲೊ ಇಂಡಿಯಾ ಆಯ್ಕೆ; ಆರ್ಟಿಸ್ಟಿಕ್: ರಂಗನಾಥ, ಚಿರಂತ್, ಶಾಶ್ವತ್, ಕಿರಣ್, ಜ್ಯೇಷ್ಠ, ಗೌರಿ ಶಿಂಧೆ, ನೂಪುರ ಹೊಳ್ಳ, ರಿಷ್ಯಾ; ರಿಥಮಿಕ್: ರಿಯಾ ಬನ್ಸಾಲಿ, ಕೀರ್ತನಾ, ರಿಯಾ ಬಾಫ್ನಾ, ಪ್ರಾರ್ಥನಾ.

ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿ 24ರಂದು ಆರಂಭ

ಆಟಗಾರರಲ್ಲಿ ಮೌಲ್ಯಕ್ಕೆ ಆದ್ಯತೆ: ರೀಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೀನಿಯರ್ ತಂಡದ ಆಟಗಾರರು ಹೊಂದಿರುವ ಮೌಲ್ಯಗಳನ್ನು ಜೂನಿಯರ್ ತಂಡಕ್ಕೂ ವರ್ಗಾಯಿಸಲು ಪ್ರಯತ್ನಿಸುವೆ' ಎಂದು ಭಾರತ ಹಾಕಿ ತಂಡದ ಮುಖ್ಯ ಕೋಚ್ ಗ್ರಹಾಂ ರೀಡ್ ಹೇಳಿದ್ದಾರೆ.

ಮುಂಬರುವ ಎಫ್‌ಐಎಚ್ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಗೆ ಅವರು ಜೂನಿಯರ್ ತಂಡದ ಮೇಲ್ವಿಚಾರಕರಾಗಿದ್ದು ಶುಕ್ರವಾರ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

'ಜೂನಿಯರ್ ತಂಡಕ್ಕೆ ನಾನು 'ಸಂಬಂಧಿ ಕೋಚ್' ಮಾತ್ರ. ಹಾಲಿ ಚಾಂಪಿಯನ್ ಆಗಿರುವ ತಂಡಕ್ಕೆ ಪ್ರಶಸ್ತಿ ಉಳಿಸಿಕೊಳ್ಳಲು ಹೆಚ್ಚಿನ ಮಾರ್ಗದರ್ಶನ ನೀಡುವೆ' ಎಂದು ರೀಡ್ ನುಡಿದರು.

2016ರಲ್ಲಿ ಲಖನೌನಲ್ಲಿ ನಡೆದ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ನವೆಂಬರ್ 24ರಿಂದ ಒಡಿಶಾದ ಭುವನೇಶ್ವರದಲ್ಲಿ ನಡೆಯಲಿರುವ ಈ ಬಾರಿಯ ಟೂರ್ನಿಯ ಮೊದಲ ಪಂದ್ಯದಲ್ಲಿ ಫ್ರಾನ್ಸ್ ತಂಡವನ್ನು ವಿವೇಕ್ ಸಾಗರ್ ಪ್ರಸಾದ್ ನಾಯಕತ್ವದ ಭಾರತವು ಎದುರಿಸಲಿದೆ.


ಕೆನಡಾ ತಂಡದಲ್ಲಿ 'ಬಿಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ರಿ ಬಿ ಲೀಗ್‌ನಲ್ಲಿ ಗಮನ ಸೆಳೆದಿರುವ ಪಂಜಾಬ್‌ನ ಬಿಕ್ರಂಜೀತ್ ಗಿಲ್ ಅವರು 'ಫಿಭಾ 3x3 ಅಮೆರಿಕಪ್' ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಆಡುವ ಕೆನಡಾ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. ಟೂರ್ನಿ ಅಮೆರಿಕದ ಮಿಯಾಮಿಯಲ್ಲಿ ನಡೆಯಲಿದೆ.

'ಬಿಕ್' ಎಂದೇ ಕರೆಯಲಾಗುವ, 6.7 ಅಡಿ ಎತ್ತರದ ಬಿಕ್ರಂಜೀತ್ ಗಿಲ್ 2019ರಲ್ಲಿ ಫಿಬಾ 3x3 ವಿಶ್ವಕಪ್‌ನ ಅರ್ಹತಾ ಸುತ್ತಿನಲ್ಲಿ ಆಡಿದ ತಂಡದಲ್ಲೂ ಇದ್ದರು ಎಂದು ಪ್ರಕಟಣೆ ತಿಳಿಸಿದೆ.

'ರಾಷ್ಟ್ರೀಯ ತಂಡವೊಂದರಲ್ಲಿ ಸ್ಥಾನ ಗಳಿಸುವುದು ಸಂತೋಷದ ವಿಷಯ. ತ್ರಿ ಬಿ ಎಲ್‌ನಲ್ಲಿ ಅವಕಾಶ ಕೊಟ್ಟಿದ್ದರಿಂದ ಈ ಹಂತಕ್ಕೆ ಬೆಳೆಯಲು ಸಾಧ್ಯವಾಗಿದೆ. ಈ ಲೀಗ್‌ನಲ್ಲಿ ಆಡಿದ್ದರಿಂದಾಗಿ ಫಿಬಾ ರ್‍ಯಾಂಕಿಂಗ್‌ನಲ್ಲಿ ಎತ್ತರಕ್ಕೇರಲು ಸಾಧ್ಯವಾಯಿತು. 3x3


ಬಿಕ್ರಂಜೀತ್ ಗಿಲ್

ಕ್ರೀಡೆಯ ಪರಿಣಿತ ಎಂದು ಕರೆಸಿಕೊಳ್ಳುವುದಕ್ಕೂ ಇದು ನೆರವಾಯಿತು' ಎಂದು ಬಿಕ್ರಂಜೀತ್ ಹೇಳಿದರು.

ಟೂರ್ನಿಯಲ್ಲಿ ಕೆನಡಾ ತಂಡ ಎರಡನೇ ಶ್ರೇಯಾಂಕ ಹೊಂದಿದ್ದು 'ಬಿ' ಗುಂಪಿನಲ್ಲಿ ಸ್ಥಾನ ಗಳಿಸಿದೆ. ಅರ್ಜೆಂಟೀನಾ ಕೂಡ ಇದೇ ಗುಂಪಿನಲ್ಲಿದ್ದು ಮತ್ತೊಂದು ತಂಡವನ್ನು ಅರ್ಹತಾ ಸುತ್ತಿನ ಪಂದ್ಯಗಳ ನಂತರ ನಿರ್ಧರಿಸಲಾಗುವುದು.

ನಿಶಾ ಹತ್ಯೆ: ಇಬ್ಬರ ಬಂಧನ

ನವದೆಹಲಿ (ಪಿಟಿಐ): ಹರಿಯಾಣದ ಸೋನೆ ಪತ್‌ನ ಸುಶೀಲ್ ಕುಸ್ತಿ ಅಕಾಡೆಮಿಯಲ್ಲಿ ನಡೆದಿದ್ದ ಕುಸ್ತಿಪಟು ನಿಶಾ ದಹಿಯಾ ಮತ್ತು ಸೋದರನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ದೆಹಲಿ ಪೊಲೀಸರು ದ್ವಾರಕಾದಲ್ಲಿ ಇಬ್ಬರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ರೋಹ್ಟಕ್ ನಿವಾಸಿ, ಕುಸ್ತಿ ಅಕಾಡೆಮಿಯಲ್ಲಿ ಕೋಚ್ ಆಗಿದ್ದ ಪವನ್ ಬರಾಕ್ ಮತ್ತು ಸಚಿನ್ ದಹಿಯಾ ಬಂಧಿತರು. ಹತ್ಯೆಗೆ ಬಳಸಿದ್ದ ರಿವಾಲ್ವರ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬುಧವಾರ ನಡೆದ ಗುಂಡಿನ ದಾಳಿಯಲ್ಲಿ ನಿಶಾ ಮತ್ತು ಸೋದರ ಸೂರಜ್ ಹತ್ಯೆಗೀಡಾಗಿದ್ದರೆ, ತಾಯಿ ಗಾಯಗೊಂಡಿದ್ದರು. ಘಟನೆ ಹಿನ್ನೆಲೆಯಲ್ಲಿ ಗ್ರಾಮಸ್ಥರು ಕುಸ್ತಿ ಅಕಾಡೆಮಿಗೆ ಬೆಂಕಿ ಹಚ್ಚಿದ್ದರು.



ಮನೆ ಬದಲಿಸಿ ಹೊರಡುವ ಮುನ್ನ...

ರೇಷ್ಮಾ

ಮನೆ ಬದಲಾವಣೆ, ಉದ್ಯೋಗ, ಓದು ಹೀಗೆ ಬೇರೆ ಬೇರೆ ಕಾರಣದಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾಗುತ್ತದೆ. ಬೇರೆ ಸ್ಥಳಕ್ಕೆ ಹೋಗುವ ಮೊದಲು ತಯಾರಿಗೆ ಎಷ್ಟು ದಿನ ಬೇಕು ಎಂಬುದು ಎಲ್ಲರಲ್ಲೂ ಮೂಡುವ ಪ್ರಶ್ನೆ. ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗುವುದು ಎಂದರೆ ಸುಮ್ಮನೆ ಕೈಬೀಸಿಕೊಂಡು ಹೋಗುವುದಲ್ಲ. ಬದಲಾಗಿ ಬಟ್ಟೆ-ಬರೆ, ಪಾತ್ರೆ-ಪಗಡೆ, ಸಾಮಾನು ಸರಂಜಾಮು ಎಲ್ಲವನ್ನೂ ಪ್ಯಾಕ್ ಮಾಡಿಕೊಂಡು ಹೊರಡಬೇಕು. ಆ ಕಾರಣಕ್ಕೆ ಹೊರಡಲು ಕೆಲವು ತಿಂಗಳು ಇರುವಾಗಲೇ ಎಲ್ಲವನ್ನೂ ತಯಾರಿ ಮಾಡಿಕೊಳ್ಳಬೇಕು. ಕೊನೆಯ ತಕ್ಷಣದಲ್ಲಿ ತಯಾರಿ ಮಾಡಿಕೊಳ್ಳುತ್ತೇವೆ ಎಂದರೆ ಖಂಡಿತ ಎಡವಿ ಬೀಳುತ್ತೇವೆ. ಆ ಕಾರಣಕ್ಕೆ ತಿಂಗಳಿಂದಲೇ ತಯಾರಿ ಮಾಡಿಕೊಳ್ಳುವುದು ಅವಶ್ಯ.



ಹೊರಡುವ ತಿಂಗಳ ಮೊದಲು

ಕೊನೆಯ ಕ್ಷಣದಲ್ಲಿ ಗಡಿಬಿಡಿ ಮಾಡುವ ಬದಲು ಹೊರಡಲು ಒಂದು ತಿಂಗಳು ಇರುವಾಗಲೇ ತಯಾರಿ ಮಾಡಿಕೊಳ್ಳುವುದು ಅಗತ್ಯ. ಒಂದು ತಿಂಗಳ ಮೊದಲಿನ ತಯಾರಿಗೆ ಹೀಗಿರಬೇಕು:

- ನೀವಿದ್ದ ಹಳೆಯ ಮನೆಗೆ ಸಂಬಂಧಿಸಿದ ಎಲ್ಲಾ ಬಿಲ್‌ಗಳನ್ನು ಪರಿಶೀಲಿಸಿ. ಹಿಂದಿನ ಎಲ್ಲಾ ಬಾಕಿಯನ್ನು ಪಾವತಿಸಿ. ಮನೆಗೆ ಸಂಬಂಧಿಸಿದ ಕೇಬಲ್, ಇಂಟರ್‌ನೆಟ್ ಮುಂತಾದವೆಲ್ಲವನ್ನೂ ಆ ತಿಂಗಳಿಗೆ ಅಂತ್ಯವಾಗುವಂತೆ ನೋಡಿಕೊಳ್ಳಿ.
- ಹೊರಡಲು ತಿಂಗಳು ಇರುವಾಗಲೇ ಪ್ಯಾಕರ್ಸ್ ಅಂಡ್ ಮೂವರ್ಸ್ ಬಗ್ಗೆ ಅವರ ವೆಬ್‌ಸೈಟ್‌ಗೆ ಹೋಗಿ ತಿಳಿದುಕೊಳ್ಳಿ. ಮೂರ್ನಾಲ್ಕು ವೆಬ್‌ಸೈಟ್‌ಗಳಲ್ಲಿ ಪ್ಯಾಕಿಂಗ್ ಅಂಡ್ ಮೂವರ್ಸ್ ಅಂದಾಜು ವೆಚ್ಚವನ್ನು ಪರಿಶೀಲಿಸಿ. ನಿಮ್ಮ ಮನೆಯ ಬಳಿಯ ಗಾಡಿಗೆ ಶಿಫ್ಟ್ ಮಾಡಲು ಜನವಿದ್ದರೆ ಅವರನ್ನೇ ಅವಲಂಬಿಸಿ.
- ಒಂದು ಪುಸ್ತಕದಲ್ಲಿ ನೀವು ಪ್ಯಾಕ್ ಮಾಡಿದ ಸಾಮಗ್ರಿಗಳ ಬಗ್ಗೆ ಬರೆದುಕೊಳ್ಳಿ. ನಂಬರ್ ಸಮೇತ ಒಂದೊಂದಾಗಿ ಬರೆದುಕೊಂಡರೆ ನಿಮ್ಮ ಪರಿಕರಗಳು ಕಳೆದು ಹೋಗುವ ಸಂದರ್ಭ ಕಡಿಮೆ.
- ನಿಮಗೆ ಬೇಡದ ಪೀಠೋಪಕರಣಗಳನ್ನು ಮಾರಾಟ ಮಾಡಿ. ಇದರಿಂದ ಸಾಗಿಸಲು ಸುಲಭವಾಗುತ್ತದೆ.
- ಸೂಪರ್ ಮಾರ್ಕೆಟ್ ಅಥವಾ ಹೈಪರ್ ಮಾರ್ಕೆಟ್‌ಗಳಿಗೆ ತೆರಳಿ ಒಂದಿಷ್ಟು ಎಲ್ಲಾ ಗಾತ್ರದ ಪೆಟ್ಟಿಗೆಗಳನ್ನು ತನ್ನಿ. ನಿಮ್ಮ ಸಾಮಗ್ರಿಗಳನ್ನು ಪೆಟ್ಟಿಗೆ ಒಳಗೆ ಜೋಡಿಸಿಕೊಳ್ಳುವುದು ಉತ್ತಮ. ಆದರೆ ಪೆಟ್ಟಿಗೆಯಲ್ಲಿ ವಸ್ತುಗಳನ್ನು ಇಡುವ ಮೊದಲು ಪೆಟ್ಟಿಗೆಯ ಬುಡ ಗಟ್ಟಿ ಇದೆಯೇ ಪರಿಶೀಲಿಸಿ. ಇಲ್ಲದಿದ್ದರೆ ಬಿದ್ದು ಹಾಳಾಗುವ ಸಂದರ್ಭಗಳು ಹೆಚ್ಚು.
- ಪೆಟ್ಟಿಗೆಗೆ ತುಂಬಿಸುವ ಮುನ್ನ ಬೇಕಾಗಿರುವುದಷ್ಟೇ ಆಯ್ಕೆ ಮಾಡಿ. ಯಾಕೆಂದರೆ ಸಾಗಿಸುವಾಗ ಅವರು ಎಲ್ಲದಕ್ಕೂ ಬಿಲ್ ಮಾಡುತ್ತಾರೆ. ಆ ಕಾರಣಕ್ಕೆ ಅನಾವಶ್ಯಕ ವಸ್ತಗಳನ್ನು ಪ್ಯಾಕ್ ಮಾಡಬೇಡಿ.

ಒಂದೂರಿನಿಂದ ಇನ್ನೊಂದೂರಿಗೆ ಹೊರಡುವುದು ಖುಷಿಯ ವಿಚಾರ. ಆದರೆ ಮನೆ ಬದಲಿಸಿ ಹೋಗುವುದು ಸುಲಭದ ಮಾತಲ್ಲ. ಹೊರಡುವ ತಿಂಗಳ ಮುಂಚೆಯೇ ತಯಾರಿ ಮಾಡುವುದು ಉತ್ತಮ. ಕೊನೆಯ ಕ್ಷಣದ ಗಡಿಬಿಡಿಯ ತಯಾರಿ ಬೇಡ.

ವಾರದ ಮೊದಲು

- ಹೊರಡಲು ಒಂದು ವಾರ ಇರುವಾಗ ಬೇಡವೆಂದರೂ ಸಾಕಷ್ಟು ಒತ್ತಡವಿರುತ್ತದೆ. ಆದರೆ ಒತ್ತಡದ ನಡುವೆಯೂ ಯಾವುದೇ ವಸ್ತುವನ್ನು ಬಿಡದೇ ತೆಗೆದುಕೊಂಡು ಹೋಗುವುದು ಮುಖ್ಯ. ಹಾಗಾಗಿ ಮೊದಲೇ ಸಿದ್ಧವಿರುವ ಪೆಟ್ಟಿಗೆ, ಚೀಲಗಳು ಟೇಪ್‌ಗಳನ್ನು ತೆಗೆದುಕೊಂಡು ಪ್ಯಾಕ್ ಮಾಡಿದ ವಸ್ತುಗಳನ್ನು ಚೆನ್ನಾಗಿ ಮುಚ್ಚಿಡಿ.
- ಒಡೆದು ಹೋಗುವ ಹಾಗೂ ಒಡೆಯದ ವಸ್ತುಗಳನ್ನು ಬೇರೆ ಬೇರೆಯಾಗಿ ಜೋಡಿಸಿ.
- ಅಡುಗೆಮನೆಯ ಪ್ಲೇಟ್, ಚಮಚಗಳು, ಲೋಟಗಳು ಈ ಎಲ್ಲವನ್ನೂ ಒಂದು ಕಡೆ ಜೋಡಿಸಿಕೊಳ್ಳಿ.
- ನಿಮ್ಮ ಹೊಸ ಮನೆಯ ಇಂಟರ್‌ನೆಟ್ ಕನೆಕ್ಷನ್ ಬಗ್ಗೆ ವಾರಕ್ಕೂ ಮೊದಲು ಹತ್ತಿರದ ಡೀಲರ್ ಬಳಿ ಮಾತನಾಡಿ ಕನೆಕ್ಷನ್ ಹಾಕಿಸಿಕೊಳ್ಳಿ.
- ನಿಮ್ಮ ಬಟ್ಟೆಗಳನ್ನು ಒಗೆದು ಬಿಸಿಲಿನಲ್ಲಿ ಒಣಗಿಸಿಡಿ. ಇದರೊಂದಿಗೆ ನೆಲಹಾಸು, ಕರ್ಟನ್‌ಗಳನ್ನೂ ಒಗೆದು ಒಣಗಿಸಿ ಪ್ಯಾಕ್ ಮಾಡಿ. ಇದರಿಂದ ಹೊಸ ಮನೆಗೆ ಹೋದ ಕೂಡಲೇ ಬಳಸಲು ಸುಲಭವಾಗುತ್ತದೆ.
- ಆಹಾರ ಸಾಮಗ್ರಿಗಳನ್ನು ಹೊಸದಾಗಿ ಖರೀದಿ ಮಾಡುವ ಬದಲು ಹೊಸ ಮನೆಗೆ ಹೋದ ಮೇಲೆ ಖರೀದಿಸಿ. ವಾರಗಳ ಕಾಲ ಇರುವ ಸಾಮಗ್ರಿಗಳನ್ನೇ ಬಳಸಿ.

ಒಂದು ದಿನದ ಮೊದಲು

- ನಿಮ್ಮ ಮನೆಯ ಎಲ್ಲಾ ವಸ್ತುಗಳನ್ನು ತಿಂಗಳು, ವಾರದ ಮೊದಲೇ ಪ್ಯಾಕ್ ಮಾಡಿಕೊಂಡಿರುತ್ತೀರಿ. ಆದರೂ 24 ಗಂಟೆ ಎನ್ನುವುದು ಬಹಳ ಮುಖ್ಯವಾಗುತ್ತದೆ.
- ಫ್ರಿಜ್‌ನಲ್ಲಿರುವ ಎಲ್ಲಾ ವಸ್ತುಗಳನ್ನು ತೆಗೆದು ಇರಿಸಿ ಫ್ರಿಜ್ ಅನ್ನು ಸ್ವಚ್ಛ ಮಾಡಿ. ಅದು ಸಂಪೂರ್ಣ ಒಣಗಿದ ಮೇಲೆ ಫ್ರಿಜ್ ಬಾಗಿಲನ್ನು ಟೇಪ್‌ನಿಂದ ಮುಚ್ಚಿ. ಫ್ರಿಜ್‌ನ ಶೆಲ್ಫ್‌ಗಳನ್ನು ತೆಗೆದು ಪ್ಯಾಕ್ ಮಾಡುವುದು ಉತ್ತಮ.
- ಹೊಸ ಮನೆ ಹಾಗೂ ಹಳೆ ಮನೆಯ ಬೀಗವನ್ನು ತೆಗೆದು ಇರಿಸಿಕೊಳ್ಳಿ. ಇದನ್ನು ತೆಗೆದುಕೊಂಡು ಹೋಗಲು ಮರೆಯಬೇಡಿ.
- **ಬ್ಯಾಕ್ ಪ್ಯಾಕ್ ಇರಲಿ:** ಡಾಕ್ಯುಮೆಂಟ್‌ಗಳು, ಹಣ, ಮೇಕಪ್ ಬ್ಯಾಗ್, ತಕ್ಷಣಕ್ಕೆ ಬಳಸುವ ಬಟ್ಟೆಗಳು, ಔಷಧಿಗಳು, ನೋಟ್‌ಪ್ಯಾಡ್, ಫೋನ್ ಎಲ್ಲವನ್ನು ಬ್ಯಾಕ್‌ಪ್ಯಾಕ್‌ನಲ್ಲಿ ಹಾಕಿಕೊಳ್ಳಿ. ಅದರೊಂದಿಗೆ ಟಿಶ್ಯೂ ಪೇಪರ್, ಟವಲ್ ಹಾಗೂ ಸಾಕುಪ್ರಾಣಿಯ ತಿನಿಸುಗಳನ್ನೂ ಬ್ಯಾಕ್ ಪ್ಯಾಕ್‌ನಲ್ಲೇ ಇರಿಸಿಕೊಳ್ಳಿ.
- ಒಂದು ದಿನಕ್ಕಾಗುವಷ್ಟು ಆಹಾರ ಪದಾರ್ಥಗಳನ್ನು ತಯಾರಿಸಿ ಕಂಟೇನರ್ ಹಾಗೂ ಕೂಲರ್‌ಬ್ಯಾಗ್‌ನಲ್ಲಿ ಇರಿಸಿಕೊಳ್ಳಿ. ಟೀ, ಕಾಫಿ, ಸಕ್ಕರೆ ಪ್ಯಾಕ್‌ಗಳು ಹಾಗೂ ಮಕ್ಕಳ ಆಹಾರವನ್ನು ಇಟ್ಟುಕೊಳ್ಳಲು ಮರೆಯದಿರಿ. ಎಲೆಕ್ಟ್ರಿಕಲ್ ಕ್ಯಾಟಲ್ ನಿಮ್ಮ ಬಳಿ ಇರಲಿ.

❖

ಬಳುಕುವ ಸೊಂಟಕ್ಕೆ..

ಮನಸ್ವಿ



'ಬೆಲ್ಲಿ ಫ್ಯಾಟ್' ಮಿಲೇನಿಯಲ್ ಜಮಾನದವರನ್ನು ಕಾಡುವ ಪ್ರಮುಖ ಸಮಸ್ಯೆಗಳಲ್ಲಿ ಒಂದು. ಒಮ್ಮೆ ಸೊಂಟದ ಸುತ್ತಲೂ ಕೊಬ್ಬು ಬೆಳೆದರೆ ಮತ್ತೆ ಅದನ್ನು ಕರಗಿಸುವುದು ಬಹಳ ಕಷ್ಟ. ಹಾಗಂತ ಕೊಬ್ಬು ಬೆಳೆಯದಂತೆ ಎಷ್ಟೇ ಪ್ರಯತ್ನ ಪಟ್ಟರೂ ಆಗುವುದಿಲ್ಲ. ಬೆಲ್ಲಿ ಫ್ಯಾಟ್‌ನಿಂದಾಗಿ ನಿಮ್ಮಿಷ್ಟದ ಡ್ರೆಸ್ ತೊಡುವುದೂ ಕಷ್ಟ. ಇದರಿಂದಾಗಿ ಯುವಜನರಲ್ಲಿ ಅದರಲ್ಲೂ ಹೆಚ್ಚಾಗಿ ಹೆಣ್ಣುಮಕ್ಕಳಲ್ಲಿ ಆತ್ಮವಿಶ್ವಾಸ ಕುಸಿಯುತ್ತಿದೆ. ಹಲವರಿಗೆ ವ್ಯಾಯಾಮ, ಅತಿಯಾಗಿ ವರ್ಕ್‌ಔಟ್ ಮಾಡುವುದು ಇಷ್ಟವಾಗುವುದಿಲ್ಲ. ಅಲ್ಲದೇ ಸಮಯದ ಅಭಾವವೂ ಕಾರಣವಾಗುತ್ತದೆ. ಆದರೆ ಕೆಲವು ಮನೆ ಮದ್ದಿನಿಂದ ಸೊಂಟದ ಸುತ್ತಲಿನ ಕೊಬ್ಬನ್ನು ಕರಗಿಸಬಹುದು.

ದೇಹದಲ್ಲಿ ಶೇಖರಣೆಯಾಗುವ ಕೆಟ್ಟ ಕೊಬ್ಬಿನಾಂಶಗಳಿಂದ ಕೆಲವೊಂದು ಗಂಭೀರ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಆ ಕಾರಣದಿಂದಲೂ ಕೊಬ್ಬನ್ನು ಕಡಿಮೆ ಮಾಡಿಕೊಳ್ಳುವುದು ಅವಶ್ಯವಾಗಿದೆ. ನಮಗೆ ತಿಳಿಯದ ಮನೆಯಲ್ಲಿ ಪ್ರತಿನಿತ್ಯ ನಾವು ಬಳಸುವ ಕೆಲವು ಆಹಾರ ಪದಾರ್ಥಗಳು ಸೊಂಟದ ಸುತ್ತಲಿನ ಕೊಬ್ಬಿನಾಂಶ ನಿವಾರಣೆಗೆ ಸಹಕಾರಿಯಾಗಿವೆ. ಅಂತಹ ಕೆಲವು ಪ್ರಮುಖ ಆಹಾರಗಳು ಹೀಗಿವೆ.

ಹೆಚ್ಚು ನೀರು ಕುಡಿಯಿರಿ

ಹೆಚ್ಚು ಹೆಚ್ಚು ನೀರು ಕುಡಿಯುವುದರಿಂದ ಬೆಲ್ಲಿ ಫ್ಯಾಟ್ ನಿವಾರಣೆಯಾಗುತ್ತದೆ. ಇದು ಸೊಂಟದ ಸುತ್ತಲಿನ ಕೊಬ್ಬನ್ನು ನಿವಾರಿಸಿ ದೇಹಾರೋಗ್ಯವನ್ನು ಸುಧಾರಿಸುತ್ತದೆ. ಹೆಚ್ಚು ನೀರು ಕುಡಿಯುವುದರಿಂದ ಚಯಾಪಚಯ ಕ್ರಿಯೆ ಉತ್ತಮವಾಗುತ್ತದೆ. ನೀರು ಜೀರ್ಣಕ್ರಿಯೆ ಹೆಚ್ಚಿ ತೂಕ ಕಡಿಮೆಯಾಗಲು ಸಹಾಯ ಮಾಡುತ್ತದೆ. ಹೆಚ್ಚು ನೀರು ಕುಡಿಯುವುದರಿಂದ ಹೊಟ್ಟೆ ತುಂಬಿದಂತಿರುತ್ತದೆ. ಹಾಗಾಗಿ ಪದೇ ಪದೇ ತಿನ್ನಬೇಕು ಎನ್ನಿಸುವುದಿಲ್ಲ.

ಶುಂಠಿ ಚಹಾ

ಶುಂಠಿ ಚಹಾವು ಹಲವು ಬಗೆಯ ಆರೋಗ್ಯ ಪ್ರಯೋಜನಗಳ ಜೊತೆಗೆ ತೂಕ ನಷ್ಟಕ್ಕೆ ಹೇಳಿ ಮಾಡಿಸಿದ ಆಹಾರ ಪದಾರ್ಥವಾಗಿದೆ. ಶುಂಠಿ ಚಹಾವನ್ನು ಪ್ರತಿದಿನ ಕುಡಿಯುವುದರಿಂದ ಅದರಲ್ಲಿನ ಥರ್ಮೋಜೆನಿಕ್ ಅಂಶವು ರಕ್ತದ ಶಾಖವನ್ನು ಹೆಚ್ಚಿಸುತ್ತದೆ. ಅಧ್ಯಯನಗಳ ಪ್ರಕಾರ ಇದು ಹೊಟ್ಟೆಯ ಕೊಬ್ಬನ್ನು ಸುಡಲು ಉತ್ತೇಜಿಸುತ್ತದೆ. ಇದು ಕಾರ್ಟಿಸೋಲ್ ಅನ್ನು ಪ್ರತಿಬಂಧಿಸುತ್ತದೆ. ಹಾಗಾಗಿ ಇದು ಒತ್ತಡದ ಹಾರ್ಮೋನ್ ನಿಯಂತ್ರಿಸುತ್ತದೆ. ಆ ಮೂಲಕ ತೂಕ ನಿವಾರಣೆಗೆ ಸಹಕರಿಸುತ್ತದೆ.

ಕಲ್ಲಂಗಡಿ ರಸ

ಕಲ್ಲಂಗಡಿಯಲ್ಲಿ ಸಮೃದ್ಧವಾದ ಉತ್ಕರ್ಷಣ ನಿರೋಧಕ ಅಂಶವಿದೆ. ಇದರಲ್ಲಿನ ಅಂಶಗಳು ಕೊಬ್ಬನ್ನು ಕಡಿಮೆ ಮಾಡಲು ಸಹಕರಿಸುತ್ತವೆ. ಕಲ್ಲಂಗಡಿ ಹಣ್ಣು ಸೊಂಟದ ಸುತ್ತಲಿನ ಕೊಬ್ಬನ್ನು ಇಳಿಸಲು ಸಹಾಯ ಮಾಡುತ್ತದೆ. ಅಲ್ಲದೇ ಚರ್ಮದ ಆರೋಗ್ಯ ರಕ್ಷಣೆಗೂ ಇದು ಸಹಕಾರಿ. ನಿಮಗೆ ಹಸಿವಾದಾಗ ಲಘು ಆಹಾರವಾಗಿ ಕಲ್ಲಂಗಡಿಗಳನ್ನು ಸೇವಿಸಬಹುದು ಅಥವಾ ಇದನ್ನು ಜ್ಯೂಸ್ ಮಾಡಿಕೊಂಡು ಕುಡಿಯಬಹುದು.

ಟಿಪ್ಸ್

ತೆಂಗಿನೆಣ್ಣೆ

ತೆಂಗಿನೆಣ್ಣೆಯನ್ನು ಅಡುಗೆಗೆ ಬಳಸುವುದರಿಂದ ಜೀರ್ಣಕ್ರಿಯೆ ಸುಲಭವಾಗುತ್ತದೆ. ಅಲ್ಲದೇ ಆರೋಗ್ಯಕರ ಜೀರ್ಣಕ್ರಿಯೆಗೂ ಇದು ಸಹಕಾರಿ. ಕೊಬ್ಬರಿ ಎಣ್ಣೆ ಸೇವನೆಯು ದೇಹದಲ್ಲಿ ಚಯಾಪಚಯ ಕ್ರಿಯೆ ಹೆಚ್ಚಲು ಸಹಾಯ ಮಾಡುತ್ತದೆ.

ಹಣ್ಣಿನ ರಸಗಳು

ಹಣ್ಣಿನ ರಸಗಳು ಕೊಬ್ಬನ್ನು ಕಡಿಮೆ ಮಾಡಲು ನೇರವಾಗಿ ಸಹಾಯ ಮಾಡದಿದ್ದರೂ ಪರೋಕ್ಷವಾಗಿ ಸಹಾಯ ಮಾಡುತ್ತವೆ. ಹಣ್ಣಿನ ರಸಕ್ಕೆ ಸಕ್ಕರೆ ಹಾಕದೇ ಸೇವಿಸಬೇಕು. ಯಾಕೆಂದರೆ ಇದರಲ್ಲಿ ಕ್ಯಾಲೊರಿ ಅಂಶ ಕಡಿಮೆ ಇರುತ್ತದೆ. ಇದನ್ನು ಸೇವಿಸುವುದರಿಂದ ತಿನ್ನುವ ಆಹಾರದ ಪ್ರಮಾಣವನ್ನು ಕಡಿಮೆ ಮಾಡಬಹುದು. ಅತಿಯಾಗಿ ಹಸಿವಾದಾದಾಗ ಹಣ್ಣಿನ ರಸವನ್ನು ಸೇವಿಸಬಹುದು.

ಚೆನ್ನಾಗಿ ನಿದ್ರೆ ಮಾಡಿ

ಚೆನ್ನಾಗಿ ನಿದ್ರೆ ಮಾಡುವುದರಿಂದ ದೇಹಕ್ಕೆ ಹಲವು ಬಗೆಯ ಉಪಯೋಗಗಳಿವೆ. ದಿನದಲ್ಲಿ 7 ರಿಂದ 8 ಗಂಟೆಗಳ ಕಾಲ ಯಾವುದೇ ಕಿರಿಕಿರಿಯಿಲ್ಲದಂತೆ ನಿದ್ದೆ ಮಾಡಬೇಕು. ಉತ್ತಮ ನಿದ್ದೆಯು ಸೊಂಟದ ಸುತ್ತಲಿನ ಕೊಬ್ಬು ನಿವಾರಣೆಗೆ ಸಹಕಾರಿ. ನಿದ್ದೆ ಕಡಿಮೆಯಾದರೆ ದೈಹಿಕ ಕಾರ್ಯಕ್ಷಮತೆಯೂ ಕಡಿಮೆಯಾಗುತ್ತದೆ. ಇದು ನರಗಳ ಕಾರ್ಯನಿರ್ವಹಣೆ, ಚಯಾಪಚಯ ಕ್ರಿಯೆ ಹಾಗೂ ಹಾರ್ಮೋನ್ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ. ಉತ್ತಮ ನಿದ್ದೆಯು ಚಯಾಪಚಯ ಕ್ರಿಯೆಯನ್ನು ಉತ್ತೇಜಿಸುತ್ತದೆ. ಅಲ್ಲದೇ ಇದು ದೇಹದ ಅಂಗಗಳ ಕಾರ್ಯ ನಿರ್ವಹಣೆಯನ್ನು ಸುಧಾರಿಸುತ್ತದೆ. ಹಾಗಾಗಿ ಬೊಜ್ಜು ನಿವಾರಣೆಗೆ ಉತ್ತಮ ನಿದ್ದೆ ಕೂಡ ಅತೀ ಅವಶ್ಯ. ❖



ಭಾವನೆಗಳ 'ಭಾವಚಿತ್ರ'



'ಯಾನ' ಖ್ಯಾತಿಯ ನಟ ಚಕ್ರವರ್ತಿ ಹಾಗೂ 'ಮಗಳು ಜಾನಕಿ' ಖ್ಯಾತಿಯ ಗಾನವಿ ಲಕ್ಷ್ಮಣ್ ನಟಿಸಿರುವ 'ಭಾವಚಿತ್ರ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ.

ಗಿರೀಶ್ ಕುಮಾರ್ ಬಿ. ಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರದ ಚಿತ್ರೀಕರಣ 55 ದಿನಗಳ ಕಾಲ ಬೆಂಗಳೂರು, ಹಾವೇರಿ, ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು ಮುಂತಾದ ಕಡೆ ನಡೆದಿದೆ. ಈ ಹಿಂದೆ 'ಆವಾಹಯಾಮಿ' ಚಿತ್ರ ನಿರ್ದೇಶಿಸಿದ್ದ ಗಿರೀಶ್ ಕುಮಾರ್ ಅವರ ನಿರ್ದೇಶನದ ಎರಡನೇ ಚಿತ್ರವಿದು. ಗಿರೀಶ್ ಕುಮಾರ್, ಗಿರೀಶ್ ಬಿಜ್ಜಳ ಸೇರಿ ಚಿತ್ರಕಥೆ ರಚಿಸಿದ್ದಾರೆ.

'ಮೊಬೈಲ್ ಬಂದಾಗಿನಿಂದ ಎಲ್ಲರಿಗೂ 'ಭಾವಚಿತ್ರ'ದ ಮೇಲೆ ಹೆಚ್ಚಿನ ಒಲವು. ಕ್ಯಾಮೆರಾ ಹಾಗೂ ಭಾವಚಿತ್ರದ ಮೇಲೆ ನಮ್ಮ ಚಿತ್ರದ ಕಥೆ ಸಾಗುತ್ತದೆ. ಇದನ್ನು ಟೆಕ್ನೋ ಥ್ರಿಲ್ಲರ್ ಅಂತಲೂ ಕರೆಯಬಹುದು. ಇದಷ್ಟೇ ಅಲ್ಲ. ಪ್ರೀತಿ ಹಾಗೂ ಭಾವನಾತ್ಮಕ ಸನ್ನಿವೇಶಗಳು ನಮ್ಮ ಚಿತ್ರದಲ್ಲಿದೆ' ಎನ್ನುತ್ತಾರೆ ನಿರ್ದೇಶಕ ಗಿರೀಶ್ ಕುಮಾರ್.

ವುಡ್ ಕ್ರೀಪರ್ಸ್ ಸಂಸ್ಥೆ ನಿರ್ಮಾಣ ಮಾಡಿರುವ ಈ ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಶಿವು ಬೇರಗಿ ಹಾಗೂ ವಿಶ್ವಜಿತ್ ರಾವ್ ಬರೆದಿರುವ ಹಾಡುಗಳಿಗೆ ಗೌತಮ್ ಶ್ರೀವತ್ಸ ಸಂಗೀತ ನೀಡಿದ್ದಾರೆ. ಅಜೇಯ್ ಕುಮಾರ್ ಛಾಯಾಗ್ರಹಣ ಹಾಗೂ ರತೀಶ್ ಕುಮಾರ್ ಸಂಕಲನ ಈ ಚಿತ್ರಕ್ಕಿದೆ. ಅವಿನಾಶ್, ಕಾರ್ತಿಕ್ ಸುಂದರಂ, ಗಿರೀಶ್ ಬಿಜ್ಜಳ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಸಿನಿಮಾ



ಗಣೇಶ್ ದೇಸಾಯಿ

ನಗರದಲ್ಲಿ ಇಂದು

ಭಾವವರ್ಣ ಭಾವಯಾನ

ಭಾವವರ್ಣ ಭಾವಯಾನ ಸಂಗೀತ ಕಾರ್ಯಕ್ರಮವು ನಗರದ ಕೊಬಾಲ್ಟ್ ಆರ್ಟ್ ಗ್ಯಾಲರಿಯಲ್ಲಿ ನವೆಂಬರ್ 14, ಭಾನುವಾರದಂದು ನಡೆಯಲಿದೆ.

ಭಾಗವಹಿಸುವವರು: ಗಣೇಶ್ ದೇಸಾಯಿ, ಗಣಪತಿ ಹೆಗಡೆ ಹಾಗೂ ಭಾವಸ್ಪಂದನ ಟೀಂ

ಸ್ಥಳ: ಕೊಬಾಲ್ಟ್ ಆರ್ಟ್ ಗ್ಯಾಲರಿ ರಾಜರಾಜೇಶ್ವರಿ ನಗರ ಬೆಂಗಳೂರು

ಸಮಯ: ಸಂಜೆ 4.30


ಸಂಪರ್ಕ ಸಂಖ್ಯೆ: 9980075463

❖

ಕಬ್ಜ ಟೀಸರ್ ಲಾಂಚ್ ಮುಂದಕ್ಕೆ...

'ಕಬ್ಜ' ಸಿನಿಮಾ ಟೈಟಲ್ ಬಿಡುಗಡೆ ಆದ ದಿನದಿಂದಲೂ ಸಂಚಲನ ಮೂಡಿಸುತ್ತಿದೆ. ರಿಯಲ್ ಸ್ಟಾರ್ ಉಪೇಂದ್ರ ಹಾಗೂ ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ ಅಭಿನಯದ ಈ ಪ್ಯಾನ್ ಇಂಡಿಯಾ ಸಿನಿಮಾದ ಟೀಸರ್ ಅನ್ನು ದೀಪಾವಳಿ ಹಬ್ಬಕ್ಕೆ ಬಿಡುಗಡೆ ಮಾಡುವುದಾಗಿ ನಿರ್ದೇಶಕ ಆರ್. ಚಂದ್ರು ತಿಳಿಸಿದ್ದರು. ಆದರೆ ಈಗ ಟೀಸರ್ ಬಿಡುಗಡೆ ಮುಂದಕ್ಕೆ ಹೋಗಿದೆ. ನಟ ಪುನೀತ್ ರಾಜಕುಮಾರ್ ಅವರ ಅಗಲಿಕೆಯ ಕಾರಣದಿಂದ ಟೀಸರ್ ಬಿಡುಗಡೆಯನ್ನು ಮುಂದಕ್ಕೆ ಹಾಕಲಾಗಿದೆ. 'ಅಪ್ಪು ಅಗಲಿಕೆ ನಮ್ಮ ಕಬ್ಜ ತಂಡಕ್ಕೂ ಬಹಳ ನೋವು ತಂದಿದೆ. ಇಂತಹ ಸಂದರ್ಭದಲ್ಲಿ ಟೀಸರ್ ಬಿಡುಗಡೆ ಮಾಡಿ ಸಂಭ್ರಮಿಸುವುದು ಸರಿಯಲ್ಲ ಎಂಬ ಉದ್ದೇಶದಿಂದ ಚಿತ್ರದ ಟೀಸರ್ ಬಿಡುಗಡೆ ಮಾಡಿಲ್ಲ. ಮುಂದಿನ ದಿನಗಳಲ್ಲಿ ಟೀಸರ್ ಬಿಡುಗಡೆ ಮಾಡುತ್ತೇನೆ' ಎಂದು ಟ್ವಿಟರ್ ಮೂಲಕ ಸಿನಿಪ್ರೇಕ್ಷಕರಿಗೆ ತಿಳಿಸಿದ್ದಾರೆ ಆರ್. ಚಂದ್ರು.

ಈ ಚಿತ್ರದಲ್ಲಿ 'ಭಾರ್ಗವ್ ಭಕ್ಷಿ' ಎಂಬ ವಿಶೇಷ ಪಾತ್ರದಲ್ಲಿ ಕಿಚ್ಚ ಸುದೀಪ್ ಕಾಣಿಸಿಕೊಳ್ಳಲಿದ್ದಾರೆ. ಬಾಲಿವುಡ್‌ನ ಖ್ಯಾತ ನಟ ನವಾಬ್ ಶಾ ಚಿತ್ರದಲ್ಲಿ ಪ್ರಮುಖ ಪಾತ್ರವೊಂದರಲ್ಲಿ ನಟಿಸಲಿದ್ದಾರೆ. ಕೆ.ಜಿಎಫ್ ಸಿನಿಮಾದಲ್ಲಿ ರಾಜೇಂದ್ರ ದೇಸಾಯಿ ಪಾತ್ರ ನಿರ್ವಹಿಸಿದ್ದ ಲಕ್ಷ್ಮೀಶ ಲಕ್ಷ್ಮಣ್ (ಲಕ್ಕಿ ಲಕ್ಷ್ಮಣ್) ಕೂಡ ಸಿನಿಮಾದಲ್ಲಿ ನಟಿಸುತ್ತಿರುವುದು ವಿಶೇಷ. ತಮಿಳಿನ 'ಐ' ಚಿತ್ರದ ಖ್ಯಾತಿಯ ಕಾಮರಾಜನ್, ಜಗಪತಿ ಬಾಬು, ರಾಹುಲ್ ದೇವ್, ಸುನಿಲ್ ಪುರಾಣಿಕ್, ಪ್ರಮೋದ್ ಶೆಟ್ಟಿ, ರಾಹುಲ್ ಜಗತಾಪ್, ಅನೂಪ್ ರೇವಣ್ಣ, ಜಾನ್ ಕೊಕ್ಕಿನ್, ನವೀನ್, ಕೋಟ ಶ್ರೀನಿವಾಸ್, ಜಯಪ್ರಕಾಶ್, ಕಾಟ್ ರಾಜು, ಸುಬ್ಬರಾಜು ಮುಂತಾದವರು ಚಿತ್ರದಲ್ಲಿ ನಟಿಸಲಿದ್ದಾರೆ. ಚಿತ್ರದ ಚಿತ್ರೀಕರಣ ಹೈದರಾಬಾದ್, ಮಂಗಳೂರು, ಬೆಂಗಳೂರು ಮುಂತಾದ ಕಡೆ ನಡೆದಿದೆ. ಈ ಚಿತ್ರವು ಕನ್ನಡ ಸೇರಿದಂತೆ ಒಟ್ಟು 7 ಭಾರತೀಯ ಭಾಷೆಗಳಲ್ಲಿ ತೆರೆ ಕಾಣಲಿದೆ. ❖



ಕಬ್ಜ ಚಿತ್ರದಲ್ಲಿ ಉಪೇಂದ್ರ

ಆಲೂಗೆಡ್ಡೆ, ಚೀಸ್ ಪ್ಯಾನ್‌ಕೇಕ್



ಆಲೂಗೆಡ್ಡೆ ತಿನ್ನುವುದು ಬಹುತೇಕರಿಗೆ ಇಷ್ಟವಾಗುತ್ತದೆ. ಆದರೆ ಆರೋಗ್ಯದ ವಿಷಯಕ್ಕೆ ಬಂದರೆ ಇದು ಅಷ್ಟೇನು ಉತ್ತಮವಲ್ಲ ಎನ್ನುವ ಮಾತಿದೆ. ಆದರೂ ನಾಲಿಗೆ ಕೇಳಬೇಕಲ್ಲ. ಆಲೂಗೆಡ್ಡೆ ಚಿಪ್ಸ್, ಫ್ರೆಂಚ್ ಫ್ರೈಸ್ ಈ ಹೆಸರು ಕೇಳಿದರೇ ನಾಲಿಗೆಯ ತುದಿಯಲ್ಲಿ ನೀರೂರುತ್ತದೆ. ಈ ತಿನಿಸುಗಳನ್ನು ಮನೆಯಲ್ಲೂ ಮಾಡಿ ತಿನ್ನುತ್ತೇವೆ. ಇಂತಹ ತಿಂಡಿಗಳು ಮಕ್ಕಳಿಂದ ಹಿಡಿದು ಹಿರಿಯರಿಗೂ ಇಷ್ಟವಾಗುತ್ತದೆ. ಮಕ್ಕಳಿಗಂತೂ ಆಲೂಗೆಡ್ಡೆಯಿಂದ ತಯಾರಿಸುವ ರೆಸಿಪಿಗಳು ಬಹಳ ಇಷ್ಟವಾಗುತ್ತವೆ. ಇದರಿಂದ ಪದೇ ಪದೇ ಒಂದೇ ಬಗೆಯ ರೆಸಿಪಿಗಳನ್ನು ತಯಾರಿಸಿ ತಿನ್ನುವುದಕ್ಕಿಂತ ಅದರಲ್ಲೇ ವೆರೈಟಿ ಎನ್ನಿಸುವ ರೆಸಿಪಿಯನ್ನು ತಯಾರಿಸಬಹುದು. ಇದು ನಿಮ್ಮ ಬಾಯಿಯ ರುಚಿ ತಣಿಸುವುದರಲ್ಲಿ ಸಂಶಯವಿಲ್ಲ.

ಆಲೂಗೆಡ್ಡೆ ಚೀಸ್ ಪ್ಯಾನ್‌ಕೇಕ್ ಮಾಡಿದರೆ ಮನೆಯಲ್ಲಿ ಎಲ್ಲರೂ ಇಷ್ಟಪಟ್ಟು ತಿನ್ನುತ್ತಾರೆ. ಎಣ್ಣೆಯಲ್ಲಿ ಗರಿಗರಿಯಾಗಿ ಕರಿದು ತಿನ್ನುವ ಈ ತಿಂಡಿ ಸಂಜೆಯ ಸ್ನ್ಯಾಕ್ಸ್‌ಗೆ ಹೆಚ್ಚು ಹೊಂದುತ್ತದೆ. ಅದನ್ನು ಮಾಡುವುದು ಬಲು ಸುಲಭ. ಜೊತೆಗೆ ಮನೆಯಲ್ಲೇ ಇರುವ ಕಡಿಮೆ ಸಾಮಗ್ರಿಗಳಿಂದ ಬಲು ಬೇಗನೆ ತಯಾರಿಸಬಹುದು.

ರೆಸಿಪಿ

ಆಲೂಗೆಡ್ಡೆ ಪ್ಯಾನ್‌ಕೇಕ್‌ಗೆ ಬೇಕಾಗುವ ಸಾಮಗ್ರಿಗಳು: ಪುಡಿ ಮಾಡಿದ ಆಲೂಗೆಡ್ಡೆ – 4, ಚೀಸ್ – 2 ಕಪ್, ಮೊಟ್ಟೆ – 1, ಮೈದಾಹಿಟ್ಟು – 1/4 ಕಪ್, ಈರುಳ್ಳಿ ದಂಟು – 2, 1/2 ಟೇಬಲ್ ಚಮಚ, ಬ್ರೆಡ್ ಪುಡಿ – 1/2 ಕಪ್, ಅಡುಗೆ ಎಣ್ಣೆ – 2 ಟೇಬಲ್ ಚಮಚ, ಕ್ರೀಮ್ – ನೆಂಚಿಕೊಳ್ಳಲು.


ತಯಾರಿಸುವ ವಿಧಾನ:

ಆಲೂಗೆಡ್ಡೆ ಮ್ಯಾಷ್ ಮಾಡುವುದು: ಪಾತ್ರೆಯಲ್ಲಿ ನೀರಿಟ್ಟು ಅದಕ್ಕೆ 1 ಚಮಚ ಉಪ್ಪು ಹಾಗೂ ಸಿಪ್ಪೆ ತೆಗೆದ ಆಲೂಗೆಡ್ಡೆ ಹಾಕಿ. ಚೆನ್ನಾಗಿ ಬೇಯಿಸಿ. ಅದನ್ನು ತಣ್ಣಗಾಗಿಸಿ ಅದಕ್ಕೆ 4 ಚಮಚ ಎಣ್ಣೆ ಸೇರಿಸಿ ಚೆನ್ನಾಗಿ ಕಿವುಚಿ.

ಪ್ಯಾನ್‌ಕೇಕ್ ಮಾಡುವುದು: ಒಂದು ಅಗಲವಾದ ಮಿಕ್ಸಿಂಗ್ ಬೌಲ್‌ನಲ್ಲಿ 4 ಕಪ್ ಕಿವುಚಿದ ಆಲೂಗೆಡ್ಡೆ, 2 ಕಪ್ ತುರಿದ ಚೀಸ್, 1 ಮೊಟ್ಟೆ, ಕಾಲು ಕಪ್ ಹಿಟ್ಟು ಹಾಗೂ 2 ಚಮಚ ಈರುಳ್ಳಿ ದಂಟನ್ನು ಕತ್ತರಿಸಿ ಹಾಕಿ. ಇವೆಲ್ಲವನ್ನೂ ಕಿವುಚಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣ ದಪ್ಪವಾಗಿರಬೇಕು. ಮಿಶ್ರಣವನ್ನು ತೆಗೆದುಕೊಂಡು ಅಂಗೈ ಅಗಲಕ್ಕೆ ತಟ್ಟಿಕೊಳ್ಳಿ. ಅದರ ಎರಡೂ ಬದಿಗೆ ಬ್ರೆಡ್ ಪುಡಿ ಅಂಟುವಂತೆ ನೋಡಿಕೊಳ್ಳಿ. ನಂತರ ಎಣ್ಣೆ ಬಿಸಿಮಾಡಿ ಪ್ಯಾನ್‌ಕೇಕ್ ಅನ್ನು ಎಣ್ಣೆಯಲ್ಲಿ 3 ರಿಂದ 4 ನಿಮಿಷ ಕರಿಯಿರಿ. ಎರಡೂ ಭಾಗ ಕಂದು ಬಣ್ಣ ಬರುವವರೆಗೂ ಕರಿದು ತೆಗೆಯಿರಿ. ಈಗ ನಿಮ್ಮ ಮುಂದೆ ರುಚಿಯಾದ ಆಲೂಗೆಡ್ಡೆ ಚೀಸ್ ಪ್ಯಾನ್‌ಕೇಕ್ ತಿನ್ನಲು ಸಿದ್ಧವಾಗಿರುತ್ತದೆ. ಇದನ್ನು ಸಾಸ್ ಅಥವಾ ಕೆಚಪ್ ಜೊತೆ ತಿನ್ನಲು ಚೆನ್ನಾಗಿರುತ್ತದೆ. ❖

ಕಣ್ಣಿನ ತಂಪಿಗೂ ಅಂದಕ್ಕೂ ಸನ್‌ಗ್ಲಾಸ್..





ಸುಕೃತ ಎಸ್.

ಸನ್‌ಗ್ಲಾಸ್ ಹಾಕಿಕೊಂಡು ಫೋಟೊಗೆ ಪೋಸು ಕೊಡುವುದು ಎಂದರೆ ಎಲ್ಲರಿಗೂ ಅಚ್ಚುಮೆಚ್ಚು; ಹೆಂಗಳೆಯರೂ ಇದನ್ನು ಇಷ್ಟಪಡುತ್ತಾರೆ. ಕಣ್ಣಿಗೆ ತಂಪು ನೀಡುವ ಸನ್‌ಗ್ಲಾಸ್ ನಮಗೆ ಸ್ಟೈಲಿಶ್ ಲುಕ್ ಕೊಡುತ್ತದೆ. ಪಾಶ್ಚಾತ್ಯ ಉಡುಪುಗಳೊಂದಿಗೆ ಸನ್‌ಗ್ಲಾಸ್ ಹೆಚ್ಚು ಒಗ್ಗುತ್ತದೆ. ಸನ್‌ಗ್ಲಾಸ್‌ನಲ್ಲಿ ಹಲವು ವಿಧಗಳಿವೆ. ರಸ್ತೆಬದಿಯಲ್ಲಿ ಸಿಗುವ ಗ್ಲಾಸ್‌ನಿಂದ ಹಿಡಿದು ಲಕ್ಷಗಟ್ಟಲೆ ಬೆಲೆ ಬಾಳುವ ಬ್ರ್ಯಾಂಡೆಡ್‌ನ ಸನ್‌ಗ್ಲಾಸ್‌ವರೆಗೂ ಮಾರುಕಟ್ಟೆಯಲ್ಲಿ ಲಭ್ಯ. ಆದರೆ ನಮಗೆ ಹೊಂದುವ ಸನ್‌ಗ್ಲಾಸ್ ಆಯ್ಕೆ ಮಾಡಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ.

ಮಹಿಳೆಯರಿಗಾಗಿ ಹಲವು ಶೇಡ್‌ನ ಸನ್‌ಗ್ಲಾಸ್‌ಗಳು ಲಭ್ಯವಿವೆ. ಗ್ಲಾಸ್ ಹಾಕಿಕೊಂಡು, ಫೋಟೊಗಳನ್ನು ಬೇರೆ ಬೇರೆ ಪೋಸುಗಳಲ್ಲಿ ತೆಗೆಸಿಕೊಂಡು ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ವಾಟ್ಸ್‌ಆ್ಯಪ್ ತುಂಬಾ ತುಂಬಿಸಿಕೊಳ್ಳಬಹುದು.

ಬ್ರಂಚ್ ಡೇಟ್‌ಗೆ

ನೀವು ಬ್ರಂಚ್ ಡೇಟ್‌ಗೆ ಹೊರಟಿದ್ದೀರಾ? ಹೋಗುವಾಗ ರೌಂಡ್ ಶೇಪ್‌ನ ಸನ್‌ಗ್ಲಾಸ್ ಹಾಕಿಕೊಳ್ಳಿ, ನಿಮ್ಮ ಲುಕ್ ತುಂಬಾ ಚೆನ್ನಾಗಿರುತ್ತದೆ. ಬಿಳಿ ಕ್ರಾಪ್ ಟಾಪ್ ಮತ್ತು ಜೀನ್ಸ್ ಹಾಕಿಕೊಂಡು ರೌಂಡ್ ಸನ್‌ಗ್ಲಾಸ್ ಹಾಕಿಕೊಂಡರೆ ನಿಮ್ಮ ಬ್ರಂಚ್ ಡೇಟ್ ಅನ್ನು ಇನ್ನಷ್ಟು ಉತ್ತಮವಾಗಿ ಸಬಹುದು.

ಬೀಚ್ ಲುಕ್‌ಗೆ

ಕಡಲತೀರದ ಪ್ರವಾಸಕ್ಕೆ ಮಹಿಳೆಯರಿಗೆ ಬೋಲ್ಡ್ ಕ್ಯಾಟ್‌ಐ ಶೇಡ್ಸ್ ಸನ್‌ಗ್ಲಾಸ್‌ಗಳು ಬಹಳ ಒಪ್ಪುತ್ತವೆ. ಕ್ಯಾಶುವಲ್ಸ್ ಮತ್ತು ಫಾರ್ಮಲ್ ಔಟ್‌ಫಿಟ್‌ಗೂ ಇದು ಹೇಳಿ ಮಾಡಿಸಿದಂತೆ ಕಾಣುತ್ತದೆ.

ದಿನ ನಿತ್ಯದ ಬಳಕೆಗೆ

ಸ್ಲೀಕ್, ಬ್ಯಾಡ್‌ಆ್ಯಸ್ ಸನ್‌ಗ್ಲಾಸ್‌ಗಳು ನಿತ್ಯದ ಬಳಕೆಯಲ್ಲಿ ಸ್ಟೈಲಿಶ್ ಆಗಿ ಕಾಣಲು ಉತ್ತಮವಾಗಿದೆ. ಇದು ನಿಮ್ಮನ್ನು ಗುಂಪಿನಲ್ಲಿ ಎದ್ದು ಕಾಣುವಂತೆ ಮಾಡುತ್ತದೆ. ಸೆಲ್ಫಿಗಳಲ್ಲಿ ಸ್ಟೈಲಿಶ್ ಆಗಿ ಕಾಣುವಿರಿ. ಟಿ ಶರ್ಟ್, ಜೀನ್ಸ್‌ಗಳ ಜೊತೆ, ಕ್ಯಾಶುವಲ್ ಔಟ್‌ಫಿಟ್‌ಗೆ ಇದು ಬಹಳ ಚೆನ್ನಾಗಿ ಒಪ್ಪುತ್ತದೆ. ಕೆಲವು ಸನ್‌ಗ್ಲಾಸ್‌ಗಳು ಎಲ್ಲಾ ಮೂಡಿಗೂ, ಎಲ್ಲಾ ರೀತಿಯ ಔಟ್‌ಫಿಟ್‌ಗೂ ಹೊಂದುತ್ತದೆ. ಇದು ಎಲ್ಲಾ ಬ್ರ್ಯಾಂಡ್‌ಗಳಲ್ಲೂ ಲಭ್ಯ. ಈ ಗ್ಲಾಸ್‌ಗಳು ಫ್ಯಾನ್ಸಿ ಲುಕ್ ನೀಡುತ್ತವೆ. ಬೋಲ್ಡ್ ಜೋಡಿಯ ಗ್ಲಾಸ್‌ಗಳು ಮಹಿಳೆಯರಿಗೆ ನಿತ್ಯದ ಬಳಕೆಗೆ ಬೋಲ್ಡ್ ಲುಕ್ ನೀಡುತ್ತದೆ. ಭಾರತದ ಸಾಂಪ್ರದಾಯಿಕ ಔಟ್‌ಫಿಟ್‌ಗೂ ಈ ಗ್ಲಾಸ್‌ಗಳು ಒಪ್ಪುತ್ತವೆ. ❖

ಖರೀದಿ ಹೇಗೆ?

ಔಟ್‌ಫಿಟ್‌ಗೆ ಹೊಂದುವಂತಹ ಸನ್‌ಗ್ಲಾಸ್ ಅನ್ನು ಖರೀದಿ ಮಾಡಬಹುದು. ಖರೀದಿಗೆ ಯಾವ ಸಂದರ್ಭ ಸೂಕ್ತ ಎನ್ನುವುದು ಮುಖ್ಯವಾಗುತ್ತದೆ ಅಥವಾ ಮೂಡ್‌ನ ಮೇಲೆ ಖರೀದಿ ಮಾಡಬಹುದು.

ಫೋಟೊಗೆ ಪೋಸು ಕೊಡುವುದು, ಪಾರ್ಟಿಗಳಲ್ಲಿ ಸ್ಟೈಲಿಶ್ ಆಗಿ ಕಾಣಿಸಿಕೊಳ್ಳುವುದರ ಜೊತೆಗೆ, ಯುವಿ ಕಿರಣಗಳಿಂದಲೂ ರಕ್ಷಣೆ ಪಡೆಯುವ ದೃಷ್ಟಿಯಿಂದಲೂ ಸನ್‌ಗ್ಲಾಸ್ ಪ್ರಾಮುಖ್ಯವಾಗಿದೆ. ಯಾವ ಯಾವ ಸಂದರ್ಭದಲ್ಲಿ ಹೆಣ್ಣುಮಕ್ಕಳು ಯಾವ ಯಾವ ರೀತಿ ಸನ್‌ಗ್ಲಾಸ್ ಖರೀದಿ ಮಾಡಬಹುದು ಎನ್ನುವುದರ ಕುರಿತು ಮಾಹಿತಿ ಇಲ್ಲಿದೆ.



ತೆಂಗಿನೆಣ್ಣೆಯಲ್ಲಡಗಿದೆ ಚರ್ಮದ ಅಂದ!

ಡಾ.ಜುಶ್ಯ ಭಾಟಿಯಾ ಸರೀನ್

ಚರ್ಮ ಹಾಗೂ ಕೂದಲಿನ ಆರೋಗ್ಯಕ್ಕೆ ಸಂಬಂಧಿಸಿ ತೆಂಗಿನೆಣ್ಣೆಗೆ ಸರಿಸಾಟಿ ಇನ್ನೊಂದಿಲ್ಲ. ತೆಂಗಿನೆಣ್ಣೆ ಅಂಶವಿರುವ ಚರ್ಮ ಮತ್ತು ಕೂದಲಿನ ಎಣ್ಣೆಗಳು ಆರೋಗ್ಯವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ತೆಂಗಿನೆಣ್ಣೆ ಕೂದಲಿಗೆ ಉತ್ತಮ ಕಂಡೀಶನರ್ ಕೂಡ ಹೌದು. ಇದರಲ್ಲಿ ಮಿಟಮಿನ್ ಇ ಸೇರಿದಂತೆ ಹಲವು ಬಗೆಯ ಪೋಷಕಾಂಶಗಳಿದ್ದು ಚರ್ಮದ ಆರೈಕೆಗೆ ಸೂಕ್ತವಾಗಿದೆ.

ಪುರಾತನ ಕಾಲದಿಂದಲೂ ಚರ್ಮದ ಆರೈಕೆಗೆ ಸಸ್ಯಜನ್ಯ ಎಣ್ಣೆಗಳನ್ನು ಬಳಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಚರ್ಮದ ಆರೋಗ್ಯ ಕಾಪಾಡಿಕೊಳ್ಳಲು ಜನರು ತೆಂಗಿನೆಣ್ಣೆ ಆಧಾರಿತ ಉತ್ಪನ್ನಗಳತ್ತ ಮೊರೆ ಹೋಗುತ್ತಿದ್ದಾರೆ.

ತೆಂಗಿನೆಣ್ಣೆ ಚರ್ಮಕ್ಕೆ ಉತ್ತಮ ಮಾಯಿಶ್ಚರೈಸರ್ ಕೂಡ ಹೌದು. ಇದು ಇತರ ವಿಟಮಿನ್ ಎಣ್ಣೆಗಳಿಂತ ಉತ್ತಮವಾಗಿದೆ ಎನ್ನುತ್ತವೆ ಅಧ್ಯಯನಗಳು. ತೆಂಗಿನೆಣ್ಣೆ ಬಳಕೆಯನ್ನು ಚರ್ಮ ಹಾಗೂ ಕೂದಲಿಗೆ ನಿಯಮಿತವಾಗಿ ಬಳಸುವುದರಿಂದ ಚರ್ಮವು ತೇವಾಂಶದಿಂದ ಕೂಡಿರುತ್ತದೆ. ಅಲ್ಲದೇ ಚರ್ಮಕ್ಕೆ ತಡೆಗೋಡೆಯಾಗಿರುವ ಲಿಪಿಡ್‌ಗಳನ್ನು ಸದೃಢಗೊಳಿಸುತ್ತದೆ.



ಡಾ.ಜುಶ್ಯ ಭಾಟಿಯಾ ಸರೀನ್

ಚರ್ಮವು ತೆಂಗಿನೆಣ್ಣೆಯನ್ನು ಸುಲಭವಾಗಿ ಹೀರಿಕೊಳ್ಳುತ್ತದೆ. ಚರ್ಮದ ಆಳವಾದ ಪದರಗಳಿಗೆ ಸುಲಭವಾಗಿ ತೂರಿಕೊಳ್ಳುವ ಮೂಲಕ ಚರ್ಮಕ್ಕೆ ಸಂಪೂರ್ಣ ಆರ್ದ್ರತೆಯನ್ನು ಒದಗಿಸುತ್ತದೆ.

ಚರ್ಮದಲ್ಲಿ ನೀರಿನ ಕೊರತೆಯನ್ನು ಕಡಿಮೆ ಮಾಡುವ ಮೂಲಕ, ತೆಂಗಿನೆಣ್ಣೆಯು ಚರ್ಮವನ್ನು ದೀರ್ಘಕಾಲದವರೆಗೆ ತೇವಗೊಳಿಸಲು ಸಹಾಯ ಮಾಡುತ್ತದೆ.

ಪರಿಸರ ಮಾಲಿನ್ಯ, ಕೋವಿಡ್ ಸಮಯದಲ್ಲಿ ಅತಿಯಾದ ಸ್ಯಾನಿಟೈಸೇಷನ್ ಮತ್ತು ಹವಾಮಾನ ಬದಲಾವಣೆಗಳು ಚರ್ಮ ಒಣಗುವಂತೆ ಮಾಡಿವೆ. ಈ ಎಣ್ಣೆಯು ಈ ಎಲ್ಲಾ ಅಡ್ಡ ಪರಿಣಾಮಗಳನ್ನು ತಡೆಯುವ ಅಗ್ಗದ ಉತ್ಪನ್ನವಾಗಿದೆ.



ಆಸಕ್ತಿದಾಯಕ ವಿಷಯವೆಂದರೆ, ತೆಂಗಿನೆಣ್ಣೆಯನ್ನು ಚರ್ಮ ಹೀರಿಕೊಂಡು ನಂತರ ಆಂಟಿಮೈಕ್ರೊಬಿಯಲ್ ಏಜೆಂಟ್ ಎಂದು ಕರೆಯಲ್ಪಡುವ ಮೊನೊಲೌರಿನ್ ಮತ್ತು ಲಾರಿಕ್ ಆಸಿಡ್ ಆಗಿ ವಿಭಜನೆ ಯಾಗುತ್ತದೆ. ತೆಂಗಿನೆಣ್ಣೆಯಿಂದ ನಿಯಮಿತವಾಗಿ ಮಸಾಜ್ ಮಾಡುವುದರಿಂದ ಶಿಶುಗಳಲ್ಲಿ ಸೋಂಕಿನ ವಿರುದ್ಧ ಹೋರಾಡಲು ಮತ್ತು ಸುರಕ್ಷಿತವಾಗಿರಲು ಸಹಾಯ ಮಾಡುತ್ತದೆ.

ಆ್ಯಂಟಿ-ಬ್ಯಾಕ್ಟೀರಿಯಲ್ ಏಜೆಂಟ್ ಎಂದು ಕರೆಯಲ್ಪಡುವ, ತೆಂಗು-ಆಧಾರಿತ ಚರ್ಮದ ಎಣ್ಣೆಯು ಅತ್ಯಂತ ಶುಷ್ಕ (ಒಣ) ಚರ್ಮ ಹಾಗೂ ದದ್ದು ಸಮಸ್ಯೆಗಳನ್ನು ಹೊಂದಿರುವವರಲ್ಲಿ ಬ್ಯಾಕ್ಟೀರಿಯಾ ಸಂಗ್ರಹವಾಗುವುದನ್ನು ತಡೆಯುತ್ತದೆ. ಅಗ್ಗ ಮತ್ತು ವ್ಯಾಪಕವಾಗಿ ಲಭ್ಯವಿರುವ ಈ ಎಣ್ಣೆಯ ನಿಯಮಿತ ಬಳಕೆಯಿಂದ ಚರ್ಮದ ಆರೋಗ್ಯವನ್ನು ಸುಧಾರಿಸಬಹುದು.

ತೆಂಗಿನೆಣ್ಣೆಯು ಆ್ಯಂಟಿ-ವೈರಲ್, ಆ್ಯಂಟಿಬ್ಯಾಕ್ಟೀರಿಯಲ್ ಮತ್ತು ಆ್ಯಂಟಿಫಂಗಲ್ ಗುಣಲಕ್ಷಣಗಳನ್ನು ಸಹ ಪ್ರದರ್ಶಿಸಿದೆ.

ಈಗ ಡಬಲ್ ಕ್ಲೆನ್ಸಿಂಗ್ (ಎರಡು ಬಾರಿ ಸ್ವಚ್ಛಗೊಳಿಸುವುದು) ಜನಪ್ರಿಯತೆ ಪಡೆದುಕೊಳ್ಳುತ್ತಿದೆ. ಮೇಕಪ್ ಹಾಗೂ ಸನ್‌ಸ್ಕ್ರೀನ್ ತೆಗೆಯಲು ತೆಂಗಿನೆಣ್ಣೆಯನ್ನು ಬಳಸಲಾಗುತ್ತಿದೆ. ವಿಶೇಷವಾಗಿ ಕಣ್ಣಿನ ಮೇಕಪ್ ತೆಗೆಯುವಾಗ ಮೃದು ಅನುಭವ ನೀಡುತ್ತದೆ. ಜೊತೆಗೆ, ಕಣ್ಣಿನ ಸುತ್ತಲಿನ ಸೂಕ್ಷ್ಮ ಹಾಗೂ ದುರ್ಬಲ ಪ್ರದೇಶ ಒಣಗದಂತೆ ತಡೆಯುತ್ತದೆ. ಇದು ಮೇಕಪ್ ರಿಮೂವರ್‌ನಂತಹ ನೈಸರ್ಗಿಕ ಎಣ್ಣೆಗಳ ಬಳಕೆಯನ್ನು ತಡೆಯುತ್ತದೆ.

ಇದರಲ್ಲಿ ಕೊಮೆಡೊಜೆನಿಕ್ ಅಂಶವಿದ್ದು, ಮೊಡವೆ ಸಮಸ್ಯೆ ಹೊಂದಿರುವವರು ಈ ಎಣ್ಣೆ ಬಳಕೆಯ ವೇಳೆ ಎಚ್ಚರಿಕೆ ವಹಿಸುವಂತೆ ಸಲಹೆ ನೀಡಲಾಗಿದೆ. ತೆಂಗಿನೆಣ್ಣೆ ಚರ್ಮದ ತಡೆಗೋಡೆಯನ್ನು ರಿಪೇರಿ ಮಾಡುವ ಹಾಗೂ ರಕ್ಷಿಸುವ ಗುಣಗಳನ್ನು ಒಳಗೊಂಡಿದೆ. ಇದು ಸುಲಭವಾಗಿ ಕೈಗೆಟಕುವ ದರದಲ್ಲಿ ಲಭ್ಯವಿದೆ ಮತ್ತು ದೇಹದ ಚರ್ಮಕ್ಕೆ ಸುರಕ್ಷಿತ ಹಾಗೂ ಪರಿಣಾಮಕಾರಿ ಮಾಯಿಶ್ಚರೈಸರ್ ಆಗಿದೆ. ❖

ವ್ಯವಸ್ಥೆ ಬದಲಾವಣೆಯ ‘ಹೋಪ್’

ರಾಜಕೀಯ ಥ್ರಿಲ್ಲರ್ ಕಥಾಹಂದರದ ಚಿತ್ರ ‘ಹೋಪ್’ ಬಹುತೇಕ ಮುಕ್ತಾಯಗೊಂಡಿದ್ದು, ಇತ್ತೀಚೆಗಷ್ಟೇ ಟ್ರೇಲರ್‌ನೊಂದಿಗೆ ಸದ್ದು ಮಾಡಿದೆ.

ಸರ್ಕಾರಿ ವ್ಯವಸ್ಥೆಯೊಳಗಿನ ಭ್ರಷ್ಟಾಚಾರದ ವಿರುದ್ಧ ಪ್ರಬಲ ಧ್ವನಿ ಎತ್ತಿದ ಚಿತ್ರವಿದು. ಕೊನೆಗೂ ಒಂದು ಹೊಸ ಭರವಸೆಯ ಆಶಾಕಿರಣ ಮೂಡಿಸುವ ಆಶಯದೊಂದಿಗೆ ಕತೆ ಕೊನೆಗೊಳ್ಳುತ್ತದೆ ಎಂದಿದೆ ಚಿತ್ರತಂಡ. ಗೋಲ್ಡಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿ ವರ್ಷಾ ಸಂಜೀವ್ ಈ ಚಿತ್ರ ನಿರ್ಮಿಸಿದ್ದಾರೆ. ಶ್ವೇತಾ ಶ್ರೀವಾಸ್ತವ್, ಸುಮಲತಾ ಅಂಬರೀಶ್, ಪ್ರಕಾಶ್ ಬೆಳವಾಡಿ, ಗೋಪಾಲಕೃಷ್ಣ ದೇಶಪಾಂಡೆ ತಾರಾಗಣದಲ್ಲಿದ್ದಾರೆ. ಚಿತ್ರ ಬಿಡುಗಡೆಯ ದಿನಾಂಕ ಇನ್ನಷ್ಟೇ ನಿಗದಿಯಾಗಬೇಕಿದೆ. ❖



ಶ್ವೇತಾ ಶ್ರೀವಾಸ್ತವ್

ಡಿ.3ಕ್ಕೆ ‘ಮದಗಜ’ ಚಿತ್ರ ತೆರೆಗೆ

ಸಿನಿಮಾ



ಮದಗಜ ಚಿತ್ರದ ಪೋಸ್ಟರ್

ನಟ ಶ್ರೀಮುರಳಿ ಹಾಗೂ ನಟಿ ಆಶಿಕಾ ರಂಗನಾಥ್ ನಟಿಸಿರುವ ‘ಮದಗಜ’ ಚಿತ್ರ ಡಿ.3ಕ್ಕೆ ರಾಜ್ಯದಾದ್ಯಂತ ತೆರೆಕಾಣಲಿದೆ. ಗುರುವಾರ ಚಿತ್ರದ ಹೀರೊ ಇಂಟ್ರೊಡಕ್ಷನ್ ಹಾಡು ‘ಯುದ್ಧ ಸಾರಿದ ಚಂಡಮಾರುತ’ ಬಿಡುಗಡೆಯಾಗಿದ್ದು, ಇದನ್ನು ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರೀಮುರಳಿ ಅರ್ಪಿಸಿದ್ದಾರೆ.

‘ಅಪ್ಪು ಮಾಮನ ನೆನಪಿನಲ್ಲಿ, ಅವರಿಗೆ ಈ ವಿಡಿಯೊ ಹಾಡನ್ನು ಅರ್ಪಿಸುತ್ತೇನೆ. ಅಪ್ಪು ಮಾಮನನ್ನು ಮರೆಯಲು ಸಾಧ್ಯವಿಲ್ಲ. ಮಾಮ ಈ ಹಾಡನ್ನು ನೋಡಿದ್ದರು. ಅವರ ನೆನಪಿನಲ್ಲಿ ಈ ಹಾಡು ರಿಲೀಸ್ ಮಾಡಿದ್ದೇವೆ’ ಎಂದರು ಶ್ರೀಮುರಳಿ.

‘ಅ.28ರಂದು ನಾನು, ಮಾಮ ಒಟ್ಟಿಗೆ ಜಿಮ್‌ಗೆ ಹೋಗಿ ವರ್ಕ್‌ಔಟ್ ಮಾಡಿದ್ದೆವು. ಅವರ ಫಿಟ್ನೆಸ್ ಸೂಪರ್. ಹಲವು ವಿಚಾರಗಳನ್ನು ಮಾತನಾಡಿದೆವು. ಅಂದೇ ‘ಗಂಧದ ಗುಡಿ’ ಟೀಸರ್ ತೋರಿಸಿದ್ದರು. ನಾನು ‘ಮದಗಜ’ದ ಟೀಸರ್ ತೋರಿಸಿದೆ. ನಮಗೆ ಹೀರೊ ಪಟ್ಟ ಬರುವ ಮುನ್ನ ನಾವು ಸಹೋದರರಾಗಿದ್ದೆವು. ನಾವು ಜೊತೆಯಾಗಿದ್ದಾಗ ನಮ್ಮಂಥ ಸಹೋದರರು ಇದ್ದಾರ ಎನ್ನುವಂತೆ ಇದ್ದೆವು. ಮಾಮನನ್ನು ಮರೆಯಲು ಸಾಧ್ಯವಿಲ್ಲ’ ಎಂದು ನೆನಪಿಸಿಕೊಂಡರು ಶ್ರೀಮುರಳಿ.

‘ಮದಗಜ’ದಲ್ಲಿ ತುಂಬಾ ಇಷ್ಟಪಟ್ಟು ಪಾತ್ರ ಮಾಡಿದ್ದೇನೆ. ಈ ಶೇಡ್‌ನಲ್ಲಿ ಸಿನಿಮಾ ನೋಡಿ ಅಥವಾ ಪಾತ್ರ ಮಾಡಿ ಬಹಳ ದಿನಗಳಾಗಿತ್ತು. ಹೀಗಾಗಿ ಈ ಪಾತ್ರಕ್ಕೆ ತುಂಬಾ ವರ್ಕ್ ಮಾಡಿದ್ದೇನೆ. ಕನ್ನಡ ಚಿತ್ರರಂಗದಿಂದ ಅದ್ಭುತವಾದ ಗುಣಮಟ್ಟದ ಸಿನಿಮಾ ನೀಡಿದ್ದೇವೆ’ ಎಂದರು.

ನಿರ್ದೇಶಕ ಎಸ್. ಮಹೇಶ್ ಕುಮಾರ್ ಮಾತನಾಡಿ, ‘ನ.1ಕ್ಕೆ ಅಪ್ಪು ಅವರು ಈ ಸಿನಿಮಾದ ಹಾಡನ್ನು ರಿಲೀಸ್ ಮಾಡಬೇಕಿತ್ತು. ಆದರೆ ಅವರು ಭೌತಿಕವಾಗಿ ನಮ್ಮ ಜೊತೆ ಈಗಿಲ್ಲ. ಅವರ ಆಶೀರ್ವಾದದೊಂದಿಗೆ ಮುಂದುವರಿಯುತ್ತಿದ್ದೇವೆ’ ಎಂದರು.

‘ಎಲ್ಲ ಭಾಷೆಗಳಲ್ಲಿ ಏಕಕಾಲದಲ್ಲಿ ಚಿತ್ರ ಬಿಡುಗಡೆಗೆ ನಿರ್ಧರಿಸಿದ್ದೇವೆ. ಕರ್ನಾಟಕದಲ್ಲಿ ಡಿ.3ಕ್ಕೆ ಚಿತ್ರ ಬಿಡುಗಡೆಯಾಗಲಿದ್ದು, ಉಳಿದ ಭಾಷೆಗಳಲ್ಲಿ ಅಲ್ಲಿನ ಚಿತ್ರ ಬಿಡುಗಡೆಯನ್ನು ನೋಡಿಕೊಂಡು ಬಿಡುಗಡೆ ಮಾಡುತ್ತೇವೆ. ತೆಲುಗು, ತಮಿಳಿನಲ್ಲಿ ಬಿಗ್‌ಬಜೆಟ್ ಚಿತ್ರಗಳ ಜೊತೆ ನಮಗೆ ಗುದ್ದಾಡಲು ಸಾಧ್ಯವಿಲ್ಲ’ ಎಂದರು ನಿರ್ಮಾಪಕ ಉಮಾಪತಿ ಶ್ರೀನಿವಾಸ ಗೌಡ.

ತೆಲುಗಿನ ಖ್ಯಾತ ನಟ ಜಗಪತಿ ಬಾಬು ಖಳನಾಯಕನಾಗಿ, ಹಾಸ್ಯ ನಟರಾದ ರಂಗಾಯಣ ರಘು, ಚಿಕ್ಕಣ್ಣ, ಶಿವರಾಜ್ ಕೆ.ಆರ್.ಪೇಟೆ ಈ ಚಿತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ಚಿತ್ರಕ್ಕೆ ರವಿ ಬಸ್ರೂರು ಸಂಗೀತ ನಿರ್ದೇಶನವಿದೆ.

ಲಿಂಕ್: https://www.youtube.com/watch?v=esPG7uD8Cml ❖



ಸೋನಿ ಚರಿಶ್ಮಾ

‘ಒಪ್ಪಂದ’ ಹಾಡುಗಳ ಬಿಡುಗಡೆ

ಅರ್ಜುನ್ ಸರ್ಜಾ - ರಾಧಿಕಾ ಕುಮಾರಸ್ವಾಮಿ ಅಭಿನಯದ ‘ಒಪ್ಪಂದ’ ಚಿತ್ರ ಶೀಘ್ರವೇ ತೆರೆಗೆ ಬರಲಿದೆ. ಅದಕ್ಕೆ ಪೂರ್ವಭಾವಿಯಾಗಿ ಹಾಡುಗಳು ಮತ್ತು ಟೀಸರ್ ಬಿಡುಗಡೆ ಇತ್ತೀಚೆಗೆ ನಡೆದಿದೆ.

ಖ್ಯಾತನಟ ಜೆ.ಡಿ. ಚಕ್ರವರ್ತಿ, ನಟಿ ಸೋನಿ ಚರಿಶ್ಮಾ ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಇದ್ದಾರೆ. ಚಿತ್ರದಲ್ಲಿ ಆರು ಹಾಡುಗಳಿವೆ. ಈ ಚಿತ್ರಕ್ಕೆ ಅಮೀರ್ ಲಾಲ್ ಛಾಯಾಗ್ರಹಣ, ಸುಭಾಷ್ ಆನಂದ್ ಸಂಗೀತ ನಿರ್ದೇಶನ, ರಾಘು ಕುಲಕರ್ಣಿ ಕಲಾ ನಿರ್ದೇಶನ, ಅಮ್ಮ ರಾಜಶೇಖರ್ ನೃತ್ಯ ನಿರ್ದೇಶನ, ಖಾಲಿ ಕಿಕಾಸ್ ಸಾಹಸ ನಿರ್ದೇಶನ ಹಾಗೂ ಪ್ರಭು ಅವರ ಸಂಕಲನವಿದೆ.

ನಾಲ್ಕು ಭಾಷೆಗಳಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. ಇದೇ ತಿಂಗಳಲ್ಲಿ ಚಿತ್ರ ತೆರೆಗೆ ಬರಲಿದೆ. ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕ ಸಮೀರ್, ಶಶಿಧರ್ ಸಹನಿರ್ಮಾಪಕರು.

ಅಮೀರ್ ಖಾನ್ ಸಹೋದರ ಫೈಸಲ್ ಖಾನ್ , ಸೋನಿ ಚರಿಶ್ಮಾ, ವಿಶ್ವನಾಥ್ ತಾರಾಬಳಗದಲ್ಲಿದ್ದಾರೆ. ❖

ಗಣಪತ್‌ನಲ್ಲಿ ಬೈಕರ್ ಆಗಿ ಕೃತಿ ಸನೊನ್

‘ಮಿಮಿ’ ಚಿತ್ರದಲ್ಲಿ ಬಾಡಿಗೆ ತಾಯಿ ಪಾತ್ರದಲ್ಲಿ ಕಾಣಿಸಿಕೊಂಡು ಸುದ್ದಿಯಾಗಿದ್ದ ನಟಿ ಕೃತಿ ಸನೊನ್, ಈ ಬಾರಿ ‘ಗಣಪತ್’ ಚಿತ್ರದಲ್ಲಿ ಬೈಕರ್ ಆಗಿದ್ದಾರೆ.

ಗಣಪತ್ ಚಿತ್ರದ ಪಾತ್ರದ ಕುರಿತು ಕಿರು ವಿಡಿಯೊ ಒಂದನ್ನು ಕೃತಿ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

ಈವರೆಗೆ ಕೌಟುಂಬಿಕ ಹಿನ್ನೆಲೆಯುಳ್ಳ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಈಕೆ, ಈ ಬಾರಿ ಆಕ್ಷನ್ ಚಿತ್ರದಲ್ಲಿ ಬೈಕರ್ ಪಾತ್ರದ ಮೂಲಕ ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ.

ಜಾಸಿ ಹೆಸರಿನ ಪಾತ್ರವನ್ನು ಕೃತಿ ನಿರ್ವಹಿಸಲಿದ್ದು, ಇಂಗ್ಲೆಂಡ್‌ನಲ್ಲಿ ಚಿತ್ರೀಕರಣ ನಡೆಯಲಿದೆ. ವಿವಿಧ ಆ್ಯಕ್ಷನ್ ದೃಶ್ಯಗಳು ಇರಲಿವೆ ಎಂದು ಕೃತಿ ಹೇಳಿದ್ದಾರೆ.

ಡಿಸೆಂಬರ್ 23, 2022ರಂದು ಗಣಪತ್ ಚಿತ್ರ ತೆರೆಕಾಣಲಿದೆ. ಹೀಗಾಗಿ ಚಿತ್ರೀಕರಣದಲ್ಲಿ ತಂಡ ನಿರತವಾಗಿದೆ. ❖



ಬಾಲಿವುಡ್



ದುಬೈ ಮರುಭೂಮಿಯಲ್ಲಿ ಜಾಹ್ನವಿ ಲುಂಗಿ ಡಾನ್ಸ್!

ಬಾಲಿವುಡ್‌ನ ಕಪೂರ್ ಕುಟುಂಬದ ಕುಡಿ ಜಾಹ್ನವಿ ಕಪೂರ್ ದುಬೈ ಪ್ರವಾಸಕ್ಕೆ ತೆರಳಿದ್ದಾರೆ.

ಜಾಹ್ನವಿ ಜತೆ ಅವರ ಸಹೋದರಿ ಖುಷಿ ಕಪೂರ್ ಕೂಡ ದುಬೈ ಪ್ರವಾಸಕ್ಕೆ ಹೋಗಿದ್ದು, ಇಬ್ಬರೂ ಇನ್‌ಸ್ಟಾಗ್ರಾಂನಲ್ಲಿ ಫೋಟೊಗಳನ್ನು ಪೋಸ್ಟ್ ಮಾಡುತ್ತಿದ್ದಾರೆ.

ಅದರಲ್ಲೂ ಕಪೂರ್ ಸಹೋದರಿಯರು ದುಬೈ ಮರುಭೂಮಿಯಲ್ಲಿ ಸಫಾರಿ ಅನುಭವ ಪಡೆದುಕೊಂಡಿರುವುದನ್ನು ಹೇಳಿಕೊಂಡಿದ್ದಾರೆ.

ಜತೆಗೆ ಸಫಾರಿ ಮಾಡಿದ ಬಳಿಕ, ಜಾಹ್ನವಿ ಕಪೂರ್ ಲುಂಗಿ ಡ್ಯಾನ್ಸ್ ಮಾಡಿದ್ದಾರೆ.

ದುಬೈ ಬೀಚ್ ಬಳಿ ನಿಂತುಕೊಂಡಿರುವ ಫೋಟೊಗಳನ್ನು ಜಾಹ್ನವಿ ಪೋಸ್ಟ್ ಮಾಡಿದ್ದು, ಅದಕ್ಕೆ ‘ಲುಂಗಿ ಡ್ಯಾನ್ಸ್’ ಎಂಬ ಅಡಿಬರಹ ನೀಡಿದ್ದಾರೆ.

ಜಾಹ್ನವಿಯ ಹೊಸ ಲುಕ್ ನೋಡಿದ ಅಭಿಮಾನಿಗಳು ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ❖